ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : 36 । ಸಂಚಿಕೆ : 01 । ಜನವರಿ-ಜೂನ್ 2022



ಸಂಪಾದಕ

ಚಂದ್ರಶೇಖರ್ ನಾದೂರು

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೬ ಸಂಚಿಕೆ : ೦೧ । ಜನವರಿ – ಜೂನ್ ೨೦೨೨

ಸಂಪಾದಕ

ಚಂದ್ರಶೇಖರ್ ನಾದೂರು

ಬಿ.ಎಂ.ಶ್ರೀ. ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ)
ಬಿ.ಎಂ.ಶ್ರೀ ಪ್ರತಿಷ್ಠಾನದ ರಸ್ತೆ, ೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು–೫೬೦೦೧೯, ದೂರವಾಣಿ : ೯೯೭೨೮ ೧೨೧೨೭
ವಿ–ಅಂಚೆ : bmsritrust@gmail.com, bmsrilochana@gmail.com

KARNATAKA LOCHANA : Half yearly Research Journal

Edited by
Chandrasekhar Nadur

Published by
B.M.Sri. Prathistana
M.V.Si. P.G. Research Centre, BM Sri Prathistana Road
B.M.Sri. Kalabhavan, 3rd Main Road
Narasimharaja Colony, Bengaluru-560 019
Mob: 9972812127
e-mail: bmsritrust@gmail.com, bmsrilochana@gmail.com

January - June 2022 (Vol. 36, No. 1)

Pages: 144

Subscription Details :
Annual : Rs. 100/-
Life : Rs. 1500/-

ಚಂದಾ ವಿವರ:

ವಾರ್ಷಿಕ : ರೂ. ೧೦೦/-

ಆಜೀವ : ರೂ. ೧೫೦೦/-

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಸಂಪಾದಕರ ನುಡಿ

೨೦೨೨ ರ ಮೊದಲ ಸಂಚಿಕೆ ನಿಮ್ಮ ಕೈಸೇರಿದೆ. ಬಿ.ಎಂ.ಶ್ರೀ. ಪ್ರತಿಷ್ಠಾನವು ಸಂಶೋಧನಾತ್ಮಕ ಲೇಖನಗಳ ಪ್ರಕಟಣೆಗೆ ಆದ್ಯತೆ ನೀಡುತ್ತದೆ. ಹಿರಿಯ ವಿದ್ವಾಂಸರು ಅಲ್ಲದೆ ಕಿರಿಯರೂ ಸಂಶೋಧನೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಲಿ ಎಂಬ ಆಶಯ ಪ್ರತಿಷ್ಠಾನದ್ದು. ಲೇಖಕರು ತಮ್ಮ ಲೇಖನಗಳನ್ನು ಪ್ರಾರಂಭದಲ್ಲಿಯೇ ನೀಡಿದರೆ ನಿಗದಿತ ಸಮಯದಲ್ಲಿ ಸಂಚಿಕೆ ಪ್ರಕಟವಾಗಲು ಸಹಾಯವಾಗುತ್ತದೆ. ಪ್ರಸ್ತುತ ಸಂಚಿಕೆಯಲ್ಲಿ ಉತ್ತಮ ಲೇಖನಗಳು ಪ್ರಕಟವಾಗಿವೆ ಎಂಬ ನಂಬಿಕೆ ನನ್ನದು.

ಡಾ. ಕೆ.ಆರ್. ಗಣೇಶ್ ಅವರು ಈಗಿನ ಆಂಧ್ರಪ್ರದೇಶದ ಗಡಿಭಾಗಗಳ ಶಾಸನಗಳಲ್ಲಿ ಕನ್ನಡ ಭಾಷೆಯ ಬಳಕೆ, ಕೆಲವೊಮ್ಮೆ ಕನ್ನಡ ತೆಲುಗು ಎರಡು ಭಾಷೆಗಳಲ್ಲೂ ರಚನೆಯಾಗಿರುವುದರ ಕುರಿತು ವಿಶ್ಲೇಷಿಸಿ ಶಾಸನಗಳ ಅಧ್ಯಯನದ ಮೇಲೆ ಹೊಸಬೆಳಕು ಚೆಲ್ಲಿದ್ದಾರೆ.

ಡಾ. ಎಚ್.ಎಸ್. ಅನಂತನಾರಾಯಣ ಅವರು ಇಂದ್ರನು ಗೌತಮರಿಂದ ಶಾಪಕ್ಕೆ ಒಳಗಾದ ಎರಡು ಸನ್ನಿವೇಶಗಳನ್ನು ಪರಿಚಯಿಸಿದ್ದಾರೆ. ಯುವ ಸಂಶೋಧಕ ಕಾರ್ತಿಕ್ ಅವರು ಬೆಂಗಳೂರಿನ ದೊಡ್ಡ ಬಸವನಗುಡಿ ಪ್ರದೇಶದ ಶಾಸನಗಳ ಪರಿಷ್ಕೃತ ಪಾಠವನ್ನು ಸಾಧಾರವಾಗಿ ನಿರೂಪಿಸಿದ್ದಾರೆ. ಇದು ಶಾಸನಗಳನ್ನಾಗಲೀ, ತಾಳೆಯೋಲೆಗಳನ್ನಾಗಲಿ ಸಂಪಾದಿಸುವ ಸಂದರ್ಭದಲ್ಲಿ ಇರುವ ಪಾಠವನ್ನು ತಪ್ಪಿಲ್ಲದೆ ಅದು ಹೇಗಿದೆಯೋ ಹಾಗೆ ಗುರುತಿಸಬೇಕು, ಸಂಗ್ರಹಿಸಬೇಕು ಎಂಬ ವಿಚಾರವನ್ನು ಮನದಟ್ಟು ಮಾಡಿಕೊಡುತ್ತದೆ. ಪ್ರೊ. ಬಿಳಿಗಿರಿ ವಾಸನ್ ಅವರು ಮಹಾಭಾರತ ಕಥೆಯಲ್ಲಿ ಪರೀಕ್ಷಾ ವಸ್ತ್ರ ಪ್ರಸಂಗವನ್ನು ತಮಿಳು ಕವಿ ಪೆರುಂದೇವನಾರ್ ಅವರ 'ಭಾರತವೆಣ್ಬ' ಕಾವ್ಯದ ಸಂದರ್ಭವನ್ನು ಕನ್ನಡ ಕಾವ್ಯಗಳಲ್ಲಿನ ಪ್ರಸಂಗಗಳೊಂದಿಗೆ ತುಲನಾತ್ಮಕ ಚರ್ಚೆ ಮಾಡಿದ್ದಾರೆ. ಡಾ. ಜಿ.ಎನ್. ಉಪಾಧ್ಯ ಅವರು ಪರಮದೇವ ಕವಿ ವಿರಚಿತ 'ತುರಂಗಭಾರತ' – ಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದ ಕರ್ಕಿ ವೆಂಕಟರಮಣ ಶಾಸ್ತ್ರಿಯವರನ್ನು

ಹಾಗೂ ತುರಂಗ ಭಾರತದ ಪರಿಚಯವನ್ನು ವಿವರವಾಗಿ ಮಾಡಿಕೊಟ್ಟಿದ್ದಾರೆ. ಡಾ. ಬಿ. ನಂಜುಂಡಸ್ವಾಮಿಯವರು ಗುಬ್ಬಿ ತಾಲ್ಲೂಕಿನ ಪುರದ ನಾಗಣ್ಣನೆಂಬ ವಚನಕಾರನ ಬಗ್ಗೆ ಹೊಸ ವಿಚಾರಗಳನ್ನು ತಿಳಿಸಿದ್ದಾರೆ. ಇದು ಮುಂದಿನ ಅಧ್ಯಯನ ಮಾಡುವವರಿಗೆ ಅನುಕೂಲವಾಗಲಿದೆ.

ಡಾ. ಪಿ.ವಿ. ನಾರಾಯಣ ಅವರ 'ಪಂಪರಾಮಾಯಣದ ಒಂದು ವಿಶ್ಲೇಷಣೆ' ಲೇಖನವು ಕಾವ್ಯಾಭ್ಯಾಸಿಗಳಿಗೆ, ಸಹೃದಯಿಗಳಿಗೆ ಅನುಕೂಲವಾಗಲಿದೆ. ಡಾ. ಚಿತ್ತಯ್ಯ ಪೂಜಾರ್ ಅವರು ಡಾ.ಕರೀಗೌಡ ಬೀಚನಹಳ್ಳಿಯವರ 'ಬಿ.ಎಂ.ಶ್ರೀಕಂಠಯ್ಯ' ಕೃತಿಯ ಬಗ್ಗೆ ವಿಶ್ಲೇಷಿಸಿ, ಬಿಎಂಶ್ರೀ ಅವರ ಬಗ್ಗೆ ಬಂದಿರುವ ಉಪಯುಕ್ತ ಕೃತಿಯೆಂಬ ಮಾಹಿತಿ ನೀಡಿದ್ದಾರೆ. ಡಾ. ಚಂದ್ರಮೋಹನ್ ಅವರು ಜೈನ ಸಾಹಿತ್ಯ ಕುರಿತು ಬರೆದಿರುವ ಲೇಖನ ಕನ್ನಡದಲ್ಲಿ ಜೈನ ಸಾಹಿತ್ಯ ಕಾಲದ ಅಗತ್ಯಕ್ಕೆ ತಕ್ಕಂತೆ ಬೆಳೆದ ಬಗೆಯನ್ನು ವಿವರವಾಗಿ ಚರ್ಚಿಸಿದ್ದಾರೆ. ಡಾ. ಜೆ. ಸದಾನಂದ ಶಾಸ್ತ್ರಿಯವರ 'ಅಸದೃಶ ಸಾಹಿತ್ಯ ಸನಾಥ ಸೋಮನಾಥ'- ಎಂಬ ದೀರ್ಘ ಲೇಖನವು ತೆಲುಗು ಕವಿ ಪಾಲ್ಕುರಿಕೆ ಸೋಮನಾಥ ಕವಿ-ಕಾವ್ಯವನ್ನು ಸಮಗ್ರವಾಗಿ ಚಿತ್ರಿಸುತ್ತದೆ. ಪ್ರೊ. ಎಸ್. ಬಸವರಾಜು ಅವರು 'ಪಂಪ ಭಾರತದ ಶ್ರೀಕೃಷ್ಣ' ಲೇಖನದಲ್ಲಿ ಜೈನ ಕವಿಯಾಗಿದ್ದ ಪಂಪನು ಕೃಷ್ಣನನ್ನು ಚಿತ್ರಿಸಿದ ರೀತಿಯನ್ನು ವಿವರವಾಗಿ ಚರ್ಚಿಸಿದ್ದಾರೆ. ಈ ಎಲ್ಲ ಲೇಖನಗಳು ಮುಂದಿನ ಸಂಶೋಧಕರಿಗೆ, ಅಧ್ಯಯನಕಾರರಿಗೆ ಪ್ರೇರಣೆ ನೀಡುತ್ತವೆ ಎಂಬ ನಂಬಿಕೆ ನನ್ನದು.

ಈ ಸಂಚಿಕೆ ಹೊರಬರಲು ಸೂಕ್ತ ಸಲಹೆ ನೀಡುತ್ತ ಬಂದ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರಿಗೆ, ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರಿಗೆ, ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಬಿ.ಎಸ್. ಗುರುಪ್ರಸಾದ್ ಅವರಿಗೆ, ಕೋಶಾಧಿಕಾರಿಗಳಾದ ಡಾ. ಅನಿಲ್‌ಕುಮಾರ್ ಅವರಿಗೆ, ಲೇಖನಗಳನ್ನು ಕಳುಹಿಸಿ ಸಹಕರಿಸಿದ ವಿದ್ವಾಂಸರಿಗೆ, ಡಿಟಿಪಿ ಮಾಡಿ ಮುದ್ರಣಕ್ಕೆ ಸಿದ್ಧತೆ ಮಾಡಿಕೊಟ್ಟ ಕಚೇರಿ ಸಿಬ್ಬಂದಿಯವರಿಗೆ, ಸುಂದರವಾಗಿ ಮುದ್ರಿಸಿಕೊಟ್ಟ 'ಸ್ವಾಬ್ನ್ ಪ್ರಿಂಟರ್' ಅವರಿಗೆ ಗೌರವಪೂರ್ವಕ ವಂದನೆಗಳು.

ಚಂದ್ರಶೇಖರ ನಾದೂರು
ಸಂಪಾದಕರು

ಈ ಸಂಚಿಕೆಯಲ್ಲಿ....

ಲೇಖಕರಿಗೆ ಸೂಚನೆಗಳು...

೧. ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ವಿಮರ್ಶೆಗಳ ಅಪ್ರಕಟಿತ ಬರಹಗಳನ್ನು 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಸ್ವೀಕರಿಸಲಾಗುವುದು.

೨. ಲೇಖನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿದವಾಗಿರಬೇಕು ಅಥವಾ ಸ್ಫುಟವಾದ ಕೈಬರಹದಲ್ಲಿರಬೇಕು.

೩. ಲೇಖನಗಳು ಒಪ್ಪಿತವಾದ ಮಾದರಿಯಲ್ಲಿ ಸೂಕ್ತ ಉಲ್ಲೇಖಗಳು ಮತ್ತು ಟಿಪ್ಪಣಿಗಳಿಂದ ಕೂಡಿರಬೇಕು.

೪. ಚಿತ್ರಗಳು, ನಕ್ಷೆಗಳು ಮೊದಲಾದುವನ್ನು ಸ್ಕ್ಯಾನ್ ಮಾಡಿದ ತಂತ್ರಾಂಶದಲ್ಲಿ ನೀಡಬೇಕು.

೫. ಲೇಖಕರು ತಮ್ಮ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ-ಅಂಚೆಗಳನ್ನು ತಪ್ಪದೆ ನೀಡಬೇಕು.

೬. ಅಸ್ವೀಕೃತ ಬರಹಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಈ ಬಗೆಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

೭ ಲೇಖನಗಳನ್ನು ಪ್ರತಿಷ್ಠಾನದ ವಿಳಾಸಕ್ಕೆ ಅಥವಾ bmsrilochana@gmail.com ಈ ಇ-ಅಂಚೆಗೆ ಕಳುಹಿಸಬಹುದು.

೮. ಪ್ರಕಟವಾದ ಬರಹಗಳಿಗೆ ಪ್ರತಿಷ್ಠಾನವು ಸಾಂಕೇತಿಕ ಗೌರವಸಂಭಾವನೆಯನ್ನು ನೀಡುತ್ತದೆ.

೯. ಲೇಖನದಲ್ಲಿನ ಅಭಿಪ್ರಾಯಗಳು ಲೇಖಕರದೇ ಅಗಿದ್ದು ಪ್ರತಿಷ್ಠಾನದ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.

೧೦. ಲೇಖನಗಳು ೧೫ ಪುಟಗಳ ಮಿತಿಯಲ್ಲಿರಬೇಕು.

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

೧. ಕನ್ನಡ –ತೆಲುಗು ದ್ವಿಭಾಷಾ ಶಾಸನಗಳು ಮತ್ತು ಕವಿಗಳು

ಡಾ. ಕೆ.ಆರ್. ಗಣೇಶ್

❖

ಕ್ರಿ.ಶ. ೧೦ನೆಯ ಶತಮಾನದವರೆಗೂ ಆಂಧ್ರಪ್ರದೇಶದ ಕನ್ನಡ ಶಾಸನಗಳ ರಚನೆಯ ರೀತಿ ಕರ್ನಾಟಕದಲ್ಲಿ ಇರುವಂತೆಯೇ ಇತ್ತು. ರಾಷ್ಟ್ರಕೂಟರ ಕೊನೆಯ ಕಾಲದಲ್ಲಿ ಮಾತ್ರ ಪದ್ಯಗಳಿಂದ ಕೂಡಿದ ಕನ್ನಡ ಶಾಸನಗಳು ದೊರೆಯುತ್ತವೆ. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಅದು ಮುಂದುವರಿದು ಪುಟ್ಟ ಚಂಪೂ ಕಾವ್ಯ ರೂಪಗಳನ್ನೇ ತಾಳಿದವು.

ಕ್ರಿ.ಶ. ಸುಮಾರು ೮೫೦ರಲ್ಲಿದ್ದ ಪೂರ್ವ ಚಾಲುಕ್ಯದೊರೆ ಗುಣಗ ವಿಜಯಾದಿತ್ಯನ ಶಾಸನದಿಂದ ಹಿಡಿದು, ಕ್ರಿ.ಶ ಸುಮಾರು ೧೦೦೦ದ ಗೂಡೂರಿನ ವಿರಿಯಾಲ ವಂಶದ ದೊರೆಗಳ ಶಾಸನಗಳಲ್ಲಿ ತೆಲುಗು ಪದ್ಯಗಳು ದೊರೆತಿವೆ. ಕ್ರಿ.ಶ. ೮/೯ನೆಯ ಶತಮಾನದ ಕನ್ನಡ – ತೆಲುಗು ಲಿಪಿಯಲ್ಲಿರುವ ನಂದ್ಯಾಲ ತಾಲ್ಲೂಕಿನ ಮಹಾನಂದಿಯ ಶಾಸನವೊಂದರಲ್ಲಿರುವ ಭಾಷೆ ಪೂರ್ವದ ಹಳಗನ್ನಡದ ಲಕ್ಷಣವನ್ನು ಪಡೆದಿದೆ.[೧] ಅದರಲ್ಲಿ ತೆಲುಗಿನ ಪ್ರಭಾವ ಎಳ್ಳಷ್ಟೂ ಕಾಣಿಸುವುದಿಲ್ಲ.

ಶೆಱಿಗೆ ಸಂ(ಪು)ನ್ನ ಮಹಾಮುನಿ

ಅಯೋಗ ವಾಂಜಿತನ್

ಉತ್ಪಾತಿ ಪಿಡುಗು ಕಾಳಾಮುಕ್ಕಾ [ನ್]

ಮೇರು ಪ್ರಿತಿವಿ

ಶ್ರೀವ್ಯಾಟಿ ಸಿಂಗ ಗುರಾವರ್

ತಳ್ಳ ಪುನ್ದಿ ಅಪ್ಪರಾಜು

ನಂದ್ಯಾಲ ತಾಲ್ಲೂಕಿನ ಪಾಣೆಂ ಎಂಬಲ್ಲಿರುವ ಕನ್ನಡ, ತಮಿಳು, ತೆಲುಗು, ಸಂಸ್ಕೃತ ಭಾಷೆಗಳಲ್ಲಿರುವ ಶಾಸನಗಳಲ್ಲಿ ಕನ್ನಡವೇ ಅತ್ಯಂತ ಪ್ರಾಚೀನವೆಂದು ಶಾಸನ

ಇಲಾಖೆಯ ವರದಿಗಳಲ್ಲಿ ಸೂಚಿಸಿದ್ದಾರೆ. ಅಲ್ಲಿರುವ ಪಳ್ಳಪಡಿಯಾರಸ್, ಬಾಯಿನ್ವಳಿಜಿಳ್ದೋನ್ ಎಂಬ ಪ್ರಯೋಗಗಳು ಪೂರ್ವದ ಹಳಗನ್ನಡ ರೂಪಗಳಾಗಿವೆ.[2] ಈ ಶಾಸನಗಳಲ್ಲಿನ ಕನ್ನಡ ಪ್ರಯೋಗಗಳಲ್ಲಿ ತೆಲುಗಿನ ಪ್ರಭಾವ ಇಲ್ಲದಿರುವುದಕ್ಕೆ, ಆ ಪ್ರದೇಶಗಳು ಒಂದು ಕಾಲದಲ್ಲಿ ದ್ವಿಭಾಷಾ ಪ್ರಾಂತಗಳಾಗಿಲ್ಲದೆ, ಅಚ್ಚಕನ್ನಡ ಪ್ರದೇಶಗಳಾಗಿದ್ದವೆಂಬುದು ಒಂದು ಕಾರಣ ಎನ್ನಬಹುದು. ಅಥವಾ ಅವುಗಳನ್ನು ಹಾಕಿಸಿದ ರಾಜ –ಅಧಿಕಾರಿಗಳು ಕನ್ನಡಿಗರಿರಬೇಕು ಎಂಬುದು ಇನ್ನೊಂದು ಕಾರಣ. ಬಾದಾಮಿ ಚಾಲುಕ್ಯರ ಇಮ್ಮಡಿ ವಿಕ್ರಮಾದಿತ್ಯನು ಕಂಚಿಯ ರಾಜಸಿಂಹೇಶ್ವರ ದೇವಾಲಯದಲ್ಲಿ ಕನ್ನಡ ಶಾಸನವನ್ನು ಹಾಕಿಸಿರುವುದು, ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನನ್ನು ಹೊಗಳುವ ಕನ್ನಡ ಪದ್ಯಗಳಿರುವ ಶಾಸನ ಮಧ್ಯಪ್ರದೇಶದ ಜುರಾದಲ್ಲಿರುವುದು, ಅಂತಹ ತಾಯಿನುಡಿ ಪ್ರೇಮದ ಮನೋಧರ್ಮಕ್ಕೆ ಸಾಕ್ಷಿಗಳಾಗಿವೆ. ಹಾಗಿಲ್ಲದೇ ಹೋದರೆ ಅಶೋಕನು ಪ್ರಾಕೃತ ಅಥವಾ ಪಾಳಿ ಭಾಷೆಯಲ್ಲಿ ಶಾಸನಗಳನ್ನು ಹಾಕಿಸಿರುವ ಇದೇ ಕರ್ನೂಲಿನ ಎಱ್ರಗುಡಿ ಪ್ರಾಂತ್ಯದಲ್ಲಿ ಕರ್ನಾಟಕದ ಚಿತ್ರದುರ್ಗ, ರಾಯಚೂರು ಜಿಲ್ಲೆಗಳಲ್ಲಿ ಕ್ರಿಸ್ತ ಪೂರ್ವದಲ್ಲಿ ಪ್ರಾಕೃತ ಭಾಷೆ ಬಳಕೆಯಲ್ಲಿತ್ತೆಂದು ಹೇಳುವ ಅಸಾಧ್ಯ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಕನ್ನಡ–ತೆಲುಗು ದ್ವಿಭಾಷಾ ಪ್ರಾಂತಗಳಾಗಿದ್ದ ಪ್ರದೇಶಗಳಲ್ಲಿ ಮಾತ್ರ ಎರಡೂ ಭಾಷೆಗಳಲ್ಲಿ ಕೆಲವು ಶಾಸನಗಳು ಮಾತ್ರ ರಚಿತವಾಗಿವೆ. ಇಲ್ಲವೇ ಆಂಧ್ರದ ಗಡಿಭಾಗದ ಕೆಲವು ಅಚ್ಚಕನ್ನಡ ಪ್ರಾಂತಗಳು ದ್ವಿಭಾಷಾ ಪ್ರಾಂತವಾಗಿ ರಾಜಕೀಯ ಹಾಗೂ ಸಾಮಾಜಿಕ ಕಾರಣಗಳಿಂದಾಗಿ, ಪರಿವರ್ತಿತವಾದಾಗ, ಅಂತಹ ದ್ವಿಭಾಷಾ ಶಾಸನಗಳು ಕಾಣಿಸುತ್ತವೆ. ಅವೆರಡೂ ಬಗೆಗಳಲ್ಲಿ ಇರುವ ವ್ಯತ್ಯಾಸವನ್ನು ಮುಂದೆ ಗಮನಿಸಲಾಗಿದೆ.

ವೇಮುಲವಾಡದ ಚಾಲುಕ್ಯರ ಕಾಲದಲ್ಲಿ ಕ್ರಿ.ಶ. ೧೦ನೆಯ ಶತಮಾನದಲ್ಲಿ ಕನ್ನಡ–ಸಂಸ್ಕೃತಗಳನ್ನು ಬೆರಸಿ ಶಾಸನಗಳನ್ನು ರಚಿಸಿದ್ದರು. ತೆಲುಗನ್ನು ಬಳಸಿಕೊಂಡಿರುವುದು ಪಂಪನ ತಮ್ಮ ಜಿನವಲ್ಲಭನ ಕುರಿಕ್ಯಾಲ ಪ್ರಶಸ್ತಿಯಲ್ಲಿ ಮಾತ್ರ. ಕನ್ನಡ–ಸಂಸ್ಕೃತ– ತೆಲುಗು– ಮೂರು ಭಾಷೆಯಲ್ಲಿನ ಪದ್ಯಗಳನ್ನೊಳಗೊಂಡಿರುವ ಜಿನವಲ್ಲಭನ ಶಾಸನ ಕರೀಂನಗರ ಜಿಲ್ಲೆಯಂತಹ ತೆಲುಗೇ ಪ್ರಧಾನವಾದ ಪ್ರದೇಶದಲ್ಲಿ ರಚಿತವಾಗಿದೆ. ಅದರಲ್ಲಿರುವ ತೆಲುಗಿನ ಮೂರು ಕಂದ ಪದ್ಯಗಳು ಆ ಭಾಷೆಯ ಅತ್ಯಂತ ಪ್ರಾಚೀನ ಕಂದಪದ್ಯಗಳಾಗಿವೆ. ತೆಲುಗಿನ ಅತ್ಯಂತ ಪ್ರಾಚೀನ ಛಂದೋಗ್ರಂಥವಾದ 'ಕವಿಜನಾಶ್ರಯಮು'ದಲ್ಲಿ ವಾಗ್ವಧೂವಲ್ಲಭ ಎಂದು ಪಂಪನ ತಮ್ಮ ಜಿನವಲ್ಲಭನನ್ನು ಸ್ಮರಿಸಿದೆ. ಕನ್ನಡ ಪದ್ಯ ಭಾಗದಲ್ಲಿ ಬರುವ 'ಪಂಪನ' ಎಂಬ ಪ್ರಯೋಗ, ಕನ್ನಡ ಜಾಯಮಾನದ್ದಲ್ಲ. ತೆಲುಗುನಾಡಿನಲ್ಲಿ ಪಂಪನು ಪ್ರಸಿದ್ಧನಾಗಿದ್ದ ಎಂದು ಇದನ್ನು ವ್ಯಾಖ್ಯಾನಿಸುವುದಕ್ಕಿಂತಲೂ

ತೆಲುಗು ಭಾಷೆಗೆ ಸಹಜವಾದ 'ಪಂಪನ' ಎಂಬ ಪ್ರಯೋಗವನ್ನು ಕವಿ ಮಾಡಿದ್ದಾನೆ ಎಂದು ಹೇಳುವುದು ಸೂಕ್ತ.

ಕನ್ನಡ ಮತ್ತು ತೆಲುಗು ಪದ್ಯಭಾಗಗಳೆರಡರಲ್ಲೂ ಜಿನವಲ್ಲಭನ ಕವಿತಾಗುಣವನ್ನು ಹೊಗಳಿರುವುದರಿಂದ, ಅವನನ್ನು ವಿಶೇಷವಾಗಿ ಪಂಡಿತನೆಂದು ತೆಲುಗು ಪದ್ಯಗಳಲ್ಲಿ ವರ್ಣಿಸಿರುವುದರಿಂದ, ಜಿನವಲ್ಲಭ ಕನ್ನಡ–ತೆಲುಗು ಭಾಷೆಯ ಮೊದಲ ದ್ವಿಭಾಷಾ ಕವಿಯಾಗುತ್ತಾನೆ. ಕನ್ನಡ–ತೆಲುಗು ಭಾಷೆಗಳೆರಡರಲ್ಲೂ ಸಮಾನ ಅಭಿವ್ಯಕ್ತಿ ಶಕ್ತಿಯಿರುವ ಎರಡೂ ಭಾಷೆಗಳ ನಂಟಿನ ಪ್ರಾಚೀನ ಕೊಂಡಿಯೂ ಆಗುತ್ತಾನೆ.

ಕ್ರಿ.ಶ. ೧೧೨೪ರಲ್ಲಿ ರಚಿತವಾದ ವಾರಂಗಲ್ ಜಿಲ್ಲೆಯ ಗೂಡೂರು ಶಾಸನ ಸ್ತಂಭದ ಮೂರು ಮುಖಗಳಲ್ಲಿ ಕನ್ನಡವಿದ್ದರೆ, ನಾಲ್ಕನೆಯ ಮುಖದಲ್ಲಿ ತೆಲುಗಿದೆ.[೩] ಗದ್ಯ–ಪದ್ಯಾತ್ಮಕವಾದ ಇಲ್ಲಿನ ತೆಲುಗು ಪದ್ಯಗಳು ಪ್ರೌಢವಾಗಿವೆ. ಚಕ್ರವರ್ತಿ ಹಾಗೂ ಅವನ ದಂಡಾಧಿಪತಿಗಳನ್ನು ಹೇಳುವ ಮೊದಲೆರಡು ಮುಖಗಳ ಕನ್ನಡ ಭಾಗ ಚಂಪೂಶೈಲಿಯಲ್ಲಿದೆ. ವಿರಿಯಾಲ ವಂಶದ ದೊರೆಗಳ ಮಲ್ಲ ಎಂಬುವವನನ್ನು 'ಸುಖಮಿರು ಮಲ್ಲ ಕವೀಂದ್ರ ವೃಂದಮಂ ಪೊರೆಯುತ್ತ' ಎಂದು ಹೊಗಳಿರುವ ಮೂರನೆಯ ಮುಖದ ಕೊನೆಯ ಭಾಗದಲ್ಲಿ ಫಲಶ್ರುತಿಯ ಶ್ಲೋಕಗಳು ಸಂಸ್ಕೃತದಲ್ಲಿವೆ. ನಾಲ್ಕನೆಯ ಭಾಗವನ್ನು ಉಳಿದ ಭಾಗವನ್ನು ರಚಿಸಿದ ವ್ಯಕ್ತಿಯೇ ರಚಿಸಿದ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಶಾಸನದಲ್ಲಿ ಅದನ್ನು ಬರೆದವನು 'ಸೂತ್ರಧಾರಿ ಕೊಮ್ಮೋಜನ ಬರಹ' ಎಂದು ತೆಲುಗಿನ ಭಾಗದ ಕೊನೆಯಲ್ಲಿ ಕನ್ನಡದಲ್ಲಿ ಹೇಳಿದೆ. ಶಾಸನ ಮುಕ್ತಾಯವಾಗಿರುವುದು 'ಅಡಪಗಟ್ಟು ದೇವರಕುಜನು' ಎಂದು ತೆಲುಗಿನಲ್ಲೇ. ಕನ್ನಡ ಭಾಗ ತೆಲುಗು ಭಾಗಗಳಲ್ಲಿ ಪರಸ್ಪರ ಪ್ರಭಾವ ಏನೂ ಕಾಣುವುದಿಲ್ಲ. ವಿರಿಯಾಲ ದೊರೆಗಳು ತೆಲುಗು ನಾಡಿನ ದೊರೆಗಳಾದ್ದರಿಂದ ಸಹಜವಾಗಿ, ತೆಲುಗಿನ ಭಾಗವನ್ನು ಶಾಸನದ ನಾಲ್ಕನೆಯ ಮುಖಕ್ಕೆ ಸೇರಿಸಿದ್ದಾರೆ ಎನ್ನಬಹುದು.

ವಾರಂಗಲ್ ಜಿಲ್ಲೆಯ ಅಕುನೂರಿನ ಶಾಸನವೊಂದರ ಪಾಠ, ಕನ್ನಡ–ತೆಲುಗು ಭಾಷೆಯಲ್ಲಿದ್ದು, ತೆಲುಗು ಭಾಷೆಯ ಭಾಗದಲ್ಲಿ ಫಲಶ್ರುತಿ ಮಾತ್ರ ಇದೆ. ತೆಲುಗು ವಾಕ್ಯಗಳ ಮಧ್ಯೆ ಕನ್ನಡ ವಾಕ್ಯಗಳು ನುಸುಳಿದಂತೆ ತೋರುತ್ತದೆ. **ಗೋವಧಯ್ಯ ಸ್ತ್ರೀವಧಯು ರಿಷಿವಧಯ್ಯ ಪುತ್ರವಧಯ್ಯ ಬ್ರಮ್ಮತಿಯುಮೆಂಬ ಪಂಚ ಮಹಾಪಾತಕುಗಯ್ದಲ್ಲಿನ ಪಾಪಲೋಕ (ದೊಗ್ಗ) ನರಕದೊತ್ತಿಯ(ರು)**[೪]

ಈ ಶಾಸನದ ಪಾಠವನ್ನು ಮತ್ತೊಮ್ಮೆ ಮೂಲದಲ್ಲಿ ಪರಿಶೀಲಿಸದ ಹೊರತು, ಭಾಷೆಯ ಬಗೆಗೆ ತೀರ್ಮಾನ ಮಾಡುವುದು ಸರಿಯಾಗುವುದಿಲ್ಲ.

ವಾರಂಗಲ್ ಜಿಲ್ಲೆಯ ಮೇಡಪಲ್ಲಿಯ ಕ್ರಿ.ಶ. ೧೧೧೨ರ ಶಾಸನದಲ್ಲಿ ಕನ್ನಡ ಸಂಸ್ಕೃತ-ತೆಲುಗು ಭಾಷೆಗಳಲ್ಲಿ ನಿರೂಪಣೆ ಇದೆ.೫ ಆಚಣವೆಗ್ಗಡೆ ಎಂಬುವವನನ್ನು ಹೊಗಳುವ ಒಂದು ಪದ್ಯದ ನಂತರ, ಶಾಸನ ಸಂಸ್ಕೃತದಲ್ಲಿದೆ. ಶಾಸನದ ೫೭ನೇ ಸಾಲಿನಿಂದ ತೆಲುಗು ಆರಂಭವಾಗಿದೆ. ಈ ಭಾಗದ ಶಾಸನಾಕ್ಷರಗಳು ಬಹುಪಾಲು ತ್ರುಟಿತವಾಗಿರುವುದರಿಂದ ವಿವರಿಸಲು ಅಸಾಧ್ಯ. ಫಲಶ್ರುತಿಯ ವಾಕ್ಯಗಳು ಸಂಸ್ಕೃತದಲ್ಲಿದ್ದು ತೆಲುಗಿನಲ್ಲಿ ಬರೆದಿರುವ ದತ್ತಿಯ ಪುಟ್ಟವಾಕ್ಯದಿಂದ ಶಾಸನ ಮುಕ್ತಾಯವಾಗಿದೆ.

ಕಡಪ ಜಿಲ್ಲೆಯ ದೊಂಗಲಸಾನಿಯ ಶಾಸನ೬, ಕನ್ನಡ, ತೆಲುಗು, ಸಂಸ್ಕೃತ ಮತ್ತು ಮರಾಠೀ ಭಾಷೆಗಳಲ್ಲಿದೆ. ಕನ್ನಡ-ತೆಲುಗು ಶಾಸನಗಳ ವಿಷಯ ಒಂದೇ, ಒಂದು ಮತ್ತೊಂದರ ಅನುವಾದದಂತೆ ಭಾಸವಾಗುತ್ತದೆ.

"ಸಂಗ್ರಾಮರಂಗದಲ್ಲಿ ವೀರಭಟರುವೆರಸಿಯುದ್ಧವಾಗಲು ಯಲ್ಲಿ ವೀರಾವತಾರನು ಸಂಧಿವಿಗ್ರಹಿ ರೇಮಣ ಹೆಗ್ಗಡೆ ಕುದುರೆಯಣಬಿ[3] ಹರಿಸಿ ಮಲ್ಲದೇವನನೊಡಿಸಿ ಸೋಮೇಶ್ವರದೇವದೊಳಗಾಗಿ ಹಂನಿಬರರಸುಗಳಂ ಸಾಯಿರಾಳಂ ಕೊಂದು ವೈಕುಂಠ ಪ್ರಾಪ್ತರಾದರು" ಇದರ ತೆಲುಗು ರೂಪ ಶಾಸನದಲ್ಲಿ ಹೀಗಿದೆ.

ಸಂಗ್ರಮ ರಂಗಮುನಂದು ವೀರಭಟ್ಲತೋಂಗೂಡಿ ಯುದ್ಧಂಬುನು ಸೇಸಿ ವೀರಾವತಾರುಂಡೈನ ಸಂಧಿವಿಗ್ರಹಿ ರೇಮನ ಪ್ರಗ್ಗಡ ನಿಲ್ಪಿ ಪೊಟ್ಲಾಡೆ ಮಲ್ಲದೇವನಿ ವಿರಘುನಿಂಜೇಸಿ ಸೋಮೇಸ್ವರ ದೇವನಿ-ನಿದ್ದಲು ರಾಜುಲಾನು ವೇ(ವು)ರು ಬಂಟ್ಲು ಬಾಗಾನು ಪೆಕ್ಕು ವೋ(ಟು)ವಡಿ ಸ್ವೊರ್ಗಸ್ತುಂಡಯ್ಯೆ"

'ಪೋತಣ ಹೆಗಡೆ ಹಲವಱುವೆರಸಿ ಬಂದು ವೀರಶ್ರೀಯಂ ನಲ್ಲ ಚಿದ್ದರಸಂಗಿತ್ತು' ಎಂಬ ಕನ್ನಡ ಭಾಗವನ್ನು **'ಪೋತನ ಪೆಗ್ಗಡ ಪೆಕ್ಕಂಡ್ರಪೊಡ್ಡಿ ಪೊಟ್ಲುವಡಿ ವಿಜಯಲಕ್ಷ್ಮಿ ನಲ್ಲಸಿದ್ಧಿ ರಾಜುನಕಿಚ್ಚಿ'** ಎಂಬ ತೆಲುಗು ಭಾಗದೊಂದಿಗೆ ಹೋಲಿಸಿದರೆ, ಈ ಎರಡೂ ಭಾಗಗಳನ್ನು ಒಬ್ಬನೇ ವ್ಯಕ್ತಿ ರಚಿಸಿರುವ ಸಾಧ್ಯತೆಗಳು ಕಾಣುತ್ತವೆ.

ಆಲಂಪುರದ ಕ್ರಿ.ಶ. ೧೦೭೬ರ ಒಂದು ಕನ್ನಡ ಶಾಸನದಲ್ಲಿನ 'ಪ್ರಯಾಗೆಯೊಳಂ ಗುರುಕ್ಷೇತ್ರದೊಳಂ' ಎಂಬ ಪ್ರಯೋಗ೭ ತೆಲುಗು ರೀತಿಯದ್ದಾಗಿದೆ. ಕನ್ನಡದಲ್ಲಿ ಎರಡು ನಾಮ ವಾಚಕಗಳು ಸಂಬಂಧವಿದ್ದರೆ ಮಾತ್ರ ಸೇರುತ್ತವೆ. ತೆಲುಗಿನಲ್ಲಿ ಹಾಗಲ್ಲ 'ಆದೇಶ ಸಂಧಿ' ಪದದಿಂದ ಪದಕ್ಕೆ ಒಂದೇ ಸಮನೆ ನಡೆಯುತ್ತಲೇ ಇರುತ್ತದೆ.

ಗೋದಾವರಿ ಜಿಲ್ಲೆಯ ದ್ರಾಕ್ಷಾರಾಮದಲ್ಲಿರುವ ಒಂದು ಶಾಸನದಲ್ಲಿ ೧೬ಸಾಲುಗಳಿವೆ.೮ ೧ರಿಂದ ೫ ಸಾಲುಗಳು ಕನ್ನಡದಲ್ಲಿದೆ. ಉಳಿದ ಭಾಗ ತೆಲುಗಿನಲ್ಲಿದೆ. ಶಾಸನದ ತೆಲುಗು ಭಾಗದಲ್ಲಿ ಕಾಲದ (ಕ್ರಿ.ಶ. ೧೧೨೨) ಉಲ್ಲೇಖವಿದೆ ಹಾಗೂ

ತೆಲುಗು ಭಾಗ 'ಲಿಖಿತಂ ಪೆದ್ದನ ಶೌರಿ' ಎಂದು ಮುಕ್ತಾಯವಾಗಿದೆ. ಕನ್ನಡ ಭಾಗದಲ್ಲಿ ಹೇಳಿರುವುದನ್ನು ಸ್ವಲ್ಪ ವಿಸ್ತರಿಸಿ ತೆಲುಗಿನ ಭಾಗದಲ್ಲಿ ಹೇಳಲಾಗಿದೆ.

ಚಿತ್ತೂರು ಜಿಲ್ಲೆ ವಾಯಲಪಾಡು ತಾಲ್ಲೂಕಿನ ಮೂರು ವೈದುಂಬರ ಶಾಸನಗಳು ಕನ್ನಡ ತಮಿಳು- ತೆಲುಗು ಭಾಷೆಗಳಲ್ಲಿವೆ. ಮೂರೂ ಭಾಷೆಗಳಲ್ಲಿರುವುದು ಒಂದೇ ವಿಷಯ. ಅಜಳ ಎಂಬುವವನು ಎಮ್ಮೆಗಳನ್ನು ಉಳಿಸಲು ಹೋದಾಗ ಸತ್ತ ವಿಷಯವನ್ನು ತಿಳಿಸುವ ತುರುಗೋಳ್ ಇದು. ಕನ್ನಡ- ತೆಲುಗು ರೂಪಗಳಲ್ಲಿ ಕಾಲದ ಉಲ್ಲೇಖವಿಲ್ಲ. ತಮಿಳು ಭಾಷೆಯ ಭಾಗದಲ್ಲಿ ಕ್ರಿ.ಶ. ೧೧೧೯ ಎಂದು ಕಾಲದ ಉಲ್ಲೇಖವಿದೆ.[೯]

ಚಿತ್ತೂರು ಜಿಲ್ಲೆ ಮದನಪಲ್ಲಿ ತಾಲ್ಲೂಕಿನ ವೈದುಂಬರ ಇನ್ನೊಂದು ಶಾಸನ ಹಳೆಯ ತೆಲುಗು, ಹಳಗನ್ನಡಗಳ ಮಿಶ್ರಣವಾಗಿದೆ.೧೦೧-೫ ಸಾಲುಗಳು ತೆಲುಗಿನಲ್ಲೂ, ಮಧ್ಯೆ ೬-೧೪ ಸಾಲುಗಳು ಕನ್ನಡದಲ್ಲೂ ಕೊನೆಯ ೧೪-೧೬ ಸಾಲುಗಳು ಮತ್ತೆ ತೆಲುಗಿನಲ್ಲೂ ಇದೆ. ಶಾಸನಲಿಪಿಕಾರ ಭಾಷೆಯ ಲೆಕ್ಕದಲ್ಲಿ ಶಾಸನಗಳ ಸಾಲುಗಳನ್ನು ವಿಂಗಡಿಸಿಕೊಳ್ಳದೇ ಉದ್ದಕ್ಕೆ ರಚಿಸಿದ್ದಾನೆ. ಕನ್ನಡ ಭಾಗದಲ್ಲಿ ಪದ್ಯಗಳಲ್ಲಿ 'ಚಂತಮಾನ ದಡಿ' ಎಂಬ ಮಹಾರಾಜನನ್ನು ಹೊಗಳಿದೆ. ತೆಲುಗು ಭಾಗ ಗದ್ಯದಲ್ಲಿದೆ. ಶ್ರೀಕಂಠದೇವ ಆಚಾರ್ಯ ಎಂಬುವವನು ಈ ಶಾಸನವನ್ನು ಬರೆದನೆಂದು ಶಾಸನದಲ್ಲಿ ಹೇಳಿದೆ. ಬಹುಶಃ ಆತ ಲಿಪಿಕಾರನಿರಬೇಕು.

ಆಂಧ್ರಪ್ರದೇಶದಲ್ಲಿ ವಿಜಯನಗರದ ಕಾಲದ ಶಾಸನಗಳಲ್ಲಿ ಮನಸೆಳೆಯುವ ಭಾಗಗಳು ಕಡಿಮೆ. ಹಿಂದೂಪುರ, ಮಡಕಸಿರಾ, ರಾಯದುರ್ಗ, ಕಲ್ಯಾಣದುರ್ಗ, ಆಲೂರು, ಆದೋನಿ, ಪುಂಗನೂರು, ಚಂದ್ರಗಿರಿ, ಮದನಪಲ್ಲಿ ಮೊದಲಾದ ತಾಲ್ಲೂಕುಗಳಲ್ಲಿ, ವಿಜಯನಗರ ಕಾಲದವರೆಗೆ ತೆಲುಗು ಶಾಸನಗಳು ಅಪರೂಪವಾಗಿ ಕಾಣಿಸಿಕೊಳ್ಳುತ್ತವೆ. ಕ್ರಿ.ಶ. ೧೪ನೆಯ ಶತಮಾನದ ನಂತರದಲ್ಲಿ ದೊರೆಯುವ ಈ ಪ್ರದೇಶಗಳಲ್ಲಿನ ಶಾಸನಗಳು ಏಕತಾನತೆಯಿಂದ ಸೊರಗಿವೆ. ಕನ್ನಡ- ತೆಲುಗು-ತಮಿಳು-ಸಂಸ್ಕೃತಗಳಲ್ಲಿ ಬೇರೆಬೇರೆಯಾಗಿ ರಚಿತವಾಗಿರುವ ತಿರುಮಲೆಯ ಶಾಸನಗಳು ಒಂದೇ ವಿಷಯವನ್ನು ಸರಳವಾಗಿ ಒಂದೇ ವಿಧದಲ್ಲಿ ಹೇಳುತ್ತವೆ.[೧೧]

ಹಿಂದೂಪುರ ತಾಲ್ಲೂಕಿನ ವಿಜಯನಗರದ ದೊರೆಗಳ ಕೆಲವು ಶಾಸನಗಳು ಸಂಸ್ಕೃತದಲ್ಲಿ ಆರಂಭವಾಗಿ, 'ಲಿಖ್ಯಂತೇ ದೇಶ ಭಾಷೆಯಾ' ಎಂದು ಹೇಳಿ ಆನಂತರ ಕನ್ನಡದಲ್ಲಿ ಮುಂದುವರೆಯುತ್ತವೆ. ಲೇಪಾಕ್ಷಿಯಲ್ಲಿ ದೊರೆತಿರುವ ಶಾಸನಗಳಲ್ಲಿ ಈ ಕ್ರಮ ಎದ್ದು ಕಾಣುತ್ತದೆ. ಕೆಲವು ಕಡೆ ತೆಲುಗು-ಮಿಶ್ರಿತ ಕನ್ನಡದ ಪ್ರಯೋಗಗಳೂ ಕಾಣುತ್ತವೆ.

ಕನ್ನಡ- ತೆಲುಗು ಭಾಷೆಯ ಮಿಶ್ರ ಶಾಸನಗಳಿಗೆ ಒಂದೆರಡು ಉದಾಹರಣೆಗಳನ್ನು ನೀಡಬಹುದು.

ಆಲಂಪುರದ ಶಾಸನವೊಂದರಲ್ಲಿನ ಭಾಷೆ ಹೀಗಿದೆ. 'ಪೃಥ್ವಿವೀಗೆ ಭೂಕಯಿಲಾಸವೆನಿಸುವ. ಶ್ರೀಗಿರಿ ಶಿಂಹ್ವಾಸನದ ಮಹಾಮಹಾತ್ಮರಾದ ಪಂಚ್ಚಮಠ ಪಂಚ್ಚ ಗೃಹಾಂಗಳಿಗೆ ಮುಖ್ಯವಾದ ಬಸವಣಾನ ಗೃಹದ ಶಿಂಹ್ವಾಸನದ ಮಹಾಮಹತ್ತಿನ ಪಟ್ಟದ ಪ್ರಮಥೇಶ್ವರ ದೇವರ ಅಯ್ಯವಾರಿ ಶಿಷ್ಯುಂಡಯಿನ ಕುಪ್ಪಕಂತ್ತೆ ಶಿವಲಿಂಗದೇವರ ಅಯ್ಯವಾರಿಕಿ ನಗರೇಶ್ವರ ದೇವುನಿ ಮಠಾನಕು ಸಮರ್ಪಿಂಚಿನ ವರಪ್ರಸನ್ನುಲೈನ ಕನ್ಯಕಾಪರಮೇಶ್ವರಿ'

ಚಿತ್ತೂರು ಜಿಲ್ಲೆ, ಮದನಪಲ್ಲಿ ತಾಲ್ಲೂಕು ತಂಬಳ್ಳಪಲ್ಲಿಯ ಶಾಸನದಲ್ಲಿರುವ ಕನ್ನಡದಲ್ಲಿ ತೆಲುಗು ಭಾಷೆಯ ಶಬ್ದ ಪ್ರಯೋಗಗಳು ನೇರವಾಗಿಯೇ ನುಸುಳಿರುವುದನ್ನು ನೋಡಬಹುದು. 'ಮಾರ್ಜನಾಡಯನಾಡವೊಳಗೆಯಿಹ ಚಂದ್ರಗಿರಿಯ ಮಲ್ಲಿಕಾರ್ಜುನ ದೇವರಿಗೆ ಅನಾದಿ ಪೂರ್ವದಲಿ ಚಂದು ಬಹದಂತಾ ತಂಮಡಿಯ ಹಳಿ(ಯ)ಯೆಂಬ ಪುರವನೂ ಸಿವರಾತ್ರಿ ಮೊದಲಾಗಿ ಬಹದಂತಾ ಕಾಣಿಕೆವನೂ ಆ ದೇವರಿಗೆ ಅಮೃತಪಡಿಗೆ ಸರ್ವಮಾನ್ಯವಾಗಿ ಚಂದು ಬರಲಾಗಿ ಯಾಗ ಪೂರ್ವ ಮರಿಯಾದೆ ...ಯೀ ಚಂದ್ರಗಿರಿ ಮಲ್ಲಿಕಾರ್ಜುನ ದೇವರ ಸ್ತಾನಾಪತುಲು ಪೆದಮಲಜೀಯ್ಯಲ ಬಯಿರಜೆಯ್ಯಲ ಕೊಡಕು ಭಾನಜೀಯ್ಯಲ ವೀರಿರೆ... ಎಂದು ತೆಲುಗಿನಲ್ಲಿ ಮುಂದುವರಿದು, ಕೊನೆಯವರೆಗೂ ತೆಲುಗು ಭಾಷೆಯಲ್ಲಿದೆ[೨]

ತಂಬಳಪಲ್ಲಿಯ ಮತ್ತೆರಡು ಶಾಸನಗಳೂ ಹೀಗೆಯೇ ಇವೆ.

...ಸುಕ ಸಂಕಥಾ ವಿನೋದಂಬುಲ ಪ್ರಿತ್ವಿ ರಾಜ್ಯ ಚೇಯುಚುನ್ನ ಮಾರ್ಜವಾಡಿಯ ನಾಡ ಬಳಿಗೆಯಿಹ ಚಂದ್ರಗಿರಿಯ..ಯಿಲ್ಲದೆ ಆಗಿ ಏನುಡುವುದು ಆ ಸಿವರಾತ್ರಿ ಮೊದಲಾಗಿ ಅಷ್ಟ ಭೋಗ ತೇಜಸ್ವಾಮ್ಯ ಸಹಿತವಾಗಿ ಆಚಂದ್ರಾರ್ಕಸ್ತಾಯಿಯಾಗಿ ಅಧಿಗಾರಿ ಸುಂಕಿಗ ತಳವಾರರು. ಬೇಟೆ ಬಿಡಾರವನೂ ಅವುದುಯಲದ ಸರ್ವಮಾನ್ಯವಾಗಿ ಸಲುವುದು. ಯಿ ಚಂದ್ರಗಿರಿ ಮಲ್ಲಿಕಾರ್ಜುನ ದೇವರ ಶ್ರೀಪಾದ ಸೇವಕುಲಯಿನ..[೧೩]

ಕನ್ನಡ ಭಾಷಾ ಪ್ರದೇಶಗಳ ಮೇಲೆ ತೆಲುಗು ತನ್ನ ಪ್ರಭಾವವನ್ನು ಬೀರಲು ಆರಂಭವಾದ ವಿಜಯನಗರ ಕಾಲದ ಶಾಸನಗಳಲ್ಲಿ ಸಹಜವಾಗಿ ಕನ್ನಡ–ತೆಲುಗು ಭಾಷೆಗಳ ಮಿಶ್ರಣವಾಗಿದೆ. ಒಂದು ಭಾಷೆಯ ಮೇಲೆ ಇನ್ನೊಂದು ಭಾಷೆಯ ಆಕ್ರಮಣವಾದರೆ, ಅದಕ್ಕೆ ರಾಜಾಶ್ರಯವೂ ದೊರಕಿದರೆ, ಆಗುವ ಪರಿಣಾಮಗಳನ್ನು ಈ ಶಾಸನ ಭಾಷೆಗಳು ಸ್ಪಷ್ಟಪಡಿಸುತ್ತವೆ. ರಾಯಲಸೀಮೆಯ ಬಹುಭಾಗಗಳು ತನ್ನ ಕನ್ನಡ ವಾತಾವರಣವನ್ನು ಈ ಭಾಷಾ ಸಾಂಸ್ಕೃತಿಕ ಧಾಳಿಯಿಂದ ಕಳೆದುಕೊಂಡಿವೆ, ಕಳೆದುಕೊಳ್ಳುತ್ತಿವೆ.

ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಲುಕ್ಯರ ಆರಂಭಕಾಲದ ಶಾಸನಗಳಲ್ಲಿ ಕನ್ನಡ- ತೆಲುಗು ಶಾಸನಗಳ ರಚನೆಯಾದರೆ, ಶಾಸನಸ್ತಂಭಗಳ ಒಂದು ಮುಖವನ್ನು ಒಂದು ಭಾಷೆಗೆ ಸಂಪೂರ್ಣವಾಗಿ ಬಳಸಿರುವುದು ಕಂಡು ಬರುತ್ತದೆ. ಮಿಶ್ರ ಭಾಷೆ ಇದ್ದಂತೆ ತೋರುವ ಕೆಲವು ಶಾಸನಗಳನ್ನು ಪರಿಶೀಲಿಸಿದಾಗ, ಶಾಸನ ವಿದ್ವಾಂಸರು ಕನ್ನಡ ರೂಪ ಇದ್ದ ಭಾಗವನ್ನು ತೆಲುಗು ಭಾಷಾ ರೂಪದಲ್ಲಿ ಓದಿದ್ದುದು ಕಂಡು ಬಂದಿತು. 'ಕಾಲಂ ಕರ್ಚಿ' ಎಂದಿರುವುದನ್ನು ವಿದ್ವಾಂಸರು 'ಕಾಲುಗಡಿಗಿ' ಎಂದು ಓದಿರುವುದನ್ನು ನೋಡಿದಾಗ, ಪ್ರಾಚೀನ ಕನ್ನಡ ಶಾಸನಗಳಲ್ಲಿ ಕಾಣಿಸುವ ತೆಲುಗು ಪ್ರಯೋಗಗಳನ್ನು ಅನುಮಾನದಿಂದ ನೋಡಬೇಕು ಎನ್ನಿಸುತ್ತದೆ.

ಆಂಧ್ರಪ್ರದೇಶದಲ್ಲಿ ರಾಯಲಸೀಮೆಯ ಭಾಗದಲ್ಲಿ ವಿಜಯನಗರ ಕಾಲದವರೆಗೂ ತೆಲುಗು ಶಾಸನಗಳು ಹೆಚ್ಚು ದೊರೆಯದೇ ಇರಲು (ಕೆಲವು ತಾಲ್ಲೂಕುಗಳಲ್ಲಿ ಇಲ್ಲವೇ ಇಲ್ಲ) ಕಾರಣಗಳನ್ನು ಹೀಗೆ ಕೊಡಬಹುದು.

೧. ವಿಜಯನಗರ ಪೂರ್ವಕಾಲದಲ್ಲಿ ಕನ್ನಡ ಶಾಸನಗಳು ಮಾತ್ರ ದೊರಕುವ ರಾಯಲ ಸೀಮೆಯ ಭಾಗಗಳು ಅಚ್ಚಕನ್ನಡ ಪ್ರದೇಶಗಳಾಗಿದ್ದವು. ಜನರ ವಲಸೆಯ ಕಾರಣದಿಂದ ಅಲ್ಲಿನ ಕೆಲವು ಪ್ರದೇಶಗಳು ಈಗ ತೆಲುಗುಮಯವಾಗಿದೆ. ಆದವಾನಿ, ಆಲೂರು, ರಾಯದುರ್ಗ, ಕಲ್ಯಾಣದುರ್ಗ, ಮಡಕಸಿರಾ ತಾಲ್ಲೂಕುಗಳನ್ನು ಈಗ ದ್ವಿಭಾಷಾ ಪ್ರಾಂತಗಳೆನ್ನಬೇಕಷ್ಟೆ. ವಿಜಯನಗರ ಕಾಲದಲ್ಲೂ ಈ ತಾಲ್ಲೂಕುಗಳು ಕನ್ನಡ ಪ್ರದೇಶಗಳೇ ಆಗಿದ್ದವು.

೨. ಸಂಸ್ಕೃತಭಾಷೆಯಲ್ಲಿ ಅಪಾರವಾದ ಪಾಂಡಿತ್ಯವನ್ನು ಪಡೆಯಲು ಬಯಸುವ ತೆಲುಗು ರಚನೆಕಾರರು. ಸಂಸ್ಕೃತಭಾಷೆಯನ್ನೇ ಶಾಸನ ಭಾಷೆಯಾಗಿ ಬಳಸಿದರು. ವಿಜಯನಗರದ ದೊರೆಗಳು, ತಮ್ಮ ತಾಮ್ರಪಟಗಳನ್ನು ಸಂಸ್ಕೃತದಲ್ಲಿ ಹಾಕಿಸಿದರು. ಅದನ್ನು ಶಿಲಾಶಾಸನವಾಗಿ ಪರಿವರ್ತಿಸಿದಾಗ, ಸಂಸ್ಕೃತದಲ್ಲಿರುವುದನ್ನು ಬರೆದ ಮೇಲೆ 'ಲಿಖ್ಯಂತೇ ದೇಶ ಭಾಷೆಯಾ' ಎಂದು ಹೇಳಿ, ಕನ್ನಡದಲ್ಲಿ ಬರೆದಿರುವ ಹಿಂದೂಪುರ ತಾಲ್ಲೂಕಿನ ಶಾಸನಗಳಿವೆ.

೩. ಚಿತ್ತೂರು ಜಿಲ್ಲೆಯ ಶಾಸನಗಳಲ್ಲಿನ ಕನ್ನಡ-ತೆಲುಗು ಎರಡೂ ಭಾಷೆಗಳು ಅಪಪ್ರಯೋಗಗಳಿಂದ ತುಂಬಿವೆ. ಅದಕ್ಕೆ ಅಲ್ಲಿನ ರಾಜಕೀಯ ಅಭದ್ರತೆಯೇ ಕಾರಣವಿರಬೇಕು, ವೈದುಂಬರು, ಬಾಣರು, ನೊಳಂಬರು, ಗಂಗರು, ಚೋಳರ ನಡುವಿನ ಯುದ್ಧಗಳಲ್ಲಿ ಈ ಚಿತ್ತೂರು ಜಿಲ್ಲೆ ಎಷ್ಟು ಬಾರಿ ಯಾರ ಯಾರ ಅಧಿಕಾರದಲ್ಲಿತ್ತೆಂದು ಹೇಳುವುದೇ ಒಂದು ಗೋಜಲಾಗುತ್ತದೆ. ಆ ಗೊಂದಲದ ಪ್ರತಿರೂಪವಾಗಿದೆ ಅಲ್ಲಿನ ಶಾಸನಗಳ ಭಾಷೆ.

೪. ವಿಜಯನಗರದ ಆಡಳಿತ ಮುಕ್ತಾಯವಾದ ನಂತರ ರಾಯಲಸೀಮೆಯಲ್ಲಿ ತೆಲುಗು ಶಾಸನಗಳೂ ಇಲ್ಲ. ಕನ್ನಡ ಶಾಸನಗಳೂ ಇಲ್ಲ. ಬಹುಶಃ ಕಾಗದದ ಬಳಕೆ ಹೆಚ್ಚಾದುದರಿಂದ ಜನ ಕಲ್ಲಿನ ಮೇಲೆ ಬರೆಯುವುದನ್ನು ನಿಲ್ಲಿಸಿದರೆಂದು ತೋರುತ್ತದೆ.

ಆಕರಗಳು

1. ARSIE No B174, 1913 A.D
2. ಅದೇ No B160, 1913 A.D
3. IAP Wr. No27, 1124 A.D
4. IAP Wr. No 3
5. IAP Wr. No 21
6. IAP CdI No 128, 1159 A.D
7. SSAM No 9, 1076 A.D
8. SII IV No 1111, 1122 A.D
9. EI XXX No 46, pp 278-285, 1119 AD
10. EI XXIV No 26, pp 183-196
11. APGAS III No 112, pp 29-13, 1593 A.D
12. SII IX No 429, 1405 A.D
13. SII XVI No 17- 18

□□

೨. ಇಂದ್ರನಿಗೆ ಗೌತಮರಿಂದ ಶಾಪ – ಎರಡು ಭಿನ್ನ ಕಥೆಗಳು

ಡಾ. ಎಚ್.ಎಸ್. ಅನಂತನಾರಾಯಣ

❖

ದೇವತೆಗಳೊಡೆಯನಾದ ಇಂದ್ರನಿಗೆ ಯಾವ ಅಪರಾಧಕ್ಕಾಗಿ ಗೌತಮರಿಂದ ಶಾಪ ಬಂತು? ಅವನ ಅಪರಾಧದಲ್ಲಿ ಕೈಜೋಡಿಸಿದ ಗೌತಮರ ಪತ್ನಿ ಅಹಲ್ಯೆಯನ್ನು ಗೌತಮರು ಏನೆಂದು ಶಪಿಸಿದರು? ಆ ಶಾಪದಿಂದ ಅವಳಿಗೆ ವಿಮೋಚನೆ ಹೇಗಾಯಿತು? ಇವುಗಳನ್ನು ತಿಳಿಸುವುದೇ ಈ ಲೇಖನದ ಉದ್ದೇಶ. ರಾಮಾಯಣದಲ್ಲಿ ಇದರಬಗ್ಗೆ ಎರಡು ಭಿನ್ನ-ಭಿನ್ನ ಕಥೆಗಳಿವೆ. ಮೊದಲನೆಯದು ಬಾಲಕಾಂಡದ ಸರ್ಗ ೪೮ರಲ್ಲಿ ಲಭ್ಯವಿದೆ. ಇದರಲ್ಲಿ ಅಹಲ್ಯೆಯ ಜನ್ಮದ ಬಗ್ಗೆ ಏನೂ ಹೇಳಿಲ್ಲ. ವಿವಾಹಾನಂತರ ಗೌತಮರೊಡನೆ ಆಶ್ರಮವಾಸಿಯಾಗಿದ್ದಾಗ ಜರಗಿದ ಪ್ರಸಂಗ ಮಾತ್ರ ಇದೆ.

ಅಹಲ್ಯೆಯ ಜನ್ಮದ ಬಗ್ಗೆ ಒಂದು ರೋಚಕವಾದ ಕಥೆ ಇದೆ. ದೇವತೆಗಳು ಹಾಗೂ ಅಸುರರು ಸೇರಿಕೊಂಡು ಅಮೃತವನ್ನು ಪಡೆಯಲು ಕ್ಷೀರಸಮುದ್ರವನ್ನು ಮಥಿಸಿದರು. ಅದು ಲಭ್ಯವಾದಾಗ ದೇವತೆಗಳು ಅದು ಪೂರ್ಣವಾಗಿ ತಮಗೇ ಬೇಕೆಂದೂ ಅಸುರರು ಮೊದಲಿಗೆ ದೊರೆತ ಇತರ ಯಾವುದೇ ಅನರ್ಘ್ಯ ವಸ್ತುಗಳನ್ನು (ಉದಾ: ಐರಾವತ, ಕಾಮಧೇನು, ಉಚ್ಚೈಶ್ರವಸ್) ತಾವು ತೆಗೆದುಕೊಂಡಿಲ್ಲವಾಗಿ ಅಮೃತವು ಪೂರ್ತಿಯಾಗಿ ತಮಗೇ ದೊರಕಬೇಕೆಂದೂ ಪರಸ್ಪರ ಕಲಹ ಮಾಡಲಾರಂಬಿಸಿದರು. ಇದನ್ನು ಪರಿಹರಿಸಲು ಮಹಾವಿಷ್ಣುವು ಮೋಹಿನಿಯ ರೂಪವನ್ನು ತಾಳಿ ತಾನು ಇಬ್ಬರಿಗೂ ಸಮನಾಗಿ ಅಮೃತವನ್ನು ಹಂಚುವೆನೆಂದಾಗ ಇಬ್ಬರೂ ಒಪ್ಪಿಕೊಂಡರು.

ಮೋಹಿನಿಯ ರೂಪವನ್ನು ನೋಡಿದವರು ಬ್ರಹ್ಮನ ಸೃಷ್ಟಿಯನ್ನು ಟೀಕಿಸುತ್ತಾ ಅವನಿಗೆ ಇಷ್ಟು ಸುಂದರವಾದ ರೂಪವನ್ನು ಸೃಷ್ಟಿಸುವುದು ಸಾಧ್ಯವೇ ಇಲ್ಲ. ಅವನೊಬ್ಬ ವೇದಾಭ್ಯಾಸ ಜಡನು. ವಿಷಯ ಸುಖಗಳಲ್ಲಿ ಕುತೂಹಲವಿಲ್ಲ (ವೇದಾಭ್ಯಾಸ ಜಡಃ, ವಿಷಯವ್ಯಾವೃತ್ತ ಕೌತೂಹಲಃ), ಇಷ್ಟು ಮನೋಹರವಾದ ರೂಪವನ್ನು ಆ ಮುದುಕನು

ಹೇಗೆ ಸೃಷ್ಟಿಸಿಯಾನು? (ನಿರ್ಮಾತುಂ ಪ್ರಭವೇದ್ ಮನೋಹರಮಿದಂ ರೂಪಂ ಪುರಾಣೋ ಮುನಿಃ) ಎಂದು ಬಗೆಬಗೆಯಾಗಿ ಹೇಳಲಾರಂಬಿಸಿದರು. ಇದರಿಂದ ಖಿನ್ನನಾದ ಬ್ರಹ್ಮನು ತಪಸ್ಸುಮಾಡಿ ತನ್ನ ಮನಸ್ಸಿನಿಂದ ಅಹಲ್ಯೆಯನ್ನು ಸೃಷ್ಟಿಸಿದನು. ಹಾಗಾಗಿ ಅವಳು ಬ್ರಹ್ಮನ ಮಾನಸಪುತ್ರಿ. ಅವಳಂತಹ ಸುಂದರಿಯನ್ನು ಅದುವರೆಗೆ ಯಾರೂ ನೋಡಿರಲಿಲ್ಲ. ಬ್ರಹ್ಮನು ಅವಳನ್ನು ಸಾಕಿ, ವಿದ್ಯಾಭ್ಯಾಸ ಮಾಡಿಸುವ ಭಾರವನ್ನು ಜಿತೇಂದ್ರಿಯನೆಂದು ಪ್ರಸಿದ್ಧನಾಗಿದ್ದ ಗೌತಮ ಮಹರ್ಷಿಗೆ ಕೊಟ್ಟನು. ಅವಳು ಪ್ರಾಪ್ತವಯಸ್ಕಳಾದಾಗ ಅವಳ ವಿವಾಹಕ್ಕೆ ಬ್ರಹ್ಮನು ಸ್ಪರ್ಧೆಯೊಂದನ್ನು ಇಟ್ಟನು. ಈ ಭೂಮಂಡಲವನ್ನು ಮೂರುಬಾರಿ ಪ್ರದಕ್ಷಿಣೆ ಮಾಡಿ ವಾಪಸಾಗುವುದರಲ್ಲಿ ಯಾರು ಪ್ರಥಮರಾಗುವರೋ ಅವರು ಅಹಲ್ಯೆಯನ್ನು ವರಿಸಲು ಅರ್ಹರೆಂದನು. ದೇವತೆಗಳು, ಕೆಲವು ಋಷಿಗಳು ಇದರಲ್ಲಿ ಭಾಗವಹಿಸಿದರು. ಎಲ್ಲರೂ ಶೀಘ್ರವಾಗಿ ಭೂಪ್ರದಕ್ಷಿಣೆಗೆ ಹೊರಟರು. ಗೌತಮರು ಇಷ್ಟವಿಲ್ಲದಿದ್ದರೂ ಬ್ರಹ್ಮನ ಆಣತಿಯಂತೆ ಹೊರಡಬೇಕಾಯಿತು. ದಾರಿಯಲ್ಲಿ ಕಾಮಧೇನುವು ಪ್ರಸವಿಸುತ್ತಿರುವುದನ್ನು ನೋಡಿದ ಅವರು ಅವಳನ್ನೇ ಮೂರು ಸಲ ಪ್ರದಕ್ಷಿಣೆ ಮಾಡಿ ವಾಪಸಾದರು. ಬ್ರಹ್ಮನು ಅದು ಭೂಪ್ರದಕ್ಷಿಣೆಗೆ ಸಮನೆಂದೂ ಅವನೇ ಮೊದಲಿಗನಾದನೆಂದೂ ಸಾರಿ ಅವನಿಗೆ ಅಹಲ್ಯೆಯನ್ನು ಕೊಟ್ಟು ವಿವಾಹ ಮಾಡಿದನು. ಅವಳನ್ನು ಪಡೆಯಲು ಆಶಿಸಿದ್ದ ಅನೇಕರಿಗೆ ಇದರಿಂದ ನಿರಾಶೆಯಾಯಿತು. ಅವರಲ್ಲಿ ದೇವೇಂದ್ರನು ಮುಖ್ಯನಾದವನು. ಅವನು ಹೇಗಾದರೂ ಮಾಡಿ ಅವಳೊಡನೆ ಸಂಗಮಿಸುವ ಯೋಚನೆಯಲ್ಲೇ ಇದ್ದನು. ಅಹಲ್ಯೆಯೂ ಮನಸ್ಸಿನಲ್ಲಿ ದೇವರಾಜನಮೇಲೆ ಆಸೆ ಹೊಂದಿದ್ದಳೆನಿಸುತ್ತದೆ. ಉಳಿದವರೆಲ್ಲರೂ ಈ ವಿಚಾರವನ್ನು ಮರೆತು ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾದರು.

ಕಥೆಯ ಸಂದರ್ಭ: ವಿಶ್ವಾಮಿತ್ರರು ತಾವು ಮಾಡುತ್ತಿದ್ದ ಯಜ್ಞಕ್ಕೆ ವಿಘ್ನಮಾಡುತ್ತಿದ್ದ ರಾಕ್ಷಸರ ವಧೆಗಾಗಿ ದಶರಥನಲ್ಲಿ ಹೋಗಿ ರಾಮನ್ನು ಪ್ರಾರ್ಥಿಸಿ ಕರೆತಂದರು. ಲಕ್ಷ್ಮಣನೊಡನೆ ಬಂದ ರಾಮನು ನಿರ್ವಿಘ್ನವಾಗಿ ಯಜ್ಞ ಮುಗಿಯುವವರೆಗೆ ಕಾವಲಿದ್ದನು. ನಂತರ ಮಿಥಿಲಾನಗರದ ರಾಜ ಜನಕನ ಆಹ್ವಾನದಮೇಲೆ ರಾಮ–ಲಕ್ಷ್ಮಣರನ್ನೂ ಸಂಗಡ ಕರೆದುಕೊಂಡು ವಿಶ್ವಾಮಿತ್ರರು ಅಲ್ಲಿಗೆ ಹೋಗುತ್ತಿದ್ದಾಗ, ಮಿಥಿಲೆಯ ಸಮೀಪದಲ್ಲಿ ರಮ್ಯವೂ ಮನೋಹರವೂ ಆದರೆ ನಿರ್ಜನವಾಗಿದ್ದ ಆಶ್ರಮವೊಂದನ್ನು ಕಂಡು ಅದರಬಗ್ಗೆ ರಾಮನು ಪ್ರಶ್ನಿಸಿದಾಗ ವಿಶ್ವಾಮಿತ್ರರು ಈ ಕಥೆಯನ್ನು ಹೇಳಿದರು. "ಅಹಲ್ಯೆಯು ವಿವಾಹಾನಂತರ ಪತಿಯೊಡನೆ ಆಶ್ರಮದಲ್ಲಿ ವಾಸಿಸುತ್ತಾ ಅವನ ಸೇವೆಯಲ್ಲಿ ಇರತೊಡಗಿದಳು. ಗೌತಮನು ಅವಳಿಗಿಂತ ವಯಸ್ಸಿನಲ್ಲಿ ಹಿರಿಯವನು. ಯಾವಾಗಲೂ ತಪಸ್ಸಿನಲ್ಲಿ ಮುಳುಗಿದ್ದನು. ಅಹಲ್ಯೆಯ ಸೌಂದರ್ಯವನ್ನು ಅವನು ಎಂದೂ ಅಷ್ಟಾಗಿ

ಗಮನಿಸಿರಲಿಲ್ಲ. ಹೀಗೆಯೇ ಕಾಲ ಗತಿಸುತ್ತಿದ್ದಾಗ ಒಂದುದಿನ ಇಂದ್ರನು ಸಮಯ ಸಾಧಿಸಿ ಗೌತಮರು ಆಶ್ರಮದಲ್ಲಿ ಇಲ್ಲದಿದ್ದಾಗ ಅವನ ವೇಷವನ್ನು ಧರಿಸಿ ಅಹಲ್ಯೆಯಲ್ಲಿ ಸಂಗಮಿಸಲು ಇಚ್ಛಿಸಿದನು. ರತಿಸುಖವನ್ನು ಬಯಸಿ ಬಂದವನು ಹೆಂಗಸಿನ ಋತುಕಾಲವನ್ನು ನಿರೀಕ್ಷಿಸುವುದಿಲ್ಲ ಎಂದು ಹೇಳುತ್ತಾ ಅಹಲ್ಯೆಯನ್ನು ಸಮೀಪಿಸಿದನು (೪೮.೧೮ ಋತುಕಾಲಂ ಪ್ರತೀಕ್ಷಂತೇ ನಾರ್ಥಿನಃ ಸುಸಮಾಹಿತೇ । ಸಂಗಮಂ ತ್ವಹಮಿಚ್ಛಾಮಿ ತ್ವಯಾ ಸಹ ಸುಮಧ್ಯಮೇ). ಪತಿ ಗೌತಮನ ರೂಪವನ್ನು ಧರಿಸಿ ಬಂದವನು ದೇವರಾಜ ಇಂದ್ರನೆಂದು ತಿಳಿದರೂ ಅಹಲ್ಯೆಯು (೪೮.೧೯ ಮುನಿವೇಷಂ ಸಹಸ್ರಾಕ್ಷಂ ವಿಜ್ಞಾಯ ರಘುನಂದನ । ಮತಿಂ ಚಕಾರ ದುರ್ಮೇಧಾ ದೇವರಾಜ ಕುತೂಹಲಾತ್) ಇಂದ್ರನು ತನ್ನನ್ನು ಆಶಿಸಿ ಬಂದಿರುವನಲ್ಲಾ ಎಂದು ಕುತೂಹಲದಿಂದ ಅವನೊಡನೆ ದೇಹಸುಖವನ್ನು ಅನುಭವಿಸಲು ಇಷ್ಟಪಟ್ಟಳು. ಕಾಮಭೋಗ ತೀರಿದ ನಂತರ ಗೌತಮರ ಕೋಪಕ್ಕೆ ಹೆದರಿ ದೇವರಾಜನನ್ನು ಬೇಗ ಹೋಗೆಂದು ಹೇಳುತ್ತಾ ತನ್ನನ್ನೂ ಅವಳನ್ನೂ ರಕ್ಷಿಸಿಕೊಳ್ಳಲು ಕೇಳಿಕೊಂಡಳು (೪೮.೨೦ ಕೃತಾರ್ಥಾಸ್ಮಿ ಸುರಶ್ರೇಷ್ಠ ಗಚ್ಛ ಶೀಘ್ರಮಿತಃ ಪ್ರಭೋ । ಆತ್ಮಾನಂ ಮಾಂ ಚ ದೇವೇಶ ಸರ್ವಥಾ ರಕ್ಷ ಗೌತಮಾತ್). ಇಂದ್ರನೂ ಕೂಡ ಇಷ್ಟತೀರಿ ಆತುರದಿಂದ ವಾಪಸು ಹೊರಡುತ್ತಿರುವಷ್ಟರಲ್ಲೇ ಸ್ನಾನಮಾಡಿ ಆಶ್ರಮಕ್ಕೆ ವಾಪಸಾದ ಗೌತಮನು ತನ್ನ ವೇಷದಲ್ಲಿದ್ದ ಇಂದ್ರನನ್ನು ಕಂಡು, ಅವನ ಅಕಾರ್ಯವನ್ನು ಗ್ರಹಿಸಿದನು. ಗೌರವಕ್ಕೆ ಅರ್ಹಳಾದ ಋಷಿಪತ್ನಿಯಲ್ಲಿ ಸಂಭೋಗಿಸಿದನೆಂದು ರೋಷದಿಂದ ಅವನ ವೃಷಣಗಳು ಬಿದ್ದುಹೋಗಲೆಂದು (೪೮.೨೭ ವಿಫಲಸ್ತ್ವಮ್ ಭವಿಷ್ಯಸಿ) ಶಪಿಸಿದನು. ಇದಕ್ಕೆ ಸಹಕರಿಸಿದ ಅಹಲ್ಯೆಯು ಆಹಾರವಿಲ್ಲದೆ ಕೇವಲ ವಾತಭಕ್ಷಣೆ ಮಾಡುತ್ತಾ ಜನರಿಗೆ ಅಗೋಚರಳಾಗಿ ಅದೇ ಆಶ್ರಮದಲ್ಲಿ ವಾಸಿಸುತ್ತಿರಲೆಂದೂ (೪೮.೩೦ ವಾತಭಕ್ಷಾ ನಿರಾಹಾರಾ ತಪ್ಯಂತೀ ಭಸ್ಮಶಾಯಿನೀ । ಅದೃಶ್ಯಾ ಸರ್ವಭೂತಾನಾಂ...) ಶಪಿಸಿದನು. ನಂತರವೇ ಅವಳ ಮೇಲಿನ ಪ್ರೀತಿಯಿಂದ ಮುಂದೆ ಅಯೋಧ್ಯಾಧಿಪತಿ ದಶರಥನ ಮಗ ಶ್ರೀರಾಮನ ಚರಣಸ್ಪರ್ಶ ಆದಾಗ ಶುದ್ಧಳಾಗುವಳೆಂದೂ ಅವನನ್ನು ಸತ್ಕರಿಸುವುದರಿಂದ ಲೋಭಮೋಹಗಳಿಂದ ದೂರವಾಗಿ ಮೊದಲಿನ ರೂಪ ಪಡೆದು ತನ್ನನ್ನು ಸೇರುವಳೆಂದೂ ಉಶ್ಶಾಪ ಮತ್ತು ಶಾಪದ ಅವಧಿಯನ್ನು ತಿಳಿಸಿ ತಪಸ್ಸು ಮಾಡಲು ಬೇರೆಡೆಗೆ ಗೌತಮನು ಹೊರಟುಹೋದನು". ಹೀಗೆಂದು ಹೇಳಿ, ಅಹಲ್ಯೆಯ ಶಾಪವನ್ನು ಕಳೆ ಎಂದು ರಾಮನಿಗೆ ಹೇಳಿದರು. ಅದರಂತೆ ರಾಮನು ವಿಶ್ವಾಮಿತ್ರರೊಡನೆ ಆಶ್ರಮವನ್ನು ಪ್ರವೇಶಿಸುತ್ತಿದ್ದಂತೆ ತಪಸ್ಸಿನಿಂದ ಪ್ರಕಾಶಿಸುತ್ತಿದ್ದ, ಆದರೆ ಯಾರಿಗೂ ಕಾಣಿಸದಂತಿದ್ದ ಅಹಲ್ಯೆಯು ರಾಮನ ಬರುವಿಕೆಯಿಂದ ಶಾಪದ ಅವಧಿ ಮುಗಿದು ತನ್ನ ಪೂರ್ವರೂಪವನ್ನು ತಳೆದಳು.

ಬ್ರಹ್ಮನು ಬಹಳ ಪ್ರಯತ್ನದಿಂದ ನಿರ್ಮಿಸಿದಂತೆ, ಧೂಮದಿಂದ ಮುಚ್ಚಲ್ಪಟ್ಟ ಬೆಂಕಿಯಂತೆ, ಮೋಡಗಳಿಂದ ಆವರಿಸಲ್ಪಟ್ಟ ಚಂದ್ರನಂತೆ, ನೀರಿನಲ್ಲಿ ಪ್ರತಿಬಿಂಬಿಸಿದ ಸೂರ್ಯನ ಪ್ರಭೆಯಂತೆ ಅವಳು ಕಾಣುತ್ತಿದ್ದಳು. ರಾಮ–ಲಕ್ಷ್ಮಣರು ಅವಳ ಚರಣಸ್ಪರ್ಶವನ್ನು ಮಾಡಿದರು. ಕೂಡಲೇ ಗೌತಮರ ಮಾತುಗಳು ಸ್ಮರಣೆಗೆ ಬಂದು ಆಶ್ರಮಕ್ಕೆ ಬಂದಿರುವ ಅತಿಥಿಗಳಾದ ಅವರನ್ನು ಅಹಲ್ಯೆಯು ಅರ್ಘ್ಯ–ಪಾದ್ಯಾದಿಗಳಿಂದ ಸತ್ಕರಿಸಿದಳು. ರಾಮನು ಅಹಲ್ಯೆಯ ಆತಿಥ್ಯವನ್ನು ಸ್ವೀಕರಿಸುತ್ತಲೇ ಆಕಾಶದಿಂದ ಪುಷ್ಪವೃಷ್ಟಿಯಾಯಿತು. ದೇವದುಂದುಭಿ ಮೊಳಗಿತು. ಗಂಧರ್ವರೂ ಅಪ್ಸರೆಯರೂ ಆನಂದದಿಂದ ಉತ್ಸವ ಮಾಡಿದರು. ಶಾಪದಿಂದ ಮುಕ್ತಳಾಗಿ ಪವಿತ್ರಳಾದ ಅಹಲ್ಯೆಯನ್ನು ದೇವತೆಗಳು ಕೊಂಡಾಡಿದರು. ಇದನ್ನೆಲ್ಲಾ ತಪಸ್ಸಿನಿಂದ ತಿಳಿದ ಗೌತಮನು ಅಲ್ಲಿಗೆ ಧಾವಿಸಿಬಂದು ಹೆಂಡತಿಯೊಡನೆ ಮತ್ತೊಮ್ಮೆ ರಾಮನನ್ನು ಶಾಸ್ತ್ರೋಕ್ತ ರೀತಿಯಲ್ಲಿ ಪೂಜಿಸಿದರು. ರಾಮನೂ ಸಹ ಅದೆಲ್ಲವನ್ನೂ ಸ್ವೀಕರಿಸಿ ಅವರ ಅನುಜ್ಞೆ ಪಡೆದು ವಿಶ್ವಾಮಿತ್ರರೊಡನೆ ಮಿಥಿಲೆಗೆ ಪ್ರಯಾಣಿಸಿದರು.

ದೇವತೆಗಳೂ ಕಾಮಕ್ಕೆ ದಾಸರೇ! ಧರ್ಮದ ಚೌಕಟ್ಟಿನಲ್ಲಿ ಕಾಮ ದೋಷವಲ್ಲ. ಇಲ್ಲದಿದ್ದರೆ ಗರ್ಹಣೀಯ, ಶಿಕ್ಷಾರ್ಹ (ಧರ್ಮಾದರ್ಥಶ್ಚ ಕಾಮಶ್ಚ). ದೇವರಾಜನಾದರೂ ಅವನ ಅಧರ್ಮದ ಕಾಮತೃಪ್ತಿಗೆ ತಕ್ಕ ಫಲ ಕೂಡಲೇ ಸಿಕ್ಕಿತು. ಆದರೆ, ಇಂದ್ರನು ವಾಪಸಾದಮೇಲೆ ಅಗ್ನಿಯೇ ಮೊದಲಾದ ದೇವತೆಗಳಮುಂದೆ ತನ್ನ ಪುರುಷತ್ವದ ನಾಶಕ್ಕೆ ಬೇರೆಯೇ ಕಾರಣವನ್ನು ಹೇಳಿದನು. "ತಾನು ದೇವತೆಗಳ ಹಿತಕ್ಕಾಗಿ ಗೌತಮರ ತಪಸ್ಸಿಗೆ ವಿಘ್ನವನ್ನು ಉಂಟುಮಾಡಲು ಹೋಗಿದ್ದೆನೆಂದೂ, ಅದರಿಂದ ಕೋಪಗೊಂಡ ಗೌತಮನು ತನಗೆ ಈ ರೀತಿಯ ಶಾಪವನ್ನು ಕೊಟ್ಟನೆಂದೂ ಸುಳ್ಳು ಹೇಳುತ್ತಾನೆ. ಅವರ ತಪಸ್ಸಿನ ಫಲವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಸಮರ್ಥನಾದೆನೆಂದು ಹೊಗಳಿಕೊಳ್ಳುತ್ತಾನೆ" (೧.೪೯.೨ ಕುರ್ವತಾ ತಪಸೋ ವಿಘ್ನಂ ಗೌತಮಸ್ಯ ಮಹಾತ್ಮನಃ । ಕ್ರೋಧಮುತ್ಪಾದ್ಯ ಹಿ ಮಯಾ ಸುರಕಾರ್ಯಮಿದಂ ಕೃತಂ; ೪೯.೩ ಶಾಪಮೋಕ್ಷೇಣ ಮಹತಾ ತಪೋಽಸ್ಯಾಪಹೃತಂ ಮಯಾ). ಆದ್ದರಿಂದ ನೀವು ನನಗೆ ಪುನಃ ಪುರುಷತ್ವ ಬರುವಂತೆ ಮಾಡಿ, ಎನ್ನುತ್ತಾನೆ. ಅವರು ಹತ್ತಿರದಲ್ಲಿದ್ದ ಮೇಷವೊಂದನ್ನು ನಿರೀಕ್ಷಿಸಿ, ಅದರ ವೃಷಣಗಳನ್ನು ತೆಗೆದು ಇಂದ್ರನಿಗೆ ಸೇರಿಸಿರೆಂದು ಪಿತೃದೇವತೆಗಳನ್ನು ಪ್ರಾರ್ಥಿಸಿದರು (೪೯.೬ ಮೇಷಸ್ಯ ವೃಷಣೌ ಗೃಹ್ಯ ಶಕ್ರಾಯಾಶು ಪ್ರಯಚ್ಛತ). ಅವರು ಹಾಗೆಯೇ ಮಾಡಿದರು. ಅಂದಿನಿಂದ ಪಿತೃದೇವತೆಗಳಿಗೆ ಅಂಡರಹಿತ ಮೇಷವು ಪ್ರಿಯವಾಯಿತು.

ಇನ್ನೊಂದು ಕತೆಯ ಸಂದರ್ಭ: ಇದು ರಾಮಾಯಣದ ಉತ್ತರಕಾಂಡದ ಮೂವತ್ತನೆಯ ಸರ್ಗದಲ್ಲಿದೆ.

ಲಂಕಾಧಿಪತಿಯಾದ ರಾವಣನು ಕಠಿಣ ತಪಸ್ಸುಮಾಡಿ ಬ್ರಹ್ಮನಿಂದ ವರಗಳನ್ನು ಪಡೆದು ದೇವತೆಗಳನ್ನು ಜಯಿಸಲು ಹೋಗುತ್ತಾನೆ. ಇಂದ್ರನೊಡನೆ ಯುದ್ಧವಾಗಿ ಅದರಲ್ಲಿ ಮೇಘನಾದನು ಮಾಯೆಯಿಂದ ಇಂದ್ರನನ್ನು ಬಂದಿ ಮಾಡಿಕೊಂಡು ಹೋಗಿ ಲಂಕೆಯಲ್ಲಿ ಸೆರೆ ಇಡುತ್ತಾನೆ. ಬ್ರಹ್ಮನು ದೇವತೆಗಳೊಡನೆ ಲಂಕೆಗೆ ಹೋಗಿ ಮೇಘನಾದನಿಗೆ ಕೇಳಿದ ವರಗಳನ್ನು ನೀಡಿ ಇಂದ್ರನನ್ನು ಬಿಡಿಸುತ್ತಾನೆ. ತನಗೇಕೆ ಈ ಸ್ಥಿತಿ ಬಂತೆಂದು ಇಂದ್ರನು ಕೇಳಿದ್ದಕ್ಕೆ ಬ್ರಹ್ಮನು ಹಿಂದೆಮಾಡಿದ ಅವನ ಪಾಪಕೃತ್ಯವನ್ನು ನೆನಪಿಸಿ ಅದರಿಂದಾಗಿ ಹೀಗಾಯಿತೆನ್ನುತ್ತಾನೆ. ಕಥೆ ಹೀಗಿದೆ. "ಹಿಂದೆ ನಾನು (ಬ್ರಹ್ಮನು) ಎಲ್ಲರನ್ನೂ ಒಂದೇ ಬಣ್ಣದ, ಒಂದೇ ರೀತಿ ಮಾತನಾಡುವ, ಒಂದೇ ರೂಪದವರನ್ನಾಗಿ (೩೦.೧೯ ಏಕವರ್ಣಾಃ ಸಮಾಭಾಷಾ ಏಕರೂಪಾಶ್ಚ) ಸೃಷ್ಟಿಸುತ್ತಿದ್ದೆ. ನಂತರ ಆಲೋಚಿಸಿ ಉತ್ತಮವಾದೊಂದು ಸೃಷ್ಟಿ ಮಾಡಬಯಸಿ, ಪ್ರತಿಯೊಬ್ಬ ಜೀವಿಯ ಅಂಗಗಳಲ್ಲಿನ ವಿಶೇಷತೆಯನ್ನು ತೆಗೆದು ಅವನ್ನೆಲ್ಲಾ ಸೇರಿಸಿ ಸ್ತ್ರೀಯೊಂದನ್ನು ಸೃಷ್ಟಿಸಿದೆನು. ಅವಳೇ ಅಹಲ್ಯಾ (ಹಲಂ ಎಂದರೆ ಕುರೂಪತೆ, ಅದಿರುವವಳು ಹಲ್ಯಾ. ಹಲ್ಯವಿಲ್ಲದವಳು ಅಹಲ್ಯಾ). ಅವಳು ಯಾರ ಪತ್ನಿಯಾಗುವಳೋ ಎಂದು ನನಗೆ ಚಿಂತೆಯಾಯಿತು. "ನೀನವಳನ್ನು ಮನಸ್ಸಿನಲ್ಲಿ ಆಶಿಸಿದೆ. ನೀನು ಎಲ್ಲರಿಗಿಂತ ಉನ್ನತ ಸ್ಥಾನದಲ್ಲಿರುವೆಯೆಂದು, ಹಾಗಾಗಿ ಅವಳು ನಿನ್ನವಳಾಗಬೇಕೆಂದು ಆಶಿಸಿದೆ". ಆದರೆ, ಬ್ರಹ್ಮನು ಅವಳನ್ನು ಗೌತಮ ಮಹರ್ಷಿಯ ಹತ್ತಿರ ನ್ಯಾಸವಾಗಿಟ್ಟನು. ಅನೇಕ ವರ್ಷಗಳನಂತರ ಗೌತಮನು ಅವಳನ್ನು ವಾಪಸು ತಂದು ಬ್ರಹ್ಮನಿಗೆ ಒಪ್ಪಿಸಿದನು. ಬ್ರಹ್ಮನು ಗೌತಮನ ಸ್ಥೈರ್ಯವನ್ನು ಕಂಡು ಅವನಿಗೇ ಕೊಟ್ಟು ಅಹಲ್ಯೆಯನ್ನು ವಿವಾಹ ಮಾಡಿದನು. ಅವಳೂ ಸಹ ಗೌತಮನೊಡನೆ ರಮಿಸುತ್ತಾ ಸುಖವಾಗಿದ್ದಳು. ಇದರಿಂದ ಕೋಪಗೊಂಡ ನೀನು ಗೌತಮನ ಆಶ್ರಮಕ್ಕೆ ಹೋಗಿ ಕಾಮಾತುರನಾಗಿ ಅಹಲ್ಯೆಯೊಡನೆ ಸಂಗಮಿಸಿದೆ. ಅದು ತಿಳಿದು ಗೌತಮನು ನಿನಗೆ ಶಾಪವಿತ್ತನು. "ನೀನು ಹೀಗೆ ನಿರ್ಭಯನಾಗಿ ನನ್ನ ಹೆಂಡತಿಯನ್ನು ಬಲಾತ್ಕರಿಸಿದ್ದರಿಂದ ನೀನೂ ಯುದ್ಧದಲ್ಲಿ ಶತ್ರುಗಳ ಕೈಸೇರುವೆ" (೭.೩೦.೩೨ ಯಸ್ಮಾನ್ಮೇ ಧರ್ಷಿತಾ ಪತ್ನೀ ತ್ವಯಾ ವಾಸವ ನಿರ್ಭಯಾತ್ । ತಸ್ಮಾತ್ ತ್ವಂ ಸಮರೇ ಶಕ್ರ ಶತ್ರುಹಸ್ತಂ ಗಮಿಷ್ಯಸಿ) ಎಂದು. ಆ ಕಾರಣ ನೀನೀಗ ಇಂದ್ರಜಿತನಿಂದ ಸೆರೆಹಿಡಿಯಲ್ಪಟ್ಟೆ. ಈ ದುರ್ನಡತೆಯ ಪ್ರಾರಂಭ ಮರ್ತ್ಯಲೋಕದಲ್ಲಿ ನಿನ್ನಿಂದಾಯಿತು. ಅಲ್ಲಿ ಯಾವ ಪುರುಷನೇ ಆಗಲಿ, ಜಾರತನವನ್ನು ಮಾಡಿದರೆ ಆ ಪಾಪದ ಅರ್ಧಭಾಗ ಅವನಿಗೆ, ಇನ್ನರ್ಧಭಾಗ ನಿನಗೆ ಬರುವಂತಾಯಿತು. ನೀನು ಈ ನಡತೆಗೆ ಸೂತ್ರಪಾತ ಮಾಡಿದೆ. ಹಾಗಾಗಿ ನಿನ್ನ ಸ್ಥಾನ ಇನ್ನುಮುಂದೆ ಭದ್ರವಾಗಿರುವುದಿಲ್ಲ. ಅಷ್ಟೇ ಅಲ್ಲ, ಇನ್ನುಮುಂದೆ ಯಾರೇ ಇಂದ್ರಪದವಿಗೆ ಬಂದರೂ ಅವನು ಸ್ಥಿರವಾಗಿರಲಾರ. ಈ ರೀತಿ ಗೌತಮನು ನಿನ್ನನ್ನು ಶಪಿಸಿದನು.

ನಂತರ, ಹೆಂಡತಿ ಅಹಲ್ಯೆಯನ್ನು, "ರೂಪ ಯೌವ್ವನ ಸಂಪನ್ನಳೆಂಬ ಗರ್ವದಿಂದ ಹೀಗೆ ಆಚರಿಸಿದ ಕಾರಣ ರೂಪಭ್ರಷ್ಟಳಾಗಿ ಆಶ್ರಮದಲ್ಲಿ ಬಿದ್ದಿರು". ನಿನ್ನ ಪಾಪದಿಂದಾಗಿ ಇನ್ನುಮುಂದೆ ಈ ಲೋಕದಲ್ಲಿ ನೀನೊಬ್ಬಳೇ ರೂಪವತಿಯಾಗಿರುವುದಿಲ್ಲ (೩೭ ತಸ್ಮಾದ್ ರೂಪವತೀ ಲೋಕೇ ನ ತ್ವಮೇಕಾ ಭವಿಷ್ಯಸಿ). ನಿನ್ನ ಯಾವ ರೂಪ ಸೌಂದರ್ಯಕ್ಕಾಗಿ ಇಂದ್ರನು ಭ್ರಮಿಸಿದನೋ, ಅದನ್ನು ಎಲ್ಲ ಪ್ರಜೆಗಳೂ ಪಡೆಯುವಂತಾಗಲಿ ಎಂದನು. ಅಹಲ್ಯೆಯು ಇಲ್ಲಿ ಸುಳ್ಳು ಹೇಳುತ್ತಾಳೆ, "ನಿಮ್ಮ ರೂಪದಿಂದ ಬಂದದ್ದರಿಂದ ತಿಳಿಯಲಿಲ್ಲ. ರತಿಸುಖವನ್ನು ನನ್ನಿಷ್ಟವಿಲ್ಲದೇ ಆದೇವತೆಯು ಬಲಾತ್ಕರಿಸಿ ಅನುಭವಿಸಿದನು", ಇದರಲ್ಲಿ ನನ್ನ ತಪ್ಪಿಲ್ಲ, ಕ್ಷಮಿಸಿರಿ, ವಿಶಾಪವನ್ನು ಕೊಡಿ ಎಂದು ಗೌತಮರನ್ನು ಪ್ರಾರ್ಥಿಸಲು (೩೦.೪೦ ಅಜ್ಞಾನಾದ್ ಧರ್ಷಿತಾ ವಿಪ್ರ ತ್ವದ್ರೂಪೇಣ ದಿವೌಕಸಾ । ನ ಕಾಮಕಾರಾದ್ ವಿಪ್ರರ್ಷೆ ಪ್ರಸಾದಂ ಕರ್ತುಮರ್ಹಸಿ), ಮುಂದೆ ಇಕ್ಷ್ವಾಕು ವಂಶದಲ್ಲಿ ದಶರಥನ ಪುತ್ರ ರಾಮನಾಗಿ ಜನಿಸಿದ ವಿಷ್ಣುವು ಈ ಆಶ್ರಮಕ್ಕೆ ಬಂದದ್ದನ್ನು ನೀನು ನೋಡಿದಾಗ ಪುನಃ ಶುದ್ಧಳಾಗುವೆ (೪೩ ತಂ ದ್ರಕ್ಷ್ಯಸಿ ಯದಾ ಭದ್ರೇ ತತಃ ಪೂತಾ ಭವಿಷ್ಯಸಿ), ನಿನ್ನ ಪಾಪಕ್ಕೆ ವಿಮುಕ್ತಿ ಕೊಡಲು ಅವನೇ ಶಕ್ತನು, ಅವನ ಆತಿಥ್ಯ ಮಾಡಿದಾಗ ನನ್ನನ್ನು ಪುನಃ ಸೇರುವೆ ಎಂದನು.

ಆ ಪಾಪದ ಕಾರಣ ನೀನು ಹೀಗೆ ಸೆರೆಸಿಕ್ಕೆ. ನಿನ್ನ ಮಗನು ಸುರಕ್ಷಿತನಾಗಿರುವನು. ಅವನ ಅಜ್ಜ ಪುಲೋಮನ ರಕ್ಷಣೆಯಲ್ಲಿದ್ದಾನೆ ಎಂದು ಹೇಳಿ, ಇದರಿಂದ ಮುಕ್ತನಾಗಲು ವೈಷ್ಣವ ಯಾಗವನ್ನು ಮಾಡು ಎಂದನು. ಇಂದ್ರನು ಹಾಗೇ ಮಾಡಲಾಗಿ ಮತ್ತೆ ಸ್ವರ್ಗಲೋಕವನ್ನು ಪಡೆದು ಪುನಃ ಅಲ್ಲಿ ಶಾಸನ ಮಾಡಲಾರಂಭಿಸಿದನು.

▢▢

೩. ಬೆಂಗಳೂರಿನ ದೊಡ್ಡಬಸವನಗುಡಿ ಪ್ರದೇಶದ ಶಾಸನಗಳ ಪರಿಷ್ಕೃತಪಾಠ ಮತ್ತು ವಿಶ್ಲೇಷಣೆ

ಎಸ್. ಕಾರ್ತಿಕ್

❖

ಬೆಂಗಳೂರಿನ ಹೃದಯಸ್ಥಾನದಂತಿರುವ ದೊಡ್ಡಬಸವನಗುಡಿ ಪ್ರದೇಶದಲ್ಲಿರುವ ದೊಡ್ಡ ಬಸವಣ್ಣನ ದೇವಾಲಯವು ಅತ್ಯಂತ ಪ್ರಸಿದ್ಧವಾದುದು. ಇಲ್ಲಿ ಪ್ರತಿವರ್ಷವೂ ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ನಡೆಯುವ ಕಡಲೆಕಾಯಿ ಪರಿಷೆ ಬೆಂಗಳೂರಿನ ಸಾಂಸ್ಕೃತಿಕ ಪರಂಪರೆಗೆ ಜೀವಂತಸಾಕ್ಷಿಯಾಗಿದೆ. ಒಂದು ಕಾಲದಲ್ಲಿ ಬೆಂಗಳೂರು ನಗರದ ಜೀವನದಿಯಾಗಿದ್ದ ವೃಷಭಾವತಿ ಉಗಮವಾಗುತ್ತಿದ್ದುದು ಈ ದೊಡ್ಡಬಸವನ ಪಾದದಲ್ಲಿ ಎಂಬ ವಿವರ ಶಾಸನೋಕ್ತವಾಗಿದೆ. ಈ ದೊಡ್ಡ ಬಸವಣ್ಣನ ದೇವಾಲಯದ ಬಳಿಯೇ ದೊಡ್ಡಗಣೇಶನನ್ನೂ ಒಳಕೊಂಡು ಅನೇಕ ದೇವಾಲಯಗಳಿವೆ. ಇಲ್ಲಿರುವ ಕಹಳೆಬಂಡೆ ಉದ್ಯಾನವನವು ಮನೋಹರವಾಗಿದೆ. ದೊಡ್ಡಬಸವಣ್ಣನ ದೇವಾಲಯದಲ್ಲಿ ಬಸವನ ಪಾದದ ಬಳಿ ಇರುವ ಶಾಸನವು ೧೯೦೫ ರಲ್ಲಿ ಎಪಿಗ್ರಾಫಿಯಾ ಕರ್ಣಾಟಿಕಾ ಸಂಪುಟ–೯ ರಲ್ಲಿ ಪ್ರಕಟವಾಗಿದೆ[೧]. ಇದಲ್ಲದೆ ಇನ್ನೂ ಎರಡು ಶಾಸನಗಳಿದ್ದು, ಅವುಗಳನ್ನು ೧೯೯೬ ರಲ್ಲಿ ಮೊದಲ ಬಾರಿಗೆ ವೇಮಗಲ್ ಸೋಮಶೇಖರ್ ಅವರು ಪತ್ತೆಹಚ್ಚಿ ಪ್ರಕಟಿಸಿದ್ದಾರೆ[೨]. ಈ ಮೂರೂ ಶಾಸನಗಳ ಪಾಠ ತೃಪ್ತಿಕರವಾಗಿರದೆ ಅಲ್ಲಲ್ಲಿ ದೋಷಗಳಿಂದ ಕೂಡಿದೆ. ಶಾಸನದಲ್ಲಿ ಯಾವ ರೀತಿ ಕಂಡರಣೆಯಿದೆಯೋ (ತಪ್ಪುಗಳೇ ಇರಲಿ) ಅದರಂತೆಯೇ ಮೊದಲು ಶಾಸನವನ್ನು ಪ್ರಕಟಿಸಬೇಕಾದ್ದು ಶಾಸನತಜ್ಞರ ಕರ್ತವ್ಯ. ಅನಂತರ ವಿಶ್ಲೇಷಣೆಯೊಂದಿಗೆ ಅಪಲಿಖಿತಗಳನ್ನು ತಿದ್ದಿ ಶುದ್ಧಪಾಠವನ್ನು ಪ್ರಕಟಿಸಬೇಕು. ಈಗ ಪ್ರಕಟವಾಗಿರುವ ಕನ್ನಡ ಭಾಷೆ ಮತ್ತು ಲಿಪಿಯಲ್ಲಿ ಕೆತ್ತಲಾಗಿರುವ ಈ ಮೂರೂ ಶಾಸನಗಳ ಪಾಠಗಳು ಬಹುಶಃ ಕೆಲವು ಅನಿವಾರ್ಯ ಕಾರಣಗಳಿಂದ ತೃಪ್ತಿಕರವಾಗಿಲ್ಲ. ಆದುದರಿಂದ ಪ್ರಕೃತ ಬರಹದಲ್ಲಿ ಈ ಮೂರೂ ಶಾಸನಗಳ ಪರಿಷ್ಕೃತಪಾಠವನ್ನು ಕನ್ನಡ ಮತ್ತು ರೋಮನ್ ಲಿಪಿಗಳಲ್ಲಿ ದಾಖಲಿಸಿ, ಸಂಕ್ಷಿಪ್ತ

ವಿಶ್ಲೇಷಣೆಯನ್ನು ಅಗತ್ಯಕ್ಕೆ ತಕ್ಕಂತೆ ಮಾಡಲಾಗಿದೆ (ಮೊದಲೇ ಪ್ರಕಟವಾಗಿರುವ ಪಾಠವನ್ನೂ ಪ್ರಕೃತ ಲೇಖಕನ ಪರಿಷ್ಕೃತ ಪಾಠವನ್ನೂ ತೌಲನಿಕವಾಗಿ ನೀಡಲಾಗಿದೆ).

ಶಾಸನ-೧

ದೊಡ್ಡಬಸವನ ಪಾದದ ಮೆಟ್ಟಿಲುಗಳ ಮೇಲಿರುವ ಶಾಸನ (ಚಿತ್ರ-೧, ೧ಅ)

ಎಪಿಗ್ರಾಫಿಯಾ ಕರ್ಣಾಟಿಕಾ-9 (ರೈಸ್), ಕನ್ನಡ ಲಿಪಿ	ಎಪಿಗ್ರಾಫಿಯಾ ಕರ್ಣಾಟಿಕಾ-9 (ರೈಸ್), ರೋಮನ್ ಲಿಪಿ	ಪ್ರಕೃತ ಲೇಖಕನ ಪರಿಷ್ಕೃತ ಪಾಠ, ಕನ್ನಡ ಲಿಪಿ	ಪ್ರಕೃತ ಲೇಖಕನ ಪರಿಷ್ಕೃತ ಪಾಠ, ರೋಮನ್ ಲಿಪಿ
1 ಯಿಾ ಬಸವೇಶ್ವರನ ಪಾದದಲಿ ವ್ರಿಶಭಾವತಿಯೆನಿ 2 ಸಿಕೊಂಬನಧಿಹುಟ್ಟಿ । ಪಶ್ಚಿಮವಾಹಿನಿಯಾಗಿ ನಡೆಯು 3 ತು । ಶ್ರೀ । ದ	Yī basavēśvarana pādadalli vriśhabhāvatiyeni sikombanadihuṭṭi | paśchimavāhiniyāgi naḍeyutu | śrī | da	1 ಯಿಾ ಬಸೆವೇಶ್ವರನ ಪಾದದಲ್ಲಿ ವ್ರಿಶಭಾವತಿಯೆನಿ 2 ಸಿಕೊಂಬನಧಿಹುಟ್ಟಿ । ಪಶ್ಚಮವಾಹಿನಿಯಾಗಿ ನಡೆಯು 3 ತು । ಶ್ರೀ । ದ	1 Yī basevēśvarana pādadalli vriśabhāvatiyeni 2 sikombanadhihuṭṭi | paścamavāhiniyāgi naḍeyu 3 tu | śrī | da

ರೈಸ್ ಸಂಪುಟದ ಪಾಠಕ್ಕೂ ಪರಿಷ್ಕೃತ ಪಾಠಕ್ಕೂ ಒಂದೆರಡು ವ್ಯತ್ಯಾಸಗಳನ್ನು ಹೊರತುಪಡಿಸಿ ತೀರಾ ವ್ಯತ್ಯಾಸವೇನಿಲ್ಲ. ರೈಸ್ ಸಂಪುಟದಲ್ಲಿಯೇ ಕನ್ನಡ ಲಿಪಿಯ ಪಾಠಕ್ಕೂ ರೋಮನ್ ಲಿಪಿಯ ಪಾಠಕ್ಕೂ ಸಣ್ಣಪುಟ್ಟ ವ್ಯತ್ಯಾಸಗಳಿವೆ (ರೈಸ್ ಸಂಪುಟದಲ್ಲಿ ರೋಮನ್ ಲಿಪಿಯಲ್ಲಿ ಮುದ್ರಿಸುವಾಗ ಸಾಲುಗಳ ಕ್ರಮದಂತೆ ಮುದ್ರಿಸಿಲ್ಲ). ಇದರ ಕಾಲವನ್ನು ರೈಸ್ ಅವರು ಕ್ರಿ.ಶ. ೧೬೦೦ ರ ಅನಂತರ ಎಂದು ಪ್ರಶ್ನಚಿಹ್ನೆಯ ಸಹಿತ ದಾಖಲಿಸಿದ್ದಾರೆ. ಲಿಪಿಯನ್ನು ಗಮನಿಸಿದರೆ ಕ್ರಿ.ಶ. ಸು ೧೭೦೦-೧೭೫೦ ಎಂದು ಧೈರ್ಯವಾಗಿ ಹೇಳಬಹುದು. ಶಾಸನದಲ್ಲಿ ಬಸೆವೇಶ್ವರ ಎಂದು ಕೆತ್ತಲಾಗಿದೆ. ಇದರ ಸರಿಯಾದ ರೂಪ ಬಸವೇಶ್ವರ ಎಂದೇ ಇರಬೇಕು ಎಂಬುದರಲ್ಲಿ ಅನುಮಾನವೇನಿಲ್ಲ. ರೈಸ್ ಅವರು ಶುದ್ಧರೂಪವನ್ನು ದಾಖಲಿಸಿದ್ದಾರೆ. ನಧಿ ಎಂದಿರುವುದು ನದಿ ಎಂದೂ ನಡೆಯುತು ಎಂಬುದು ನಡೆಯಿತು ಎಂದೂ ಇರಬೇಕು. ಎರಡನೆಯ ಸಾಲಿನಲ್ಲಿರುವ ನಡೆಯು ಎಂಬಲ್ಲಿ ಯ ಮಾತ್ರ ಈಗ ಕಾಣುತ್ತದೆ. ಕೊಂಬು ಸವೆದು ಈಗ ಕಾಣುವುದಿಲ್ಲವಾಗಿ ರೈಸ್ ಅವರ ಪಾಠವನ್ನೇ ಮಾನ್ಯ ಮಾಡಬೇಕು. ಮೂರನೆಯ ಸಾಲಿನಲ್ಲಿರುವ ಕೊನೆಯ ಅಕ್ಷರ ದ ಎಂಬುದು ಏನನ್ನು ಸೂಚಿಸುತ್ತದೆ ಎಂಬುದು ಸ್ಪಷ್ಟವಿಲ್ಲ. ಬಹುಶಃ ಮುಂದಕ್ಕೂ ಏನಾದರೂ ಬರವಣಿಗೆ ಇದ್ದಿತೇ ಎಂದು ಹೇಳಲು ಈಗ ಸಾಧ್ಯವಿಲ್ಲ. ಆ ಸ್ಥಳದಲ್ಲಿ ಅಕ್ಷರಗಳಿದ್ದ ಕುರುಹು ತಕ್ಕಮಟ್ಟಿಗೆ ಕಾಣುತ್ತದೆಯಾದರೂ ವಿಪರೀತ ಸವೆದು ಹೋಗಿರುವುದರಿಂದ ಏನನ್ನೂ ಹೇಳಲು ಸಾಧ್ಯವಿಲ್ಲ. ಮೂರನೆಯ ಸಾಲಿನ ಮೂರು ಅಕ್ಷರಗಳು ರೈಸ್ ಅವರ ಕಾಲದಲ್ಲಿ ಉತ್ತಮ ಸ್ಥಿತಿಯಲ್ಲಿಯೇ ಇದ್ದಿತೆಂದು ಕಾಣುತ್ತದೆ.

ಶಾಸನ-೨

ದೊಡ್ಡಬಸವಣ್ಣ ದೇವಾಲಯದ ಹೊರಭಾಗದಲ್ಲಿರುವ ಮೆಟ್ಟಿಲುಗಳ ಬಲಭಾಗದಲ್ಲಿರುವ ಎತ್ತರದ ಬಂಡೆಯ ಮೇಲಿರುವ ಶಾಸನ

ವೇಮಗಲ್ ಸೋಮಶೇಖರ್ ಅವರ ಪಾಠ	ಪ್ರಕೃತ ಲೇಖಕನ ಪರಿಷ್ಕೃತ ಪಾಠ, ಕನ್ನಡ ಲಿಪಿ	ಪ್ರಕೃತ ಲೇಖಕನ ಪರಿಷ್ಕೃತ ಪಾಠ, ರೋಮನ್ ಲಿಪಿ
1 ದೊಡ್ಡ ಬಸವೇಶ್ವರನ ಪಾ	1 ದೊಡ್ಡ ಬಸವೇಶ್ವರನ ಪಾ	1 Doḍḍa basavēśvarana pā
2 ದದಲಿ ॥ ವೃಶಭಾವತಿಯೆಂಬ ನದಿ ಹು	2 ದದಲ್ಲಿ ॥ ವ್ರಿಶಭಾವತಿಯಂಬ ನದಿ ಹು	2 dadalli || vriśabhāvatiyamba nadi hu
3 ಟ್ಟಿ । ಪಶ್ಚಿಮವಾಹಿನಿಯಾಗಿ ನಡೆಯಿತು	3 ಟ್ಟಿ । ಪಶ್ಚಮವಾಹಿನಿಯಾಗಿ ನಡೆಯಿತು	3 ṭṭi | paścamavāhiniyāgi naḍeyitu

ರೈಸ್ ಸಂಪುಟದಲ್ಲಿ ಪ್ರಕಟವಾಗಿರುವ ಶಾಸನದಲ್ಲಿನ ವಿವರ ಈ ಶಾಸನದ ವಿವರ ಎರಡೂ ಒಂದೇ ಆಗಿದೆ. ಎರಡೂ ಶಾಸನಗಳಲ್ಲಿ ಕಂಡರಣೆಕಾರನಿಂದಾಗಿರುವ ಸ್ಖಾಲಿತ್ಯಗಳೂ ಒಂದೇ ಆಗಿವೆ. ಉದಾ : ವ್ರಿಶಭಾವತಿ, ಪಶ್ಚಮ. ಇದನ್ನು ಗಮನಿಸಿದರೆ ಎರಡೂ ಶಾಸನಗಳ ಕಂಡರಣೆಕಾರ ಬಹುಶಃ ಒಬ್ಬನೇ ಆಗಿರಬೇಕು. ರೈಸ್ ಸಂಪುಟದ ಶಾಸನವು ದೊಡ್ಡ ಬಸವಣ್ಣನ ಪಾದದ ಬಳಿಯೇ ಇರುವ ಕಾರಣ ಯೀ (ಈ) ಬಸವೇಶ್ವರನ ಪಾದದಲ್ಲಿ ಎಂದು ಕೆತ್ತಲಾಗಿದೆ. ಪ್ರಕೃತ ಶಾಸನವು (ಚಿತ್ರ-೨, ೨ಅ) ಹೊರಭಾಗದಲ್ಲಿ ಇರುವ ಕಾರಣ ದೊಡ್ಡಬಸವೇಶ್ವರನ ಪಾದದಲ್ಲಿ ಎಂದು ಕೆತ್ತಲಾಗಿದೆ. ವೃಷಭಾವತಿ ಎಂದು ಇರಬೇಕಾದ ಶಬ್ದವನ್ನು ವ್ರಿಶಭಾವತಿ ಎಂದು ಕೆತ್ತಲಾಗಿದೆ[೩]. ವೃಷಭ > ವ್ರಿಷಭ ಎಂದಾಗುವುದು ಸಹಜ ಭಾಷಿಕ ಪ್ರಕ್ರಿಯೆ. ಇದೇ ರೀತಿ ಪಶ್ಚಮ ಎಂಬುದು ಪಶ್ಚಿಮ ಎಂದಿರಬೇಕು. ವೃಷಭನ ಪಾದದಲ್ಲಿ ಜನಿಸಿದ್ದು ವೃಷಭಾವತಿ. ಈ ಸಂದರ್ಭದಲ್ಲಿ ದೊಡ್ಡಬಸವಣ್ಣನ ಪ್ರತಿಷ್ಠೆ ಆದದ್ದು ಯಾವಾಗ ಎಂಬ ಪ್ರಶ್ನೆ ಏಳುತ್ತದೆ. ಕೆಂಪೇಗೌಡನ ಜಯಪ್ರಶಸ್ತಿಯಲ್ಲಿ **'ಕರುಣದಲಿ ವರ ಬೆಂಗಳೂರಾ ಸ್ಥಳದಲ್ಲಿ ಮೆರೆವ ದೊಡ್ಡ ಬಸವೇಶ್ವರನ ದಯದಿ'** ಎಂದಿರುವುದು ಗಮನಿಸತಕ್ಕುದಾಗಿದೆ[೪]. ಕೆಂಪೇಗೌಡನ ಜಯಪ್ರಶಸ್ತಿಯಲ್ಲಿ ಎರಡು ಭಾಗಗಳಿವೆ. ದೊಡ್ಡಬಸವೇಶ್ವರನ ಉಲ್ಲೇಖವಿರುವ ಈ ಸಾಲು ಬರುವುದು ಎರಡನೆಯ ಭಾಗದಲ್ಲಿ. ಈ ಭಾಗದ ರಚನೆಯ ಕಾಲ ಕ್ರಿ.ಶ. ೧೬೩೫ ಎಂದು ಪಿ.ವಿ. ಕೃಷ್ಣಮೂರ್ತಿ ಅವರು ಆಧಾರಸಹಿತವಾಗಿ, ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ[೫]. ಆದುದರಿಂದ ಈ ಬಸವೇಶ್ವರನ ಪ್ರತಿಷ್ಠೆ ಕ್ರಿ.ಶ. ೧೬೩೫ ಕ್ಕಿಂತ ಮೊದಲು ಕ್ರಿ.ಶ. ಸು ೧೫೫೦-೧೬೦೦ ರಲ್ಲಿ ನಡೆದಿರಬೇಕು ಎಂದು ಧೈರ್ಯವಾಗಿ ಹೇಳಬಹುದಾಗಿದೆ. ಬಸವನ ವಿಗ್ರಹದ ಶೈಲಿಯೂ ಕೂಡ ಈ ತೇದಿಯನ್ನು ಸಮರ್ಥಿಸುತ್ತದೆ. ಇದನ್ನು ಮೊದಲಿನಿಂದಲೂ ದೊಡ್ಡ ಬಸವೇಶ್ವರ ಎಂದೇ ಕರೆಯುತ್ತಿದ್ದ ಸಂಗತಿ ಖಚಿತಪಡುತ್ತದೆ. ಇಂತಹ ಮಹತ್ತ್ವದ ಆಧಾರವನ್ನು ಸಂಶೋಧಕರು ಗಮನಿಸದಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಈ ಬಸವನ ದೇವಾಲಯದ ಹಿಂಭಾಗದಲ್ಲಿ ಸಮೃದ್ಧವಾದ ನೀರಿನ ಕೊಳವೊಂದಿತ್ತು. ಬಹುಶಃ ಬಸವನ ಪಾದದಲ್ಲಿ ಹುಟ್ಟಿದ (ಅಂದರೆ ಚಿಲುಮೆ) ವೃಷಭಾವತಿಯ ನೀರೇ ಕೊಳದಲ್ಲಿ ಶೇಖರವಾಗಿ

ನದಿಯಾಗಿ ಹರಿಯುತ್ತಿರಬೇಕು. ಈಗ ಅದನ್ನು ಮುಚ್ಚಿಬಿಡಲಾಗಿದೆ. ಮುಚ್ಚುವ ಮೊದಲು ಇಲ್ಲಿ ಗಣಪತಿಯನ್ನು ವಿಸರ್ಜಿಸಲಾಗುತ್ತಿತ್ತು ಮತ್ತು ಶ್ರಾದ್ಧಕರ್ಮಗಳನ್ನು ಕೂಡ ಮಾಡಲಾಗುತ್ತಿತ್ತು ಎಂದು ತಿಳಿದುಬರುತ್ತದೆ. ಈ ಸ್ಥಳದಲ್ಲಿ ಇರುವ ಮಂಟಪವನ್ನು ಶ್ರಾದ್ಧಕರ್ಮಾದಿಗಳಿಗೆ ಬಳಸುತ್ತಿದ್ದರು ಎಂದು ಮೌಖಿಕವಾಗಿ ತಿಳಿದು ಬರುತ್ತದೆ. ಪ್ರಕೃತ ಲೇಖಕನೂ ಹಲವು ವರ್ಷಗಳ ಹಿಂದೆ ಈ ಮಂಟಪವನ್ನು ನೋಡಿರುವುದುಂಟು (ಆ ಸ್ಥಳದಲ್ಲಿ ಈಗ ಸಾರ್ವಜನಿಕ ಪ್ರವೇಶವನ್ನು ನಿಷೇಧಿಸಿರುವುದರಿಂದ ಈಗಿನ ಪರಿಸ್ಥಿತಿ ತಿಳಿಯದು). ಈ ಶಾಸನವಿರುವ ಬಂಡೆ ಮತ್ತು ಸುತ್ತಮುತ್ತಲ ಬಂಡೆಗಳ ಮೇಲೆ ಮಕ್ಕಳು ಜಾರುಬಂಡೆ ಆಟವನ್ನು ಆಡುತ್ತಿದ್ದರು (ಪ್ರಕೃತ ಲೇಖಕನೂ ಎಳೆಯ ವಯಸ್ಸಿನಲ್ಲಿ ಈ ಶಾಸನವಿರುವ ಬಂಡೆ ಮತ್ತು ಸುತ್ತಮುತ್ತಲ ಬಂಡೆಗಳ ಮೇಲೆ ಜಾರುಬಂಡೆ ಆಟವಾಡಿದ್ದು ತಕ್ಕಮಟ್ಟಿಗೆ ನೆನಪಿದೆ). ರೈಸ್ ಸಂಪುಟದಲ್ಲಿ ಮುದ್ರಿತವಾಗಿರುವ ಶಾಸನ ಮತ್ತು ಪ್ರಕೃತ ಶಾಸನ ಇವೆರಡರಲ್ಲಿಯೂ ದೊಡ್ಡಬಸವೇಶ್ವರನ ಪಾದದಲ್ಲಿ ವೃಷಭಾವತಿಯು ಹುಟ್ಟಿ ಪಶ್ಚಿಮ ವಾಹಿನಿಯಾಗಿ ಹರಿಯಿತು ಎಂಬ ಸಾರಾಂಶವೇ ಇದೆ.

ಶಾಸನ–೩

ದೊಡ್ಡಬಸವಣ್ಣ ದೇವಾಲಯದ ಬಳಿಯೇ ಇರುವ ಎತ್ತರದ ಬಂಡೆಯ ಮೇಲಿರುವ ಶಾಸನ (ಚಿತ್ರ–೩, ೩ಅ)

ವೇಮಗಲ್ ಸೋಮಶೇಖರ್ ಅವರ ಪಾಠ	ಪ್ರಕೃತ ಲೇಖಕನ ಪರಿಷ್ಕೃತ ಪಾಠ ಕನ್ನಡ ಲಿಪಿ	ಪ್ರಕೃತ ಲೇಖಕನ ಪರಿಷ್ಕೃತ ಪಾಠ, ರೋಮನ್ ಲಿಪಿ
ದೀವಟಿಗೆ ಸೋಮನು . . . . . ಕುಲ ಗುರುಲಿಂಗ	ದೀವಿಟಿಗೆ ಸೋಮನು ಹೂಲಿಕಲ ಗುರುಲಿಂಗ	Dīviṭige sōmanu Hūlikala guruliṅga

ವೇಮಗಲ್ ಸೋಮಶೇಖರ್ ಅವರು ಮೇಲಿನ ಶಾಸನಗಳನ್ನು ಒಂದೇ ಶಾಸನ ಎಂದು ತಿಳಿದು ಪ್ರಕಟಿಸಿದ್ದಾರೆ. ಆದರೆ ವಾಸ್ತವವಾಗಿ ಇವನ್ನು ಎರಡು ಶಾಸನಗಳನ್ನಾಗಿ ತಿಳಿಯುವುದೇ ಸೂಕ್ತ. ಏಕೆಂದರೆ ದೀವಟಿಗೆ ಸೋಮನು ಎಂಬ ವ್ಯಕ್ತಿನಾಮ ಪ್ರಥಮಾಂತ್ಯವಾಗಿದೆ (ಪ್ರಥಮಾ ವಿಭಕ್ತಿ ಪ್ರತ್ಯಯ ಉ ಆಗಿದೆ). ಇದಕ್ಕೂ ಮುಂದಿನ ಹೂಲಿಕಲ ಗುರುಲಿಂಗ ಎಂಬುದಕ್ಕೂ ಸಂಬಂಧವಿಲ್ಲ. ಅರ್ಥವನ್ನೂ ಹೇಳಲು ಸಾಧ್ಯವಿಲ್ಲ. ಎರಡಕ್ಕೂ ಹೊಂದಾಣಿಕೆಯ ಕೊಂಡಿ ಇರಬೇಕಿದ್ದರೆ ಈ ಭಾಗದಲ್ಲಿ ದೀವಟಿಗೆ ಸೋಮನ ಎಂಬ ಷಷ್ಠಿ ವಿಭಕ್ತಿಯ ರೂಪವಿರಬೇಕಿತ್ತು. ಅಷ್ಟೇ ಅಲ್ಲದೆ ವೇಮಗಲ್ ಸೋಮಶೇಖರ್ ಅವರಿಗೆ ಪೂರ್ಣ ಶಾಸನದ ಪಾಠ ಬಹುಶಃ ಓದಲು ಸಾಧ್ಯವಾಗದೆ ಕೆಲವಕ್ಷರಗಳನ್ನು ತ್ರುಟಿತವೆಂಬಂತೆ ತೋರಿಸಿದ್ದಾರೆ. ಆದರೆ ಅವರೇ ನೀಡಿರುವ ಛಾಯಾಚಿತ್ರದಲ್ಲಿ ಶಾಸನಪಾಠ ತ್ರುಟಿತವಾಗಿಲ್ಲದಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಲಿಪಿಸ್ವರೂಪದಿಂದ ಇವುಗಳ ಕಾಲವನ್ನು ಸೋಮಶೇಖರ್ ಅವರು ಕ್ರಿ.ಶ. ಸು ೧೬ ನೆಯ ಶತಮಾನ ಎಂದು ಹೇಳಿದ್ದಾರೆ. ಆದರೆ ಅಕ್ಷರಗಳ ಬೆಳವಣಿಗೆಯನ್ನು ಗಮನಿಸಿದರೆ ೧೭ ನೆಯ ಶತಮಾನದ

ಸುಮಾರೆಂದು ಹೇಳುವುದು ಹೆಚ್ಚು ಸೂಕ್ತ. ಈ ಬಂಡೆ ಮತ್ತು ಸುತ್ತಮುತ್ತಲ ಬಂಡೆಗಳ ಮೇಲೆ ಇರುವ ಕುಳಿಗಳು ದೀವಟಿಗೆಯನ್ನು ಇಡಲು ಬಳಸುತ್ತಿದ್ದ ಕುಳಿಗಳಾಗಿವೆ. ಸೋಮನೆಂಬ ವ್ಯಕ್ತಿ ದೀವಟಿಗೆಯನ್ನು ಹಚ್ಚುತ್ತಿದ್ದ ವ್ಯಕ್ತಿಯಾದ ಕಾರಣ ಆತನ ಹೆಸರು ದೀವಟಿಗೆ ಸೋಮನೆಂದು ದಾಖಲಾಗಿರಬೇಕು. ಹೂಲಿಕಲ ಗುರುಲಿಂಗ ಎಂಬುದು ಕೂಡ ವ್ಯಕ್ತಿಯೊಬ್ಬನ ಹೆಸರಾಗಿದ್ದು, ಹೂಲಿಕಲ್ಲು (=ಹುಲಿಕಲ್ಲು) ಸ್ಥಳದವನೆಂದು ತಿಳಿಯುತ್ತದೆ (ಆದರೆ ಹೂ ಅಕ್ಷರವನ್ನು ಓದಿರುವುದು ಕೆಲಮಟ್ಟಿಗೆ ಸಂದೇಹಾಸ್ಪದವಾದುದು. ಆದರೆ ಬೇರೆ ಅಕ್ಷರಕ್ಕಿಂತ ಹೂ ಅಕ್ಷರದ ಸಂಭಾವ್ಯತೆ ಹೆಚ್ಚು). ಬಹುಶಃ ಈತನೂ ದೀವಟಿಗೆ ಸೋಮನೂ ಒಂದೇ ವೃತ್ತಿಯವರಿರಬೇಕು. ಶಾಸನದಲ್ಲಿ ದೀವಿಟಿಗೆ ಎಂದಿದೆ. ಇದರ ಶುದ್ಧರೂಪ ದೀವಟಿಗೆ ಎಂದಿರಬೇಕು. ದೀವ > ದೀವಿ ಆಡುಮಾತಿನ ಬಳಕೆಯಲ್ಲಿ ಸಹಜವಾದುದು. ಆದುದರಿಂದ ಇದನ್ನೂ ಗ್ರಾಹ್ಯವೆನ್ನಬೇಕು. ದೀವಿಗೆ ಎಂಬ ಶಬ್ದವೂ ಇರುವುದನ್ನು ಗಮನಿಸಬೇಕು. ದೀವಿಟಿಗೆ ಶಬ್ದದಲ್ಲಿನ ಗೆ ಅಕ್ಷರವನ್ನು ಟಿ ಮತ್ತು ಮುಂದಿನ ಸೋ ಅಕ್ಷರಗಳ ನಡುವೆ ತೀರಾ ಸಣ್ಣದಾಗಿ ಕೆತ್ತಲಾಗಿದೆ.

ಈ ಮೂರೂ ಶಾಸನಗಳ ಲಿಪಿಸ್ವರೂಪವು ಬಲುಮಟ್ಟಿಗೆ ಒಂದೇ ರೀತಿ ಇದೆ. ಮೇಲೆ ಸೂಚಿಸಿರುವಂತೆ ಮೂರೂ ಶಾಸನಗಳ ಕಂಡರಣೆಕಾರ ಮತ್ತು ರಚನಾಕಾರ ಒಬ್ಬನೇ ಆಗಿರುವ ಸಂಭಾವ್ಯತೆಯುಂಟು. ಮೂರು ಶಾಸನಗಳಲ್ಲಿಯೂ ಮೊದಮೊದಲ ಅಕ್ಷರಗಳನ್ನು ದೊಡ್ಡದಾಗಿ ಕೆತ್ತಿ ಅನಂತರದ ಅಕ್ಷರಗಳನ್ನು ಸಣ್ಣದಾಗಿ ಕೆತ್ತಿರುವುದುಂಟು (ಆದರೆ ಬಸವನ ಪಾದದ ಬಳಿಯ ಶಾಸನದ ಅಕ್ಷರಗಳ ಕಂಡರಣೆ ಬಲುಮಟ್ಟಿಗೆ ಒಂದೇ ಗಾತ್ರದ್ದಾಗಿದೆ). ಎತ್ವ, ಓತ್ವ, ಹ್ರಸ್ವ, ದೀರ್ಘಗಳನ್ನು ಸೂಕ್ತವಾಗಿ ಕೆತ್ತಿಯೇ ಇಲ್ಲ. ಇವುಗಳನ್ನು ಭಾಷಾಪ್ರಭುತ್ವದ ಬಲದಿಂದ ಓದಬೇಕು. ಇಲ್ಲವಾದಲ್ಲಿ ಆಗುವ ದೋಷಗಳು, ಮೂಡುವ ಗೊಂದಲಗಳು ಅಪಾರ. ರೈಸ್ ಮತ್ತು ವೇಮಗಲ್ ಸೋಮಶೇಖರ್ ಇಬ್ಬರೂ ಎತ್ವ, ಓತ್ವಗಳನ್ನು, ಹ್ರಸ್ವ, ದೀರ್ಘಗಳನ್ನು ಸೂಕ್ತವಾಗಿಯೇ ಓದಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ.

ಪ್ರಕೃತ ಬರಹದಲ್ಲಿ ದೊಡ್ಡಬಸವನಗುಡಿ ಪ್ರದೇಶದಲ್ಲಿನ ಮೂರು ಶಾಸನಗಳ ಪರಿಷ್ಕೃತ ಪಾಠವನ್ನು ಅಗತ್ಯವಿರುವ ಸಂಕ್ಷಿಪ್ತ ವಿಶ್ಲೇಷಣೆಯ ಸಹಿತವಾಗಿ ಪ್ರಕಟಿಸಲಾಗಿದೆ. ಎಂತಹ ಸಣ್ಣ ಶಾಸನವಾದರೂ ಪ್ರಕಟನೆಗೆ ಮತ್ತು ಪರಿಷ್ಕರಣೆಗೆ ಅರ್ಹವೆಂದು ಒತ್ತಿ ಹೇಳಬೇಕಾಗಿದೆ. ಈ ಪರಿಷ್ಕೃತ ವಿವರಗಳನ್ನು ಶಾಸನಸಂಪುಟಗಳ ಪರಿಷ್ಕೃತ ಆವೃತ್ತಿಗಳಲ್ಲಿ ಅಳವಡಿಸಿಕೊಳ್ಳಬೇಕಾದುದು ಶಾಸನತಜ್ಞರ ಕರ್ತವ್ಯವಾಗಿದೆ. ಇದೇ ರೀತಿಯಾಗಿ ಅನೇಕ ಶಾಸನಗಳ ಪಾಠ ಮತ್ತು ಕಾಲಗಳು ಪುನಃ ಪರಿಶೀಲನೆಗೆ ಒಳಪಡುವ ಅಗತ್ಯ ಬಹಳವಾಗಿದೆಯೆಂದು ಒತ್ತಿ ಹೇಳಬೇಕಾಗಿದೆ. ಈಚೆಗೆ ಶಾಸನಶಾಸ್ತ್ರದ ಅರಿವೇ ಇಲ್ಲದ ಕೆಲವರು ಈ ಶಾಸನಗಳನ್ನು ಪರಿಷ್ಕೃತಪಾಠ ಎಂದು ಸೂಚಿಸಿ ಅಂತರ್ಜಾಲದಲ್ಲಿ

ಪ್ರಕಟಿಸಿಕೊಂಡಿದ್ದಾರೆ. ಇದು ಬಹಳವಾಗಿ ಪ್ರಚಾರವನ್ನೂ ಪಡೆದುಕೊಂಡಿದೆ. ಆದರೆ ಈ ಪಾಠ ಮತ್ತು ಪ್ರಕಟನೆಗಳು ಅಧಿಕೃತವಂತೂ ಅಲ್ಲವೇ ಅಲ್ಲ ಎಂದು ಒತ್ತಿ ಹೇಳಬೇಕಿದೆ. ಏಕೆಂದರೆ ಇದರ ಬಗೆಗೆ ಇರುವ ಮಾಹಿತಿಗಳನ್ನು ಸರಿಯಾಗಿ ಅರಿಯದೇ ತಪ್ಪು ತಪ್ಪು ಮಾಹಿತಿಗಳನ್ನು ಅಂತರ್ಜಾಲದಲ್ಲಿ ದಾಖಲಿಸಲಾಗಿದೆ. ಇಂತಹ ಬರಹಗಳನ್ನು ಸಂಶೋಧಕರು ಪ್ರಶ್ನಿಸಿ, ಅವುಗಳನ್ನು ದೂರವಿರಿಸದಿದ್ದರೆ ತಪ್ಪು ಮಾಹಿತಿಗಳೇ ಪ್ರಚಾರಕ್ಕೆ ಬಂದು ನೈಜ ಇತಿಹಾಸವೆಂಬುದು ಮರೆಯಾಗುತ್ತದೆ. ಈ ನಿಟ್ಟಿನಲ್ಲಿ ಸಂಶೋಧಕರು ಹೆಜ್ಜೆಗಳನ್ನು ಇರಿಸಬೇಕಾದ ಅಗತ್ಯವಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು :


೧. ಎಪಿಗ್ರಾಫಿಯಾ ಕರ್ಣಾಟಿಕಾ, ಸಂಪುಟ-೯ {ಬೆಂಗಳೂರು ಜಿಲ್ಲೆ}-(ಸಂ) ಬಿ.ಎಲ್. ರೈಸ್, ಮೈಸೂರು ಪುರಾತತ್ತ್ವ ಇಲಾಖೆ, ಬೆಂಗಳೂರು-೧೯೦೫, ಬೆಂಗಳೂರು-೭೦

೨. ಬೆಂಗಳೂರಿನ ದೊಡ್ಡ ಬಸವಣ್ಣ ದೇವಾಲಯದ ಮುಂದಿನ ಎರಡು ಅಪ್ರಕಟಿತ ಶಾಸನಗಳು-ವೇಮಗಲ್ ಸೋಮಶೇಖರ್, ಇತಿಹಾಸ ದರ್ಶನ ಸಂಪುಟ-೧೧, ೧೯೯೬, ಪುಟ ೧೨೯-೧೩೧ ; ಆಧುನಿಕ ಬೆಂಗಳೂರು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು-೨೦೧೩, ಪುಟ ೬೬-೬೯

೩. ಇತಿಹಾಸ ದರ್ಶನದಲ್ಲಿ ಮುದ್ರಿತವಾಗಿರುವ ವೇಮಗಲ್ ಸೋಮಶೇಖರ್ ಅವರ ಲೇಖನದಲ್ಲಿ ವ್ರಿಶಭಾವತಿ ಎಂದೇ ಇದೆ.

೪. ಕೆಂಪೇಗೌಡನ ಜಯಪ್ರಶಸ್ತಿ-(ಸಂ) ಕರ್ಲಮಂಗಲಂ ಶ್ರೀಕಂಠಯ್ಯ, ಪ್ರಕಟನೆ : ಮಾಗಡಿ ಶಂಕರಪ್ಪ, ಕೃಷಿಕ. ಮಾಗಡಿ-೧೯೬೧, ಹಾಡು-೩೭, ಎರಡನೆಯ ಭಾಗ, ಪುಟ ೧೮

೫. ಕೆಂಪೇಗೌಡನ ಜಯಪ್ರಶಸ್ತಿ : ಒಂದು ಚಾರಿತ್ರಿಕ ಪರಿಶೀಲನೆ-ಪಿ.ವಿ.ಕೃಷ್ಣಮೂರ್ತಿ, ಶಾಸನ ಇತಿಹಾಸ ಮಂಥನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-೨೦೧೧, ಪುಟ ೧೨೧-೧೨೯; ಕೆಂಪೇಗೌಡ ಜಯಪ್ರಶಸ್ತಿ ಉಲ್ಲೇಖಿತ ಮುಮ್ಮಡಿ ವೆಂಕಟಪತಿದೇವರಾಯನ ಕಾಲದ ಸ್ಥಳೀಯ ಪ್ರಭುಗಳ ಪ್ರಭಾವ : ಒಂದು ವಿವೇಚನೆ- ಪಿ.ವಿ.ಕೃಷ್ಣಮೂರ್ತಿ, ಶಾಸನ ಇತಿಹಾಸ ಮಂಥನ, ತುಮಕೂರು-೨೦೧೧, ಪುಟ ೧೪೫-೧೫೧




ಚಿತ್ರ–೧



ಚಿತ್ರ–೧ಅ




ಚಿತ್ರ–೨



ಚಿತ್ರ–೨ಅ



ಚಿತ್ರ–3



ಚಿತ್ರ–3ಅ

೪. ಪರೀಕ್ಷಾ ವಸ್ತ್ರ ಪ್ರಸಂಗ

ಪ್ರೊ. ಎಸ್. ಬಿಳಿಗಿರಿವಾಸನ್

❖

ಮಹಾಭಾರತದ ಪರಿಚಯವಿರುವವರಿಗೆಲ್ಲಾ ಅಕ್ಷಯ ವಸ್ತ್ರ ಪ್ರಸಂಗವು ಚಿರಪರಿಚಿತವಾಗಿರುವಂತಹುದು. ಆದರೆ ಈ ಪರೀಕ್ಷಾವಸ್ತ್ರ ಪ್ರಸಂಗವು ಬಹುಮಟ್ಟಿಗೆ ಅಪರಿಚಿತವಾದುದು. ಆದರೆ ಈ ಪ್ರಸಂಗವು ವ್ಯಾಸರ ಮಹಾಭಾರತದಲ್ಲಿಯೂ ಮತ್ತಿತರ ಕನ್ನಡ ಭಾರತಗಳಲ್ಲಿ ಕಂಡುಬರುವುದಿಲ್ಲವಾದರೂ ತಮಿಳುನಾಡಿನಲ್ಲಿ ಕ್ರಿ.ಶ. ೯ನೆಯ ಶತಮಾನದಲ್ಲಿ ಜೀವಿಸಿದ್ದ ಪ್ರಸಿದ್ಧ ತಮಿಳು ಕವಿ ಪೆರುಂದೇವನಾರ್ ರಚಿಸಿರುವ "ಭಾರತವೆಣ್ಬಾ" ಎಂಬ ಕಾವ್ಯದಲ್ಲಿ ಕಂಡು ಬರುತ್ತದೆ ಎಂದರೆ ಆಶ್ಚರ್ಯವಾಗುತ್ತದೆ.

"ಭಾರತವೆಣ್ಬದ ಉದ್ಯೋಗ ಪರ್ವದಲ್ಲಿ ಯುಧಿಷ್ಠಿರನ ಕೋರಿಕೆಯಂತೆ ಕೃಷ್ಣನು ಕೌರವರೊಡನೆ ಸಂಧಿಮಾಡಿಕೊಂಡು ಬರುವ ಸಂದರ್ಭದಲ್ಲಿ ಸಂಧಿಯು ವಿಫಲವಾದಾಗ ಕರ್ಣನೊಡನೆ ಭೇದೋಪಾಯವನ್ನು ಮಾಡಲು ಪ್ರಯತ್ನಿಸಿ ಸಫಲವಾಗದಿರಲು ಮೊಂಡುತನದ ಕರ್ಣನನ್ನು ಅವನ ಬಹುತೇಕ ದುರ್ಬಲ ಭಾಗವಾದ ಉದಾರತೆಯ ಸದ್ಗುಣದ ಮೂಲಕ ಶೋಷಿಸಲು ತೀರ್ಮಾನಿಸುತ್ತಾನೆ.

ಶ್ರೀಕೃಷ್ಣನು ಅರ್ಜುನನಿಗೆ ವಿಜಯವನ್ನು ತರುವ ದೃಷ್ಟಿಯಿಂದ ದೈವಿಕ ತಂದೆಯಾದ ಇಂದ್ರನಿಗೆ "ನೋಡು ಇಂದ್ರ! ಮುಂಬರುವ ಯುದ್ಧದಲ್ಲಿ ನಿನ್ನ ಮಗನು ವಿಜಯಿಯಾಗಬೇಕೆಂಬ ಬಯಕೆ ನಿನಗಿದ್ದರೆ, ನೀನು ಕರ್ಣನಲ್ಲಿಗೆ ಬ್ರಾಹ್ಮಣವೇಷದಲ್ಲಿ ಭಿಕ್ಷಾಟನೆಗೆ ಹೋಗಿ ಹುಟ್ಟಿದಂದಿನಿಂದಿರುವ ಅವನ ಚಿನ್ನದ ಕಿವಿಯಾಭರಣಗಳು ಹಾಗೂ ಚರ್ಮದ ರಕ್ಷಾಕವಚದೊಂದಿಗೆ ಅವನ ಕೈಯಲ್ಲಿರುವ ಅತ್ಯಮೂಲ್ಯವಾದ ವಜ್ರವನ್ನು ತರಲು ಹೇಳುವನು. ವ್ಯಾಸರಲ್ಲಿ ಕರ್ಣನ ಕೈಯಲ್ಲಿ ಅತ್ಯಮೂಲ್ಯವಾದ ವಜ್ರವಿರುವ ಉಲ್ಲೇಖವಿಲ್ಲ.

ಕರ್ಣನು ವೇಷಧಾರಿಯಾದ ಇಂದ್ರನಿಗೆ ದಾನ ನೀಡುವಾಗಿನ ಉತ್ತರವು ಅತ್ಯಂತ ಆತ್ಮವಿಕಸನದಿಂದ ಉದ್ಭವಿಸಿದುದಾಗಿತ್ತು. ಅವನು "ಓ ಬ್ರಾಹ್ಮಣನೇ ನಮ್ಮದಾದ ಈ

ವಿಶ್ವದಲ್ಲಿ. ನಮ್ಮ ಉದ್ದೇಶಗಳು. ನಮ್ಮ ಮಾತು ಹಾಗೂ ನಮ್ಮ ಜೀವನ ಸಂದರ್ಭಗಳು ಶಾಶ್ವತ ಪ್ರಕೃತಿಯವಲ್ಲ. ನಮ್ಮ ಈ ದೈಹಿಕ ಚೌಕಟ್ಟು ಹಾಗೂ ಭೌತಿಕ ಸಂಪತ್ತು ಖಂಡಿತವಾಗಿ ಅಸ್ಥಿರವಾದುದು. ಆದುದರಿಂದ ನೀನೀಗ ದಾನವನ್ನು ಸ್ವೀಕರಿಸಿ ಮನೆಗೆ ಹೋಗು" ಎನ್ನುವನು. ವ್ಯಾಸರಲ್ಲಿ ಈ ಉಪಾಖ್ಯಾನವು ಅತ್ಯಂತ ಸಂಕ್ಷಿಪ್ತವಾಗಿದೆ.

ಕರ್ಣನ ಕವಚ, ಕುಂಡಲ ಹಾಗೂ ಕೈಯಲ್ಲಿದ್ದ ವಜ್ರವನ್ನು ಮೋಸದಿಂದ ಕಿತ್ತುಕೊಂಡಿದ್ದರೂ ಕರ್ಣನಲ್ಲಿ ಅರ್ಜುನನನ್ನು ಕೊಲ್ಲಲು ಸೇರಿಕೊಂಡಿರುವ ನಾಗಾಸ್ತ್ರವೆಂಬ ಇನ್ನೊಂದು ಶಕ್ತಿಯಿದೆ. ಅರ್ಜುನನನ್ನು ನಾಗಾಸ್ತ್ರದಿಂದ ಹೇಗಾದರೂ ರಕ್ಷಿಸಬೇಕು. ಅದಕ್ಕಾಗಿ ಕೃಷ್ಣನು ಕುಂತಿಯ ಬಳಿ ಬಂದು ಅವಳು ಕರ್ಣನಲ್ಲಿಗೆ ಹೋಗಿ ಅರ್ಜುನನ ವಿರುದ್ಧ ನಾಗಾಸ್ತ್ರವನ್ನು ಎರಡನೆಯ ಬಾರಿ ಬಳಸಬಾರದೆಂದು ಕರ್ಣನಿಂದ ವಾಗ್ದಾನವನ್ನು ಪಡೆಯುವಂತೆ ಹೇಳುತ್ತಾನೆ.

ಭಗವಾನ್ ವ್ಯಾಸರಲ್ಲಿ ಕುಂತಿಯು ಸ್ವಯಂ ಪ್ರೇರಣೆಯಿಂದ ಕರ್ಣನಲ್ಲಿಗೆ ಹೋಗುತ್ತಾಳೆ. ಅವಳು ಪವಿತ್ರ ಗಂಗಾನದಿಯ ಬಳಿ ಕರ್ಣನು ಪ್ರಾತಃಕಾಲದ ಪ್ರಾರ್ಥನೆಯಲ್ಲಿದ್ದಾಗ ಅವನನ್ನು ಕಾಣುತ್ತಾಳೆ. ಪೆರುಂದೇವನಾರ್ ಕುಂತಿ ಕರ್ಣರ ಭೇಟಿಯ ಸ್ಥಳವನ್ನು ಗಂಗಾನದಿಯಿಂದ ಕರ್ಣನ ಅರಮನೆಗೆ ಸ್ಥಳಾಂತರಿಸಿದ್ದಾನೆ. ವಿಶಿಷ್ಟವಾದ ಪರಿವರ್ತನೆಗಳನ್ನು ಹೊಂದಿರುವ ಈ ಉಪಾಖ್ಯಾನವು ಅತ್ಯಂತ ಕುತೂಹಲಕಾರಿಯಾಗಿದೆ.

ಕೃಷ್ಣನ ಕೋರಿಕೆಯಂತೆ ಕುಂತಿಯು ಕರ್ಣನ ಅರಮನೆಗೆ ಹೋದಾಗ ಕರ್ಣನು ಅತ್ಯಂತ ಗೌರವದಿಂದ ಕೈಗಳನ್ನು ಮುಗಿಯುತ್ತಾ ಸ್ವಾಗತಿಸುತ್ತಾನೆ. ಯಾರಿಗೂ ಬಾಗಿ ಅರಿಯದ ಕರ್ಣನ ಕಿರೀಟಧಾರಿ ಶಿರವು ಈಗ ನಮ್ರತೆಯಿಂದ ಬಾಗುತ್ತದೆ. ಕುಂತಿಯೂ ಸಹಾ ತನ್ನ ಭಾವೋದ್ರಿಕ್ತ ಮಾತೃ ಸಹಜವಾದ ಪ್ರೀತಿಯಲ್ಲಿ ಕಳೆದುಹೋಗುತ್ತಾಳೆ. ಅವಳ ಸ್ತನಗಳಿಂದ ಹಾಲು ಹಾಗೂ ಅವಳ ಕಣ್ಣುಗಳಿಂದ ಕಂಬನಿಯು ಜಿನುಗಲಾರಂಭವಾಯಿತು.

ಕರ್ಣನು ಅವಳನ್ನು ಕೇಳುತ್ತಾನೆ. "ಶ್ರೇಷ್ಠ ಮಹಿಳೆ! ಧೀರಧರ್ಮನ ತಾಯಿ! ನಿನ್ನನ್ನು ಇಲ್ಲಿಗೆ ಕರೆತಂದುದಾದರೂ ಯಾವುದು, ನಾನು ನಿನಗೇನು ಸೇವೆಮಾಡಲಿ?" ಎಂದಾಗ ಮಾಯವಾನ್ (ಶ್ರೀಕೃಷ್ಣ)ನನ್ನನ್ನು ನಿನ್ನಲ್ಲಿಗೆ ಕಳುಹಿಸಿದನು ಎಂದು ಹೇಳಿ ವಿಶ್ವಕ್ಕೇ ಅರಿಯದ ತನ್ನ ಹಾಗೂ ಅವನ ನಡುವಿನ ಸಂಬಂಧವನ್ನು ನಿರೂಪಿಸುವಳು. ಆಶ್ಚರ್ಯದಿಂದ ಕರ್ಣನು "ನಾನು ನಿನ್ನ ಮಗ ಹಾಗೂ ಪಾಂಡವರ ಹಿರಿಯಣ್ಣನೆಂದು ನೀನು ಹೇಳಿದರೆ ನಂಬಬಹುದೆ?" ಎನ್ನಲು ಕುಂತಿಯು ದೃಢಪಡಿಸುವಳು "ನಾನು ನಿನ್ನ ತಾಯಿ ಹಾಗೂ ನೀನು ನನ್ನ ಮಗ, ನನ್ನನ್ನು ನಂಬು ಅದು ಸತ್ಯ" ಎನ್ನುವಳು.

ಕರ್ಣನು ಆಗ ಕುಂತಿಗೆ ವಸ್ತ್ರವೊಂದನ್ನು ತೋರಿಸಿ ಹೇಳುವನು "ಅನೇಕ ಸ್ತ್ರೀಯರು ನನ್ನಲ್ಲಿಗೆ ಬಂದು ಅವರು ನನ್ನ ತಾಯಂದಿರೆಂದರು. ಆದರೆ ನಾನು ಈ ವಸ್ತ್ರವನ್ನು ನೀಡಿ ಅವರನ್ನು ಉಡಲು ಹೇಳಿದಾಗ, ಅವರು ಉಟ್ಟು ಸುಟ್ಟು ಬೂದಿಯಾದರು. ಇದು ಆ ಸ್ತ್ರೀಯರ ಮೂಳೆಗಳ ರಾಶಿ. ಈಗ ನೀನು ಈ ವಸ್ತ್ರವನ್ನುಟ್ಟು ಬದುಕಿದರೆ ನೀನು ನನ್ನ ತಾಯಿ. ಏನೇ ಆದರೂ ಈ ಸ್ತ್ರೀಯರಂತೆ ನಿನ್ನನ್ನು ಕೊಂದುಕೊಳ್ಳಬೇಡ. ನಿನಗೇನು ಬೇಕೋ ಅದನ್ನು ತೆಗೆದುಕೊಂಡು ಮನೆಗೆ ಹೋಗು" ಎನ್ನುತ್ತಾನೆ.

ಆಗ ಕುಂತಿಯು ವಸ್ತ್ರವನ್ನು ತೆಗೆದುಕೊಂಡು ಉಡುತ್ತಾ "ಕರ್ಣನಿಗೆ ಜನ್ಮ ನೀಡಿದ ದೇಹವು ಇದಾಗಿಲ್ಲದಿದ್ದಲ್ಲಿ ಅದು ಸುಟ್ಟು ಹೋಗಲಿ" ಎಂದು ಹೇಳುವಳು. ಅವಳು ಮೂರು ನಾಲ್ಕು ಬಾರಿ ಉಡುತ್ತಾಳೆ ಹಾಗೂ ನಾಲ್ಕನೆಯ ಬಾರಿಯಲ್ಲಿ ವಸ್ತ್ರವನ್ನು ವಿಸರ್ಜಿಸುತ್ತಾಳೆ. ಅವಳೀಗ ಹತ್ತುಪಟ್ಟು ಪ್ರಕಾಶಮಾನವಾಗಿ ಸೂರ್ಯರಶ್ಮಿಯಂತೆ ಹೊಳೆಯುವಳು ಹಾಗೂ ಕರಗಿಸಿದ ಚಿನ್ನದ ಪುತ್ಥಳಿಯಂತಿದ್ದಳು. ಕರ್ಣನು ಹಾಗೆ ಹೊಳೆಯುತ್ತಿರುವ ಕುಂತಿಯನ್ನು ಕಂಡು ಅವಳ ಪಾದಗಳಿಗೆ ಎರಗುವನು. ಕುಂತಿಯು ಅವನನ್ನು ತನ್ನ ಉಡಿಯಲ್ಲಿ ತೆಗೆದುಕೊಳ್ಳುವಳು.

ಅನಂತರ ಕುಂತಿಯು ಸಂಬಂಧವನ್ನು ಸ್ಥಾಪಿಸುವಳು. ಅತ್ಯಂತ ಪ್ರೀತಿಯಿಂದ ಅವನ ಸಹೋದರರಾದ ಪಾಂಡವರಲ್ಲಿಗೆ ಬರುವಂತೆ ಹೇಳುವಳು ಹಾಗೂ ಅವನನ್ನು ರಾಜನನ್ನಾಗಿ ಮಾಡಲಾಗುವುದೆಂದು ಹೇಳುವಳು.

ಕುಂತಿಯು ವಾಸ್ತವವನ್ನು ವಿಳಂಬವಾಗಿ ಬಹಿರಂಗ ಪಡಿಸಿದುದಕ್ಕೆ ಕರ್ಣನು ವಿಷಾದಿಸುವನು. ಅವನ ಜೀವನದಲ್ಲಿ ಅತ್ಯಂತ ವಿಳಂಬವಾಗಿ ತನ್ನ ಜನ್ಮ ರಹಸ್ಯವು ತಿಳಿದುದು ಬಹುಶಃ ಅದು ಅವನ ಪಾಪ, ಅವನ ವಿಧಿಯೆಂಬುದನ್ನು ತಿಳಿಯಬೇಕು.

ಭಾರತ ಕೃತಿಗಳ ಯಾವುದೇ ಆವೃತ್ತಿಯಲ್ಲಿಯೂ 'ಪರೀಕ್ಷಾವಸ್ತ್ರ'ದ ಉಪಾಖ್ಯಾನವು ಕಂಡು ಬರುವುದಿಲ್ಲ. ಆದರೆ ಕನ್ನಡ ಸಾಹಿತ್ಯದಲ್ಲಿ ಕ್ರಿ.ಶ. ೧೧೫೦ರಲ್ಲಿದ್ದ ಕರ್ಣಪಾರ್ಯನ "ನೇಮಿನಾಥ ಪುರಾಣ" ಕೃತಿಯಲ್ಲಿ ಈ ಕಥೆಯ ವಿವರವಾದ ಸಮರ್ಥನೆಯನ್ನು ಕಾಣುತ್ತೇವೆ. ಇಲ್ಲಿ ಕರ್ಣನು ಜ್ವಾಲಾಮಾಲಿನಿಯಿಂದ 'ಪರೀಕ್ಷಾವಸ್ತ್ರ'ವನ್ನು ಪಡೆಯುತ್ತಾನೆ. ಅವಳು ಚಂದ್ರಪ್ರಭಾ ತೀರ್ಥಂಕರನ ಸೇವಕಿ. ಅನೇಕ ಮಹತ್ವಾಕಾಂಕ್ಷಿಯ ಸ್ತ್ರೀಯರು ರಾಜಮಾತೆಯ ಸ್ಥಾನಮಾನಗಳನ್ನು ಅನುಭವಿಸಲು ಆಶಿಸಿ, ಅವನ ಮಾತೃತ್ವದ ಹಕ್ಕನ್ನು ಸಾಧಿಸಿ ಕರ್ಣನಲ್ಲಿಗೆ ಬರುತ್ತಿದ್ದರು. ಆಗ ಕರ್ಣನು ಜ್ವಾಲಾಮಾಲಿನಿಯನ್ನು ಪ್ರಾರ್ಥಿಸಿ ತಪಸ್ಸನ್ನಾಚರಿಸುವನು. ಕರ್ಣನ ತಪಸ್ಸಿನಿಂದ ಸಂತೋಷಗೊಂಡ ಜ್ವಾಲಾಮಾಲಿನಿಯು ಪ್ರತ್ಯಕ್ಷಳಾಗಿ ಪರೀಕ್ಷಾವಸ್ತ್ರವನ್ನು ನೀಡುವಳು.

ಜೈನರ ಇಪ್ಪತ್ನಾಲ್ಕು ತೀರ್ಥಂಕರರ ಸೇವಕಿಯರನ್ನು ಯಕ್ಷಿಗಳೆಂದು ಕರೆಯಲಾಗುತ್ತದೆ. ಜೈನ ಧಾರ್ಮಿಕ ಚರಿತ್ರೆಯಲ್ಲಿ ಈ ಯಕ್ಷಿಯರು ನಿರ್ದಿಷ್ಟಹಂತದಲ್ಲಿ

ಅತ್ಯಂತ ಪ್ರಾಮುಖ್ಯತೆಯನ್ನು ಪಡೆದರು. ಯಕ್ಷಿ ಆರಾಧನೆಯ ಮೂಲವನ್ನು 'ಶಿಲಪ್ಪದಿಗಾರಂ'ನಲ್ಲಿ ಕ್ರಿ.ಶ. ೨ನೆಯ ಶತಮಾನದ ಪೂರ್ವದ್ದೆಂದು ಪ್ರಸ್ತಾಪಿಸಲಾಗಿದೆ. ('ಶಿಲಪ್ಪದಿಗಾರಂ' ಕಾವ್ಯ ಕ್ರಿ.ಶ.೧೦ನೆಯ ಶತಮಾನದ್ದೆಂದು ಸಂಶೋಧಕರು ತಿಳಿಸುತ್ತಾರೆ.) ಶಿಲಾಶಾಸನಾಧಾರಗಳಿಂದ ಈ ಆರಾಧನೆಯು ಕ್ರಿ.ಶ. ೮ನೆಯ ಶತಮಾನದ್ದಾಗಿದೆ. ಈ ಯಕ್ಷಿಣಿಯರು ಅವರ ಅತೀಂದ್ರಿಯ ಶಕ್ತಿಗಳಿಗೆ ಪ್ರಸಿದ್ಧರಾಗಿದ್ದಾರೆ. ಅನೇಕ ಜೈನ ಪ್ರಚಾರಕರು ಈ ಸೇವಾ ಪಂಥದ ಯಕ್ಷಿಣಿಯರನ್ನು ಅತೀಂದ್ರಿಯ ಶಕ್ತಿಗಳನ್ನು ಸಾಧಿಸಲು ಸ್ವೀಕರಿಸಿದರು. ಹಿಲಾಚಾರ್ಯನೆಂಬ ಉತ್ತರ ಆರ್ಕಾಟಿನಲ್ಲಿನ ಪೊನ್ನೂರಿನ ಜೈನನು ಜ್ವಾಲಾಮಾಲಿನಿ ಆರಾಧನೆಯ ಪ್ರಚಾರಕನು. ಅಂದಿನ ಕಾಲದಲ್ಲಿ ಅದು "ತಾಂತ್ರಿಕ ವಿದ್ಯೆ"ಯಾಗಿ ಅತ್ಯಂತ ಗೌರವಿಸಲ್ಪಟ್ಟಿತ್ತು. ಜ್ವಾಲಾಮಾಲಿನಿಯ ಅತೀಂದ್ರಿಯ ಶಕ್ತಿಗೆ ಸಂಬಂಧಿಸಿದ ಅನೇಕ ಕಥೆಗಳಲ್ಲಿ 'ಪರೀಕ್ಷಾವಸ್ತ್ರ'ದ ಕಥೆಯೂ ಒಂದಾಗಿರಬೇಕು. ಪೆರುಂದೇವನಾರ್ ತನ್ನ ಮಹಾಕಾವ್ಯದ ಚೌಕಟ್ಟಿನಲ್ಲಿ ಅಂತಹ ಅನೇಕ ಪ್ರಸಿದ್ಧ ದಂತಕಥೆಗಳನ್ನು ವಿವಿಧ ಮೂಲಗಳಿಂದ ಪರಿಚಯಿಸಿರುವಂತೆ ಕಾಣುತ್ತದೆ. ಕನ್ನಡ ಸಾಹಿತ್ಯದ ಕವಿ ಕರ್ಣಪಾರ್ಯನಿಗೆ ದೊರೆತಿರುವ 'ಪರೀಕ್ಷಾವಸ್ತ್ರ'ದ ಮೂಲದ ಸಂಶೋಧನೆಯಾಗಬೇಕಾಗಿದೆ.

ಗ್ರಂಥ ಋಣ :

1. Mahabharatha and Variations Peremdevanar and Pampa (A Comparative study) Purana Bhaskara Dr. Kambalur Venkateshacharya (Now Sri Vidyasagara Madhva Theertharu Sri Madhava Theertha Srimatha)
೨. ಮಹಾಭಾರತ ಹಾಗೂ ಪರಿವರ್ತನೆಗಳು ಪೆರುಂದೇವನಾರ್ ಮತ್ತು ಪಂಪ– ಮೂಲ ಪುರಾಣ ಭಾಸ್ಕರ ಕಂಬಾಲೂರು ವೆಂಕಟೇಶ ಆಚಾರ್ಯ (ಪ್ರಸ್ತುತ ಮಠಾಧೀಶರು ಶ್ರೀ ವಿದ್ಯಾಸಾಗರ ಮಾಧವ ತೀರ್ಥರು. ಶ್ರೀಮಾಧವ ತೀರ್ಥ ಶ್ರೀಮಠ)
   ಅನುವಾದಕರು : ಪ್ರೊ. ಎಸ್. ಬಿಳಿಗಿರಿವಾಸನ್
3. Jainism in South India and some Jain and epigraphs - P.B, Desai
೪. ಕನ್ನಡ ಸಾಹಿತ್ಯ ಚರಿತ್ರೆ–ಡಾ. ರಂ.ಶ್ರೀ. ಮುಗಳಿ
೫. ತಮಿಳು ತಲೆಗಳ ನಡುವೆ–ಪ್ರೊ. ಬಿ.ಜಿ.ಎಲ್. ಸ್ವಾಮಿ

□□

ಕರ್ಕಿ ಸಂಪಾದಿತ 'ತುರಂಗ ಭಾರತ' : ಒಂದು ಟಿಪ್ಪಣಿ

ಡಾ. ಜಿ.ಎನ್. ಉಪಾಧ್ಯ

❖

ಭಾರತೀಯ ಭಾಷೆಗಳಲ್ಲಿ ಸಂಸ್ಕೃತ ಮತ್ತು ತಮಿಳನ್ನು ಬಿಟ್ಟರೆ ಕನ್ನಡವೇ ಅತ್ಯಂತ ಪ್ರಾಚೀನ ಭಾಷೆ ಎಂಬುದು ಗಮನೀಯ ಅಂಶ. ಕನ್ನಡ ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘವಾದ ಇತಿಹಾಸವಿದ್ದರೆ; ಕನ್ನಡ ಸಾಹಿತ್ಯಕ್ಕೆ ಹತ್ತಿರ ಹತ್ತಿರ ಒಂದೂವರೆ ಸಾವಿರ ವರ್ಷಗಳ ಹಿನ್ನೆಲೆಯಿದೆ. ಹತ್ತನೆಯ ಶತಮಾನ ಕನ್ನಡ ಸಾಹಿತ್ಯದ ಸುವರ್ಣಯುಗ ಎಂಬ ಮಾತು ಜನಜನಿತವಾಗಿದೆ. ಪಂಪ, ಪೊನ್ನ, ರನ್ನ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ ಹೀಗೆ ನೂರಾರು ಮಂದಿ ಕವಿಗಳು ಮಹಾಕಾವ್ಯಗಳನ್ನು ರಚಿಸಿ ಕನ್ನಡ ಸಾಹಿತ್ಯವಾಹಿನಿ ತುಂಬಿ ಬರುವಂತೆ ಮಾಡಿದ್ದು ಈಗ ಇತಿಹಾಸ. ಹೀಗಾಗಿ ಮಹಾಕಾವ್ಯ ಪರಂಪರೆ ಆಧುನಿಕ ಕಾಲಘಟ್ಟದಲ್ಲೂ ರಚನೆಯಾಗಿ ಜನಪ್ರಿಯವಾಗಲು ಈ ಅಂಶ ಪ್ರೇರಣೆ ನೀಡಿತು. ಇತರ ಭಾರತೀಯ ಭಾಷೆಗಳಲ್ಲಿ ಕನ್ನಡದಂತೆ ಮಹಾಕಾವ್ಯ ಪರಂಪರೆ ಇತ್ತೀಚಿನ ದಿನಗಳಲ್ಲಿ ಬೆಳೆದು ಬಂದುದು ಬಹಳ ಕಡಿಮೆ ಎಂದೇ ಹೇಳಬಹುದು.

ಮಹಾಭಾರತ ಜಗತ್ತಿನ ವಿಶಿಷ್ಟ ಮಹಾಕಾವ್ಯಗಳಲ್ಲಿ ಒಂದೆಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ವ್ಯಾಸ ವಿರಚಿತ ಮಹಾಭಾರತ ಭಾರತೀಯ ಭಾಷೆಗಳ ಸಾಹಿತ್ಯ ನಿರ್ಮಾಣದಲ್ಲಿ ನೀಡಿದ ಪ್ರೇರಣೆ, ಪ್ರಭಾವ ಅಪಾರ. ಕನ್ನಡದ ಆದಿಕವಿ, ಅಗ್ರಕವಿ ಖ್ಯಾತಿಯ ಪಂಪ 'ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆನ್ ಕವಿವ್ಯಾಸನೆಂಬ ಗರ್ವಮೆನಗಿಲ್ಲ' ಎಂದಿದ್ದಾನೆ. ಕುಮಾರವ್ಯಾಸ ವಿರಚಿತ 'ಕರ್ಣಾಟ ಭಾರತ ಕಥಾಮಂಜರಿ'ಯನ್ನು 'ಗದುಗಿನ ಭಾರತ' ಎಂದು ಕರೆಯುವುದೇ ಹೆಚ್ಚು ರೂಢಿಯಲ್ಲಿದೆ. ಕನ್ನಡದ ಇನ್ನೊಬ್ಬ ಪ್ರತಿಭಾಶಾಲಿ ಕವಿ ಲಕ್ಷ್ಮೀಶನ ಮಹಾಕಾವ್ಯ 'ಜೈಮಿನಿ ಭಾರತ' ಇಂದಿಗೂ ಜನಸಾಮಾನ್ಯರ ನಾಲಿಗೆಯ ಮೇಲಿದೆ. ಈ ಸಾಲಿಗೆ ಸೇರಿಸಬೇಕಾದ ಇನ್ನೊಂದು ಮಹತ್ವದ ಮಹಾಕಾವ್ಯ 'ತುರಂಗ ಭಾರತ'. ಇದನ್ನು ರಚಿಸಿದವನು ಪರಮದೇವ ಕವಿ. ಪರಮದೇವ ವಿರಚಿತ 'ತುರಂಗ ಭಾರತ' ಮಹಾಕಾವ್ಯವನ್ನು

ಮೊತ್ತಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಮುಂಬೈ ಕನ್ನಡಿಗ, ಧೀರ ಪತ್ರಿಕೋದ್ಯಮಿ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರಿಗೆ ಸಲ್ಲುತ್ತದೆ. ಈ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ೧೯೮೬ರಲ್ಲಿ ಮರು ಮುದ್ರಿಸಿದ್ದು ಇದನ್ನು ಕೆ. ಜಗನ್ನಾಥ ಶಾಸ್ತ್ರಿ ಅವರು ಸಂಪಾದಿಸಿ ವಿಸ್ತಾರವಾದ ಮುನ್ನುಡಿಯನ್ನು ಬರೆದಿರುವುದು ಉಲ್ಲೇಖನೀಯ ಅಂಶ.

ಕರ್ಕಿ ವೆಂಕಟರಮಣ ಶಾಸ್ತ್ರಿ ಸಂಪಾದಿತ 'ತುರಂಗ ಭಾರತ' :

ಕನ್ನಡದ ಮೊದಲ ಸಾಮಾಜಿಕ ನಾಟಕವನ್ನು ಬರೆದು ಪ್ರಕಟಿಸಿದ ಹಿರಿಮೆ ಮುಂಬೈ ಕನ್ನಡಿಗ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರಿಗೆ ಸಲ್ಲುತ್ತದೆ. ಕರ್ಕಿ ವಿರಚಿತ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಅಥವಾ 'ಕನ್ಯಾ ವಿಕ್ರಯ'ದ ಪರಿಣಾಮವು (೧೮೮೭) ಒಂದು ಐತಿಹಾಸಿಕ ಮಹತ್ವದ ಕೃತಿ. ಕರ್ಕಿ ಅವರು ಪತ್ರಿಕೋದ್ಯಮಿ, ನಾಟಕಕಾರ, ಲೇಖಕ ಅಷ್ಟೇ ಅಲ್ಲ ಅವರೊಬ್ಬ ಗಣ್ಯ ಗ್ರಂಥಸಂಪಾದಕರೂ ಹೌದು ಎಂಬುದು ಉಲ್ಲೇಖನೀಯ ಅಂಶ. ಕನ್ನಡದಲ್ಲಿ ಗ್ರಂಥ ರಚನೆ, ಕೃತಿ ಸಂಪಾದನೆ, ಪ್ರಕಟಣೆ, ಪ್ರಕಾಶನ ಕಾರ್ಯ ಶಾಸ್ತ್ರಿಗಳ ಮುಖ್ಯ ಧ್ಯೇಯವಾಗಿತ್ತು. ಮುಂಬೈಯಲ್ಲಿ ತಮ್ಮದೇ ಆದ ಮುದ್ರಣಾಲಯವನ್ನು ಸ್ಥಾಪಿಸಿ ಮೂವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಸಂಪಾದಿಸಿಕೊಟ್ಟ ಹಿರಿಮೆಗೆ ಅವರು ಪಾತ್ರರಾಗಿದ್ದಾರೆ. 'ರತಿ ಕಲ್ಯಾಣ', 'ಕೌಂಡಲನ ವಧೆ', 'ಪ್ರಾಚೀನ ನಾಟ್ಯ ಕಥಾರ್ಣವ', 'ತುರಂಗ ಭಾರತ', 'ಕನ್ನಡ ಸ್ತೋತ್ರ ರತ್ನಾಕರ', 'ದುರ್ಗಾ ಸಪ್ತಶತಿ', 'ಕಾರ್ತವೀರ್ಯಾರ್ಜುನ', 'ವೆಂಕಟೇಶಿಯ ಪ್ರಯೋಗ', 'ಶಂಕರ ಸಂಹಿತ', 'ಅಮರಕೋಶ', 'ಯೋಗ ವಾಸಿಷ್ಠ', 'ದೇವಿ ಭಾಗವತ', 'ಭಾಮಿನಿ ವಿಲಾಸ' ಹೀಗೆ ಅನೇಕ ಅಲಕ್ಷಿತ ಕೃತಿಗಳನ್ನು ಬಹು ಶ್ರಮ ವಹಿಸಿ ಸಂಪಾದಿಸಿ ಪ್ರಕಟಿಸಿದ್ದು ಶಾಸ್ತ್ರಿ ಅವರ ವಿದ್ವತ್ತಿಗೆ, ಪಾಂಡಿತ್ಯಕ್ಕೆ ಸಾಕ್ಷಿ. ಕರ್ಕಿ ಅವರು ದೂರದ ಮುಂಬೈಯಲ್ಲಿ ೧೮೯೦ರಲ್ಲಿ ಸಂಪಾದಿಸಿ ಪ್ರಕಟಿಸಿದ 'ತುರಂಗ ಭಾರತ' ಅನೇಕ ದೃಷ್ಟಿಯಿಂದ ಮಹತ್ವದ್ದಾಗಿದೆ. (ಡಾ. ಕಮಲಾ ಹಂಪನಾ ಅವರು ಈ ಕೃತಿಯ ಕುರಿತು ಪಿಎಚ್.ಡಿ ಅಧ್ಯಯನ ನಡೆಸಿ ಕೃತಿಯೊಂದನ್ನು ಪ್ರಕಟಿಸಿರುವುದನ್ನು ಇಲ್ಲಿ ನೆನೆಯಬಹುದು).

ಉಪೇಕ್ಷಿತ ಕವಿ ಪರಮದೇವ : 'ತುರಂಗ ಭಾರತ'ದ ಕರ್ತೃ ಪರಮದೇವ ಕವಿ. ಅವನ ಕಾಲ ಕ್ರಿ.ಶ. ೧೭೨೧–೧೮೦೫ ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಕೃತಿಯ ಆರಂಭದ ಪದ್ಯಗಳಲ್ಲಿ ಕವಿ ತನ್ನ ಮೂಲಚೂಲಗಳನ್ನು ಸವಿಸ್ತಾರವಾಗಿ ಹೇಳಿಕೊಂಡಿದ್ದಾನೆ. ಪರಮದೇವ ಕವಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಕೊಡಚಾದ್ರಿ ತಪ್ಪಲಿನ ಸುಳಿಗೋಡಿನವನು. ಇವನು ಹವ್ಯಕ ಬ್ರಾಹ್ಮಣ ಸಮಾಜಕ್ಕೆ ಸೇರಿದವನು. ತಂದೆ ಶಂಕರನಾರಾಯಣಯ್ಯ, ತಾಯಿ ಮಹಾಲಕ್ಷ್ಮಮ್ಮ. ಪರಮದೇವನ

ತಂದೆ ತಾಳಮದ್ದಲೆಯ ಶ್ರೇಷ್ಠ ಅರ್ಥಧಾರಿಯೂ ಪಂಡಿತರೂ ಕೃಷಿಕರೂ ಆಗಿದ್ದರು. ಅವರು ಕೊಲ್ಲೂರು ಮೂಕಾಂಬಿಕೆಯ ಭಕ್ತರಾಗಿದ್ದರು. ಸುಸಂಸ್ಕೃತ ಮನೆತನದಲ್ಲಿ ಹುಟ್ಟಿ ಬಂದ ಪರಮದೇವನ ಮೂಲ ಹೆಸರು ಪರಮೇಶ್ವರ. ಬಾಲ್ಯದಲ್ಲೇ ಸಂಸ್ಕೃತ ವಿದ್ಯಾಭ್ಯಾಸ ಪೂರೈಸಿದ ಪರಮದೇವ ತಂದೆಯಂತೆ ಯಕ್ಷಗಾನ, ತಾಳಮದ್ದಲೆ ಪ್ರಸಂಗಗಳಲ್ಲಿ ಭಾಗವಹಿಸಿ ಸೈ ಎನಿಸಿಕೊಂಡ. ಭಾಗೀರಥಿಯನ್ನು ಮದುವೆಯಾಗಿ ಪರಮದೇವ ಎರಡು ಮಕ್ಕಳ ತಂದೆಯೂ ಆದ. ಆದರೆ ಕೃಷಿಯನ್ನು ನಂಬಿಕೊಂಡಿದ್ದ ಸಂಸಾರ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ಊರು ಬಿಟ್ಟು ಇಕ್ಕೇರಿಗೆ ಬಂದು ಅಘೋರೇಶ್ವರ ಹಾಗೂ ಗಣಪತಿ ದೇವಾಲಯಗಳ ಪರಿಚಾರಕನಾಗಿ ಕೆಲಸ ಮಾಡಬೇಕಾಯಿತು. ಇಕ್ಕೇರಿ ಸಮೀಪದ ಚಿಪ್ಪಳ್ಳಿಯಲ್ಲಿ ಗೋಪಾಲಯ್ಯ ಮತ್ತು ಲಕ್ಷ್ಮೀನಾರಾಯಣ ಎಂಬ ಶ್ರೀಮಂತ ಮನೆತನದ ಗೃಹಸ್ಥನು ಈ ಕುಟುಂಬಕ್ಕೆ ಆಶ್ರಯ ನೀಡಿದರು. ಪರಮದೇವನಿಗೆ ಆ ಊರಲ್ಲಿ ಪೂಜಾಕಾರ್ಯದ ಜತೆಗೆ ಪಾಠ ಹೇಳುವ ಐಗಳ ವೃತ್ತಿಯೂ ಸಿಕ್ಕಿತು. ಪರಮದೇವ ಅನೇಕ ಧಾರ್ಮಿಕ ಕೃತಿಗಳ ಪ್ರತಿ ಮಾಡುವ ಕೆಲಸವನ್ನು ಒಂದಷ್ಟು ದಿನ ಮಾಡಿದ್ದು ತಿಳಿದುಬರುತ್ತದೆ. ಸ್ವತಃ ಒಳ್ಳೆಯ ವಿದ್ವಾಂಸನೂ ಲೇಖಕನೂ ಆಗಿದ್ದ ಪರಮದೇವ ಆ ಸಂದರ್ಭದಲ್ಲಿ ಜನಪ್ರಿಯವಾಗಿದ್ದ ತುರಂಗ ಲಯದ ಗಮಕ ವಾಚನದಲ್ಲೂ ಸೈ ಎನಿಸಿಕೊಂಡಿದ್ದ. ಕಾವ್ಯ ವಾಚನ, ತಾಳಮದ್ದಲೆಯ ಮಾತುಗಾರಿಕೆಯ ಮೂಲಕ ಊರ ಪರವೂರ ಜನರ ಪ್ರೀತ್ಯಾದರಗಳಿಗೆ ಪಾತ್ರನಾದ ಪರಮದೇವ ಉತ್ತಮ ಗಮಕಿಯಾಗಿ, ಖ್ಯಾತ ವ್ಯಾಖ್ಯಾನಕಾರನಾಗಿ, ಪ್ರಸಿದ್ಧ ಪುರಾಣಿಕನಾಗಿ ಮನೆಮಾತಾದ. ಇದೇ ಹೊತ್ತಿಗೆ ಚಿಪ್ಪಳಿಗೆ ಪಕ್ಕದ ಮಹಾಗಣಪತಿ ದೇವಾಲಯದ ಅರ್ಚಕರಾಗಿ ನಿಯುಕ್ತಿಯಾಯಿತು. ಕನ್ನಡದಲ್ಲಿ ಸಮಗ್ರವಾದ ಭಾರತದ ಕೃತಿ ಇಲ್ಲ ಎಂಬುದನ್ನು ಮನಗಂಡ ಪರಮದೇವ ಆ ಕೃತಿ ರಚನೆಯಲ್ಲಿ ತೊಡಗಿ ಯಶಸ್ವಿಯಾಗುತ್ತಾನೆ. ಈ ಸಂಕ್ಷಿಪ್ತ ಭಾರತ ಬಹುಬೇಗನೆ 'ತುರಂಗ ಭಾರತ' ಎಂದೇ ಬಹುಪ್ರಸಿದ್ಧಿಯನ್ನು ಪಡೆಯಿತು.

'ವ್ಯಾಸರ ತರುವಾಯ ಒಂದನೆಯ ಗುಣವರ್ಮ (ಕಾವ್ಯ ಅನುಪಲಬ್ಧ), ಪಂಪ, ರನ್ನ, ಕುಮಾರವ್ಯಾಸರ ಮೂಲಕ ಕನ್ನಡದಲ್ಲಿ ಮಹಾಭಾರತದ ಕಥೆ ಬೆಳೆದುಬಂದಿದೆ. ಇವರ ಸಾಲಿಗೆ ಸೇರಬೇಕಾದ ಇನ್ನೊಂದು ಪ್ರಮುಖ ಹೆಸರು ಕವಿ ಪರಮದೇವನದು. ಇದುವರೆಗೆ ಅಚ್ಚಾಗಿ ಬಂದಿರುವ ಸಾಹಿತ್ಯ ಚರಿತ್ರೆಗಳಲ್ಲಿ ಕೆಲವು ಲೇಖಕರಿಗೆ ನ್ಯಾಯವಾಗಿ ಸಲ್ಲಬೇಕಾದ ಮರ್ಯಾದೆ ಸಂದಿಲ್ಲ. ಸಾಹಿತ್ಯ ಚರಿತ್ರೆಕಾರನ ಅನಾದರಕ್ಕೆ ಗುರಿಯಾಗಿರುವ ಕವಿಗಳಲ್ಲಿ ಪರಮದೇವ ಕವಿಯೂ ಒಬ್ಬ. ಕನ್ನಡದಲ್ಲಿ ಪಂಪ, ರನ್ನ, ಕುಮಾರವ್ಯಾಸ, ತಿಮ್ಮಣ್ಣ ಕವಿಗಳ ಮಹಾಭಾರತ ಹದಿನೆಂಟು ಪರ್ವಗಳನ್ನು ಪೂರ್ತಿಯಾಗಿ ಒಳಗೊಂಡಿಲ್ಲ. ಸಮಗ್ರ ಮಹಾಭಾರತದ ಕಥೆಯನ್ನು ಕನ್ನಡ ಕಾವ್ಯದಲ್ಲಿ ಹೇಳಿದ ಏಕಮೇವಾದ್ವಿತೀಯ

ಕವಿ ಪರಮದೇವ' ಎಂಬುದಾಗಿ ಖ್ಯಾತ ಸಂಶೋಧಕ ಡಾ. ಹಂಪನಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಜಗತ್ತಿನ ಅತಿದೊಡ್ಡ ಮಹಾಕಾವ್ಯ ಎಂಬ ಹಿರಿಮೆಗೆ ಮಹಾಭಾರತ ಪಾತ್ರವಾಗಿದೆ. ಇದರಲ್ಲಿ ಸುಮಾರು ಒಂದು ಲಕ್ಷ ಶ್ಲೋಕಗಳಿವೆ. ವ್ಯಾಸ ವಿರಚಿತ ಮಹಾಭಾರತದಲ್ಲಿ ಹದಿನೆಂಟು ಪರ್ವಗಳಿದ್ದು ಭಗವದ್ಗೀತೆಯೂ ಅದರಲ್ಲಿ ಅಡಕಗೊಂಡಿರುವುದು ವಿಶೇಷ. ವ್ಯಾಸರು ಈ ಮಹಾಕಾವ್ಯದ ಮೂಲಕ ಧರ್ಮಕ್ಕೆ ಸಮ್ಮತವಾದ ಅರ್ಥ ಕಾಮಗಳ ಮೂಲಕವೇ ಮಾನವನು ಮೋಕ್ಷವನ್ನು ಸಾಧಿಸಬೇಕೆಂಬ ಆಶಯ ವ್ಯಕ್ತಪಡಿಸಿದ್ದಾರೆ. ಧರ್ಮದಿಂದ ಜಯ ಮತ್ತು ಶಾಂತಿ ಎನ್ನುವ ಈ ಮಹಾಕಾವ್ಯ ಭಾರತೀಯರ ಧಾರ್ಮಿಕ, ನೈತಿಕ ಜೀವನಕ್ಕೆ ದಾರಿದೀಪವಾಗಿದೆ. ಮಹಾಭಾರತದ ಕಥೆ ಮತ್ತು ಪ್ರಭಾವ ಒಟ್ಟು ಭಾರತದ ಸಾಂಸ್ಕೃತಿಕ ಜೀವನದಲ್ಲಿ ಹಾಸುಹೊಕ್ಕಾಗಿರುವುದು ಉಲ್ಲೇಖನೀಯ ಅಂಶ. ಮಹಾಭಾರತ ವ್ಯಾಸರ ತರುವಾಯ ಕಾಲಕಾಲಕ್ಕೆ ಭಾರತೀಯ ಭಾಷೆಗಳಲ್ಲಿ ಮರುಹುಟ್ಟು ಪಡೆದು ಜೀವಂತವಾಗಿ ಉಳಿದುಬಂದಿದೆ.

ತುರಂಗ ಭಾರತದ ಆಯಾಮ ಹಾಗೂ ಅನನ್ಯತೆ : ಪರಮದೇವ ಕವಿ ವಿರಚಿತ ತುರಂಗ ಭಾರತ ಒಂದು ಮೇರುಕೃತಿ. ಇದರಲ್ಲಿ ಪೀಠಿಕೆ ಅಥವಾ ನಾಂದಿ ಭಾಗವೂ ಸೇರಿ ಒಟ್ಟು ಹದಿನೆಂಟು ಪರ್ವಗಳಿವೆ. ತನ್ನ ಕಾವ್ಯವನ್ನು ಆತ ಸಂಕ್ಷೇಪ ಭಾರತ ಎಂದೇ ಕರೆದಿದ್ದು ಕ್ರಮೇಣ ಈ ಕೃತಿ ತನ್ನ ತುರಂಗ ಲಯದ ಕಾರಣದಿಂದ 'ತುರಂಗ ಭಾರತ' ಎಂದೇ ಖ್ಯಾತಿಯನ್ನು ಪಡೆಯಿತು. 'ಅಷ್ಟಾದಶ ಪರ್ವದೊಳಗಣ ಸಾರಗಳನು ವೈಶಿಷ್ಟ ಪರಮಣ್ಣ ಕವಿಯಂಬವಂ ಬರೆವ ಕಿವಿಗೊಟ್ಟು ಕೇಳ್ವರ ಹೇಳ್ವರ ರಘಗಳಂ ಪರಿಹರಿಪುದೀ ಪುಣ್ಯಚಾರಿತ್ರ್ಯವು ಕೃಷ್ಣದೇವರು ಹೃದಯವಂ ಪೊಕ್ಕು ನುಡಿಸಿದಂ ತಪ್ಪನಾಡಿದೆನಿದನು ಸಂಕ್ಷೇಪದಿಂದ ತಿಳಿದಷ್ಟನಾ ಮರುತಸುತ ಕೋಣೆ ಲಕ್ಷ್ಮೀಪತಿಯ ಕರುಣದಿಂ ವರ್ಣಿಸಿದೆನು' (೧೮-೫೬).

ಪರಮದೇವ ಕವಿಯ 'ತುರಂಗ ಭಾರತ' ಸಮಗ್ರವಾಗಿ ಸಂಕ್ಷಿಪ್ತವಾಗಿ ಮಹಾಭಾರತವನ್ನು ತಿಳಿಗನ್ನಡದಲ್ಲಿ ಸೆರೆಹಿಡಿದಿದೆ. ಮಹಾಭಾರತದ ಕಥೆಯನ್ನು ಪಂಪ ವಸ್ತುಕದ ರೀತಿಯಲ್ಲಿ ಕುಮಾರವ್ಯಾಸ ವರ್ಣಕದ ರೀತಿಯಲ್ಲಿ ಎರಕ ಹೊಯ್ದರೆ ಪರಮದೇವ ಕವಿ ತುರಂಗ ಲಯದಲ್ಲಿ ಸಾದರಪಡಿಸಿದ್ದಾನೆ. ಈತ ಭಕ್ತ ಕವಿ. ಸಾಕಷ್ಟು ತತ್ವ ಪದಗಳನ್ನು ಕೀರ್ತನಗಳನ್ನು ಚಾರಿತ್ರಿಕ ಮಹತ್ವದ ಪದಗಳನ್ನು ಕಟ್ಟಿ ಹಾಡಿದ್ದಾನೆ. ದಂಡಕ ಶೈಲಿಯಲ್ಲಿ ಕಾವ್ಯ ರಚನೆ ಮಾಡಿದ ಹಿರಿಮೆ ಇವನಿಗೆ ಸಲ್ಲುತ್ತದೆ. ಕುಮಾರವ್ಯಾಸ ಭಾರತ, ಚಾಟು ವಿಠ್ಠಲನಾಥನ ಭಾರತ ಕೃತಿಗಳ ಪ್ರಭಾವದಿಂದ ಈ ಕೃತಿ ರಚನೆಯಾದರೂ ಪರಮದೇವ ಕವಿ ಸ್ವಂತಿಕೆಯನ್ನು ಮೆರೆದಿದ್ದಾನೆ ಎಂಬುದರಲ್ಲಿ ಎರಡು ಮಾತಿಲ್ಲ.

ತುರಂಗ ಭಾರತ ಆರಂಭವಾಗುವುದು ಪೌಲೋಮ ಪರ್ವದಿಂದ. ಚಾಟು ವಿಠ್ಠಲನಾಥನ ಭಾರತವನ್ನೇ ಪರಮದೇವ ಹೆಚ್ಚಾಗಿ ಮೆಚ್ಚಿಕೊಂಡು ಅನುಸರಿಸಿದಂತೆ ಕಾಣುತ್ತದೆ. ಮುಂದೆ ಆಸ್ತಿಕ ಪರ್ವ, ಆದಿ ಪರ್ವ, ಸಭಾ ಪರ್ವ, ಅರಣ್ಯ ಪರ್ವ, ವಿರಾಟ ಪರ್ವ, ಉದ್ಯೋಗ ಪರ್ವ, ಭೀಷ್ಮ ಪರ್ವ, ದ್ರೋಣ ಪರ್ವ, ಕರ್ಣ ಪರ್ವ, ಶಲ್ಯ ಪರ್ವ, ಗದಾ ಪರ್ವ, ಶಾಂತಿ ಪರ್ವ, ಅಶ್ವಮೇಧ ಪರ್ವ, ಆಶ್ರಮ ಪರ್ವ, ಮುಸಲ ಪರ್ವ, ಸ್ವರ್ಗಾರೋಹಣ ಪರ್ವ ಹೀಗೆ ಸಂಕ್ಷಿಪ್ತವಾಗಿ ಮಹಾಭಾರತವನ್ನು ಹೇಳಿದ 'ಏಕೈಕ ಕವಿ' ಎಂಬ ಹಿರಿಮೆಗೂ ಪರಮದೇವ ಪಾತ್ರನಾಗಿದ್ದಾನೆ. ಕನ್ನಡದ ಬೇರಾವ ಕವಿಗಳೂ ಅಷ್ಟಾಗಿ ವರ್ಣಿಸದ ಆಶ್ರಮ ಪರ್ವ, ಮುಸಲ ಪರ್ವ, ಸ್ವರ್ಗಾರೋಹಣ ಪರ್ವಗಳು ಬಹು ಸುದೀರ್ಘವಾಗಿದ್ದು ಕುರುಕುಲದವರಿಗೆಲ್ಲ ಮುಕ್ತಿ ಸಿಗುವಲ್ಲಿಯವರೆಗೂ ಈ ಕಾವ್ಯದ ನಡಿಗೆ ಸಾಗಿದೆ.

ತುರಂಗ ಲಯ ಪ್ರಿಯನಾದ ಪರಮದೇವ ಕನ್ನಡದ ನಾಮಾಂಕಿತ ಕವಿ ಲಕ್ಷ್ಮೀಶನನ್ನು ಅನೇಕ ಕಡೆಗಳಲ್ಲಿ ಅನುಸರಿಸಿದಂತೆ ಕಂಡುಬರುತ್ತದೆ. ಸ್ವತಃ ತಾಳಮದ್ದಲೆ, ಯಕ್ಷಗಾನ, ಕೀರ್ತನ ರಚನೆಗಳಲ್ಲಿ ನಿಪುಣನಾದ ಈತ ಮಹಾಭಾರತದಲ್ಲಿ ಬರುವ ಯಾವ ರೋಚಕ ಕಥೆಯೂ ಸೋರಿಹೋಗದಂತೆ ನೋಡಿಕೊಂಡಿರುವುದು ಉಲ್ಲೇಖನೀಯ ಅಂಶ. ಯಕ್ಷಗಾನ ಪ್ರಸಂಗಗಳನ್ನು ಈತನ ಕಾವ್ಯದಿಂದ ಬಹು ಸುಲಭವಾಗಿ ಹೆಕ್ಕಿ ತೆಗೆಯಬಹುದಾಗಿದೆ. ಜನಮೇಜಯನ ಸರ್ಪಯಾಗ, ದ್ರೌಪದಿ ಸ್ವಯಂವರ, ಸುಭದ್ರಾ ಕಲ್ಯಾಣ, ಮಾಗಧ ವಧೆ, ಶಿಶುಪಾಲ ವಧೆ, ನಳದಮಯಂತಿ, ಯಯಾತಿ, ಹರಿಶ್ಚಂದ್ರನ ಕಥೆ, ಕೀಚಕ ವಧೆ, ಕೃಷ್ಣಸಂಧಾನ, ಅಭಿಮನ್ಯು ಚಕ್ರವ್ಯೂಹ, ಸೈಂಧವನ ವಧೆ, ದುಶ್ಯಾಸನ ವಧೆ, ಗದಾಯುದ್ಧ, ಕರ್ಣಾವಸಾನ, ಕೌರವನ ವಧೆ, ಅಶ್ವತ್ಥಾಮ, ಬಭ್ರುವಾಹನ ಕಾಳಗ, ಅಶ್ವಮೇಧ, ಕೃಷ್ಣನ ಕೊನೆಯ ದಿನಗಳು, ಯಾದವರ ಕಲಹ, ಪರೀಕ್ಷಿತ ರಾಜನ ಕಾರುಬಾರು, ಕುರುಕುಲ ಮೋಕ್ಷ ಹೀಗೆ ನೂರಾರು ಸ್ವಾರಸ್ಯಪೂರ್ಣ ಕಥಾ ಪ್ರಸಂಗಗಳನ್ನು ಮನೋಜ್ಞವಾಗಿ ಬಣ್ಣಿಸುವಲ್ಲಿ ಈ ಕವಿ ಯಶಸ್ಸು ಕಂಡಿದ್ದಾನೆ. ಈ ಎಲ್ಲ ಪ್ರಸಂಗಗಳನ್ನು ನಿರೂಪಿಸುವಾಗ ಕೆಲವೊಮ್ಮೆ ವ್ಯಾಸಭಾರತವನ್ನು ಅನುಸರಿಸಿದರೆ ಮತ್ತೆ ಕೆಲವು ಕಡೆ ಕಿರು ಬದಲಾವಣೆ ಮಾಡಿ ಕಥೆ ಹೆಣೆದಿದ್ದಾನೆ. ಇಲ್ಲೆಲ್ಲ ಕುಮಾರವ್ಯಾಸ, ಚಾಟು ವಿಠ್ಠಲನಾಥ, ಲಕ್ಷ್ಮೀಶರ ಪ್ರಭಾವವೂ ಅಲ್ಲಲ್ಲಿ ಕಂಡುಬಂದರೂ ತನ್ನ ಅಸಾಧಾರಣ ಪ್ರತಿಭೆಯನ್ನು ಮೆರೆದಿರುವುದು ಗಮನೀಯ ಅಂಶ. ಪರಮದೇವ ೯೬ ಸಂಧಿಗಳಲ್ಲಿ ಮಹಾಭಾರತದ ಕಥೆಯನ್ನು ಆಕರ್ಷಕವಾಗಿ ಲೀಲಾಜಾಲವಾಗಿ ಮನಂಬುಗುವಂತೆ ಹೇಳಿದ್ದಾನೆ.

□□

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ವಚನಗಾರ ಪುರದ ನಾಗಣ್ಣ

ಡಾ॥ ಬಿ. ನಂಜುಂಡ ಸ್ವಾಮಿ

❖

ಪ್ರಪಂಚದ ಧಾರ್ಮಿಕ ಇತಿಹಾಸದಲ್ಲಿ ಭಾರತ ದೇಶಕ್ಕೆ ವಿಶೇಷವಾದ ಸ್ಥಾನ. ಈ ಮಣ್ಣಿನಲ್ಲಿ ಶೃತಿ, ಸ್ಮೃತಿ ಕಾಲದಿಂದ ಧರ್ಮದ ಚಿಂತನೆ ಸಾಗುತ್ತಾ ಬಂದಿವೆ. ಮಹಾಜನತೆ ವೇದ, ವೇದಾಂತ, ರಾಮಾಯಣ, ಮಹಾಭಾರತ, ಭಾಗವತ ಗ್ರಂಥಗಳ ಅಧ್ಯಯನದ ಜೊತೆಗೆ ಆಗಮಗಳು, ಉಪನಿಷತ್ತುಗಳು, ಬ್ರಾಹ್ಮಣಗಳು, ಸಾಹಿತ್ಯ, ನಾಟಕ, ತತ್ವಗ್ರಂಥಗಳು, ಪೂಜಾ ವಿಧಿವಿಧಾನಗಳನ್ನು ತಿಳಿಸುವಂತಹ ಗ್ರಂಥಗಳು, ಜ್ಯೋತಿಷ್ಯ, ಆಯುರ್ವೇದ ಹೀಗೆ ದಿನನಿತ್ಯಕ್ಕೆ ಬೇಕಾದ ಮಹತ್ತ್ವ ಗ್ರಂಥಗಳನ್ನು ಅಧ್ಯಯನ, ಅಧ್ಯಾಪನ ಮಾಡಿಕೊಂಡು ಬಂದರು. ನಂತರದ ದಿನಗಳಲ್ಲಿ ಶಕ್ತಿವಿಶಿಷ್ಟಾದ್ವೈತ ಅಥವಾ ದ್ವೈತಾದ್ವೈತ, ಅಥವಾ ಶಿವಾದ್ವೈತ ಎಂದು ಕರೆಸಿಕೊಳ್ಳುವ ವೀರಶೈವ ಸಿದ್ಧಾಂತ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಶಾಕ್ತ, ಗಾಣಪತ್ಯ, ಜೈನ, ಬೌದ್ಧ, ಸಿಖ್, ಕ್ರೈಸ್ತ, ಇಸ್ಲಾಂ ಮುಂತಾದ ಧರ್ಮಗಳನ್ನು ಮಹಾಜನತೆ ಅನುಸರಿಸುತ್ತಾ ಪಾಲನೆ ಮಾಡಿಕೊಂಡು ಬಂದರು.

ವೀರಶೈವ ಅಥವಾ ಲಿಂಗವಂತ ಅಥವಾ ಶಿವಾಚಾರ ಧರ್ಮವೆಂದು ವಿಶೇಷವಾಗಿ ಪ್ರಚಾರವಾಗಿರುವ ಈ ಧರ್ಮದಲ್ಲಿ ವಿಶೇಷವಾಗಿ ಬಸವಾದಿ ಪ್ರಮಥರ ಕಾಲದಲ್ಲಿ ಅಚ್ಚ ಕನ್ನಡದಲ್ಲಿ ವಚನ ಸಾಹಿತ್ಯ ಹುಲುಸಾಗಿ ಬೆಳೆಯುತ್ತಾ ಬಂತು. ಆದ್ಯ ವಚನಕಾರನನ್ನು ವಿದ್ವಾಂಸರು ಜೇಡರದಾಸಿಮಯ್ಯನಿಂದ ಗುರುತಿಸುತ್ತಾ ಬಂದಿದ್ದಾರೆ. ಪ್ರಕಟಿತ ಸಾಹಿತ್ಯವನ್ನು ಇಟ್ಟುಕೊಂಡು ದೊರೆಯುವ ಹೊಸ ಸಾಮಗ್ರಿಯನ್ನು ಬಳಸಿಕೊಂಡು, ಯುವ ವಿದ್ವಾಂಸರು ಸಂಶೋಧನೆ ಮಾಡಬೇಕು.

ಕಲ್ಯಾಣಕ್ರಾಂತಿಯ ನಂತರ ಬಸವಾದಿ ಪ್ರಮಥರ ಸಂಗಡವಿದ್ದ ಶರಣ, ಶರಣೆಯರು ಚದುರಿ, ಶ್ರೀಶೈಲ, ಗೋವಾ, ಉಳಿವಿ, ಹಂಪಿ, ಬಳ್ಳಾರಿ, ಹರದನಹಳ್ಳಿ, ಶಿವಗಂಗೆ, ಸಿದ್ಧಗಂಗೆ, ಗುಬ್ಬಿ, ಗುಮ್ಮಳಾಪುರ ಹೀಗೆ ನಾನಾ ಪ್ರದೇಶಗಳಲ್ಲಿ ಚದುರಿ ಹೋದರು. ಜೊತೆಯಲ್ಲಿ ಅಮೂಲ್ಯವಾದ ವಚನಗಳ ಕಟ್ಟನ್ನು ತೆಗೆದುಕೊಂಡು ಹೋಗಿದ್ದರಿಂದ

ಸಾಕಷ್ಟು ವಚನ ಸಾಹಿತ್ಯ ಸಂರಕ್ಷಣೆಯಾಯಿತು. ಹೀಗೆ ಚದುರಿದ ಒಂದು ಗುಂಪು ಗುಬ್ಬಿ ನಗರಕ್ಕೆ ಬಂತು. ಗುಬ್ಬಿಯಲ್ಲಿ ಗಂಗರ ಕಾಲದಲ್ಲೇ ಭವ್ಯವಾದ ಅಮರಗೊಂಡ ಮಲ್ಲಿಕಾರ್ಜುನ ದೇವಾಲಯ ನಿರ್ಮಾಣವಾಗಿತ್ತು. ಈ ದೇವಾಲಯವನ್ನು ಗಂಗ ದೊರೆಗಳ ನಂತರ ನೊಳಂಬರಸರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ದೊರೆಗಳ ಕಾಲದಲ್ಲಿ ಸಾಕಷ್ಟು ಜೀರ್ಣೋದ್ಧಾರ ಮಾಡಿದ್ದಾರೆ. ಇಲ್ಲಿ ಒಂದು ವಿಷಯ ಸ್ಪಷ್ಟ ಮಾಡಬೇಕು. ವಿಜಯನಗರ ದೊರೆಗಳ ಆಶ್ರಯದಲ್ಲಿದ್ದವರು ಗುಬ್ಬಿಹೊಸಹಳ್ಳಿ ಅರಸರು. ಅವರ ಕಾಲದಲ್ಲಿ ಈ ದೇವಾಲಯವು ಸಾಕಷ್ಟು ಅಭಿವೃದ್ಧಿ ಹೊಂದಿದೆ.

ಈ ದೇವಾಲಯದಲ್ಲಿ ಗಂಗ, ನೊಳಂಬ, ಹೊಯ್ಸಳ, ವಿಜಯನಗರ ಮೈಸೂರು ದೊರೆಗಳ ಕಾಲದಲ್ಲಿ ಸ್ಥಾಪಿತ ಹಲವಾರು ವಿಗ್ರಹಗಳು ಉಳಿದುಕೊಂಡು ಬಂದಿವೆ. ಆ ಬಗ್ಗೆ "ಅಮರಗೊಂಡ ಮಲ್ಲಿಕಾರ್ಜುನ ದೇವಾಲಯ ಮತ್ತು ಅಲ್ಲಿ ರಚನೆಯಾದ ಸಾಹಿತ್ಯ" ಎಂಬ ಹೆಸರಿನ ವಿಶೇಷ ಪುಸ್ತಕವನ್ನು ಬರೆಯುತ್ತಾ ಇದ್ದೇನೆ. ಆ ಪುಸ್ತಕದಲ್ಲಿ ದೇವಸ್ಥಾನದ ವಾಸ್ತುಶಿಲ್ಪ, ಸಾಹಿತ್ಯ ಕುರಿತು ವಿಶೇಷವಾದ ಮಾಹಿತಿ ನೀಡುತ್ತೇನೆ. ಶ್ರೀಶೈಲಕ್ಕೆ ಇನ್ನೊಂದು ಹೆಸರು ಅಮರಗೊಂಡ ಎಂದು, ಆದ್ದರಿಂದ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಇರುವ ಪ್ರದೇಶವನ್ನು ಅಮರಗೊಂಡ ಎಂದು ಇಡೀ ಊರಿಗೆ ಗುಬ್ಬಿ ಎಂದೆ ಹೆಸರು. ಗುಬ್ಬಿಯ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಇಂದಿಗೂ "ಅಮರಗೊಂಡ ಮಲ್ಲಿಕಾರ್ಜುನ ದೇವಾಲಯ" ಎಂದೇ ಕರೆಯಲಾಗುತ್ತಿದೆ. ಪ್ರತಿವರ್ಷ ಶ್ರೀಶೈಲದಲ್ಲಿ ನಡೆಯುವಂತೆ ಮಾಘಮಾಸದ ಚತುರ್ದಶಿ ಮಹಾಶಿವರಾತ್ರಿಯ ರಾತ್ರಿ "ಪಾರ್ವತೀ ಕಲ್ಯಾಣ" ಅಥವಾ "ಗಿರಿಜಾ ಕಲ್ಯಾಣ" ನಡೆಯುತ್ತದೆ. ಅದೇ ರೀತಿ ಗುಬ್ಬಿಯ ಅಮರಗೊಂಡ ಮಲ್ಲಿಕಾರ್ಜುನ ದೇವಾಲಯದಲ್ಲಿಯೂ ನಡೆಯುತ್ತದೆ. ಇಂದಿಗೂ ಮಹಾಶಿವರಾತ್ರಿಯ ಮಾರನೇದಿನ ಪಾರಣೆದಿನ ನಡೆಯುವ ರಥೋತ್ಸವಕ್ಕೆ ಅಮರಗೊಂಡ ಮಲ್ಲಿಕಾರ್ಜುನಸ್ವಾಮಿ ಮತ್ತು ಭ್ರಮರಾಂಬರನ್ನು ಬಿಜುಮಾಡಿಸುವಾಗ ಮಹಾಜನತೆ ಅಮರಗೊಂಡ ಮಲ್ಲಿಕಾರ್ಜುನಸ್ವಾಮೀ ಕೀ ಜೈ ಎಂದೇ ಜಯಘೋಷ ಮಾಡುತ್ತಾರೆ. ಗೋಸಲ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ದೇವಸ್ಥಾನಕ್ಕೆ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ಶ್ರೀ ಶ್ರೀ ಶ್ರೀ ಅಡವೀ ಸ್ವಾಮಿಗಳು ಕಟ್ಟಿಸಿದ "ಪಾಪನಾಶಿನೀ" ಕಲ್ಯಾಣಿಯಲ್ಲಿ ಹಾಕಿಸಿರುವ ಶಾಸನದಲ್ಲಿ ಶ್ರೀಶೈಲದ ಪ್ರಸ್ತಾಪವಿದೆ.

ಗುಬ್ಬಿಯ ಅಮರಗೊಂಡ ಮಲ್ಲಿಕಾರ್ಜುನ ದೇವಾಲಯದಲ್ಲಿ ಬಸವಾದಿ ಪ್ರಮಥರ ಕಾಲದಲ್ಲಿ ನಡೆದ ಕ್ರಾಂತಿಯ ನಂತರ ಬಂದು ನೆಲೆಸಿದ ಮಹಾಗುರುವಿನ ಹೆಸರು ಮಲ್ಲಿಕಾರ್ಜುನ ಪಂಡಿತ. ಆತ ಅಮರಗೊಂಡದ ಮಲ್ಲಿಕಾರ್ಜುನ ದೇವಾಲಯದಲ್ಲಿ ಒಂದು ಗುರುಕುಲವನ್ನು ಸ್ಥಾಪಿಸಿ ನಡೆಸುತ್ತಾ ಬಂದುದರಿಂದ ಆತನನ್ನು ಮಹಾಜನತೆ

"ಅಮರಗೊಂಡ ಮಲ್ಲಿಕಾರ್ಜುನ ಪಂಡಿತ" ಎಂದು ಕರೆದರು. ಈತನ ಶಿಷ್ಯನಾದ ಗುರುಭಕ್ತ, ಈತ ತನ್ನ ಗುರುವಿನ ಅಣತಿಯಂತೆ ಶೂಲವನ್ನೇರಿದವನು. ಇವನ ನಿಜ ನಾಮ ಜನಮಾನಸದಲ್ಲಿ ಮರೆತು ಹೋಗಿ ಅನ್ವರ್ಥನಾಮ "ಗುರುಭಕ್ತ" ಎಂಬುದೆ ಉಳಿದು ಬಂದಿದೆ. ಗುರುಭಕ್ತನ ಪುತ್ರ ದೇಶಿಕಪಟ್ಟವರ್ಧನ ಸೌಂದರ್ಯ ಮಲ್ಲಿಕಾರ್ಜುನ ಪಂಡಿತ, ಆತನ ಮಗ ಶಿವನನ್ನು ಮಾತನಾಡಿಸಿದ ನಾಗನಾಥಾರ್ಯ, ಆತನ ಮಗ ಸರ್ಪವನ್ನು ಲಿಂಗಕ್ಕೆ ಛತ್ರಿಯನ್ನಾಗಿ ಮಾಡಿದ ಅಮರಗೊಂಡಾರ್ಯ ಈತ ಶೂದ್ರನಿಂದ ವೇದವನ್ನು ಓದಿಸಿ ಆತನನ್ನು ಭಕ್ತನನ್ನಾಗಿ ಮಾಡಿದ ಖ್ಯಾತಿವಂತ. ಈ ಅಮರಗೊಂಡಾರ್ಯನ ವಂಶದಲ್ಲಿ ಹುಟ್ಟಿದ ಗುಬ್ಬಿಯ ಮಲ್ಲಣ್ಣನೇ ಗಣಭಾಷ್ಯರತ್ನಮಾಲೆ, ವಾತೂಲತಂತ್ರಕ್ಕೆ ಕನ್ನಡ ಟೀಕೆಯನ್ನು ಬರೆದು ಪ್ರಸಿದ್ಧನಾದವನು. ಆತನ ಮಗ ಗುರುಭಕ್ತ ಆತನ ಪತ್ನಿ ಸಪ್ಪೆಯಮ್ಮ ಈಕೆಯ ಗರ್ಭದಲ್ಲಿ ಜನಿಸಿದವನೆ ಕವಿ ಎರಡನೇ ಮಲ್ಲಣಾರ್ಯ. ಈತ ಭಾವಚಿಂತಾರತ್ನ, ವೀರಶೈವಾಮೃತ ಪುರಾಣಗಳನ್ನು, ಗುರು ರಗಳೆ (ಕೃತಿ ಅಲಭ್ಯ) ರಚಿಸಿದ್ದಾನೆ. ಈತನ ಮಗನೆ ಶಾಂತೇಶ ಅಥವಾ ಶಾಂತಮಲ್ಲಯ್ಯ ಈತ ತೋಂಟದ ಸಿದ್ಧಲಿಂಗೇಶ್ವರರನ್ನು ಕುರಿತು "ಸಿದ್ಧೇಶ್ವರ ಪುರಾಣವನ್ನು" ರಚಿಸಿದವನು. ಇದು ಗುಬ್ಬಿ ಕವಿಗಳ ಸಂಕ್ಷಿಪ್ತ ಇತಿಹಾಸ.

ಕಲ್ಯಾಣದ ಕ್ರಾಂತಿಯ ನಂತರ ಗುಬ್ಬಿ ನಗರದ ಪ್ರಾಚೀನ ಶಿವಾಲಯ ಅಮರಗೊಂಡ ಮಲ್ಲಿಕಾರ್ಜುನ ದೇವಾಲಯದಲ್ಲಿ, ಮಲ್ಲಿಕಾರ್ಜುನ ಶಿವಯೋಗಿ ಬಂದು ನೆಲೆಸಿದ. ಇವನ ಕಾಲ ಸುಮಾರು ಕ್ರಿ.ಶ. ೧೨೦೦. ಈತನನ್ನು ಮಹಾಜನತೆ "ಅಮರಗೊಂಡ ಮಲ್ಲಿಕಾರ್ಜುನ" ಎಂದು ಕರೆದರು. ಈತ ಅಮರಗೊಂಡ ಮಲ್ಲಿಕಾರ್ಜುನ ದೇವಾಲಯದಲ್ಲಿ ಒಂದು ಗುರುಕುಲವನ್ನು ಪ್ರಾರಂಭಿಸಿದ. ಈತ ಅಂದಿಗೆ ಲಭ್ಯವಿದ್ದ ಪ್ರಾಚೀನ ವೀರಶೈವ ಸಂಸ್ಕೃತ ಕೃತಿಗಳನ್ನು, ವಚನ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದ. ಈತ ರಚಿಸಿದ ಎರಡು ವಚನಗಳು ಲಭ್ಯವಿದ್ದು, ಆ ಎರಡು ವಚನಗಳೂ ಡಾ. ಎಂ.ಎಂ. ಕಲಬುರ್ಗಿ ಸಂಪಾದಿಸಿದ ಸಮಗ್ರ ವಚನ ಸಂಪುಟ ೬ ಪುಟ ೧೦೫-೧೦೬ರಲ್ಲಿ ಮುದ್ರಣವಾಗಿದೆ. ೧೯೯೩ರಲ್ಲಿ ಪ್ರಕಟವಾದ ಈ ಸಂಪುಟದ ಪ್ರಸ್ತಾವನೆಯಲ್ಲಿ ಅಮರಗುಂಡದ > ಅಮರಗೊಂಡದ ಮಲ್ಲಿಕಾರ್ಜುನ ತಂದೆ ವಿವರಗಳು ತಿಳಿದು ಬರುವುದಿಲ್ಲವೆಂದಿದ್ದಾರೆ. ಮುಂದುವರೆದು ಅಮರಗುಂಡ > ಅಮರಗೊಂಡವು (ಗುಬ್ಬಿ) ಮಲ್ಲಿಕಾರ್ಜುನ ತಂದೆಗಳ ಗ್ರಾಮವೆಂದಿದ್ದಾರೆ. ಅದೇ ಪ್ರಸ್ತಾವನೆಯಲ್ಲಿ "ಅಮರಗೊಂಡದ ಮಲ್ಲಿಕಾರ್ಜುನ ತಂದೆಗಳ ವಚನ ಮುದ್ರಿಕೆ "ಅಮರಗುಂಡದ ಮಲ್ಲಿಕಾರ್ಜುನ" ಎಂದು ಈವರೆಗೆ ವಿದ್ವಾಂಸರು ನಂಬಿಕೊಂಡು ಬಂದಿದ್ದಾರೆ. ಆದರೆ ಇದು ಪುರದ ನಾಗಣ್ಣನ ಮುದ್ರಿಕೆಯಾಗಿದ್ದು, "ಅಮರಗುಂಡದ > ಅಮರಗೊಂಡದ ಮಲ್ಲಿಕಾರ್ಜುನ ತಂದೆಗಳ ಮುದ್ರಿಕೆ 'ಮಾಗುಡದ ಮಲ್ಲಿಕಾರ್ಜುನ' ಎಂದು ನಾವು ಶೋಧಿಸಿ ಇಟ್ಟುಕೊಂಡಿದ್ದೇನೆ,

ಎಂದಿದ್ದಾರೆ. ವಚನ ಮುದ್ರಿಕೆ ಬಗೆ, ನನಗೆ ಇಂದಿಗೂ ಅನುಮಾನ. ಲಭ್ಯ, ಸರ್ವಪುರಾತನ ವಚನ ಕಟ್ಟುಗಳನ್ನು ಪರಿಶೀಲಿಸಿ, ಆಧುನಿಕ ಸ್ಕ್ಯಾನರ್ ಉಪಯೋಗಿಸಿಕೊಂಡು ಸ್ಕ್ಯಾನ್ ಮಾಡಿ ಕಂಪ್ಯೂಟರ್‌ನಲ್ಲಿ ದೊಡ್ಡದು ಮಾಡಿ ನೋಡಿ ಈ ಗೊಂದಲವನ್ನು ಪರಿಹರಿಸಿಕೊಳ್ಳಬೇಕು.

ಅಮರಗೊಂಡದ ಮಲ್ಲಿಕಾರ್ಜುನತಂದೆ ವಚನಗಳ ಬಗ್ಗೆ ಲಿಂ॥ ಬಿ. ಶಿವಮೂರ್ತಿಶಾಸ್ತ್ರಿಗಳು ಪರಿಚಯಾತ್ಮಕ ಲೇಖನ ಬರೆದು ಲಭ್ಯ ಎರಡು ವಚನಗಳನ್ನು ಉಲ್ಲೇಖಿಸಿದ್ದರು. ಅಮರಗೊಂಡದ ಮಲ್ಲಿಕಾರ್ಜುನ ತಂದೆ ವಚನಗಳು ಮಹಾಲಿಂಗದೇವರ "ಏಕೋತ್ತರ ಶತಸ್ಥಲ" ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಯ "ಏಕೋತ್ತರ ಶತಸ್ಥಲಸಾರಾಮೃತ" ದಲ್ಲಿ "ಪ್ರಸಾದಿಸ್ಥಲದ ವಚನಗಳು" ಸಂಕಲನದಲ್ಲಿ, ಶಾಂತಬಸವೇಶ್ವರ ಸಂಕಲಿತ "ಲಿಂಗಚಿದಮೃತಬೋಧೆ" ಸಂಕಲನದಲ್ಲಿ ಹಲವು ಸರ್ವಪುರಾತನರ ವಚನ ಕಟ್ಟುಗಳನ್ನು ಉಪಯೋಗಿಸಿಕೊಂಡು ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪ್ರಕಟವಾದ "ಸಕಲಪುರಾತನ ವಚನಗಳು–೩" ವಚನ ಸಂಕಲನ ಗ್ರಂಥದಲ್ಲಿ ಇದೆ.

ಬಸವಾದಿ ಪ್ರಮಥರ ಕಾಲದ ನಂತರ ಒಂದು ಐವತ್ತು ವರ್ಷದ ಅಂತರದಲ್ಲಿ ವಚನಾಧ್ಯಯನ, ವಚನ ರಚನೆ ಮುಂದುವರೆಸಿದವರು "ಅಮರಗೊಂಡದ ಮಲ್ಲಿಕಾರ್ಜುನ" ಈ ವಚನಗಾರನ ಬಗ್ಗೆ ನಾವು ಸ್ಪಷ್ಟವಾಗಿ ಹೇಳದಿದ್ದರೆ ಮಹಾಜನತೆಗೆ ತಿಳಿಯುವುದಾದರೂ ಹೇಗೆ? ವಿಶ್ವದಲ್ಲೇ ವಚನ ಸಾಹಿತ್ಯ ಅಧ್ಯಯನಕ್ಕೆ ಒಳಪಡುತ್ತದೆ, ಸ್ಪಷ್ಟವಾಗಿ ವಚನಗಾರನ ಬಗ್ಗೆ ತಿಳಿಸದಿದ್ದರೆ ಗೊಂದಲ ಉಂಟಾಗಬಹುದು.

ಪುರದ ನಾಗಣ್ಣ ಅಮರಗೊಂಡದ ಮಲ್ಲಿಕಾರ್ಜುನ ಕಿರಿಯ ಸಮಕಾಲೀನ. ಗುಬ್ಬಿಗೆ ನಿಟ್ಟೂರು ಪಕ್ಕದ ಪುರಗ್ರಾಮ ಒಳದಾರಿಯಲ್ಲಿ ಐದು ಮೈಲಿ ಅಂತರದ್ದು. ಗುಬ್ಬಿಯ ಅಮರಗೊಂಡ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ಗುರುಕುಲದ ವಿದ್ಯಾರ್ಥಿಯಾಗಿ ಅಧ್ಯಯನ ಮಾಡಿರಬಹುದು. ನಿಟ್ಟೂರು–ಪುರ ಈ ಎರಡು ಐತಿಹಾಸಿಕ ಗ್ರಾಮಗಳು ಈ ಎರಡು ಗ್ರಾಮಕ್ಕೆ ಒಂದು ಸಾವಿರ ವರ್ಷಕ್ಕೂ ಹೆಚ್ಚಿನ ಇತಿಹಾಸವಿದೆ.

ಪುರಗ್ರಾಮದಲ್ಲಿ ಗಂಗರ ಕಾಲದ ಕಲ್ಲೇಶ್ವರ ದೇವಾಲಯವಿದೆ. ಈ ದೇವಸ್ಥಾನ, ನೊಳಂಬ, ಹೊಯ್ಸಳ, ವಿಜಯನಗರ ಅರಸರ ಕಾಲದಲ್ಲಿ ಕಾಲಕಾಲಕ್ಕೆ ಜೀರ್ಣೋದ್ಧಾರವಾಗುತ್ತಾ ಬಂದಿದೆ. ಈ ದೇವಾಲಯದಲ್ಲಿ ೪೭ ಸಾಲು ಶಾಸನ ಪಾಠವಿರುವ ಈ ಶಾಸನದ ಕಾಲ ಶಕವರ್ಷ ೧೧೪೪ ಬ್ಯಯ>ವ್ಯಯ ಸಂವತ್ಸರದ ಪುಶ್ಯದಮಾಸೆ ಸೂರ್ಯಗ್ರಹಣ ಸಂಕ್ರಾಂತಿ ಬ್ಯತೀಪಾತಗಳೆಂಬ ಸಕಳ ಪುಂಣ್ಯದಿನ ಕಾಲಮಾನದ ಶಾಸನ. ಈ ಶಾಸನದ ಕಾಲ ಕ್ರಿ.ಶ. ೧೨೨೭ ಜನವರಿ ೧೯ ಮಂಗಳವಾರ.

ಈ ಶಾಸನದ ಕಾಲಕ್ಕೆ ಆ ದಿನ ಪುಷ್ಯಮಾಸ ಅಮಾವಾಸ್ಯೆ ಜೊತೆಗೆ ಸೂರ್ಯಗ್ರಹಣ. ಪುರದ ನಾಗಣ್ಣ ಆ ಗ್ರಾಮದಲ್ಲಿ ಆಗಲೇ ಪ್ರೌಢವಯಸ್ಕನಾಗಿದ್ದ ಎಂದು ತೋರುತ್ತದೆ. ನಾವು ಸ್ಪಷ್ಟವಾಗಿ ಪುರ ಗ್ರಾಮ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ನಿಟ್ಟೂರು ಪಕ್ಕದ ಪುರಗ್ರಾಮ ಎಂದು ನಾವು ಸಮಗ್ರ ವಚನ ಸಂಪುಟದಲ್ಲಿ ಬರೆಯದೆ ಹೋದರೆ ವಿಶ್ವದ ಜನತೆಗೆ ಗೊತ್ತಾಗುವುದಾದರೂ ಹೇಗೆ. ಪುರದ ನಾಗಣ್ಣನ ವಚನ ಸಮಗ್ರ ವಚನ ಸಂಪುಟ ೮ ರಲ್ಲಿ ಪುಟ ೨ ರಿಂದ ೫ನೇ ಪುಟದವರೆಗೆ ೯ ವಚನಗಳು ಮುದ್ರಣವಾಗಿದೆ. ಈ ಸಂಪುಟದ ಸಂಪಾದಕರು ಡಾ. ಬಿ.ಆರ್. ಹಿರೇಮಠ. ೧೯೯೩ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟವಾಗಿದೆ. ಪ್ರಸ್ತಾವನೆಯಲ್ಲಿ ಸಂಪಾದಕರು ಈ ಮಾಹಿತಿ ನೀಡಿದ್ದಾರೆ. ಪುರದ ನಾಗಣ್ಣನು 'ಅಮರಗುಂಡದ ಮಲ್ಲಿಕಾರ್ಜುನ' ಅಂಕಿತದಲ್ಲಿ ವಚನ ರಚನೆ ಮಾಡಿದ್ದಾನೆ. ಗಣಸಹಸ್ರದಲ್ಲಿಯ ಉಲ್ಲೇಖವೊಂದನ್ನು ಬಿಟ್ಟರೆ, ಈತನ ಚರಿತ್ರೆಯ ಬಗೆಗೆ ಯಾವ ವಿವರಗಳೂ ಗೊತ್ತಾಗುವುದಿಲ್ಲ. ಕಾಲಚಕ್ರ, ಕರ್ಮಚಕ್ರಗಳ ದಂದುಗವನ್ನು ಬಿಟ್ಟರೆ ನಿಜಾನಂದಭಕ್ತಿ ದೊರೆಯುತ್ತದೆ. ಗುರು ಪಾದೋದಕದಿಂದ ಪರಮಪದ ಸಾಧ್ಯ. ಶಿವಭಕ್ತನಾದವನು ಪಾಪ ಪುಣ್ಯ, ಲಿಂಗ-ಜಂಗಮಗಳ ಬಗೆಗೆ ಅರಿವು ಮಾಡಿಕೊಳ್ಳುವುದು ಅವಶ್ಯ. ಭಕ್ತನು ಭವಿಯೊಂದಿಗೆ ಕೊಳು ಕೊಡೆ ಮಾಡಲಾಗದು. ಆಶೆ ಅಮಿಷ ಹರಿಯಬೇಕು. ಅಷ್ಟಮದ ಹರಿದಲ್ಲಿ ಮಾತ್ರ ಶಿವೈಕ್ಯ. ಸರ್ವಾಂಗ ಲಿಂಗಿಯಾದ ಶರಣನ ಲಿಂಗ ಭಿನ್ನವಾದರೆ, ಆತನು ಲಿಂಗದೊಡನೆ ಪ್ರಾಣ ಬಿಡಬೇಕು. ಮೊದಲಾದ ವಿಷಯಗಳು ಈತನ ವಚನಗಳಲ್ಲಿರುತ್ತದೆ. ಬಸವಣ್ಣ, ಚೆನ್ನಬಸವಣ್ಣ, ಘಟ್ಟಿವಾಳ ಮುದ್ದಯ್ಯ, ಸಿದ್ಧರಾಮಯ್ಯ, ಮರುಳಶಂಕರದೇವ, ಅನಿಮಿಷ, ಅಜಗಣ್ಣ ಬಾಚಿರಾಜಯ್ಯ, ಮೋಳಿಗೆ ಮಾರಯ್ಯ, ಡೋಹರ ಕಕ್ಕಯ್ಯ, ಕಿನ್ನರಿಬ್ರಹ್ಮಯ್ಯ, ಸೊಡ್ಡಳ ಬಾಚರಸ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯರ ಸ್ತುತಿ ವಚನಗಳಲ್ಲಿದೆ. ಸಾಮಾನ್ಯ ವಚನದೊಂದಿಗೆ ಬೆಡಗಿನ ವಚನವೂ ಕಂಡುಬರುತ್ತದೆ. ಈತನ ವಚನಗಳಲ್ಲಿ ಕಾವ್ಯಾಂಶ ಕಡಿಮೆ. ಬಸವಣ್ಣನವರ ವಚನಗಳ ಪ್ರಭಾವವನ್ನು ಇಲ್ಲಿಯ ವಚನಗಳಲ್ಲಿ ಕಾಣುತ್ತೇವೆ ಎಂದಿದ್ದಾರೆ.

ಪುರದ ನಾಗಣ್ಣನ ವಚನಗಳು ಈ ಕೆಳಕಂಡ ವಚನ ಸಂಕಲನಗಳಲ್ಲಿ ಸಂಕಲನಗೊಂಡಿದೆ.

೧) ಎಳಮಲೆಯ ಗುರುಶಾಂತದೇವರು ಸಂಕಲಿಸಿದ - ಅಷ್ಟಾವರಣದ ವಚನಗಳು

೨) ಅಜ್ಞಾತ ಸಂಕಲಿಸಿದ - ಎಲ್ಲಪುರಾತನರ ಸ್ತೋತ್ರದ ವಚನಗಳು

೩) ಅಜ್ಞಾತ ಸಂಕಲಿಸಿದ - ಏಕೋತ್ತರ ಶತಸ್ಥಲದಲ್ಲಿ

೪) ಗುಬ್ಬಿ ಮಲ್ಲಣ್ಣನ - ಗಣಭಾಷ್ಯ ರತ್ನಮಾಲೆ

೫) ಗುರುಶಂಕರಸ್ವಾಮಿ ಸಂಕಲಿತ - ಜ್ಞಾನಷಟ್ಸ್ಥಲಸಾರ

೬) ಕರಸ್ಥಲದ ಮಲ್ಲಿನಾಥ ಒಡೆಯ - ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ

೭) ಅಜ್ಞಾತ ಸಂಕಲಿತ – ಭಕ್ತ್ಯಾನಂದಸುಧಾರ್ಣವ

೮) ಎಳಮಲೆಯ ಗುರುಶಾಂತದೇವ ಸಂಕಲಿತ – ಮಿಶ್ರಸ್ತೋತ್ರದ ವಚನಗಳು

೯) ಅಜ್ಞಾತ ಸಂಕಲಿತ – ಲಿಂಗಚಿದಮೃತಬೋಧೆ

೧೦. ಸಣ್ಣಬರೆಹದ ಗುರುಬಸವರಾಜದೇವರು ಸಂಕಲಿತ – ಲಿಂಗಸಾವಧಾನದ ವಚನಗಳು

೧೧. ಶಂಕರದೇವ ಸಂಕಲಿತ – ವಿರತಾಚರಣೆಯ ಶರಣ ಸಂಬಂಧದ ವಚನಗಳೂ

೧೨. ಅಜ್ಞಾತ ಸಂಕಲಿತ – ವಿಶೇಷಾನುಭವಷಟ್‌ಸ್ಥಲ

೧೩. ಮಹದ್ದೇವಯೋಗಿ ಸಂಕಲಿತ – ವೀರಶೈವ ಚಿಂತಾಮಣಿ

೧೪. ಅಜ್ಞಾತ ಸಂಕಲಿತ – ಶರಣ ಮುಖಮಂಡನ

೧೫. ಶಾಂತದೇವರು ಸಂಕಲಿತ – ಷಟ್ ಪ್ರಕಾರ ಸಂಗ್ರಹ

೧೬. ಅಜ್ಞಾತ ಸಂಕಲಿತ – ಸಂಬಂಧಾಚರಣೆಯ ವಚನಗಳು

೧೭. ಡಾ. ಎಂ.ಎಸ್. ಸುಂಕಾಪುರ ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟಿತ ಸಕಲಪುರಾತನರ ವಚನಗಳು ಭಾಗ–೩, ೧೯೭೮

ಬಸವಾದಿ ಪ್ರಮಥರ ಕಾಲದ ನಂತರ ಸುಮಾರು ಐವತ್ತು ವರ್ಷಗಳ ಅಂತರದಲ್ಲಿ ಬದುಕಿ ಬಾಳಿದವರು ಗುಬ್ಬಿಯ ಅಮರಗೊಂಡ ಮಲ್ಲಿಕಾರ್ಜುನದೇವ. ಅವನ ಕೈಕೆಳಗೆ ವಿದ್ಯಾಭ್ಯಾಸ ಮಾಡಿ ತನ್ನ ಗುರುವಿನಂತೆ ತಾನು ವಚನ ಬರೆದ ಪುರದ ನಾಗಣ್ಣ, ಪುರದ ಮಲ್ಲಯ್ಯ ಬಹಳ ಮುಖ್ಯರಾದವರು. ಪುರದ ಮಲ್ಲಯ್ಯನ ಒಂದೇ ಒಂದು ವಚನ ಲಭ್ಯವಾಗಿದ್ದು ಇವನ ಅಂಕಿತ "ಪುರದ ಮಲ್ಲಯ್ಯ" ಈತ ಪುರದ ನಾಗಣ್ಣನ ಮಗನಿರಬಹುದು.

ಪುರದ ನಾಗಣ್ಣನಿಗೆ ತನ್ನ ಗುರುವಿನ ಮೇಲೆ ಅಪರಿಮಿತವಾದ ಭಕ್ತಿ. ತನ್ನ ಗುರುವಿನ ಹೆಸರನ್ನು ಮತ್ತು ಗುಬ್ಬಿಯ ಆದಿದೈವ ಅಮರಗೊಂಡ ಮಲ್ಲಿಕಾರ್ಜುನಸ್ವಾಮಿ ಹೆಸರು ಎರಡೂ ಒಂದೇ ಹೆಸರು ಆದ್ದರಿಂದ ಮಗನಿಗೆ ಮಲ್ಲಯ್ಯ ಎಂದು ಹೆಸರು ಇಟ್ಟಿದ್ದುದರಿಂದ, ಆತ ಪುರದ ಮಲ್ಲಯ್ಯ ಎಂದು ಪ್ರಸಿದ್ಧಿಯಾದ ಆತ ತಾನು ರಚಿಸಿದ ವಚನಕ್ಕೆ ತನ್ನ ಹೆಸರನ್ನೆ ಅಂಕಿತವಾಗಿ ಬಳಸಿಕೊಂಡಿದ್ದಾನೆ. ಈತ ಬರೆದ ಈ ಕೆಳಗಿನ ವಚನ ಸಕಲಪುರಾತನರ ವಚನಗಳೂ ಭಾಗ–೩ ಸಂಪಾದಕರು ಡಾ. ಎಂ.ಎಸ್. ಸುಂಕಾಪುರ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ೧೯೭೮ರ ಪುಸ್ತಕದಲ್ಲಿ ಮುದ್ರಣವಾಗಿದೆ. ಈ ವಚನಗಾರ ಮತ್ತು ಈ ವಚನ ಸಮಗ್ರ ವಚನ ಸಂಪುಟದಲ್ಲಿ ಬಿಟ್ಟುಹೋಗಿದೆ.

ಪುರದ ಮಲ್ಲಯ್ಯಗಳ ವಚನ

ಗುರು ಭಕ್ತನಲ್ಲ, ವಿರಕ್ತನಲ್ಲ,
ನಿಶ್ಚಿಂತೆಯಲ್ಲ, ದುಶ್ಚಿಂತೆಯಲ್ಲ
ದಿಟವೆಂಬುದಿಲ್ಲ, ಡಂಬುಳದೆಲ್ಲಾ,
ಏನೆಂಬೆ! ಎನ್ನ ಮನವೆಯ್ದೆ ಹೊಲ್ಲ
ಎನಗೊಡೆಯರಿಲ್ಲ, ನಿಮ್ಮ ಬಿಡುವುದಿಲ್ಲ,
ಸದ್ಗುರುವೆ ನೀ ಕರುಣಿಸು ಪುರದ ಮಲ್ಲಯ್ಯಾ

ಗುರುಭಕ್ತನಲ್ಲ ಅರ್ಥಾತ್ ಭಕ್ತಸ್ಥಲದಿಂದ ಗುರುಸ್ಥಳ ಮುಟ್ಟಿದ್ದರೂ ಆತನಿಗೆ ಭಕ್ತಸ್ಥಲದ ಕರ್ತವ್ಯಗಳು ಇಲ್ಲ. ಗುರುವು ವಿರಕ್ತನಾಗಿರಬೇಕು ಎಂದೇನೂ ಇಲ್ಲ. ಆತ ಸಂಸಾರಿಯಾಗಿರಬಹುದು ಅಥವಾ ವಾನಪ್ರಸ್ಥಾಶ್ರಮ ಸ್ವೀಕರಿಸಿರಬಹುದು. ಆತನನ್ನು ಚಿಂತೆಗಳು ಕಾಡುವುದಿಲ್ಲ. ಆದ್ದರಿಂದ ನಿಶ್ಚಿಂತೆಯ ವ್ಯಕ್ತಿ ಎಂದು ವಚನಗಾರ ಕರೆದಿದ್ದಾನೆ. ಅವನಲ್ಲಿ ಸಾಮಾನ್ಯ ಜನರಲ್ಲಿ ಬರುವ ದುರಾಲೋಚನೆಗಳು ಬರುವುದಿಲ್ಲವಾದ ಕಾರಣ 'ದುಶ್ಚಿಂತೆಯಲ್ಲ' ಎಂದಿದ್ದಾನೆ ವಚನಗಾರ.

ಗುರುವು ಹೇಳುವುದು ಎಲ್ಲಾ ಸತ್ಯವಾದ್ದರಿಂದ ಮತ್ತೆ 'ದಿಟವೆಂಬುದಿಲ್ಲಾ' ಎಂದರೆ ಮತ್ತೆ ಸತ್ಯವಾ ಎಂದು ಪ್ರಶ್ನೆ ಮಾಡುವುದು ಬೇಕಾಗುವುದಿಲ್ಲ. ಡಂಬು ಅಂದರೆ ಬಡಾಯಿ ಕೊಚ್ಚಿಕೊಳ್ಳುವವರು ಎಂದು ಇಲ್ಲಿ ವಚನಗಾರ ನನ್ನ ಗುರು ಡಂಬುಳದೆಲ್ಲಾ ಅಂದರೆ ಸುಮ್ಮನೆ ಬಡಾಯಿ ಕೊಚ್ಚಿಕೊಳ್ಳುವವನಲ್ಲಾ ಎಂದಿದ್ದಾನೆ. ಮುಂದುವರೆದು ಏನೆಂಬೆ ಎನ್ನ ಮನದ ಹೊಯ್ದಾಟವನ್ನು ನಿಲ್ಲಿಸು ನನಗೆ ಯಾರೋ ಮಾರ್ಗದರ್ಶನ ಮಾಡುವ ಒಡೆಯರಿಲ್ಲ, ನಿಮ್ಮನ್ನು ಬಿಡುವುದಿಲ್ಲ ಸದ್ಗುರುವೇ ನೀ ಕರುಣಿಸಿ ನನ್ನ ರಕ್ಷಿಸಬೇಕು. ಈ ಭವಬಂಧನ ದಾಟುವ ವಿಧಾನವನ್ನು ತಿಳಿಸಬೇಕು ಎಂದು ಬೇಡಿಕೊಂಡಿದ್ದಾನೆ.

ಪುರದ ನಾಗಣ್ಣನ ವಚನ

೧

ಅನಿರ್ವಾಚ್ಯವೆ ವಾಚ್ಯವಾಗಿ ಭಾವಿಸಲಿಲ್ಲದ ಬಯಲು,
ಅಗಮ್ಯವೆ ಮನವಾಗಿ ಆನಂದದೊಳಿಪ್ಪ ನೋಡಾ
ಮಹಾಮಹಿಮ ಅಮರಗೊಂಡದ ಮಲ್ಲಿಕಾರ್ಜುನ
ನಿರಾಳ ನಿಃಶೂನ್ಯವೆ ತನುವಾಗಿ. ॥ ೧ ॥

ಮೌನವನ್ನು ಇಲ್ಲಿ ವಚನಗಾರ ಅನಿರ್ವಾಚ್ಯ ಎಂದು ಕರೆದಿದ್ದಾನೆ. 'ಅನಿರ್ವಾಚ್ಯವೆ ವಾಚ್ಯವಾಗಿ' ಬಯಲು ಎಂದರೆ ಆಕಾಶ ತತ್ತ್ವದಿಂದ ನಾವು ಮಾತನಾಡಿದ್ದು ಇನ್ನೊಬ್ಬರಿಗೆ

ಕೇಳುವುದು ಆಕಾಶ ತತ್ತ್ವ ಅದನ್ನೇ ತಮಿಳುನಾಡಿನ ಚಿದಂಬರದಲ್ಲಿ "ಚಿದಂಬರ ರಹಸ್ಯ" ಎಂದು ಕರೆಯುವುದು. ಅಲ್ಲಿ ಏನೋ ಇಲ್ಲ ಆದರೆ ಎಲ್ಲಾ ಇದೆ. ಶರಣರು ಪಂಚಭೂತಗಳಲ್ಲಿ ಆಕಾಶತತ್ತ್ವವನ್ನು ಅಚ್ಚಗನ್ನಡದಲ್ಲಿ ಬಯಲು ಎಂದು ಕರೆದರು. ಇಂದಿಗೂ ಲಿಂಗವಂತರಲ್ಲಿ "ಬಯಲಪ್ಪ" ಅನ್ನುವ ಹೆಸರು ಉಳಿದುಕೊಂಡು ಬಂದಿದೆ. ಆನಂದ ಉಂಟಾಗುವುದು ಮನಸ್ಸಿಗೆ ಅದನ್ನು ಹೇಳಲು ಸಾಧ್ಯವಿಲ್ಲ, ತೋರಿಸಲು ಸಾಧ್ಯವಿಲ್ಲ. ಅದನ್ನೇ ಪುರದ ನಾಗಣ್ಣ "ಆಗಮವೆ ಮನವಾಗಿ ಆನಂದದೊಳಿಪ್ಪ ಮಹಾಮಹಿಮ ಅಮರಗೊಂಡದ ಮಲ್ಲಿಕಾರ್ಜುನಾ "ನಿರಾಳ ನಿಶೂನ್ಯವೆ ತನುವಾಗಿ" ಮುಂದುವರೆದು ಪುರದ ನಾಗಣ್ಣ ಇಂತಹ ಶರಣನ ಮನಸ್ಸು ನಿರಾಳವಾಗಿರುತ್ತ ಅಂತಹ ಶರಣನ ನಿಶೂನ್ಯನೆ ತನುವಾಗಿರುತ್ತದೆ ಎಂದಿದ್ದಾನೆ. ಅರ್ಥಾತ್ ಇಂತಹ ಶರಣನ ದೇಹ ನಿಶೂನ್ಯದ ದೇಹವಾಗಿರುತ್ತೆ ಶೂನ್ಯ ಅಂದರೆ ಏನೋ ಇಲ್ಲದೆ ಇರುವಂತಹದು. ನಿಶೂನ್ಯ ಅಂದರೆ ಅಲ್ಲಿ ಲಿಂಗತತ್ತ್ವದಿಂದ ತುಂಬಿದ ದೇಹವಿರುತ್ತೆ ಎಂದಿದ್ದಾರೆ ಪುರದ ನಾಗಣ್ಣ.

೨

ಎನ್ನ ಘ್ರಾಣದಲ್ಲಿ ಆಚಾರಲಿಂಗವಾಗಿ ಬಂದು
ಗಂಧಪದಾರ್ಥವ ಕೈಕೊಂಡನಯ್ಯಾ ಬಸವಣ್ಣ,
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ಬಂದು
ರುಚಿಪದಾರ್ಥವ ಕೈಕೊಂಡನಯ್ಯಾ ಚನ್ನಬಸವಣ್ಣ.
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಬಂದು
ರೂಪಪದಾರ್ಥವ ಕೈಕೊಂಡನಯ್ಯಾ ಘಟ್ಟಿವಾಳ ಮುದ್ದಯ್ಯ.
ಎನ್ನ ತ್ವಕ್ಕಿನಲ್ಲಿ ಜಂಗಮಲಿಂಗವಾಗಿ ಬಂದು
ಸ್ಪರುಶನಪದಾರ್ಥವ ಕೈಕೊಂಡನಯ್ಯಾ ಸಿದ್ಧರಾಮಯ್ಯ.
ಎನ್ನ ಶ್ರೋತ್ರದಲ್ಲಿ ಪ್ರಸಾದಲಿಂಗವಾಗಿ ಬಂದು
ಶಬ್ದಪದಾರ್ಥವ ಕೈಕೊಂಡನಯ್ಯಾ ಮರುಳಶಂಕರದೇವ.
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಬಂದು
ಸಕಲಪದಾರ್ಥವ ಕೈಕೊಂಡನಯ್ಯಾ ಪ್ರಭುದೇವ.
ನೋಟದಲ್ಲಿ ಅನಿಮಿಷ, ಕೂಟದಲ್ಲಿ ಅಜಗಣ್ಣ
ಭಾವದಲ್ಲಿ ಬಾಚಿರಾಜಯ್ಯ, ಮನ ದೃಢವೆ ಮೋಳಿಗೆ ಮಾರಯ್ಯ.
ಡೋಹರ ಕಕ್ಕಯ್ಯ ಕಿನ್ನರಿ ಬ್ರಹ್ಮಯ್ಯ ಸೊಡ್ಡಳ ಬಾಚರಸ ಹಡಪದಪ್ಪಣ್ಣ

ಮಡಿವಾಳ ಮಾಚಯ್ಯ ಮುಖ್ಯವಾದ ಅಸಂಖ್ಯಾತ ಮಹಾಪ್ರಮಥಗಣಂಗಳ
ಶ್ರೀಪಾದವನರ್ಚಿಸಿ ಪೂಜಿಸಿ ಸುಖಿಯಾದೆನಯ್ಯಾ
ಅಮರಗೊಂಡದ ಮಲ್ಲಿಕಾರ್ಜುನ. ॥ ೨ ॥

ಎನ್ನ ಮೂಗಿನಲ್ಲಿ ಆಚಾರಲಿಂಗವಾಗಿ ಬಂದು ನನಗೆ ಸುವಾಸನೆಯ ಅರಿವು ಉಂಟಾಗುವಂತೆ ಮಾಡಿದಾತ ಬಸವಣ್ಣ ಅದನ್ನು ಬಹಳ ಮಾರ್ಮಿಕವಾಗಿ "ಗಂಧಪದಾರ್ಥವ ಕೈಕೊಂಡನಯ್ಯಾ ಬಸವಣ್ಣ ಎಂದಿದ್ದಾನೆ ಎನ್ನ ಜಿಹ್ವೆಯಲ್ಲಿ ಅರ್ಥಾತ್ ಎನ್ನ ನಾಲಿಗೆಯಲ್ಲಿ ಗುರುಲಿಂಗವಾಗಿ ಬಂದು ರುಚಿಪದಾರ್ಥವ ಕೈಕೊಂಡನಯ್ಯಾ ಚನ್ನಬಸವಣ್ಣ ಎನ್ನ ನೇತ್ರದಲ್ಲಿ ಅರ್ಥಾತ್ ಎನ್ನ ಕಣ್ಣಿನಲ್ಲಿ ಶಿವಲಿಂಗವಾಗಿ ಬಂದು ರೂಪಪದಾರ್ಥವ ಕೈಕೊಂಡನಯ್ಯಾ ಘಟ್ಟಿವಾಳ ಮುದ್ದಯ್ಯಾ. ಇಲ್ಲಿ ರೂಪ ಅಂದರೆ ಆಕೃತಿ. ಎಂತಹದೆ ಭವ್ಯ ಆಕೃತಿ ನೋಡಿ ಆನಂದಿಸಬೇಕಾದರೆ ಮನುಷ್ಯನಿಗೆ ಕಣ್ಣಿನಲ್ಲಿ ನೋಟದ ಶಕ್ತಿ ಇರಬೇಕು. ಎನ್ನ ತ್ವಕ್ಕಿನಲ್ಲಿ ಅರ್ಥಾತ್ ಚರ್ಮದಲ್ಲಿ ಜಂಗಮಲಿಂಗವಾಗಿ ಬಂದು ರೂಪಪದಾರ್ಥವ ಕೈಕೊಂಡನಯ್ಯಾ ಸಿದ್ಧರಾಮಯ್ಯ. ಎನ್ನ ಶ್ರೋತ್ರದಲ್ಲಿ ಅರ್ಥಾತ್ ಕಿವಿಯಲ್ಲಿ ಪ್ರಸಾದಲಿಂಗವಾಗಿ ಬಂದು ಶಬ್ದಪದಾರ್ಥವ ಕೈಕೊಂಡನಯ್ಯಾ ಮರುಳಶಂಕರದೇವ. ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಬಂದು ಸಕಲಪದಾರ್ಥವ ಕೈಕೊಂಡನಯ್ಯಾ ಪ್ರಭುದೇವ. ಇಲ್ಲಿ ಒಂದು ವಿಷಯ ಸ್ಪಷ್ಟ ಮಾಡಬೇಕು ಮನುಷ್ಯರ ಜೀವ ಹೃದಯದಲ್ಲಿ ಮತ್ತು ಮಸ್ತಿಷ್ಕದಲ್ಲಿ ಇರುತ್ತದೆ ಎಂದು ಆಯುರ್ವೇದಶಾಸ್ತ್ರ ಹೇಳುತ್ತದೆ. ಆ ಕಾರಣ ಶರಣ ಸಾಹಿತ್ಯದಲ್ಲಿ ಹೃದಯದಲ್ಲಿ ಮಹಾಲಿಂಗವಿರುತ್ತದೆ ಎಂದಿದ್ದಾರೆ. ಆದ್ದರಿಂದ ಹೃದಯದಲ್ಲಿ ಪ್ರಭುದೇವರು ಬಂದು ಸಕಲಪದಾರ್ಥವ ಕೈಕೊಂಡರು ಎಂದಿದ್ದಾರೆ.

ನೋಟದಲ್ಲಿ ಅನಿಮಿಷದ ಕೂಟದಲ್ಲಿ ಅಜಗಣ್ಣ ಭಾವದಲ್ಲಿ ಬಾಚಿರಾಜಯ್ಯ, ಮನದೃಢವಾಗಿರುವುದಕ್ಕೆ ಮೋಳಿಗೆ ಮಾರಯ್ಯ, ಡೋಹರ ಕಕ್ಕಯ್ಯ, ಕಿನ್ನರಿಬ್ರಹ್ಮಯ್ಯ, ಸೊಡ್ಡಳ ಬಾಚರಸ, ಹಡಪದಪ್ಪಣ್ಣ, ಮಡಿವಾಳ ಮಾಚಯ್ಯ ಹೀಗೆ ಮುಖ್ಯವಾದ ಅಸಂಖ್ಯಾತ ಮಹಾಪ್ರಮಥಗಣಂಗಳ ಶ್ರೀಪಾದವನರ್ಚಿಸಿ ಪೂಜಿಸಿ ಸುಖಿಯಾದೆನಯ್ಯಾ ಅಮರಗೊಂಡದ ಮಲ್ಲಿಕಾರ್ಜುನ ಎಂದಿದ್ದಾರೆ.

ಶರಣರ ಕ್ರಾಂತಿಯ ನಂತರ ಕಾಲದವನು ಪುರದ ನಾಗಣ್ಣ. ಶರಣರ ಕಾಲವನ್ನು ಸುಮರು ೧೧೬೦ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಪುರದ ನಾಗಣ್ಣನ ಕಾಲ ಸುಮಾರು ೧೨೪೦-೫೦ ಆ ಕಾಲಮಾನಕ್ಕೆ ಬಸವಾದಿ ಪ್ರಮಥರು ಬರೆದ ವಚನ ಸಾಹಿತ್ಯ ನಾಡಿನ ತುಂಬೆಲ್ಲಾ ಪ್ರಚಾರಕ್ಕೆ ಬಂದಿತ್ತು ಅನ್ನುವ ವಿಷಯಕ್ಕೆ ಈ ವಚನ ಒಳ್ಳೆಯ ಉದಾಹರಣೆ.

೩

ಕಾಯದ ಕಣ್ದೆರೆಯಿಂದುದಯವಾದ ಧಾವತಿ ಎರಡು ನೋಡಯ್ಯಾ
ಅಯ್ಯಾ ಭ್ರಾಂತಿಯತ್ತಲೊಂದೆಳವುತ್ತಲದೆ
ದೇವಾ ನಿಮ್ಮತ್ತಲೊಂದೆಳವುತ್ತಲದೆ.
ಒಂದರ ಸಹಜವನೊಂದು ಗೆಲಲರಿಯದು.
ಮುಂದೆ ಸತ್ಪಥಕ್ಕೆಂತಡಿಯಿಡುವೆನಯ್ಯಾ ನಾನು?
ಕಾಲಚಕ್ರದಲ್ಲಿ ಹುಟ್ಟಿ, ಕರ್ಮಚಕ್ರದಲ್ಲಿ ಬೆಳೆದು
ಕಲ್ಪಿತದಿಂದವೆ ದಿನಂಗಳು ಸವೆವುತ್ತವೆಯಯ್ಯಾ.
ತಲೆಯೆರಡರ ಪಕ್ಷಿ ವಿಷ ನಿರ್ವಿಷವ ಮೆಲಿದಂತಾಯಿತ್ತೆನಗಯ್ಯಾ.
ಅಂದಂದಿನರಿವು ಅಂದಂದಿನ ಮರವೆಗೆ ಸರಿಯಯ್ಯಾ.
ತಂದೆ ಈ ದಂದುಗವ ಮಾಣಿಸಿ
ನಿಮ್ಮ ನಿಜಾನಂದಭಕ್ತಿಯೆನಗೆ ಕರುಣಿಸಯ್ಯಾ
ಅಮರಗೊಂಡದ ಮಲ್ಲಿಕಾರ್ಜುನಾ. ॥ ೩ ॥

ಕಾಯ ಅರ್ಥಾತ್ ದೇಹ ಬೆಳೆದಂತೆ, ನಮ್ಮಲ್ಲಿ ಉಂಟಾಗುವ ಎರಡು ವಿಧವಾದ ಧಾವತಿ ಬಗ್ಗೆ ವಚನಗಾರ ಈ ರೀತಿ ವಿಶ್ಲೇಷಿಸಿದ್ದಾನೆ. ಮನಷ್ಯ ಸಹಜವಾಗಿ ಉಂಟಾಗುವ ಭ್ರಾಂತಿಗಳು ಕಡೆಗೆ ಮನಸ್ಸು ಎಳೆಯುತ್ತವೆ ನಶ್ವರ ಶರೀರ, ಅನಿತ್ಯ ದೇಹ, ಪ್ರಪಂಚವೆ ಮಾಯೆ ಎಂದು ಮಹಾಲಿಂಗನ ಕಡೆ ಮನಸ್ಸು ಎಳೆಯುತ್ತದೆ, ಆದರೆ ಎರಡೂ ತಮ್ಮ ತಮ್ಮ ಆಕರ್ಷಣೆಗಳನ್ನು ಒಡ್ಡುತ್ತವೆ. ಒಂದು ಸಾರಿ ಲೋಕದ ಬಗ್ಗೆ ವ್ಯಾಮೋಹದ ಭಾವ ಮತ್ತೊಂದು ಕಡೆ ಇದೆಲ್ಲಾ ನಶ್ವರ ಲಿಂಗತತ್ತ್ವದ ಮುಂದೆ ಮಿಕ್ಕಿದೆಲ್ಲಾ ತೃಣಸಮಾನ ಎಂದು ಹೇಳುತ್ತದೆ. ಇದನ್ನೇ ವಚನಗಾರ ಒಂದರ ಸಹಜವನೊಂದು ಗೆಲಲರಿಯದು ಎಂದಿದ್ದಾನೆ.

ಈ ಎಲ್ಲಾ ಮಾಯೆ ಮೋಹವನ್ನು ಗೆದ್ದು ಸತ್ಪಥಕ್ಕೆಂತಡಿಯಿಡುವನಯ್ಯಾ ನಾನು? ಕಾಲಚಕ್ರದಲ್ಲಿ ಹುಟ್ಟಿ, ಕರ್ಮಚಕ್ರದಲ್ಲಿ ಬೆಳೆದು ಕಲ್ಪಿತದಿಂದಲೆ ದಿನಂಗಳು ಸವೆವುತ್ತವೆಯಯ್ಯಾ ಎಂದಿದ್ದಾನೆ. ವಚನಗಾರ ಮುಂದೆ ಬಹಳ ಒಳ್ಳೆಯ ಉದಾಹರಣೆ ಕೊಟ್ಟಿದ್ದಾನೆ. "ತಲೆಯೆರಡರ ಪಕ್ಷಿ ವಿಷ ನಿರ್ವಿಷವ ಮೆಲ್ಲಿದಂತಾಯಿತ್ತೆನಗಯ್ಯಾ" ಎಂದಿದ್ದಾನೆ ಒಂದೇ ದೇಹ ಎರಡು ತಲೆ ಇರುವ ಪಕ್ಷಿ ಒಂದು ವಿಷವನ್ನು ಇನ್ನೊಂದು ನಿರ್ವಿಷಯುಕ್ತವಾದ ಪದಾರ್ಥವನ್ನು ಸೇವಿಸಿದರೂ ದೇಹ ಒಂದೇ ಆದ್ದರಿಂದ ಪಕ್ಷಿ ಸಾಯುವುದು ಖಚಿತವಾದದ್ದು. ದೇಹ ಒಂದು ತಲೆ ಎರಡು ಇರುವ ಪಕ್ಷಿಯನ್ನು ಗಂಡುಭೇರುಂಡ

ಎಂದು ಕರೆಯುತ್ತಾರೆ. ಅಂದಿನ ದಿನಮಾನಕ್ಕೆ ಬಹಳ ಅಪರೂಪದ ಉದಾಹರಣೆ. ಮುಂದುವರೆದು ವಚನಗಾರ "ಅಂದಂದಿನರಿವು ಅಂದಂದಿನ ಮರವೆಗೆ ಸರಿಯಯ್ಯಾ" ಮನುಷ್ಯ ಸ್ವಭಾವ ಅಂದಂದಿನ ಅರಿವು ಅಂದಂದಿನ ಮರವು ಉಂಟಾಗುವುದಕ್ಕೆ ಸರಿ ಎಂದಿದ್ದಾನೆ. ಆ ಮಹಾಲಿಂಗದಲ್ಲಿ ವಚನಗಾರ, ತಂದೆ ಈ ದಂದುಗನ ಅರ್ಥಾತ್ ಕಷ್ಟ, ಉಪದ್ರವ, ತೊಂದರೆಯ ಮಾಣಿಸಿ ನಿಮ್ಮ ನಿಜಾನಂದಭಕ್ತಿಯೆನಗೆ ಕರುಣಿಸಯ್ಯಾ ಅಮರಗೊಂಡದ ಮಲ್ಲಿಕಾರ್ಜುನಾ ಎಂದು ಬೇಡಿಕೊಂದ್ದಾನೆ.

೪

ಕಾಯವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ,
ಧರ್ಮಾರ್ಥಕಾಮಮೋಕ್ಷಂಗಳೆಂಬುಕ್ಕಡದವರೆಚ್ಚತ್ತಿರಿ
ಭಯ ಘನ ಭಯ ಘನ,
ಅಜ್ಞಾನವೆಂಬ ತೀವ್ರ ಕತ್ತಲೆ ಕರ ಘನ ಕರ ಘನ,
ಒಂಬತ್ತು ಬಾಗಿಲ ಜತನವ ಮಾಡಿ
ಜ್ಞಾನಜ್ಯೋತಿಯ ಪ್ರಬಲವ ಮಾಡಿ ಪ್ರಬಲವ ಮಾಡಿ
ಐವರು ಕಳ್ಳರು ಕನ್ನವ ಕೊರೆವುತ್ತೈದಾರೆ,
ಸುಯಿಧಾನವಾಗಿರಿ ಜೀವಧನವ ಜತನವ ಮಾಡಿ ಜತನವ ಮಾಡಿ
ಬಳಕಿಲ್ಲ ಬಳಿಕಿಲ್ಲ.
ಆ ಪಟ್ಟಣದ ಮೂಲಸ್ಥಾನದ ಶಿಖರದ ಮೇಲಣ
ಬಾಗಿಲ ತೆರದು ನಡೆವುದೆ ಸುಪಥ, ಸ್ವಯಂಭುನಾಥನಲ್ಲಿರೆ,
ಇದನರಿತು ಮಹಾಮಹಿಮ ಅಮರಗೊಂಡದ ಮಲ್ಲಿಕಾರ್ಜುನದೇವರಲ್ಲಿ
ಎಚ್ಚರಿಕೆಗುಂದದಿರಿ, ಎಚ್ಚರಿಕೆಗುಂದದಿರಿ. ॥ ೪ ॥

ಕಾಯವೆಂಬ ಅರ್ಥಾತ್ ದೇಹವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ ಧರ್ಮ ಅರ್ಥ, ಕಾಮ, ಮೋಕ್ಷವೆಂಬ ಕಟ್ಟಡದವರೆಚ್ಚತ್ತಿರಿ ಭಯ ಘನ ಭಯಘನ ಮನುಷ್ಯನಿಗೆ ಭಯ ಎಂಬುದು ಬಹಳ ದೊಡ್ಡದು ಅದು ನಮ್ಮನ್ನು ಎದುರಿಸುತ್ತದೆ. ಮನುಷ್ಯನಲ್ಲಿ ಅಜ್ಞಾನವೆಂಬ ತೀವ್ರ ಕತ್ತಲು ಕರ ಘನ ಕರ ಘನ ಅರ್ಥಾತ್ ಅದು ಸಹ ಮನುಷ್ಯನನ್ನು ಭದ್ರವಾಗಿ ದಪ್ಪವಾಗಿ ಹಿಡಿದುಕೊಳ್ಳುತ್ತದೆ. ಮನುಷ್ಯ ತನ್ನ ದೇಹ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಮನುಷ್ಯನ ದೇಹದಲ್ಲಿರುವ ನವದ್ವಾರವನ್ನು ಜತನದಿಂದ ಸಂರಕ್ಷಿಸಬೇಕು. ಮನಸ್ಸು ಚಂಚಲ ಸ್ವಭಾವದ್ದು ಅದು ಹೇಳಿದಂತೆ ಕೇಳಿದರೆ ಮನುಷ್ಯ

ಪಾತಾಳಕ್ಕೆ ನೂಕಲ್ಪಡುವುದು ಸತ್ಯ. ಈ ಎಲ್ಲಾ ಕಾರಣದಿಂದ ಮನುಷ್ಯ ತನ್ನಲ್ಲಿರುವ ಜ್ಞಾನಜ್ಯೋತಿಯನ್ನು ಪ್ರಬಲವ ಮಾಡಿ ಐವರು ಕಳ್ಳರು ಕನ್ನನ ಕೊರೆಯುತ್ತಾ ಇದ್ದಾರೆ ಅವರೆ ಪಂಚೇಂದ್ರಿಯರು. ರೂಪ (ಕಣ್ಣು) ರಸ (ನಾಲಿಗೆ) ಗಂಧ(ಮೂಗು) ಶಬ್ದ(ಕಿವಿ) ಸ್ಪರ್ಶ(ಚರ್ಮ) ಇವುಗಳ ಮಾಯೆಯಿಂದ ಮನುಷ್ಯ ಗೆಲ್ಲಬೇಕು. ಅದಕ್ಕೆ ಸುಯಿಧಾನವಾಗಿರಿ ಅರ್ಥಾತ್ ಜಾಗರೂಕತೆಯಿಂದ ಇರಿ. ಜೀವಧನವ ಜತನವ ಮಾಡಿ, ಜತನವ ಮಾಡಿ ಎಂದು ಎಚ್ಚರಿಸಿದ್ದಾರೆ ವಚನಗಾರ. ಮುಂದುವರೆದು ಬಳಕಿಲ್ಲ ಬಳಿಕಿಲ್ಲ, ಆ ಪಟ್ಟಣದ ಮೂಲಸ್ಥಾನದ ಶಿಖರದ ಮೇಲಣ ಬಾಗಿಲ ತೆರದು ನಡೆವುದೆ ಸುಪಥ, ಸ್ವಯಂಭುನಾಥನಲ್ಲಿರೆ ಇದನರಿತು ಮಹಾಮಹಿಮ ಅಮರಗೊಂಡದ ಮಲ್ಲಿಕಾರ್ಜುನದೇವರಲ್ಲಿ ಎಚ್ಚರಿಕೆಗುಂದದಿರಿ, ಎಚ್ಚರಿಕೆಗುಂದದಿರಿ ಎಂದಿದ್ದಾರೆ.

ಖ
ಗುರುಪಾದೋದಕ ಪರಮಪಾವನವೆಂದರಿದು
ಗುರುಪಾದೋದಕವನೆ ಧರಿಸುವುದು,
ಧರಿಸಿದಾತಂಗೆ ಅಷ್ಟಾಷಷ್ಟಿತೀರ್ಥಂಗಳು
ತನ್ನೊಳಡಗಿಹವಯ್ಯಾ.
ಅದೆಂತೆಂದಡೆ :
'ಅಂಗುಷ್ಠಾಗ್ರೇ ಅಷ್ಟಾಷಷ್ಟಿತೀರ್ಥಂ ನಿತ್ಯಂ ವಸಂತಿ ವೈ'
ಎಂದುದಾಗಿ, ಶ್ರೀಗುರುವಿನ ಅಂಗುಷ್ಠಾಗ್ರದಲ್ಲಿ
ಸಕಲತೀರ್ಥಂಗಳಿರ್ಪವು.
ಶ್ರೀಗುರುವಿನ ಪಾದೋದಕ ಪರಮಪಾವನವೆಂದರಿದು
ಗುರುಪಾದೋದಕವನೆ ಧರಿಸುವುದು.
ಇದು ಕಾರಣ ಗುರುಪಾದೋದಕದಿಂದವೆ
ಪರಮಪದವಪ್ಪುದು, ಅಮರಗೊಂಡದ ಮಲ್ಲಿಕಾರ್ಜುನಾ. ॥ ಖ ॥

ವೀರಶೈವ ಧರ್ಮದಲ್ಲಿರುವ ಅಷ್ಟಾವರ್ಣ, ಪಂಚಾಚಾರ, ಷಟ್‌ಸ್ಥಲ, ಬಹಳ ಪ್ರಾಚೀನ ಸಿದ್ಧಾಂತ, ಅನಾದಿ ಈ ತತ್ತ್ವಗಳು ಬಸವಾದಿ ಪ್ರಮಥರ ಕಾಲದಲ್ಲಿ ಇನ್ನಷ್ಟು ಪ್ರಖರತೆ ಪಡೆದು ಪ್ರಚಾರಪಡೆದವು. ಲಿಂಗವಂತ ಧರ್ಮದಲ್ಲಿ ಗುರುಪಾದೋದಕಕ್ಕೆ ವಿಶೇಷವಾದ ಮಹತ್ತ್ವವಿದೆ, ಗುರುಪಾದೋದಕ ವಿಧಿ ನಿಧಾನ ಬಹಳ. ಬಸವಾದಿ ಪ್ರಮಥರು ತದನಂತರ ಬಂದ ದ್ವಿತೀಯ ಘಟ್ಟ, ತೃತೀಯ ಘಟ್ಟದ ವಚನಗಾರರು ಗುರುಪಾದೋದಕ್ಕೆ ಬಹಳ ಮಹತ್ತ್ವವನ್ನು ನೀಡಿದ್ದಾರೆ. ಮರದ ನಾಗಣ್ಣ ತನ್ನ ಅಭಿಪ್ರಾಯವನ್ನು ಈ ವಚನದಲ್ಲಿ ವಿವರವಾಗಿ ಹೇಳಿದ್ದಾನೆ.

ಗುರುಪಾದೋದಕ ಪರಮಪಾವನವೆಂದರಿದು, ಗುರು ಪಾದೋದಕವನೆ ಧರಿಸುವುದು, ಅದನ್ನು ಸ್ವೀಕರಿಸಿದವನಿಗೆ ಭೂಮಿಯ ಮೇಲೆ ಇರುವ ೧೦೮ ತೀರ್ಥಗಳನ್ನು ಸೇವಿಸುವುದು ಒಂದೇ, ಗುರುಪಾದೋದಕವನ್ನು ಸ್ವೀಕರಿಸುವುದು ಒಂದೇ ಎಂದು ಹೇಳಿದ್ದಾನೆ. ಮುಂದುವರೆದು ಗುರುಪಾದೋದಕ ಸ್ವೀಕರಿಸಿದ ಭಕ್ತನ ದೇಹದಲ್ಲಿ ನೂರೆಂಟು ತೀರ್ಥಗಳ ನೆಲಸಿದ ಭೂಮಿಗೆ ಅಥವಾ ಕ್ಷೇತ್ರಕ್ಕೆ ಎಷ್ಟು ಗೌರವ ತೋರಿಸುತ್ತಾರೋ ಅಷ್ಟೇ ಗೌರವ ಗುರುಪಾದೋದಕ ಸ್ವೀಕರಿಸಿದ ಭಕ್ತನಿಗೆ ತೋರಿಸುತ್ತಾರೆ ಎಂದಿದ್ದಾನೆ.

"ಅಂಗುಷ್ಠಾಗ್ರೇ ಅಷ್ಟಾಷಿಷ್ಟತೀರ್ಥಂ ನಿತ್ಯಂ ವಸಂತಿ ವೈ" ಎಂಬ ಪ್ರಾಚೀನ ಸಂಸ್ಕೃತ ಗ್ರಂಥದ ಶ್ಲೋಕವನ್ನು ಉದ್ಧರಿಸಿ ಶ್ರೀಗುರುವಿನ ಅಂಗುಷ್ಠಾಗ್ರದಲ್ಲಿ ಅರ್ಥಾತ್ ಹೆಬ್ಬೆಟ್ಟಿನ ಉಗುರಿನ ತುದಿಯಲ್ಲಿ ಸಕಲತೀರ್ಥಗಳು ಇರುವುದು. ಶ್ರೀಗುರುವಿನ ಪರಮಪಾದೋದಕ ಪರಮಪಾವನವೆಂಬುದರಿದು, ಗುರುಪಾದೋದಕವನೆ ಧರಿಸುವುದು ಅರ್ಥಾತ್ ಸ್ವೀಕರಿಸುವುದು ಇವರಿಂದ ಭಕ್ತನಿಗೆ ಪರಮಪದವಪ್ಪುವುದು ಎಂದಿದ್ದಾನೆ ವಚನಗಾರ.

೬

ನಾನಾ ಯೋನಿಯಲ್ಲಿ ಬಂದು ಫಲವೇನಯ್ಯಾ
ಪುಣ್ಯಪಾಪವೆಂದರಿಯದನ್ನಕ್ಕ.
ಪುಣ್ಯಪಾಪವೆಂದರಿದಲ್ಲಿ ಫಲವೇನಯ್ಯಾ
ಶಿವಭಕ್ತನಾಗದನ್ನಕ್ಕ.
ಶಿವಭಕ್ತನಾದಲ್ಲಿ ಫಲವೇನಯ್ಯಾ
ಲಿಂಗಜಂಗಮವೆಂದರಿಯದನ್ನಕ್ಕ.
ಲಿಂಗಜಂಗಮವೆಂದರಿದಲ್ಲಿ ಫಲವೇನಯ್ಯಾ
ಭವಿಯ ಕೊಳುಕೊಡೆ ಹಿಂಗದನ್ನಕ್ಕ.
ಭವಿಯು ಕೊಳುಕೊಡೆ ಹಿಂಗಿದಲ್ಲಿ ಫಲವೇನಯ್ಯಾ
ಆಶೆಯಾಮಿಷವಳಿಯದನ್ನಕ್ಕ.
ಆಶೆಯಾಮಿಷಂಗಳಳಿದಲ್ಲಿ ಫಲವೇನಯ್ಯಾ
ಸಮತೆ ನೆಲೆಗೊಳ್ಳದನ್ನಕ್ಕ.
ಸಮತೆ ನೆಲೆಗೊಂಡಲ್ಲಿ ಫಲವೇನಯ್ಯಾ
ಮೂರುಬಟ್ಟೆಯನರಿಯದನ್ನಕ್ಕ.
ಮೂರುಬಟ್ಟೆಯನರಿದಲ್ಲಿ ಫಲವೇನಯ್ಯಾ

ಅಷ್ಟಮದಂಗಳು ಬೆಂದು ನಷ್ಟವಾಗದನ್ನಕ್ಕ.
ಅಷ್ಟಮದಂಗಳು ಬೆಂದು ನಷ್ಟವಾದಲ್ಲಿ ಫಲವೇನಯ್ಯಾ
ಅಮರಗೊಂಡದ ಮಲ್ಲಿಕಾರ್ಜುನದೇವರಲ್ಲಿ
ಶಿಖಿಕರ್ಪುರದಂತೆ ಅಡಗದನ್ನಕ್ಕ. ॥ ೬ ॥

ಮನುಷ್ಯ ಅಥವಾ ಜೀವಿ ಪುನರಪಿ ಜನನಂ ಪುನರಪಿ ಮರಣಂ ದೇಹನಶ್ವರ ಆತ್ಮ ಅಮರ ಎಂಬ ನಂಬಿಕೆಯಂತೆ ಜೀವ ನಾನಾ ತರಹದ ಗರ್ಭದಲ್ಲಿ ಹುಟ್ಟುತ್ತವೆ, ಅದನ್ನು ವಚನಗಾರ ನಾನಾ ಯೋನಿಯಲ್ಲಿ ಬಂದು ಫಲವೇನಯ್ಯಾ, ಪುಣ್ಯ ಮತ್ತು ಪಾಪದ ಅರಿವು ಇಲ್ಲದನ್ನಕ್ಕ ಎಂದಿದ್ದಾರೆ. ಪುಣ್ಯಪಾಪದ ಅರಿವು ಸ್ಪಷ್ಟವಾಗಿ ಗೊತ್ತಾಗುವುದು ಮನುಷ್ಯ ಜನ್ಮದಲ್ಲಿ. ಮುಂದುವರೆದು ಮನುಷ್ಯನಿಗೆ ಪುಣ್ಯಪಾಪದ ಅರಿವುವುಂಟಾಗುವಲ್ಲಿ ಫಲವೇನು ಶಿವಭಕ್ತನಾಗವನ್ನಕ್ಕ. ಮತ್ತೆ ಮುಂದುವರಿದು ಶಿವಭಕ್ತನಾದಲ್ಲಿ ಫಲವೇನು? ಲಿಂಗ-ಜಂಗಮವನರಿಯದನಕ್ಕ ಎಂದಿದ್ದಾರೆ.

ಮುಂದುವರೆದು ಲಿಂಗಜಂಗಮನೆಂದರಿದಲ್ಲಿ ಫಲವೇನಯ್ಯಾ ಭವಿಯ ಕೊಳುಕೊಡೆ ಹಿಂಗದನ್ನಕ್ಕ. ಇಲ್ಲಿ ಭವಿ ಎಂದರೆ ಅಂಗದ ಮೇಲೆ ಲಿಂಗವಿಲ್ಲದವನು, ಎಂದು ವಾಚ್ಯಾರ್ಥ ಆದರೆ ನಮ್ಮ ಜ್ಞಾನ-ಕ್ರಿಯೆಯ ಅನುಸಂದಾನದಲ್ಲಿ ವ್ಯವಹರಿಸಲು ಸೂಕ್ತವಾದ ವ್ಯಕ್ತಿಯಾಗದೆ ಇದ್ದವನು ಎಂದು ಈ ಆಧುನಿಕ ಕಾಲದಲ್ಲಿ ಅರ್ಥೈಸಬಹುದು, ಮತ್ತೆ ಮುಂದುವರಿದು ಭವಿಯ ಕೊಳುಕೊಡೆ ಹಿಂಗಿದಲ್ಲಿ ಫಲವೇನಯ್ಯಾ ಆಶೆಯಾಮಿಷಂಗಳಿಯದನ್ನಕ್ಕ ಎಂದಿದ್ದಾರೆ. ಮತ್ತೆ ಮುಂದುವರಿದು ಆಶೆಯಾಮಿಷಂಗಳಳಿವಲ್ಲಿ ಫಲವೇನಯ್ಯಾ ಸಮತೆ ನೆಲಗೊಳ್ಳದನ್ನಕ್ಕ ಎಂದಿದ್ದಾರೆ. ಮನುಷ್ಯ ಜೀವಿಗಳೆಲ್ಲರನ್ನು ಒಂದೇ ರೀತಿ ನೋಡಬೇಕು ತರತಮ ಮಾಡಬಾರದು ಎಂದು ಗಂಟಾಘೋಷವಾಗಿ ವಚನಗಾರ ಹೇಳಿದ್ದಾನೆ. ಸಮತೆ ನೆಲೆಗೊಂಡಲ್ಲಿ ಫಲವೇನಯ್ಯಾ ಮೂರುಬಟ್ಟೆಯನರಿಯದನ್ನಕ್ಕ ಮೂರುಬಟ್ಟೆ ಅಂದರೆ ಮೂರಾಬಟ್ಟೆ ಇದಕ್ಕೆ ಅವ್ಯವಸ್ಥೆ, ದಿಕ್ಕುಪಾಲು, ಮೂರುಹಾದಿ ಎಂದು ಅರ್ಥ' ಇಂತಹ ಮೂರುಬಟ್ಟೆಯನರಿದಲ್ಲಿ ಫಲವೇನಯ್ಯಾ ಅಷ್ಟಮದಂಗಳು ಬೆಂದು ನಷ್ಟವಾಗದನ್ನಕ್ಕ. ಅಷ್ಟಮದಂಗಳು ಅಂದರೆ ಅವು ಯಾವವು ಅಂದರೆ ಧನ, ಕುಲ, ವಿದ್ಯಾ, ರೂಪ, ಯೌವನ, ಬಲ, ಪರಿವಾರ, ಅಧಿಕಾರ ಇವುಗಳು ಬೆಂದು ನಷ್ಟವಾಗದನ್ನಕ್ಕ ಮತ್ತೆ ಮುಂದುವರಿದು ಅಷ್ಟಮದಂಗಳು ಬೆಂದು ನಷ್ಟವಾದಲ್ಲಿ ಫಲವೇನಯ್ಯಾ ಅಮರಗೊಂಡದ ಮಲ್ಲಿಕಾರ್ಜುನದೇವರಲ್ಲಿ ಶಿಖಿಕರ್ಪೂರದಂತೆ ಅಡಗದನ್ನಕ್ಕ ಎಂದಿದ್ದಾನೆ. ಶಿಖಿ ಎಂದರೆ ಬೆಂಕಿ ಕರ್ಪೂರಕ್ಕೆ ಬೆಂಕಿ ತಗುಲಿದರೆ ಬೆಂಕಿ ಯಾವುದು ಕರ್ಪೂರ ಯಾವುದು ಎಂದು ವಿಂಗಡಿಸಿ ನೋಡಲು ಸಾಧ್ಯವಿಲ್ಲ. ಆ ರೀತಿ ಭಕ್ತನ ಆತ್ಮ ಶಿಖಿಕರ್ಪೂರದಂತೆ ಅಡಗದನ್ನಕ್ಕ ಎಂದು ಪುರದ ನಾಗಣ್ಣ ಉದಾಹರಣೆ ನೀಡಿದ್ದಾನೆ.

೭

ನೆನದ ಮನಕ್ಕೆ ಮಣ್ಣನೆ ತೋರಿದೆ.
ನೋಡುವ ಕಣ್ಣಿಗೆ ಹೆಣ್ಣನೆ ತೋರಿದೆ.
ಪೂಜಿಸುವ ಕೈಗೆ ಹೊನ್ನನೆ ತೋರಿದೆ.
ಇಂತೀ ತ್ರಿವಿಧವನೆ ತೋರಿ ಕೊಟ್ಟು
ಮರಹನಿಕ್ಕಿದೆಯಯ್ಯಾ.
ಅಮರಗೊಂಡದ ಮಲ್ಲಿಕಾರ್ಜುನಯ್ಯಾ
ನೀ ಮಾಡಿದ ಬಿನ್ನಾಣಕ್ಕೆ ನಾನು ಬೆರಗಾದೆನು ॥ ೭ ॥

ಮನುಷ್ಯ ಭೂಮಿಯ ಮೇಲೆ ಅವತರಿಸಿದ ದಿನದಿಂದ "ಹೆಣ್ಣು-ಹೊನ್ನು-ಮಣ್ಣು" ಈ ಮೂರರ ಮೇಲೆ ಬಹಳ ಮೋಹವಿರಿಸಿಕೊಂಡಿದ್ದಾನೆ, ಇದು ಆದಿಯ ದಿನದಿಂದ ಇಂದಿನ ದಿನದವರೆಗೂ ಮುಂದುವರಿಯುತ್ತಾ ಬಂದಿದೆ. ಇದನ್ನು ಗಮನಿಸಿದ ಪುರದ ನಾಗಣ್ಣ ತನ್ನ ವಚನದಲ್ಲಿ ನೆನವ ಮನಕ್ಕೆ ಮಣ್ಣನೆ ತೋರಿದೆ, ನೋಡುವ ಕಣ್ಣಿಗೆ ಹೆಣ್ಣನೆ ತೋರಿದೆ, ಪೂಜಿಸುವ ಕೈಗೆ ಹೊನ್ನನೆ ತೋರಿದೆ ಎಂದಿದ್ದಾನೆ. ಇಂತೀ ತ್ರಿವಿಧವನೆ ತೋರಿ, ಅವುಗಳನ್ನು ಭಕ್ತ ಪಡೆವಂತೆ ಮಾಡಿ ಆ ಮಹಾಲಿಂಗವನ್ನು ಮರೆಯುವಂತೆ ಮಾಡಿ ಭಕ್ತನಲ್ಲಿ ಹೆಣ್ಣು-ಹೊನ್ನು-ಮಣ್ಣಿನ ಮೇಲಿನ ಆಸೆ ಮಾಯಾರೂಪದಲ್ಲಿ ಆವರಿಸುವಂತೆ ಮಾಡಿದೆಯಲ್ಲಾ ಅಮರಗೊಂಡದ ಮಲ್ಲಿಕಾರ್ಜುನಾ ನೀ ಮಾಡಿದ ಬಿನ್ನಾಣಕ್ಕೆ ಅರ್ಥಾತ್ ಚಾಪಲ್ಯಕ್ಕೆ ನಾನು ಬೆರಗಾದೆನು ಎಂದಿದ್ದಾನೆ ವಚನಗಾರ.

೮

ಶರಣಲಿಂಗಸಮರಸವಾಗಿ ಆಚರಿಸುವ.
ಶರಣನ ಲಿಂಗ ಭಿನ್ನವಾಗಿ ಓಸರಿಸಿಹೋದರೆ
ನೋಡಿ, ಆರಸಿ ಸಿಕ್ಕಿದ ಸಮಯದಲ್ಲಿ
ಆ ಲಿಂಗವ ಪರೀಕ್ಷಿಸಿ ನೋಡುವುದು.
ಆರು ಸ್ಥಾನಂಗಳಲ್ಲಿ ಭಿನ್ನವಿಲ್ಲದಿರ್ದಡೆ ಧರಿಸಿಕೊಂಬುದು.
ಸರ್ವಮಾಹೇಶ್ವರರು ನೋಡಿ ಶಂಕೆಯುಳ್ಳಡೆ ಬಿಡವುದು.
ಅದೆಂತೆಂದಡೆ :
ಶರಣನ ಸಂಕಲ್ಪ ಸನ್ಮತ ತನ್ನದೆಂಬುದೆ ದಿಟವೆಂದು ತಾ ನಿಶ್ಚೈಸಿ
ತೆತ್ತಿಗರಾದ ಸರ್ವಮಾಹೇಶ್ವರರು

ಮಂತ್ರಬೋಧೆಯ ಕರ್ಣದಲ್ಲಿ ಬೋಧಿಸಬೇಕಲ್ಲದೆ
ಆ ಲಿಂಗಧ್ಯಾನಾರೂಢನಪ್ಪಾತಂಗೆ ಧೂಪ ದೀಪ ಅಂಬರಗಳೆಂಬ
ಬಂಧನವೈಕ್ಯವಂ ಮಾಡಲಾಗದು.
ಮಾಡಿದಡೆ ಜ್ಞಾನಿಗಳೊಪ್ಪರು.
ಅದು ಕಾರಣವಾಗಿ ಶಿವಧ್ಯಾನ ನಿಶ್ಚಿಂತವ ಮಾಡಿದ ಕಾರಣ
ಅವರ ತೆತ್ತಿಗರಲ್ಲವೆಂಬೆ, ದಿಟ ಕಾಣಾ ನೀ ಸಾಕ್ಷಿ
ನಿಮ್ಮಾಣೆ ನಿಮ್ಮ ಅರ್ಧಾಂಗಿಯಾಣೆ ಅಮರಗೊಂಡದ ಮಲ್ಲಿಕಾರ್ಜುನಾ ॥೮॥

ವೀರಶೈವ ಧರ್ಮದ ಕಟ್ಟಾಚರಣೆ ಬಗ್ಗೆ ಉಗ್ರ ಭಕ್ತಿ ಬಗ್ಗೆ ಈ ವಚನ ನಮಗೆ ಮಾಹಿತಿ ನೀಡುತ್ತದೆ. ಭಕ್ತ ಧರಿಸುವ ಲಿಂಗ ಭಿನ್ನವಾದರೆ ಪ್ರಾಣತ್ಯಾಗ ಮಾಡುವ ಉಗ್ರವಾದ ಆಚರಣೆ ಮಾಡುತ್ತಾ ಇದ್ದರು. ಆದರೆ ವೀರಶೈವ ಧರ್ಮದಲ್ಲಿ ಅಥವಾ ಲಿಂಗವಂತ ಧರ್ಮದಲ್ಲಿ ಅಥವಾ ಶಿವಾಚಾರ ಧರ್ಮದಲ್ಲಿ ಇದಕ್ಕೆ ಅವಕಾಶ ಇಲ್ಲ ಯಾವುದೇ ಕಾರಣಕ್ಕೂ ಪ್ರಾಣತ್ಯಾಗ ಮಾಡಬಾರದು.

ಶರಣಲಿಂಗಸಮರಸವಾಗಿ ಆಚರಿಸುವ ಶರಣನ ಲಿಂಗ ಭಿನ್ನವಾಗಿ ಓಸರಿಸಿಹೋದರೆ ಅರ್ಥಾತ್ ಲಿಂಗ ನಾಳದಿಂದ ಬೇರ್ಪಟ್ಟರೆ ಅಥವಾ ಬದಿಗೆ ಸರಿದರೆ, ಅಥವಾ ಮರೆಯಾದರೆ ಅಥವಾ ಜಾರಿ ಹೋದರೆ ನೋಡಿ, ಆರಸಿ ಸಿಕ್ಕಿದ ಸಮಯದಲ್ಲಿ ಆ ಲಿಂಗವ ಪರೀಕ್ಷಿಸಿ ನೋಡುವುದು. ಆರು ಸ್ಥಾನಂಗಳಲ್ಲಿ ಭಿನ್ನವಿಲ್ಲದಿರ್ದಡೆ ಧರಿಸಿಕೊಂಬುದು ಸರ್ವಮಾಹೇಶ್ವರರು ನೋಡಿ ಶಂಕರಯುಳ್ಳಡೆ ಬಿಡುವುದು.

ಶರಣನ ಸಂಕಲ್ಪ, ಸನ್ಮತ ತನ್ನದೆಂಬುದೆ ದಿಟವೆಂದು ತಾ ನಿಶ್ಚೈಸಿ ತೆತ್ತಿಗರಾದ ಸರ್ವಮಾಹೇಶ್ವರರು ತೆತ್ತಿಗ ಅಂದರೆ ಸೇವಕ, ಊಳಿಗದಾಳು, ದಾಸ ಸಂಬಂಧಿ, ಸ್ನೇಹಿತ, ಮಿತ್ರ ಎಂದು ಅರ್ಥ. ಸರ್ವಮಾಹೇಶ್ವರರು ಮಂತ್ರಬೋಧೆಯ ಕರ್ಣದಲ್ಲಿ ಬೋಧಿಸಬೇಕಲ್ಲದೆ, ಆ ಲಿಂಗಧ್ಯಾನಾರೂಢನಪ್ಪಾತಂಗೆ ಧೂಪ, ದೀಪ, ಅಂಬರಗಳೆಂಬ ಬಂಧನವೈಕ್ಯವಂ ಮಾಡಲಾಗದು. ಮಾಡಿದಡೆ ಜ್ಞಾನಿಗೊಳಪ್ಪರು. ಅಂಬರ ಅಂದರೆ ಬಟ್ಟೆ, ವಸ್ತ್ರ, ವಾತಾವರಣ, ಆಕಾಶ, ಹತ್ತಿ ಎಂಬ ಅರ್ಥಗಳಿವೆ. ಇಲ್ಲಿ ಬಟ್ಟೆ ಅಥವಾ ವಸ್ತ್ರ ಅರ್ಥವನ್ನು ಸ್ವೀಕರಿಸಬೇಕು. ಇದನ್ನು ಜ್ಞಾತಿಗಳು ಒಪ್ಪುವುದಿಲ್ಲ. ಅದು ಕಾರಣವಾಗಿ ಶಿವಧ್ಯಾನ ನಿಶ್ಚಿಂತವ ಮಾಡಿದ ಕಾರಣ ಅವರ ತೆತ್ತಿಗರಲ್ಲವೆಂಬೆ ತೆತ್ತಿಗ ಅಂದರೆ ಸೇವಕ, ಊಳಿಗದಾಳು, ದಾಸ, ಸಂಬಂಧಿ, ಸ್ನೇಹಿತ, ಮಿತ್ರ ಎಂದು ಅರ್ಥ ಮುಂದುವರೆದು ದಿಟ ಕಾಣಾ ನೀ ಸಾಕ್ಷಿ ನಿಮ್ಮಾಣೆ ನಿಮ್ಮ ಅರ್ಧಾಂಗಿಯಾಣೆ ಅಮರಗೊಂಡದ ಮಲ್ಲಿಕಾರ್ಜುನಾ ಎಂದಿದ್ದಾರೆ ವಚನಗಾರ.

ಇಲ್ಲಿ ಭಕ್ತ ಪರಮೇಶ್ವರನ ಸಾಕ್ಷಿಯಾಗಿ ನುಡಿದಿದ್ದಾನೆ. ಇಷ್ಟಕ್ಕೆ ಸಮಾಧಾನವಾಗದೆ ನಿಮ್ಮ ಅರ್ಧಾಂಗಿಯಾಣಿ ಅಂದರೆ ಜಗನ್ಮಾತೆ ಪಾರ್ವತಿ ಸಾಕ್ಷಿಯಾಗಿ ಎಂದು ನುಡಿದಿದ್ದಾನೆ ವಚನಗಾರ ಪುರದ ನಾಗಣ್ಣ.

೯.

ಸರ್ವಾಂಗಲಿಂಗಿಯಾದ ಶರಣನ ಲಿಂಗ ಭಿನ್ನವಾಗಿ ಹೋಗಲು
ಆ ಲಿಂಗದೊಡನೆ ತನ್ನ ಪ್ರಾಣವ ಬಿಡುವದು.
ಇದಲ್ಲದೆ ಜೀವಕಾಸೆ ಮಾಡಿ ಪುನಃ ಲಿಂಗವ ಧರಿಸಿದನಾದಡೆ
ಶುನಿಯ ಬಸುರಲ್ಲಿ ಬಂದು
ಅನೇಕಕಾಲ ನಾಯಕನರಕದಲ್ಲಿರ್ಪನಯ್ಯಾ
ನೀ ಸಾಕ್ಷಿಯಾಗಿ ಅಮರಗೊಂಡದ ಮಲ್ಲಿಕಾರ್ಜುನಾ. ॥ ೯ ॥

ಶಿವಭಕ್ತಿಯ ಉಗ್ರ ಆಚರಣೆ ಈ ವಚನದಲ್ಲಿ ದಾಖಲಾಗಿದೆ. ಇದು ಇಂದಿಗೆ ಅಪ್ರಸ್ತುತ ಶಿವಸರ್ವೋಸ್ತಮತ್ವವನ್ನು ಸಾಧಿಸುವ ಚಲ ವೀರಶೈವರಲ್ಲಿ ಅಥವಾ ಲಿಂಗವಂತರಲ್ಲಿ ಅಥವಾ ಶಿವಾಚಾರದವರಲ್ಲಿ ಅಂದಿಗೆ ಇತ್ತು. ಹನ್ನೆರಡನೇ ಶತಮಾನದಲ್ಲಿ ಸುಧಾರಣೆಯಾಗುತ್ತಾ ಸಾಕಷ್ಟು ಮಾರ್ಪಾಟು ಆಗುತ್ತಾ ಬಂತು. ಅಂದಿಗೆ ಇಂತಹ ಉಗ್ರ ಆಚರಣೆಗಳು ನಿಂತುಹೋದವು.

ಗರ್ಭಾಷ್ಟಮಕ್ಕೆ ಲಿಂಗದೀಕ್ಷೆಯಾಗಿ ಮಗು ಜನನವಾಗುವಾಗ ಮಗುವಿನ ತಲೆ ಯೋನಿಯಿಂದ ಹೊರಬರುವಾಗ ಅರ್ಧೋದಯದಲ್ಲಿ ತಾಯಿಯ ರಟ್ಟೆಗೆ ಕಟ್ಟಿದ ಮಗುವಿನ "ಜಲಲಿಂಗವನ್ನು" ತಾಯಿಯ ರೆಟ್ಟೆಗೆ ಸೂತ್ರಕಟ್ಟಿ ಲಿಂಗುವನ್ನು ವಸ್ತ್ರದಲ್ಲಿ ಬಿಗಿದು ಮಗು ಜನನವಾಗುವಾಗ ಅರ್ಧೋದಯದಲ್ಲಿ ಕೊರಳಿಗೆ ಹಾಕಿ ಮಗುವನ್ನು ಎಳೆದುಕೊಳ್ಳುತ್ತಾ ಇದ್ದರು. ಮಗು ಭೂಸ್ಪರ್ಶವಾಗುವ ಮುನ್ನ ಕೊರಳಲ್ಲಿ ಇಷ್ಟಲಿಂಗವಿರುತ್ತಿತ್ತು. ತದನಂತರ ಹೊಕ್ಕುಳಬಳ್ಳಿಯನ್ನು ಕತ್ತರಿಸಿಲಾಗುತ್ತಿತ್ತು. ಲಿಂಗವಂತ ಮಗು ಭವಿಯಾಗಿ ಜನಿಸಲು ಅವಕಾಶವೆ ಇರಲಿಲ್ಲ. ಈ ಎಲ್ಲಾ ಮಾಹಿತಿ ಭೀಮಕವಿ ಬಸವಪುರಾಣದಲ್ಲಿ ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮನಾಥ ಪುರಾಣದಲ್ಲಿ ದಾಖಲಾಗಿದೆ.

ಸರ್ವಾಂಗಲಿಂಗಿಯಾದ ಶರಣನ ಲಿಂಗ ಭಿನ್ನವಾಗಿ ಹೋಗಲು ಆ ಲಿಂಗದೊಡನೆ ಪ್ರಾಣವ ಬಿಡುವದು. ಇದಲ್ಲದೆ ಜೀವಕಾಸೆ ಮಾಡಿ ಪುನಃ ಲಿಂಗವ ಧರಿಸಿದನಾದಡೆ ಶುನಿಯ ಬಸರಲ್ಲಿ ಬಂದು ಅರ್ಥಾತ್ ನಾಯಿಯ ಬಸರಲ್ಲಿ ಬಂದು ಅನೇಕಕಾಲ

ನಾಯಕನರಕದಲ್ಲಿರ್ಪನಯ್ಯಾ ನೀ ಸಾಕ್ಷಿಯಾಗಿ ಅಮರಗೊಂಡದ ಮಲ್ಲಿಕಾರ್ಜುನಾ ಎಂದಿದ್ದಾರೆ ಪುರದ ನಾಗಣ್ಣನವರು.

ಈ ಮೊದಲು ಪೀಠಸಮೇತ ಇರುವ ಲಿಂಗುವನ್ನು ಧರಿಸುತ್ತಾ ಇದ್ದರು. ಸದಾ ಮೈಮೇಲೆ ವಸ್ತ್ರದಲ್ಲಿ ಅಥವಾ ಬೆಳ್ಳಿಯ ಅಥವಾ ಚಿನ್ನದ ಅಥವಾ ಮರದ ಕರಡಿಗೆಯಲ್ಲಿ ಧರಿಸಿ ತ್ರಿಕಾಲ, ದ್ವಿಕಾಲ, ಏಕಕಾಲ ಹೀಗೆ ತಮ್ಮ ಅನುಕೂಲಕ್ಕೆ ತಕ್ಕಂತೆ ಪೂಜೆ ಮಾಡುತ್ತಾ ಇದ್ದರು. ಸದಾ ಸ್ನಾನ ಜಪ, ತಪ, ಪೂಜೆ, ಅಭಿಷೇಕ ಇದರಿಂದ ಶಿಲೆಯ ಲಿಂಗ ಭಿನ್ನವಾಗಿ ತೊಂದರೆ ಉಂಟಾಗುತ್ತಾ ಇತ್ತು. ಇದನ್ನು ಗಮನಿಸಿದ ಅನುಭಾವಿಗಳು ಪೀಠಸ್ಥ ಲಿಂಗಕ್ಕೆ ಕಂಥೆ ಧರಿಸುವದನ್ನು ಪ್ರಾರಂಬಿಸಿದರು. ಆಮೇಲೆ ಲಿಂಗ ಭಿನ್ನವಾಗಿ ತೊಂದರೆ ಉಂಟಾಗುವುದು ನಿಂತು ಹೋಯಿತು. ಪುರದ ನಾಗಣ್ಣನವರು ಅಂದಿನ ದಿನಮಾನಕ್ಕೆ ಲಭ್ಯ ಬಸವಾದಿ ಪ್ರಮಥರ ಸಾಹಿತ್ಯವನ್ನು ಬಹಳ ಆಳವಾಗಿ ಅಧ್ಯಯನ ಮಾಡಿದ್ದರಿಂದ ವಚನ ರಚನೆಗೆ ತಮ್ಮ ಪಾಲಿನ ಸೇವೆ ಸಲ್ಲಿಸಲು ಸಾಧ್ಯವಾಯಿತು.

ಪುರದ ಕಲ್ಲೇಶ್ವರ ದೇವಾಲಯದ ಶಾಸನದಲ್ಲಿ ಮೂವತ್ತೆಂಟನೆಯ ಸಾಲಿನಲ್ಲಿ "ನೆಯುಂತೆಂಕಣಯ್ಯಾವಳೆಯಮೆನಿಸಿದ ಮಹಾಪಟ್ಟಣ ನಿಟ್ಟೂರುಸ್ಥಳದ ಸಕಲಧರ್ಮ x x ರುಂಶರಣಾಗತವಜ್ರ ಪಂಜರರುಮೆನಿಸಿದ ಯಿನೂರ್ವ್ವರುಮನಾಪ್ರಿಯಪುತ್ರನಪ್ಪ."

ಈ ಮೇಲಿನ ಶಾಸನದಿಂದ ಉತ್ತರದ ಅಯ್ಯಾವೊಳೆ ಆ ಕಾಲಕ್ಕೆ ಪ್ರಸಿದ್ಧಿಯಾಗಿತ್ತು. ನಿಟ್ಟೂರು ಸ್ಥಳವನ್ನು ತೆಂಕಣಯ್ಯಾವಳೆ ಎಂದು ಕರೆಯುತ್ತಾ ಇದ್ದರು. ಅಂದರೆ ನೂರಾರು ಜನ ವ್ಯಾಪಾರಸ್ಥರು ನೆಲಿಸಿ ನಿಟ್ಟೂರು ಸ್ಥಳವನ್ನು ಮಹಾಪಟ್ಟಣ ಎಂದು ಕರೆದಿದ್ದರು. ಈ ಮಣ್ಣಿನಲ್ಲಿ ಸಕಲಧರ್ಮಗಳು ಬೆಳೆದು ಬಂದಿದ್ದವು.

ಶಾಸನದ ಸಾರಾಂಶ :

ಕುಮಾರ ನಾರಸಿಂಗ ದಂಡನಾಯಕರು ಹೆರುಹೆನಾಡು ಮುನ್ನೂರನ್ನು ಆಳುತ್ತಿದ್ದಾಗ ಆ ಹೆರುಹೆನಾಡಿಂಗೆ ಶಿರೋಮಣಿಯಂತೆ ಇದ್ದ ಗಂಗವಾಡಿ ೯೬೦೦೦ದ ನಾಭಿಭಾಗದಲ್ಲಿ (ಮಧ್ಯಭಾಗದಲ್ಲಿ) ಇದ್ದ ತೆಂಕಣ ಅಯ್ಯಾವೊಳೆ ಎನ್ನಿಸಿದ್ದ ಮಹಾಪಟ್ಟಣ ನಿಟ್ಟೂರು ಸ್ಥಳದ ಸಕಲ ಧರ್ಮಜರು, ಶರಣಾಂಗತವಜ್ರಪಂಜರರು ಎನಿಸಿದ ಐನೂರ್ವರು ಅವರ ಪ್ರಿಯಪುತ್ರರಾದ x x ತರಸೆಟ್ಟಿ ಮಹಾಪ್ರಭುಗಳು ಊರಿನ ಮಸಣಗೌಡ ಮತ್ತು ಕಾಳಗೌಡರ ಸಮ್ಮುಖದಲ್ಲಿ ಆ ಊರಿನ ಶ್ರೀಸ್ವಯಂಭೂ ಕಲಿದೇವರ ಅಂಗಭೋಗಕ್ಕೆ ರಂಗಭೋಗಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಸಕಲ ದೇವರ ಕಾರ್ಯವನ್ನು ನಡೆಸಲು ಕ್ರಿ.ಶ. ೧೨೨೬ರಲ್ಲಿ ವ್ಯಯ ಸಂವತ್ಸರದ ಪುಷ್ಯಮಾಸ ಅಮವಾಸ್ಯೆ, ಸೂರ್ಯಗ್ರಹಣದಂದು,

ಸಂಕ್ರಾಂತಿ ಪುಣ್ಯಕಾಲದಲ್ಲಿ ಹೆರುಹೆಯ ಕೆರೆಯ ಕೆಳಗೆ ಒಂಭತ್ತು ಸಲಿಗೆ ಭೂಮಿಯನ್ನು ಕೆರೆಯ ತೆಂಕಣ ಕೋಡಿಯ ದಾರಿಯ ಹಳ್ಳದ ಬಳಿ ಮೂರು ಸಲಿಗೆ ಭೂಮಿಯನ್ನು, ಹೆರುಹೆ... ಪಟ್ಟಣದಲ್ಲಿ ಅಂಗಡಿ, ಗಾಣ, ಸಂತೆ, ಮುಂತಾದವಕ್ಕೆ ಒಂದು ಹಣ ತೆರಿಗೆಯಂತೆ... ಶಿವಪುರದ ಬಳಿ ಒಂದು ಸಲಿಗೆ ಗದ್ದೆಯನ್ನು ಧರ್ಮವಾಗಿ ಬಿಟ್ಟ ವಿವರವಿದೆ. ಮುಂದಿನ ಕೆಲವು ಸಾಲುಗಳು ಹೋಗಿವೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ [ಸಂತೆ]ಶಿವಪುರ ಅದೇ ಕಡಬ ಮುಂದೆ ಸಂತೇಶಿವಪುರವಾಗಿರಬಹುದು. ಈ ಲೇಖನ ಬರೆವಲ್ಲಿ ಸಹಕಾರ ನೀಡಿದ ತುಮಕೂರು ವಿಶ್ವವಿದ್ಯಾನಿಲಯದ ಡಾ. ಡಿ.ವಿ. ಪರಮಶಿವಮೂರ್ತಿ ಅವರಿಗೆ ಧನ್ಯವಾದಗಳು.

ಪಂಪ ರಾಮಾಯಣ

ಡಾ. ಪಿ.ವಿ. ನಾರಾಯಣ

❖

"ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ; ತಿಂತಿಣಿಯ ರಘುವರಚರಿತೆಯಲಿ ಕಾಲಿಡಲು ತೆರಪಿಲ್ಲ । ಬಣಗು ಕವಿಗಳ ಲೆಕ್ಕಪಿನೆ ಸಾಕೆಣಿಸದಿರು ಶುಕರೂಪನಲ್ಲದೆ ಕುಣಿಸಿ ನಗನೇ ಕವಿ ಕುಮಾರವ್ಯಾಸನುಳಿದವರ" ಎಂದು ಕುಮಾರವ್ಯಾಸ ಹೇಳಿದ್ದು ಸಂಸ್ಕೃತ ಮತ್ತು ಪಾಕೃತ ಭಾಷೆಗಳಲ್ಲಿದ್ದ ಹಾಗೂ ಜನಪದರಲ್ಲಿ ಪ್ರಚಲಿತವಾಗಿದ್ದ ರಾಮಾಯಣಗಳನ್ನು ಕುರಿತು ಎಂದು ಮೇಲುನೋಟಕ್ಕೆ ಕಂಡರೂ, ಪದ್ಯದ ವ್ಯಂಗ್ಯದ ಧಾಟಿ ಮತ್ತು ಕವಿಯ ವೈದಿಕ ಪಕ್ಷಪಾತಗಳು ಈ ಮಾತಿಗೆ ಬೇರೆ ಅರ್ಥವನ್ನೇ ಹುಡುಕುವಂತೆ ಚೋದಿಸುತ್ತದೆ. ಕುಮಾರವ್ಯಾಸ ಸಂಸ್ಕೃತವನ್ನು ಗೀರ್ವಾಣ ಭಾಷೆಯೆಂಬ ನಂಬಿಕೆಯಿಂದ ಅದರಲ್ಲಿನ ಕಾವ್ಯಗಳನ್ನು ಭಕ್ತಿಯಿಂದ ಕಾಣುವವನು; ಆದರೆ ಪ್ರಾಕೃತ ವಿಶೇಷವಾಗಿ ಜೈನ ಮತೀಯ ಗ್ರಂಥಗಳಿಂದ ತುಂಬಿದ್ದ ಭಾಷೆ; ಅದರಲ್ಲಿ ಕಾವ್ಯಗಳನ್ನೂ ಮತ್ತು ಅನಕ್ಷರಸ್ಥ ಕನ್ನಡಿಗರ ಬಾಯಿಮಾತಿನ ಕಾವ್ಯಗಳನ್ನೂ ಅವನು ಪರಿಗಣಿಸುತ್ತಿದ್ದನೇ ಎಂಬುದು ಅನುಮಾನಾಸ್ಪದ. ಹಾಗಾಗಿ ತನ್ನ ಕಾಲದ ಹೊತ್ತಿಗೆ ವಿದ್ಯಾವಂತ ಕನ್ನಡಿಗರಲ್ಲಿ ಜನಜನಿತವಾಗಿದ್ದ 'ಪಂಪ ರಾಮಾಯಣ' ಮತ್ತು 'ಕುಮುದೇಂದು ರಾಮಾಯಣ'ಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವನು ಈ ಮಾತನ್ನಾಡಿರಬೇಕು. ಕವಿರಾಜಪೂರ್ವ ಕನ್ನಡದಲ್ಲಿಯೂ ರಾಮಾಯಣಗಳಿದ್ದಿರಬೇಕೆಂದೂ, ಶ್ರೀವಿಜಯನೇ 'ರಘುವಂಶಪುರಾಣ'ವೆಂಬ ಜೈನ ರಾಮಾಯಣವನ್ನು ಬರೆದಿರಬಹುದೆಂದೂ ಕೆಲವು ವಿದ್ವಾಂಸರು ಊಹಿಸಿದರೂ, ಅವು ದೊರಕಿಲ್ಲ; ಪ್ರಾಯಶಃ ಕುಮಾರವ್ಯಾಸನ ಕಾಲಕ್ಕೂ ಸಿಕ್ಕಿಲ್ಲದಿರಬಹುದು. ಹೀಗಾಗಿ ಹನ್ನೊಂದನೇ ಶತಮಾನದ ಕೊನೆ ಮತ್ತು ಹನ್ನೆರಡನೆಯದರ ಮೊದಲ ಭಾಗದಲ್ಲಿದ್ದ ನಾಗಚಂದ್ರನ 'ಪಂಪ ರಾಮಾಯಣ'ವು ಜೈನ ಪರಂಪರೆಯ ರಾಮಾಯಣ ಕತೆಯನ್ನು ಪೂರ್ಣವಾಗಿ ಹೇಳುವ ಕೃತಿ; ಅಂದರೆ ಅದರಲ್ಲಿ ಶ್ರೀರಾಮನು ಕೇವಲಿಯಾಗಿ ನಿರ್ವಾಣ ಹೊಂದುವವರೆಗಿನ ಕತೆ ನಿರೂಪಣೆಗೊಂಡಿದೆ; ಆದರೆ ಹದಿಮೂರನೇ ಶತಮಾನದಲ್ಲಿದ್ದ ಕುಮುದೇಂದುವಿನ 'ಪಂಪ ರಾಮಾಯಣ'ವು

ಶ್ರೀರಾಮಪಟ್ಟಾಭಿಷೇಕದವರೆಗಿನ ಕತೆಯನ್ನು ಮಾತ್ರ ಹೇಳುತ್ತದೆ. ಅಲ್ಲದೆ ನಾಗಚಂದ್ರನದು ಮಾರ್ಗ ಕೃತಿ(ಚಂಪೂ)ಯಾದರೆ, ಕುಮುದೇಂದುವಿನದು (ನಾಲ್ಕು ಬಗೆಯ) ಷಟ್ಪದಿಗಳಲ್ಲಿ ರಚಿತವಾದ ದೇಸಿ ಕೃತಿ. ಈ ಎರಡೂ ಜೈನ ಪರಂಪರೆಯ ರಾಮಕಥಾನಕಗಳು; ಆದರೆ ಕುಮುದೇಂದುವು ನಾಗಚಂದ್ರನ ಗಾಢ ಪ್ರಭಾವಕ್ಕೆ ಒಳಗಾದವನು. ಅಂದರೆ ಕುಮಾರವ್ಯಾಸನ ಕಾಲದವರೆಗೆ ಕನ್ನಡದಲ್ಲಿದ್ದುದು ಜೈನ ರಾಮಾಯಣಗಳು. 'ಸ್ಮಾರ್ತ' ಸಾಮ್ರಾಜ್ಯದ ಉಚ್ಛ್ರಾಯಕಾಲದಲ್ಲಿದ್ದ ಕುಮಾರವ್ಯಾಸನಿಗೆ ವೈದಿಕೇತರ ರಾಮಾಯಣಗಳನ್ನು ರಚಿಸಿದ ಕವಿಗಳು ಭೂಮಿಗೆ ಭಾರವಾದವರು ಎಂಬ ಭಾವನೆಯಿದ್ದಿರಬಹುದು.

ಸಂಸ್ಕೃತ-ಪ್ರಾಕೃತಗಳಲ್ಲಿ ಹಲವು ಬಗೆಯ ರಾಮಾಯಣಗಳಿವೆ; ಆದಿಕಾವ್ಯವೆನಿಸಿದ 'ವಾಲ್ಮೀಕಿ ರಾಮಾಯಣ'ವಲ್ಲದೆ ವೈದಿಕ ಪರಂಪರೆಯಲ್ಲಿಯೇ 'ಅದ್ಭುತ ರಾಮಾಯಣ', 'ವಾಸಿಷ್ಠ ರಾಮಾಯಣ', 'ಅಧ್ಯಾತ್ಮ ರಾಮಾಯಣ', 'ಶೇಷರಾಮಾಯಣ' ಮುಂತಾದವುಗಳಿವೆ; ಆದರೆ ಇವುಗಳ ಕಾಲವನ್ನು ನಿಷ್ಕರ್ಷೆ ಮಾಡುವವರಿಲ್ಲ. ಅವುಗಳೊಡನೆ ಬೌದ್ಧ ಮತ್ತು ಜೈನ ಪರಂಪರೆಯ ಇನ್ನೂ ಅನೇಕ ರಾಮಾಯಣ ರೂಪಗಳು ದೊರೆಯುತ್ತವೆ. ಇವೆಲ್ಲಕ್ಕೂ ಮೂಲವಾಗಿ ಜನಪದರಲ್ಲಿ ಮೌಖಿಕ ರೂಪದಲ್ಲಿ ರಾಮ ಕತೆಯಿದ್ದಿರಬೇಕೆಂಬುದು ಜಾನಪದ ವಿದ್ವಾಂಸರ ಅಭಿಪ್ರಾಯ. ಶಿಷ್ಟ ಸಾಹಿತ್ಯದಲ್ಲಿ ವಾಲ್ಮೀಕಿಕೃತ ರಾಮಾಯಣ ಬಂದ ಮೇಲೆ ವಿವಿಧ ಧಾರ್ಮಿಕ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ, ಈಗಾಗಲೇ ಜನಮನವನ್ನು ಹೊಕ್ಕಿದ್ದ ರಾಮಕತೆಯನ್ನು ತಮ್ಮ ಉದ್ದೇಶಕ್ಕನುಗುಣವಾಗಿ ಬದಲಾಯಿಸಿಕೊಂಡು ಆಯಾ ಮತ ಪ್ರತಿಪಾದಕ ಪುರಾಣಕಾರರೂ ಕವಿಗಳೂ ಹೊಸ ಹೊಸ ಕಾವ್ಯಗಳನ್ನು ರಚಿಸಿರುವಂತೆ ತೋರುತ್ತದೆಂಬ ಅಭಿಪ್ರಾಯವಿದೆ. ವೈದಿಕ ಪರಂಪರೆಯಲ್ಲಿಯೇ 'ಅದ್ಭುತ ರಾಮಾಯಣ'ವು ಶಾಕ್ತ ಸಂಪ್ರದಾಯಕ್ಕನುಗುಣವಾದ ಕೃತಿ. ವೈದಿಕಮತಕ್ಕೆ ಪ್ರತಿಕ್ರಿಯಾತ್ಮಕವಾಗಿ ಮೂಡಿದ ಜೈನ-ಬೌದ್ಧ ಮತಗಳನ್ನು ಅನುಸರಿಸಿದ ಪುರಾಣಕಾರರೂ ಕವಿಗಳು ವೈದಿಕ ವಲಯದಲ್ಲಿ ಜನಪ್ರಿಯವಾಗಿದ್ದ ಪುರಾಣಗಳನ್ನೂ ಕಾವ್ಯಕತೆಗಳನ್ನೂ ತಮಗೆ ಅನುಕೂಲಕರವಾಗಿ ಬದಲಾಯಿಸಿಕೊಂಡು ಹೊಸ ಪುರಾಣಗಳನ್ನೂ ಕಾವ್ಯಗಳನ್ನೂ ರಚಿಸಿರಬಹುದು. ಇದನ್ನು ವಿವಿಧ ಮತಗಳು ವೈದಿಕ ಪರಂಪರೆಗೆ ತೋರಿಸಿದ ಪುರಾಣಾತ್ಮಕ-ಕಾವ್ಯಾತ್ಮಕ ಪ್ರತಿಕ್ರಿಯೆ ಎಂದು ಕರೆಯಬಹುದೇನೋ. ಬೌದ್ಧ ಪರಂಪರೆಯ ರಾಮಾಯಣಗಳಲ್ಲಿ ಆ ಮತಪ್ರಕ್ರಿಯೆಗಳು ಪ್ರವೇಶಿಸಿವೆಯಲ್ಲದೆ, 'ಜಾತಕ ಕತೆ'ಗಳಲ್ಲಿಯೂ ರಾಮಸಂಬಂಧೀ ಕತೆಗಳು ಮೂಡಿವೆ. 'ದಶರಥ ಜಾತಕ' ಎಂಬುದೇ ಒಂದಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಹಾಗೆಯೇ 'ಸಾಮ ಜಾತಕ', 'ವೆಸ್ಸಂತರ ಜಾತಕ' 'ಸಂಬುಲ ಜಾತಕ' ಮುಂತಾದವನ್ನು ಹೆಸರಿಸಬಹುದು. ಶೂರ್ಪನಖಿಯು ತನ್ನ ಕಿವಿಮೂಗುಗಳನ್ನು ಕಳೆದುಕೊಂಡ ಪ್ರಸಂಗವನ್ನು ಹೋಲುವ ಕತೆಯು 'ಸಂಬುಲ ಜಾತಕ'ದಲ್ಲಿ ಬರುತ್ತದಂತೆ. ಈ ಜಾತಕ ಕತೆಗಳು

ವಾಲ್ಮೀಕಿ ರಾಮಾಯಣಕ್ಕಿಂತ ಪ್ರಾಚೀನವೆಂದು ಕೆಲವರು ವಿದ್ವಾಂಸರು ವಾದಿಸುತ್ತಾರೆ. ಅಲ್ಲದೆ, ಕನ್ನಡದಲ್ಲಿ 'ರಾಮಕಥಾವತಾರ' ಎಂಬ ಜೈನ ಪರಂಪರೆಯ ಚಂಪೂ ರಾಮಾಯಣವೊಂದನ್ನು ಬರೆದಿರುವ ಹದಿನೆಂಟನೆಯ ಶತಮಾನದ ದೇವಚಂದ್ರ ಎಂಬ ಕವಿಯು ಜೈನ ರಾಮಾಯಣ ಪರಂಪರೆಯ ಬಗ್ಗೆ ಕಾವ್ಯಾರಂಭದಲ್ಲಿ ಹೇಳಿರುವ ಮಾತುಗಳು ಕುತೂಹಲವುಂಟುಮಾಡುತ್ತದೆ: "ಈ ರಾಮಕಥೆಯಂ ಮುನ್ನ ಆದಿದೇವನ ಸಮವಸರಣದೊಳ್ ಆದಿಚಕ್ರಿಯಪ್ಪ ಭರತೇಶ್ವರಂಗಂ ಪುರುಪರಮೇಶ್ವರಂ ಮೃದುಮಧುರಶ್ರಾವ್ಯನವ್ಯದಿವ್ಯಭಾಷೆಯಿಂ ನಿರೂಪಿಸಿದುದು ಪರಂಪರಾತೀರ್ಥ ಸಂತಾನದಿಂ ಬರೆ ಪಶ್ಚಿಮತೀರ್ಥಂಕರರಪ್ಪ ಶ್ರೀ ವೀರವರ್ಧಮಾನಸ್ವಾಮಿ ಸರ್ವಭಾಷಾಸ್ವಭಾವದಿಂ ಶ್ರೇಣಿಕ ಮಹಾಮಂಡಲೇಶ್ವರಂಗಱಿಯೆ ಪೇೞ್ವುದುಂ, ಅದು ಅನುಕ್ರಮದಿಂ ಗುರುಪರಂಪರೆಯಿಂ ವ್ಯಕ್ತಮಾಗುತ್ತುಂ ಬರೆ, ಕೂಚಿ ಭಟ್ಟಾರಕರುಂ ನಂದಿಮುನಿವರವರರುಂ ಕವಿಪರಮೇಷ್ಟಿಗಳುಂ ರವಿಷೇಣಾಚಾರ್ಯರುಂ ವೀರಸೇನಸಿದ್ಧರುಂ ಪದ್ಮನಂದೀಶರುಂ ಗುಣಭದ್ರರುಂ ಸಕಲಕೀರ್ತಿಗಳೆಂದಿವರಾದಿಯಾಗಿ ಪೇೞ್ದು" ಕನ್ನಡ ಕವಿಗಳು ಮುಂದುವರೆಸಿದರು ಎನ್ನುತ್ತಾನೆ. ಎಂದರೆ, ಈ ಐತಿಹ್ಯದ ಪ್ರಕಾರ ರಾಮಾಯಣದ ಕತೆಯನ್ನು ಮೊದಲು ಹೇಳಿದವನು ಆದಿತೀರ್ಥಂಕರನಾದ ಋಷಭದೇವನೇ. ಅದೇ ಕತೆಯನ್ನು ಪರಂಪರೆಯಿಂದ ಅರಿತಿದ್ದ ಇಪ್ಪತ್ತನಾಲ್ಕನೆಯ ತೀರ್ಥಂಕರನಾದ ವರ್ಧಮಾನ (ಮಹಾವೀರ)ನು ಶ್ರೇಣಿಕ ಮಹಾರಾಜನಿಗೆ ಹೇಳಿದನು. ಮೊದಲ ತೀರ್ಥಂಕರನು ಪುರಾಣಕಲ್ಪನೆಯೋ ಅಥವಾ ಐತಿಹಾಸಿಕ ವ್ಯಕ್ತಿಯೋ ನಮಗೆ ತಿಳಿಯದು. ಇಪ್ಪತ್ತನಾಲ್ಕನೆಯ ತೀರ್ಥಂಕರ ಮಾತ್ರ ಐತಿಹಾಸಿಕ ವ್ಯಕ್ತಿ; ಅವನ ಕಾಲ ಕ್ರಿಸ್ತಪೂರ್ವ ಆರನೆಯ ಶತಮಾನ. ವಾಲ್ಮೀಕಿ ರಾಮಾಯಣವು ಅದಕ್ಕಿಂತ ಹಿಂದಿನದೇ? ಹಿಂದಾಗಲೇ ನೋಡಿರುವಂತೆ, ರಾಮಾಯಣ ಕತೆಯು ಬರುವ ಬೌದ್ಧ ಸಂಪ್ರದಾಯದ 'ಜಾತಕ ಕತೆಗಳು' ಹಲವಾರು, ವಿದ್ವಾಂಸರ ಪ್ರಕಾರ, ವಾಲ್ಮೀಕಿ ರಾಮಾಯಣಕ್ಕಿಂತ ಹಿಂದಿನವು; ಹೀಗಾಗಿ ಯಾವ ರಾಮಾಯಣ ಸಂಪ್ರದಾಯವು ಹೆಚ್ಚು ಪ್ರಾಚೀನವಾದುದು ಎಂದು ನಿರ್ಧರಿಸುವುದು ಕಷ್ಟ.

ಈಗ ನೇರವಾಗಿ ಜೈನ ರಾಮಾಯಣ ಪರಂಪರೆಯ ಚರ್ಚೆಗೆ ಮರಳೋಣ. ನಮಗೆ ದೊರೆತಿರುವ ಜೈನ ರಾಮಾಯಣಗಳಲ್ಲೆಲ್ಲ ವಿಮಲಸೂರಿಯು ಬರೆದ ಪ್ರಾಕೃತ ಭಾಷೆಯ 'ಪಉಮಚರಿಅ'ವೇ ಅತ್ಯಂತ ಪ್ರಾಚೀನವಾದದ್ದು. ತಾನು ಆ ಕಾವ್ಯವನ್ನು ಬರೆದದ್ದು ವರ್ಧಮಾನನು ನಿರ್ವಾಣ ಪಡೆದ ಐನೂರ ಮೂವತ್ತು ವರ್ಷಗಳ ನಂತರ ಎಂದು ಕವಿಯೇ ಹೇಳಿಕೊಂಡಿದ್ದಾನೆ. ವರ್ಧಮಾನನ ನಿರ್ವಾಣ ವರ್ಷ ಕ್ರಿ.ಪೂ. ೫೨೭; ಹೀಗಾಗಿ ವಿಮಲಸೂರಿಯ 'ಪಉಮಚರಿಅ' ರಚನೆಗೊಂಡದ್ದು ಕ್ರಿ.ಶ. ೩ನೆಯ ಇಸವಿಯಲ್ಲಿ ಎಂದಂತಾಯಿತು. ಹೀಗಾಗಿ ಜೈನರಾಮಾಯಣ ಪರಂಪರೆಯು ಎರಡು

ಸಾವಿರ ವರ್ಷಗಳಷ್ಟು ದೀರ್ಘವಾದುದು. ಅವನು ಆ ಕಾಲಕ್ಕಾಗಲೇ ನೆಲೆಗೊಂಡಿದ್ದ ವಾಲ್ಮೀಕಿ ರಾಮಾಯಣವನ್ನು ತನ್ನ ಜೈನ ಆಶಯಗಳಿಗೆ ಅನುಗುಣವಾಗಿ ಮಾರ್ಪಡಿಸಿಕೊಂಡು ಬರೆದನೋ, ಇಲ್ಲ ದೇವಚಂದ್ರನು ಹೇಳುವಂತೆ ಅದಕ್ಕೆ ಇನ್ನೂ ಹಿಂದೆ ಜೈನ ಪರಂಪರೆಗಳಿದ್ದು ಅದರಲ್ಲಿ ಯಾವುದನ್ನಾದರೂ ಒಂದನ್ನು ಅನುಸರಿಸಿ ಬರೆದನೋ ಅಥವಾ ತನ್ನ ಕಾಲದಲ್ಲಿ ಮೌಖಿಕವಾಗಿದ್ದ ರಾಮಕತೆಯೊಂದನ್ನು ಆಧರಿಸಿ ಬರೆದನೋ ಹೇಳುವುದು ಕಷ್ಟ.

ಸದ್ಯಕ್ಕೆ ವಿಮಲಸೂರಿಯ 'ಪಉಮಚರಿಅ' ಜೈನ ರಾಮಾಯಣಗಳಲ್ಲಿ ಅತ್ಯಂತ ಪ್ರಾಚೀನ ಕಾವ್ಯವೆಂದು ಭಾವಿಸಬಹುದು. ಇದನ್ನು ಅನುಸರಿಸಿ ಮುಂದೆ ಪ್ರಾಕೃತ–ಸಂಸ್ಕೃತ–ಕನ್ನಡ ಭಾಷೆಗಳಲ್ಲಿ ಅನೇಕ ಕಾವ್ಯಗಳು ರಚಿತವಾದವು. ಕ್ರಿ.ಶ. ಹತ್ತನೆಯ ಶತಮಾನಕ್ಕಿಂತ ಹಿಂದಿದ್ದ ಚೌಮುಹ ಕವಿಯ 'ಪಉಪಮರಿಅ' ಹಾಗೂ ಸ್ವಯಂಭುದೇವ–ತ್ರಿಭುವನ ಸ್ವಯಂಭು–ಜನಕಿತ್ತಿ ಭಟ್ಟಾರಕ ಎಂಬ ಮೂವರು ಕವಿಗಳು ಕ್ರಿ.ಶ. ಏಳರಿಂದ ಹತ್ತನೆಯ ಶತಮಾನಗಳ ಅವಧಿಯಲ್ಲಿ ಕ್ರಮವಾಗಿ ಬರೆದು ಮುಗಿಸಿದ ಮತ್ತೊಂದು 'ಪಉಮಚರಿಅ' ಇವುಗಳು ಪ್ರಾಕೃತ ಭಾಷೆಯಲ್ಲಿವೆ; ಕ್ರಿ.ಶ. ಏಳನೆಯ ಶತಮಾನದಲ್ಲಿ ರಚಿತವಾದ ರವಿಷೇಣನ 'ಪದ್ಮಪುರಾಣಮ್', ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿದ್ದ ಹೇಮಚಂದ್ರ ಕವಿಯ 'ತ್ರಿಷಷ್ಟಿಶಲಾಕಾಪುರುಷ ಚರಿತ್ರ'ದ ಭಾಗವಾಗಿ ಬರುವ 'ಜೈನರಾಮಾಯಣ' ಹಾಗೂ ಕ್ರಿ.ಶ. ಹದಿನಾರನೆಯ ಶತಮಾನದ ದೇವವಿಜಯಗಣಿಯ 'ರಾಮಚರಿತ'ಗಳು ಸಂಸ್ಕೃತದಲ್ಲಿವೆ; ಕ್ರಿ.ಶ. ಹನ್ನೊಂದು–ಹನ್ನೆರಡನೆಯ ಶತಮಾನದಲ್ಲಿ ರಚಿತವಾದ ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ' ಅಥವಾ 'ಪಂಪ ರಾಮಾಯಣ' ಎಂಬ ಚಂಪೂಕಾವ್ಯ, ಹದಿಮೂರನೆಯ ಶತಮಾನದಲ್ಲಿದ್ದ ಕುಮುದೇಂದು ಮುನಿಯ – ನಾಲ್ಕು ವಿವಿಧ ಬಗೆಯ ಷಟ್ಪದಿಗಳಲ್ಲಿ ರಚಿತವಾದ – 'ಕುಮುದೇಂದು ರಾಮಾಯಣ', ಕ್ರಿ.ಶ. ಹದಿನಾರನೆಯ ಶತಮಾನದಲ್ಲಿದ್ದ ದೇವಪ್ಪ ಕವಿಯ 'ರಾಮವಿಜಯಚರಿತೆ' ಎಂಬ ಸಾಂಗತ್ಯ ಕಾವ್ಯ, ಹದಿನೆಂಟನೆಯ ಶತಮಾನದ ದೇವಚಂದ್ರನ ಚಂಪೂಕಾವ್ಯವಾದ 'ರಾಮಕಥಾವತಾರ' ಹಾಗೂ ಕ್ರಿ.ಶ. ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿದ್ದ ಚಂದ್ರಸಾಗರವರ್ಣಿಯ 'ಜಿನ ರಾಮಾಯಣ' ಎಂಬ ಭಾಮಿನೀಷಟ್ಪದಿಯ ಕಾವ್ಯ ಇವು ಕನ್ನಡದಲ್ಲಿವೆ.

ಕನ್ನಡದಲ್ಲಿ ದೊರಕಿರುವ ರಾಮಾಯಣ ಕಾವ್ಯಗಳಲ್ಲೆಲ್ಲ 'ಪಂಪರಾಮಾಯಣ'ವೇ ಅತ್ಯಂತ ಪ್ರಾಚೀನವಾದದ್ದು. ಇದನ್ನು ಬರೆದವನು ನಾಗಚಂದ್ರ; ಇವನು ಹನ್ನೊಂದನೆಯ ಶತಮಾನದ ಉತ್ತರಾರ್ಧ ಹಾಗೂ ಹನ್ನೆರಡನೆಯ ಶತಮಾನದ ಮೊದಲರ್ಧದಲ್ಲಿದ್ದ ಕವಿ. ಅವನು ವಿಜಯಪುರದವನು (ಈಗಿನ ವಿಜಾಪುರ). ಅಲ್ಲಿ ಅವನು ಮಲ್ಲಿಜಿನೇಂದ್ರ ಬಸದಿಯನ್ನು ಕಟ್ಟಿಸಿದಂತೆ ಅವನೇ ಹೇಳಿಕೊಂಡಿದ್ದಾನೆ. ನಾಗಚಂದ್ರನು ಚಾಲುಕ್ಯ

ಚಕ್ರವರ್ತಿಯಾದ ನಾಲ್ವಡಿ ಸೋಮೇಶ್ವರ(ಕ್ರಿ.ಶ.೧೧೦೦-೧೧೨೬)ನ ಆಶ್ರಯದಲ್ಲಿದ್ದನೆಂದು ಕೆಲವು ವಿದ್ವಾಂಸರು ಊಹಿಸಿದರೂ ಅದಕ್ಕೆ ಪ್ರಬಲ ಆಧಾರಗಳಿಲ್ಲ. ಈತನ ಗುರುಗಳು ಬಾಲಚಂದ್ರ ಮೇಘಚಂದ್ರ ಯತಿಗಳು. ನಾಗಚಂದ್ರನಿಗೆ 'ಭಾರತೀಕರ್ಣಪೂರ', 'ಕವಿತಾಮನೋಹರ', 'ಸಾಹಿತ್ಯ ವಿದ್ಯಾಧರ', 'ಚತುರಕವಿ', 'ಜನಸ್ಥಾನರತ್ನಪ್ರದೀಪ', 'ಸಾಹಿತ್ಯ ಸರ್ವಜ್ಞ', 'ಸೂಕ್ತಿಮುಕ್ತಾವತಂಸ' ಮುಂತಾದ ಬಿರುದುಗಳಿದ್ದುವು. ಇವನು ಎರಡು ಕಾವ್ಯಗಳನ್ನು ಬರೆದಿರುವುದು ಸ್ಪಷ್ಟವಾಗಿದೆ. ಅವೆಂದರೆ (೧) 'ಮಲ್ಲಿನಾಥಪುರಾಣ', ಹತ್ತೊಂಬತ್ತನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತೆಯಾದ ಈ ಕಾವ್ಯವು ಹದಿನಾಲ್ಕು ಆಶ್ವಾಸಗಳ ದೀರ್ಘ ಕಾವ್ಯ. ಇದರಲ್ಲಿ ಸಾಂಪ್ರದಾಯಕವಾದ ಅಷ್ಟಾದಶ ವರ್ಣನೆಗಳಿವೆ. ಆದರೆ ಭವಾವಳಿಯ ಕಥನವಿಲ್ಲ; (೨) 'ಪಂಪರಾಮಾಯಣ' ಎಂದು ಪ್ರಸಿದ್ಧವಾಗಿರುವ 'ರಾಮಚಂದ್ರಚರಿತಪುರಾಣ'; ಇದು ಜೈನ ಪರಂಪರೆಯಲ್ಲಿ ರಾಮಕತೆಯನ್ನು ನಿರೂಪಿಸುವ ಹಾಗೂ ಕೆಲವು ಕಾರಣಗಳಿಂದ ಕನ್ನಡ ಸಾಹಿತ್ಯದಲ್ಲಿ ಗಣ್ಯಸ್ಥಾನವನ್ನು ಪಡೆದಿರುವ ಹದಿನಾರು ಆಶ್ವಾಸಗಳ ಕಾವ್ಯ. ಇವಲ್ಲದೆ, ಈ ಕವಿಯು 'ಜಿನಾಕ್ಷರಮಾಲೆ' ಹಾಗೂ 'ಜಿನಮುನಿತನಯ' ಎಂಬ ಗ್ರಂಥಗಳನ್ನು ಬರೆದಿರುವನೆಂದು ಹತ್ತೊಂಬತ್ತನೆಯ ಶತಮಾನದ ದೇವಚಂದ್ರನೆಂಬ ಕವಿ ಹೇಳಿದ್ದರೂ ಅವು ಉಪಲಬ್ಧವಿಲ್ಲ.

ನಾಗಚಂದ್ರನು ಬರೆದಿರುವ ರಾಮಾಯಣವು ವಿಮಲಸೂರಿಯ 'ಪಉಮಚರಿಅ' ಪರಂಪರೆಗೆ ಸೇರಿದುದು. ಇಲ್ಲಿ ಚಿತ್ರಿತವಾಗಿರುವುದು ಜೈನಪರಂಪರೆಯ 'ಉದಾತ್ತರಾಘವ'ನ ಕತೆ. ವಾಲ್ಮೀಕಿ ರಾಮಾಯಣಕ್ಕೂ ಜೈನರಾಮಾಯಣ ಪರಂಪರೆಗಳಿಗೂ ಅನೇಕ ವ್ಯತ್ಯಾಸಗಳಿವೆ. ಇಲ್ಲಿನ ರಾಮನು ಜೈನರ ತ್ರಿಷಷ್ಠಿಶಲಾಕಾಪುರುಷರಲ್ಲಿ ಒಬ್ಬ; ಅವನು ಮಾತ್ರವಲ್ಲ, ಲಕ್ಷ್ಮಣ ಹಾಗೂ ರಾವಣರು ಸಹ. ರಾಮನು ಬಲದೇವನಾದರೆ, ಲಕ್ಷ್ಮಣನು ವಾಸುದೇವ ಹಾಗೂ ರಾವಣನು ಪ್ರತಿವಾಸುದೇವ. ಮುಖ್ಯವಾಗಿ ವೈದಿಕ ಪರಂಪರೆಯ ಯಜ್ಞಯಾಗಾದಿಗಳ ಪ್ರತಿಭಟನೆಯಾಗಿ ಜೈನರಾಮಾಯಣವು ರೂಪುಗೊಂಡಿರಬೇಕು. ಇಲ್ಲಿ ಪುತ್ರಕಾಮೇಷ್ಟಿ ಯಾಗದ ಪ್ರಸ್ತಾಪವಿಲ್ಲ. ವಿಮಲಸೂರಿಯ 'ಪಉಮಚರಿಅ'ದಲ್ಲಿ ಕಥಾನಿರೂಪಕರಾದ ಗೌತಮ ಗಣಧರರು ಕತೆಯನ್ನು ಕೇಳುತ್ತಿರುವ ಶ್ರೇಣಿಕ ಮಹಾರಾಜನಿಗೆ ಹೀಗೆ ಹೇಳುತ್ತಾರಂತೆ: "ಕೇವಲಿಗಳು ಹೇಳಿದ್ದನ್ನು ನಿನಗೆ ಹೇಳುತ್ತೇನೆ. ರಾವಣನು ರಾಕ್ಷಸನಲ್ಲ, ಮಾಂಸಾಹಾರಿಯಲ್ಲ, ನರಭಕ್ಷಕನಲ್ಲ. ಹೀಗೆ ಕುವಾದಿಗಳೂ ಕುಕವಿಗಳೂ ಮೂಢರೂ ಹೇಳುವುದೆಲ್ಲ ಸುಳ್ಳು". ಇದು ವಾಲ್ಮೀಕಿ ರಾಮಾಯಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ ಮಾತಾಗಿ ತೋರುತ್ತದೆ (ಅಂದರೆ 'ಪಉಮಚರಿಅ?' ವಾಲ್ಮೀಕಿ ರಾಮಾಯಣಕ್ಕಿಂತ ಈಚಿನದು ಎಂದಂತಾಯಿತಲ್ಲ! ಅಥವಾ ಜೈನ ರಾಮಾಯಣವೇ ಹೆಚ್ಚು ಪ್ರಾಚೀನವಾಗಿದ್ದು, ಆನಂತರ ವಾಲ್ಮೀಕಿ ರಾಮಾಯಣವು ಬಂದಮೇಲೆ ಗೌತಮ ಗಣಧರರು ಈ ಮಾತನ್ನಾಡಿರಬಹುದೆಂದೂ ವಾದಿಸಬಹುದು;

ಅಥವಾ ಇದು ಆಗ ಜನರ ಬಾಯಿಮಾತಿನಲ್ಲಿದ್ದ ರಾಮಾಯಣ ಕತೆಯ ಸ್ವರೂಪವೂ ಆಗಿದ್ದಿರಬಹುದು). ವಾಲ್ಮೀಕಿ ರಾಮಾಯಣ ಹಾಗೂ ಜೈನರಾಮಾಯಣಗಳ ನಡುವೆ ಕಥಾವಿನ್ಯಾಸದಲ್ಲಿಯೂ ಅನೇಕ ವ್ಯತ್ಯಾಸಗಳಿವೆ; ಅವುಗಳಲ್ಲಿ ಮುಖ್ಯವಾದವು ಇವು: ಇಲ್ಲಿ ದಶರಥನಿಗೆ ಅಪರಾಜಿತೆ, ಸುಮಿತ್ರೆ, ಸುಪ್ರಭೆ ಮತ್ತು ಕೈಕೆ ಎಂಬ ನಾಲ್ವರು ಹೆಂಡತಿಯರು; ಇವರಿಂದ ದಶರಥನಿಗೆ ಕ್ರಮವಾಗಿ ರಾಮ, ಲಕ್ಷ್ಮಣ, ಶತ್ರುಘ್ನ ಮತ್ತು ಭರತ ಎಂಬ ನಾಲ್ವರು ಮಕ್ಕಳಾದರು; ಎಂಟನೆಯ ವಾಸುದೇವನಾದ ಲಕ್ಷ್ಮಣನೇ ಇಲ್ಲಿನ ನಿಜವಾದ ಕಥಾನಾಯಕ, ಅವನೇ ರಾವಣ ಸಂಹಾರ ಮಾಡುವವನು; ಇಲ್ಲಿ ವಿಶ್ವಾಮಿತ್ರನ ಪ್ರಸ್ತಾಪವಿಲ್ಲ; ಸೀತೆಯು ಅಯೋನಿಜೆಯಲ್ಲ, ಜನಕನ ಪುತ್ರಿ, ಖಚರಪತಿಯಾದ ಇಂದುಗತಿಯ ಸಾಕುಮಗನಾದ ಪ್ರಭಾಮಂಡಲನ ತಂಗಿ; ರಾಮನು ವಜ್ರಾವರ್ತ ಎಂಬ ಬಿಲ್ಲನ್ನು ಬಗ್ಗಿಸಿ ಸೀತೆಯನ್ನು ಪಡೆದರೆ, ಲಕ್ಷ್ಮಣನು ಸಾಗರಾವರ್ತಚಾಪವನ್ನು ಬಾಗಿಸಿ ಚಂದ್ರಧ್ವಜನ ಇಬ್ಬರು ಪುತ್ರಿಯರನ್ನು ಮದುವೆಯಾದ ರಾಮ-ಲಕ್ಷ್ಮಣರು ಇಲ್ಲಿ ಏಕಪತ್ನೀಸಹಿತರಲ್ಲ; ರಾಮನು ಸುಗ್ರೀವನ ಮಗಳಂದಿರು ಹಾಗೂ ದಧಿಮುಖನಗರದ ರಾಜಪುತ್ರಿಯರನ್ನೂ ಮದುವೆಯಾಗಿದ್ದ; ಹನುಮಂತನು ಇಲ್ಲಿ ಬ್ರಹ್ಮಚಾರಿಯಲ್ಲ, ರಾವಣನ ತಂಗಿ ಚಂದ್ರನಖಿಯ ಮಗಳಾದ ಅನಂಗಪುಷ್ಪೆಯನ್ನು ಮದುವೆಯಾಗಿದ್ದ; ಇಲ್ಲಿ ಕಾಂಚನಮೃಗದ ಪ್ರಸಂಗವಿಲ್ಲ. ಆದರೆ ಯುದ್ಧನಿರತನಾಗಿದ್ದ ಲಕ್ಷ್ಮಣನ ಧ್ವನಿಯನ್ನು ಅನುಕರಿಸಿ ಅವಲೋಕಿನೀವಿದ್ಯೆಯು ಮಾಡಿದ ಧ್ವನಿಯಿಂದ ರಾಮನು ಸೀತೆಯಿಂದ ದೂರ ಹೋದಾಗ ರಾವಣ ಸೀತಾಪಹರಣ ಮಾಡುತ್ತಾನೆ; ಹನುಮಂತ-ಸುಗ್ರೀವ ಮುಂತಾದವರು ಕಪಿಗಳಲ್ಲ. ಕಪಿಧ್ವಜರಾದ ಖೇಚರರು; ಹನುಮಂತ ಸಮುದ್ರವನ್ನು ಹಾರುವುದು ಆಕಾಶಗಾಮಿನೀ ವಿದ್ಯೆಯ ಸಹಾಯದಿಂದ; ರಾವಣನು ಸುಗ್ರೀವನ ತಂಗಿ ಶ್ರೀಪ್ರಭೆಯನ್ನು ಮದುವೆಯಾಗಿದ್ದ; ಸೀತೆಯು ಲವಕುಶರ ಲಗ್ನವಾದ ನಂತರ ದೀಕ್ಷೆಯನ್ನು ಪಡೆಯುತ್ತಾಳೆ; ಆನಂತರ ರಾಮನೂ ಜಿನದೀಕ್ಷೆ ಪಡೆದು ಕೇವಲ ಜ್ಞಾನಿಯಾಗಿ ಪರಿನಿರ್ವಾಣವನ್ನು ಹೊಂದುತ್ತಾನೆ. ಇವುಗಳಲ್ಲದೆ ಇನ್ನೂ ಅನೇಕ ವ್ಯತ್ಯಾಸಗಳಿವೆ.

ಈಗ 'ಪಂಪರಾಮಾಯಣ'ದ ಕಥಾಸಾರವನ್ನು ಗಮನಿಸಬಹುದು. ಪಾತಾಳ-ಮಧ್ಯ-ಊರ್ಧ್ವ ಲೋಕಗಳಲ್ಲಿ ಮಧ್ಯಲೋಕದ ನಟ್ಟನಡುವೆ ಜಿನನ ಜನ್ಮೋತ್ಸವದ ಗದ್ದುಗೆಯಾದ ಮೇರು ಪರ್ವತವಿದೆ; ಅದರ ದಕ್ಷಿಣದಲ್ಲಿ ಭರತಕ್ಷೇತ್ರದ ಆರ್ಯಾಖಂಡವಿದೆ. ಅದರಲ್ಲಿ ಗಂಗಾ ಸಿಂಧು ಮುಂತಾದ ಪವಿತ್ರ ನದಿಗಳೂ ರಜತ ಪರ್ವತವೂ ಇವೆ. ಕಾಲಾನುಗತವಾಗಿ ಅನೇಕ ಕಲ್ಪಗಳು ಕಳೆದ ನಂತರ ಅಲ್ಲಿ ಹದಿನಾಲ್ಕು ಮಂದಿ ಮನುಗಳು ಹುಟ್ಟಿದರು. ಅವರಲ್ಲಿ ಕೊನೆಯವನು ನಾಭಿರಾಜ. ಅವನು ಜನರಿಗೆ ಜೀವನೋಪಾಯವಾಗಿ ಕೃಷಿಯನ್ನು ಕಲಿಸಿದ್ದಲ್ಲದೆ, ವಿಶೇಷವಾಗಿ ಕಬ್ಬನ್ನು ಬೆಳೆಯುವ ಹಾಗೂ ಅದರ ರಸವನ್ನು ಹಿಂಡುವ ಪರಿಯನ್ನು ತಿಳಿಸಿದನು; ಅದರಿಂದ ಅವನ ಕುಲಕ್ಕೆ ಇಕ್ಷ್ವಾಕುವಂಶವೆಂದು

ಹೆಸರಾಯಿತು. ಆ ಕುಲದಲ್ಲಿ ಮುಂದೆ ದಿಲೀಪ, ವಿಜಯರಥ, ಪುರಂದರ, ಕೀರ್ತಿಧರ, ಸುಕೋಶಲ, ಹಿರಣ್ಯಗರ್ಭ, ಸೌಂದರ, ಸಿಂಹರಥ, ಬ್ರಹ್ಮರಥ, ಚತುರ್ಮುಖ, ಹೇಮರಥ, ಇಂದುರಥ, ಭಾನುರಥ, ಮಯ, ಮಾಂಧಾತ, ವೀರಸೇನ, ಕಮಲಬಂಧು, ವಸಂತತಿಲಕ, ಕುಬೇರದತ್ತ, ದಮನ, ದ್ವಿಪರಥ, ಹಿರಣ್ಯಕಶಿಪು, ಅರ್ಕರಥ, ದಿಲೀಪ, ರಘುವೀರ ಮೊದಲಾದ ರಾಜರು ಕೌಶಲ ದೇಶವನ್ನಾಳಿದರು. ಅದರ ರಾಜಧಾನಿ ಅಯೋಧ್ಯೆ ಅಥವಾ ಸಾಕೇತಪುರ. ಅವರಲ್ಲಿ ಅನರಣ್ಯನು ತನ್ನ ಇಬ್ಬರು ಮಕ್ಕಳಾದ ಅನಂತರಥ ಮತ್ತು ದಶರಥರೊಡನೆ ಸುಖದಿಂದಿದ್ದನು. ತನ್ನ ಗೆಳೆಯ ಸಹಸ್ರಕಿರಣನು ದೀಕ್ಷೆ ಕೈಗೊಂಡನೆಂದು ಕೇಳಿದ ಅನರಣ್ಯನು ತಾನೂ ದೀಕ್ಷೆ ಪಡೆಯಲು ನಿರ್ಧರಿಸಿದನು. ತನ್ನ ಹಿರಿಯ ಮಗ ಅನಂತರಥನಿಗೆ ಪಟ್ಟಗಟ್ಟಲು ಆಲೋಚಿಸಿದಾಗ, ಅವನೂ ತಂದೆಯೊಡನೆ ದೀಕ್ಷೆಯನ್ನು ಹೊಂದಲು ನಿರ್ಧರಿಸಿದ್ದರಿಂದ ಎರಡನೆಯ ಮಗನಾದ ದಶರಥನಿಗೆ ರಾಜ್ಯವಿತ್ತು ತಂದೆ-ಮಗ ಅಭಯಘೋಷರೆಂಬ ಮುನಿಗಳ ಬಳಿ ದೀಕ್ಷೆ ಪಡೆದರು.

ದಶರಥನಿಗೆ ಮೂವರು ಹೆಂಡತಿಯರು: ಅಪರಾಜಿತೆ, ಸುಮಿತ್ರೆ ಮತ್ತು ಸುಪ್ರಭೆ. ಒಮ್ಮೆ ನಾರದನು ಅಯೋಧ್ಯೆಗೆ ಬಂದು, ಜಾನಕಿಯ ದೆಸೆಯಿಂದ ದಶರಥನ ಮಗನು ದಶವದನನನ್ನು ಕೊಲ್ಲುವನು ಎಂಬ ವಿಚಾರವನ್ನು ಸಾಗರಬುದ್ಧಿಯೆಂಬುವವನಿಂದ ತಿಳಿದ ರಾವಣನು ದಶರಥ-ಜನಕರನ್ನು ಕೊಲ್ಲುವುದಾಗಿ ಪಣತೊಟ್ಟಿದ್ದಾನೆ ಎಂಬ ವಿಷಯವನ್ನು ದಶರಥನಿಗೆ ತಿಳಿಸಿ, ಈ ವಿಚಾರವನ್ನು ಜನಕನಿಗೂ ತಿಳಿಸಲು ಹೊರಟ. ಸಮುದ್ರಹೃದಯನೆಂಬ ಮಂತ್ರಿಯು ಗೌಪ್ಯವಾಗಿ ದಶರಥ-ಜನಕರ ಅರಗಿನ ಪ್ರತಿಮೆಗಳನ್ನು ಸೃಷ್ಟಿಸಿ ಅವರವರ ಜಾಗಗಳಲ್ಲಿಟ್ಟ. ರಾಜರಿಬ್ಬರೂ ಕಾಲವಂಚನೆ ಮಾಡಲು ಮೈಮರೆಸಿಕೊಂಡರು. ಅವರಿಬ್ಬರೂ ಛದ್ಮವೇಷಧಾರಿಗಳಾಗಿ ಸುತ್ತಾಡುತ್ತ ಮಂಗಳಪುರಕ್ಕೆ ಬಂದರು. ಅವರು ಬರುವ ಹೊತ್ತಿಗೆ ಅಲ್ಲಿನ ರಾಜ ಶುಭಮತಿಯು ತನ್ನ ಮಗಳಾದ ಕೈಕೆಯ ಸ್ವಯಂವರವನ್ನೇರ್ಪಡಿಸಿದ್ದ. ಕೈಕೆಯು ದಶರಥನನ್ನು ವರಿಸಿದಳು. ಒಬ್ಬ ದೇಶಾಂತರಿಯನ್ನು ರಾಜಕುವರಿಯು ವರಿಸಿದ್ದನ್ನು ಕಂಡು ಸ್ವಯಂವರಕ್ಕೆಂದು ನೆರೆದಿದ್ದ ರಾಜಕುಮಾರರೆಲ್ಲ ದಶರಥನ ಮೇಲೇರಿ ಬಂದರು. ತಾನು ಅವರೊಡನೆ ಯುದ್ಧ ಮಾಡುವುದಾಗಿಯೂ ದಶರಥ-ಕೈಕೆಯರು ತಪ್ಪಿಸಿಕೊಳ್ಳಬೇಕೆಂದೂ ಶುಭಮತಿಯು ಸೂಚಿಸಿದಾಗ ದಶರಥನು ಅದಕ್ಕೊಪ್ಪದೆ ತಾನೇ ಕೈಕೆಯೊಡನೆ ಯುದ್ಧಕ್ಕೆ ಹೊರಟ. ಒಂದು ಹಂತದಲ್ಲಿ ದಶರಥನ ಸಾರಥಿ ಬಿದ್ದು ರಥವು ಶಿಥಿಲಗೊಂಡಾಗ ಕೈಕೆಯು ಅದನ್ನು ಸರಿಪಡಿಸಿ ಸಾರಥಿಯ ಕೆಲಸವನ್ನು ನಿರ್ವಹಿಸಿದಳು. ಇದರಿಂದ ದಶರಥನಿಗೆ ರಾಜಕುಮಾರರನ್ನು ಸದೆಬಡಿಯಲು ಸಾಧ್ಯವಾಯಿತು. ತನಗೆ ಸಹಾಯ ಮಾಡಿದ ಕೈಕೆಗೆ ದಶರಥನು ವರಗಳನ್ನಿತ್ತು ಬೇಡಿಕೊಳ್ಳಲು ಸೂಚಿಸಿದಾಗ, ಮುಂದೆ ತನಗೆ

ಬೇಕಾದಾಗ ಅವುಗಳನ್ನು ಪಡೆಯುವುದಾಗಿ ಅವಳು ನುಡಿದಳು. ಹೀಗೆ ದಶರಥನು ನಾಲ್ಕನೆಯ ಹೆಂಡತಿಯನ್ನು ಪಡೆದು ಕೆಲಕಾಲದ ಬಳಿಕ ಅವಳೊಡನೆ ಸಾಕೇತಕ್ಕೆ ಹಿಂದಿರುಗಿದ. ಕಾಲಾನುಕ್ರಮವಾಗಿ ಅಪರಾಜಿತೆ, ಸುಮಿತ್ರೆ, ಕೈಕೆ ಮತ್ತು ಸುಪ್ರಭೆಯರು ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರಿಗೆ ಜನ್ಮವಿತ್ತರು.

ಒಂದು ದಿನ ಇವರೆಲ್ಲರೂ ಓಲಗದಲ್ಲಿರಲು ಜನಕರಾಜನ ಕಡೆಯ ಚರನೊಬ್ಬನು ಬಂದು ಮಿಥಿಳೆಯಲ್ಲಿ ನಡೆದ ಘಟನೆಗಳನ್ನು ನಿವೇದಿಸಿದ: ಜನಕನ ಪತ್ನಿ ವಿದೇಹಿಯು ಅವಳಿ ಮಕ್ಕಳನ್ನು ಹೆತ್ತಾಗ ಒಬ್ಬ ಖೇಚರನು ಬಂದು ಅವುಗಳಲ್ಲಿ ಗಂಡುಮಗುವನ್ನು ಅಪಹರಿಸಿಕೊಂಡು ಹೋದ; ಆಗ ನೈಮಿತ್ತಿಕನೊಬ್ಬನು ಅಪಹೃತ ಮಗುವು ಮುಂದೆ ಖೇಚರೇಶ್ವರನಾಗಿ ನಿಮ್ಮನ್ನು ಕೂಡಿಕೊಳ್ಳುವನು ಎಂದು ನುಡಿದ; ಇದರಿಂದ ಎಲ್ಲರಿಗೂ ಸಮಾಧಾನವಾಯಿತು. ಅವಳಿಮಕ್ಕಳಲ್ಲಿ ಉಳಿದುಕೊಂಡವಳೇ ಸೀತೆ. ಅವಳು ಈಗ ಸುಂದರ ಯುವತಿಯಾಗಿ ಅರಳಿದ್ದಾಳೆ; ಈಕೆಯನ್ನು ರಾಮನಿಗಿತ್ತು ಮದುವೆ ಮಾಡಬೇಕೆಂದು ಜನಕ ಆಲೋಚಿಸಿದ; ಅಷ್ಟು ಹೊತ್ತಿಗೆ ಶಬರರಾಜನೊಬ್ಬನು ಅವನ ಮೇಲೇರಿ ಬಂದಿದ್ದಾನೆಂದು ಚರನು ತಿಳಿಸಿದ. ಈ ವಿಷಯ ತಿಳಿದ ರಾಮಲಕ್ಷ್ಮಣರು ಜನಕನ ಸಹಾಯಕ್ಕೆಂದು ಹೊರಟರು. ಇವರ ಬರುವಿಕೆಯ ಸುದ್ದಿಯನ್ನು ತಿಳಿದ ದಾಳಿಕೋರರು ಶರಣಾದರು.

ಹಿಂದೊಮ್ಮೆ ನಾರದನು ಸೀತೆಯನ್ನು ಕಾಣುವ ಕೌತುಕವನ್ನು ತಾಳಿ ಮರುಳುತನದಿಂದ ಮಿಥಿಲೆಗೆ ಬಂದಿದ್ದ. ಮುನಿಯ ವಿಕೃತಾಕಾರವನ್ನು ಕಂಡು ಸೀತೆಯು ಇತರ ಬಾಲೆಯರೊಡನೆ ಓಡಿಹೋದಳು; ನಾರದನೂ ಅವಳನ್ನು ಹಿಂಬಾಲಿಸಿ ಓಡಿದ. ಕಲರವವನ್ನು ಕೇಳಿದ ಭಟರು ಇವನನ್ನು ಅಟ್ಟಿಸಿಕೊಂಡು ಬಂದರು; ಅವನು ಕುಡುಮಿಂಚಿನಂತೆ ಆಗಸಕ್ಕೆ ನೆಗೆದ. ಕುಪಿತನಾದ ನಾರದನು ಸೀತೆಯ ಚಿತ್ರವೊಂದನ್ನು ಬರೆದು ರಥನೂಪುರ ಚಕ್ರವಾಳಪುರದ ರಾಜನಾದ ಇಂದುಗತಿಯ ಬಳಿ ಹೋಗಿ, "ನಿನ್ನ ಮಗ ಪ್ರಭಾಮಂಡಳನಿಗೆ ಈಕೆ ಯೋಗ್ಯ ಕನ್ಯೆ" ಎಂದು ಹೇಳಿದ. ಭೂಚರರು ಖೇಚರರಿಗೆ ಹೆಣ್ಣು ಕೊಡಲಾರರು ಎಂದು ಶಂಕಿಸಿ ಅವನು ಜನಕನನ್ನು ಅಪಹರಿಸಲು ಏರ್ಪಾಟು ಮಾಡಿದ. ಚಪಳಮತಿಯೆಂಬ ಖೇಚರನೊಬ್ಬ ಕುದುರೆಯ ರೂಪು ತಾಳಿ ಜನಕನನ್ನು ಅಪಹರಿಸಿ ಇಂದುಗತಿಯ ಬಳಿಗೆ ಕರೆತಂದ. ಅವರಿಬ್ಬರ ನಡುವೆ ವಾಗ್ವಾದ ನಡೆಯಿತು, ಕೊನೆಗೆ ಇಂದುಗತಿಯ ವಂಶದಲ್ಲಿ ಪರಂಪರಾನುಗತವಾಗಿ ಬಂದಿದ್ದ ವಜ್ರಾವರ್ತವೆಂಬ ಬಿಲ್ಲನ್ನು ಯಾರು ಹೆದೆಯೇರಿಸುವರೋ ಅವರಿಗೆ ಸೀತೆಯನ್ನಿತ್ತು ಮದುವೆ ನಡೆಸಬೇಕೆಂಬ ತೀರ್ಮಾನವಾಯಿತು. ಸಾಗರಾವರ್ತ– ವಜ್ರಾವರ್ತವೆಂಬ ಬಿಲ್ಲುಗಳೊಡನೆ ಇಂದುಗತಿ ತನ್ನವರನ್ನು ಮಿಥಿಲೆಗೆ ಕಳಿಸುತ್ತಾನೆ. ಸ್ವಯಂವರದಲ್ಲಿ ದಶರಥನ ಸಂಜ್ಞೆಯಂತೆ ರಾಮನು ಬಿಲ್ಲುಗಳ ಬಳಿ ಹೋದಾಗ ಅದರ ರಕ್ಷಣೆಗಿದ್ದ

ಸರ್ಪಗಳು ಹಿಂದೆ ಸರಿದವು; ರಾಮನು ವಜ್ರಾವರ್ತವನ್ನು ಹೆದೆಯೇರಿಸಿ ಟಂಕಾರ ಮಾಡಿದ; ಲಕ್ಷ್ಮಣನು ಸಾಗರಾವರ್ತವನ್ನು ಮಣಿಸಿದ. ರಾಮ ಸೀತೆಯನ್ನು ವರಿಸಿದರೆ, ಲಕ್ಷ್ಮಣ ಜನಕನ ಗೆಳೆಯ ಚಂದ್ರಪ್ರಭನ ಹದಿನೆಂಟು ಮಂದಿ ರಾಜಕುಮಾರಿಯರನ್ನು ವಿವಾಹವಾದ. ಕೆಲದಿನಗಳ ಬಳಿಕ ಎಲ್ಲರೂ ಅಯೋಧ್ಯೆಗೆ ಮರಳಿದರು. ಮುಂದೆ ಕನಕ-ಸುಪ್ರಭೆಯರ ಮಗಳಾದ ಕನಕಪ್ರಭೆಯನ್ನು ಭರತನಿಗಿತ್ತು ಮದುವೆ ಮಾಡಿದರು.

ಇತ್ತ ಈ ವಿಷಯ ತಿಳಿದು ಇಂದುಮತಿಗೆ ಆಶ್ಚರ್ಯ-ಕೋಪಗಳುಂಟಾದವು. ಪ್ರಭಾಮಂಡಳನು ಸೀತಾರಾಮಲಕ್ಷ್ಮಣರನ್ನು ಸೆರೆಹಿಡಿದೋ ಕೊಂದೋ ತರುವೆನೆಂದು ಹೊರಟ. ಸೈನ್ಯಸಮೇತನಾಗಿ ವಿದೇಹನಗರಕ್ಕೆ ಬಂದಾಗ ಪ್ರಭಾಮಂಡಳನು ಜಾತಿಸ್ಮರವಾಗಿ ಮೂರ್ಛೆಗೊಂಡ. ಮೂರ್ಛೆ ತಿಳಿದಮೇಲೆ, ವಿದೇಹಿಯ ಅವಳಿ ಮಕ್ಕಳಲ್ಲಿ ಅಪಹೃತನಾಗಿದ್ದವನು ತಾನು ಎಂಬುದು ಗೊತ್ತಾಗಿ, ಸೀತೆಯು ತನ್ನ ತಂಗಿಯೆಂದೂ ಜನಕ-ವಿದೇಹಿಯರು ತನ್ನ ತಂದೆತಾಯ್ಗಳೆಂದೂ ಅರುಹಿದ; ವಿನಾಕಾರಣ ರಾಮಲಕ್ಷ್ಮಣಜನಕರ ಮೇಲೆ ಕೋಪಗೊಂಡಿದ್ದರಿಂದ ಇಂದುಗತಿಯು ವ್ಯಥಿತನಾಗಿ ಪ್ರಭಾಮಂಡಳನಿಗೆ ರಾಜ್ಯವನ್ನೊಪ್ಪಿಸಿ ದೀಕ್ಷೆ ಕೈಗೊಂಡ.

ಒಂದು ದಿನ ದಶರಥನು ಸರ್ವಭೂತಹಿತ ಭಟ್ಟಾರಕರನ್ನು ಕಂಡಾಗ ತನ್ನ ಭವಾವಳಿಯನ್ನು ಬೆಸಸಬೇಕೆಂದು ಕೇಳಿಕೊಂಡ. ಅವರು ಹೇಳಿದುದನ್ನು ಕೇಳಿ ತಾನು ಭವಾಂತರಗಳಲ್ಲಿ ರಾಟೆಯ ಬಿಂದಿಗೆಯಂತೆ ತಿರುಗಿದೆನಲ್ಲ ಎಂದು ನಿರ್ವೃತಿಯಲ್ಲಿ ಮನಸ್ಸು ನಾಟಿತು; ರಾಮನಿಗೆ ಪಟ್ಟಕಟ್ಟಿ ತಾನು ಜಿನದೀಕ್ಷೆಯನ್ನು ಪಡೆಯಲು ಆಲೋಚಿಸಿರುವುದಾಗಿ ಎಲ್ಲರೆದುರು ಪ್ರಕಟಿಸಿದ. ಅದನ್ನು ಕೇಳಿ ಭರತನೂ ತಂದೆಯೊಡನೆ ದೀಕ್ಷೆ ವಹಿಸುವ ಆಸೆಯನ್ನು ವ್ಯಕ್ತಪಡಿಸುತ್ತಾನೆ. ಇದನ್ನು ಕೇಳಿದ ಕೈಕೆ ಕಳವಳಗೊಂಡಳು; ತಕ್ಷಣ ಅವಳಿಗೆ ದಶರಥನಿಂದ ಪಡೆದಿದ್ದ ಎರಡು ವರಗಳ ನೆನಪಾಯಿತು. ದಶರಥನಲ್ಲಿಗೆ ಬಂದು ಆ ವರಗಳನ್ನಾಕೆ ಬೇಡಿದಳು; ಭರತನಿಗೆ ಹದಿನಾಲ್ಕು ವರ್ಷ ರಾಜ್ಯಪದವಿಯನ್ನು ವಹಿಸಬೇಕೆಂದು ಕೇಳಿದಳು. ರಾಮನು ತಂದೆಯನ್ನು ಸಂತೈಸಿ ತಾನು ದಿಗ್ವಿಜಯಕ್ಕೆ ಹೊರಡುವೆನೆಂದು ಹೇಳಿ ತಾಯಿ ಕೌಶಲ್ಯೆ (ಅಪರಾಜಿತೆ)ಯ ಬಳಿ ಬಂದು ತನ್ನ ನಿರ್ಧಾರವನ್ನು ತಿಳಿಸಿದ. ಆಗ ಆಕೆ ಸುಚರಿತೆಯಾದ ಸೀತೆಯನ್ನೂ ಜೊತೆಯಲ್ಲಿ ಕರೆದೊಯ್ಯಲು ಸೂಚಿಸಿದಳು. ಸುಮಿತ್ರೆಯು ತನ್ನ ಮಗನಾದ ಲಕ್ಷ್ಮಣನನ್ನು ಅಣ್ಣ-ಅತ್ತಿಗೆಯರ ಸೇವೆಗೆಂದು ಅವರೊಡನೆ ಕಳಿಸಿದಳು.

ಇತ್ತ ದಶರಥನು ದೀಕ್ಷೆ ಕೈಗೊಂಡ; ಭರತನು ರಾಜ್ಯಭಾರವನ್ನು ವಹಿಸಿಕೊಂಡ. ಸೀತೆಯ ಕಷ್ಟ, ಗಂಡನ ದೀಕ್ಷೆ, ಅಪರಾಜಿತೆ-ಸುಮಿತ್ರೆಯರ ಶೋಕ ಇವುಗಳನ್ನು ಕಂಡು ಕೈಕೆಯು ತಾನು ತಪ್ಪು ಮಾಡಿದೆನೆಂದು ಪಶ್ಚಾತ್ತಾಪ ಹೊಂದಿ ರಾಮನನ್ನು

ಕರೆತರಲು ಭರತನನ್ನು ರಾಮನಿದ್ದೆಡೆಗೆ ಕಳಿಸಿದಳು. ಆದರೆ ರಾಮ ಹಿಂದಿರುಗಲೊಪ್ಪಲಿಲ್ಲ; ರಾಮನ ಪ್ರತಿನಿಧಿಯಾಗಿ ಮಾತ್ರ ಕಾರ್ಯನಿರ್ವಹಿಸುವುದಾಗಿ ಹೇಳಿ ಭರತನು ಸಾಕೇತಕ್ಕೆ ಮರಳಿದ. ರಾಮಸೀತೆಲಕ್ಷ್ಮಣ ಮೂವರೂ ಗಂಗಾನದಿಯನ್ನು ದಾಟಿ ಚಿತ್ರಕೂಟಕ್ಕೆ ಬಂದರು. ಸಾಮಂತನಾದ ಸಿಂಹೋದರನು ದಾಳಿ ಮಾಡಿದರೂ ಅವನಿಗೆ ಮಣಿಯದ ಜಿನಭಕ್ತನಾದ ಆವಂತಿ ದೇಶದ ರಾಜ ವಜ್ರಕರ್ಣನ ಸಹಾಯಕ್ಕೆ ರಾಮಲಕ್ಷ್ಮಣರು ಮುಂದಾಗಿ, ಅವರಿಬ್ಬರಿಗೂ ರಾಜ್ಯವನ್ನು ಹಂಚಿಕೊಟ್ಟರು. ವಜ್ರಕರ್ಣನು ತನ್ನ ಎಂಟು ಮಂದಿ ಕುವರಿಯರನ್ನೂ, ಉಳಿದ ರಾಜರು ತಮ್ಮ ಮುನ್ನೂರು ಮಂದಿ ಕುಮಾರಿಯರನ್ನೂ ಲಕ್ಷ್ಮಣನಿಗಿತ್ತು ಮದುವೆ ಮಾಡುತ್ತಾರೆ. ಕಾಡಿನಲ್ಲಿ ಮುಂದುವರಿದು ರಾಮಸೀತೆಲಕ್ಷ್ಮಣರು ವಿಜಯಪುರಕ್ಕೆ ಬರುತ್ತಾರೆ. ಅಲ್ಲಿ ಒಂದು ರಾತ್ರಿ ಲಕ್ಷ್ಮಣನು ಕಾಡಿಗೆ ಹೋಗಿರುವಾಗ ತನ್ನನ್ನೇ ಮದುವೆ ಆಗಲು ಬಯಸಿ, ಅದು ನೆರವೇರದ್ದರಿಂದ ಆತ್ಮಹತ್ಯೆಗೆ ಪ್ರಯತ್ನಿಸುತ್ತಿದ್ದ ವನಮಾಲೆಯೆಂಬ ವಾಲಖಿಲ್ಯನ ಮಗಳನ್ನೂ, ಆನಂತರ ಅತಿವೀರ್ಯನ ಮಗಳು ರತಿಮಾಲೆಯನ್ನೂ ವಿವಾಹವಾಗುತ್ತಾನೆ.

ದಂಡಕಾರಣ್ಯಕ್ಕೆ ಬಂದಾಗ ರಾಮಸೀತೆಲಕ್ಷ್ಮಣರನ್ನು ಜಟಾಯುವು ಹಿಂಬಾಲಿಸುತ್ತಾನೆ. ಒಂದು ಬಾರಿ ಲಕ್ಷ್ಮಣನು ಕಾಡಿನಲ್ಲಿ ಬರುತ್ತಿರುವಾಗ ಬಿದಿರಮಳೆಯ ಮೇಲಿದ್ದ ಸೂರ್ಯಹಾಸವೆಂಬ ದಿವ್ಯಖಡ್ಗವು ತಾನಾಗಿ ಬಂದು ಅವನ ಕೈ ಸೇರುತ್ತದೆ. ಅದನ್ನು ಹಿಡಿದು ಲಕ್ಷ್ಮಣನು ಬಿದಿರಮೆಳೆಯೊಂದಕ್ಕೆ ಹೊಡೆಯಲು ಅದರ ನಡುವೆ ಈ ಖಡ್ಗಕ್ಕಾಗಿಯೇ ತಪಸ್ಸು ಮಾಡುತ್ತಿದ್ದ ಶಂಭುಕನ ತಲೆ ಕತ್ತರಿಸಿ ಹೋಗುತ್ತದೆ. ಅವನು ರಾಮಣನ ತಂಗಿ ಚಂದ್ರನಖಿಯ ಮಗ. ಚಂದ್ರನಖಿಯು ಮಗನನ್ನು ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಲು ಪಂಚವಟಿಗೆ ಬರುತ್ತಾಳೆ; ಆದರೆ ರಾಮಲಕ್ಷ್ಮಣರ ಚೆಲುವನ್ನು ಕಂಡು ಮೋಹಗೊಳ್ಳುತ್ತಾಳೆ. ಲಕ್ಷ್ಮಣ ಅವಳನ್ನು ಅವಮಾನಿಸುತ್ತಾನೆ. ಅವಳು ಆಕಾಶಕ್ಕೆ ಹಾರಿ ತನ್ನ ಗಂಡ ಖರನಿಗೆ ಮಗನ ಹತ್ಯೆಯ ವಿಷಯವನ್ನು ತಿಳಿಸುತ್ತಾಳೆ. ಅವನು ತನ್ನ ತಮ್ಮ ದೂಷಣನೊಡನೆ ರಾಮಲಕ್ಷ್ಮಣರ ಮೇಲೇರಿ ಬರುತ್ತಾರೆ. ಆದರೆ ಲಕ್ಷ್ಮಣನೊಬ್ಬನೇ ಅವರನ್ನೆದುರಿಸಿ ಘೋರಯುದ್ಧದಲ್ಲಿ ತೊಡಗುತ್ತಾನೆ.

ಇತ್ತ, ತಪಸ್ಸಿನಲ್ಲಿ ತೊಡಗಿದ್ದ ಶಂಭುಕನನ್ನು ವಿನಾಕಾರಣ ಕೊಂದವರನ್ನು ಸದೆಬಡಿಯಲು ರಾವಣ ತನ್ನ ವಿಮಾನವನ್ನೇರಿ ಹೊರಟ. ಕ್ರೌಂಚನದೀ ತೀರದ ಪಂಚವಟಿಯ ಲತಾಮಂಟಪದಲ್ಲಿ ರಾಮನೊಡನಿರುವ ಸೀತೆಯನ್ನು ಆಕಾಶಮಾರ್ಗದಿಂದಲೇ ಕಂಡ; ಹಲವಾರು ವಿದ್ಯಾಧರ ಸ್ತ್ರೀಯರೂ ದೇವತಾಸ್ತ್ರೀಯರೂ ಮಾನವಸ್ತ್ರೀಯರೂ ತಾವಾಗಿ ಮೇಲೆ ಬಿದ್ದು ಮೋಹವನ್ನು ತೋರಿದ್ದರೂ ಅವರ ಕಡೆ ಮನಸ್ಸು ಹರಿಯಿಸದಿದ್ದ ರಾವಣನು, ವಿಧಿಯ ಸಂಚಿನಿಂದ, ಸೀತೆಯನ್ನು ಕಂಡ ಕ್ಷಣವೇ ಆಕರ್ಷಿತನಾದ. ಅವಲೋಕಿನೀ ವಿದ್ಯಾಧಿದೇವತೆಯನ್ನು ಬರಮಾಡಿಕೊಂಡು

ಅವರಾರೆಂದು ಬೆಸಗೊಂಡ; ದೇವತೆಯು ರಾಮಸೀತಾಲಕ್ಷ್ಮಣರ ವೃತ್ತಾಂತವನ್ನೆಲ್ಲ ತಿಳಿಸಿದಳು: "ರಾಮಲಕ್ಷ್ಮಣರು ಈ ಯುಗದ ಬಲದೇವ-ವಾಸುದೇವರು; ದೇವತಾಧಿಷ್ಠಿತವಾದ ವಜ್ರಾವರ್ತ-ಸಾಗರಾವರ್ತಚಾಪಗಳನ್ನು ವಶಪಡಿಸಿಕೊಂಡ ಅತುಲ ಪರಾಕ್ರಮಿಗಳು: ರಾಮನ ಹೆಂಡತಿ ಸೀತೆಯು ಹರಿವಂಶದ ಜನಕನ ಮಗಳು, ಪ್ರಭಾಮಂಡಳನ ತಂಗಿ." ತಕ್ಷಣವೇ, ಸೀತೆಯನ್ನು ರಾಮನಿಂದ ದೂರ ಮಾಡುವ ಉಪಾಯವಾವುದೆಂದು ರಾವಣ ಕೇಳಿದಾಗ ದೇವತೆಯು, ಅವನ ಇಂಗಿತವನ್ನರಿತು ಕೋಪಗೊಂಡಳು: ಪರನಾರಿಯಲ್ಲಿ ಮೋಹಗೊಂಡ ಅವನನ್ನು ಛೇಡಿಸಿದಳು. ಆದರೆ ರಾವಣನು ಹಟದಿಂದ ರಾಮಸೀತೆಯರನ್ನು ಬೇರ್ಪಡಿಸುವ ಉಪಾಯವನ್ನು ಹೇಳಲು ಆಜ್ಞಾಪಿಸಿದ. ವಿಧಿಯಿಲ್ಲದೆ ದೇವತೆ ಅದನ್ನು ತಿಳಿಸಿದಳು: 'ಲಕ್ಷ್ಮಣನು ಖರದೂಷಣರೊಡನೆ ಯುದ್ಧದಲ್ಲಿ ತೊಡಗಿ, ತನಗೆ ತೊಂದರೆಯಾದಾಗ ತಾನು ಸಿಂಹನಾದವನ್ನು ಮಾಡುವುದಾಗಿಯೂ ಆಗ ತನ್ನ ಸಹಾಯಕ್ಕಾಗಿ ರಾಮನು ಬರಬೇಕೆಂದೂ ತಿಳಿಸಿದ್ದಾನೆ.' ಹಾಗಾದರೆ ಲಕ್ಷ್ಮಣನಿಗೆ ಗೊತ್ತಾಗದಂತೆ ಸಿಂಹನಾದ ಮಾಡಲು ರಾವಣನು ಹೇಳಿದ. ದೇವತೆಯು ಹಾಗೇ ಮಾಡಲು ಲಕ್ಷ್ಮಣನಿಗೆ ಕೇಡು ಒದಗಿದೆಯೆಂದು ಭಾವಿಸಿದ ರಾಮನು ಸೀತೆಯೊಬ್ಬಳನ್ನೇ ಬಿಟ್ಟು ಅವನೆಡೆಗೆ ಹೊರಟ.

ಈ ಸಂದರ್ಭಕ್ಕಾಗಿಯೇ ಕಾಯುತ್ತಿದ್ದ ರಾವಣನು ಸೀತೆಯನ್ನೆತ್ತಿಕೊಂಡು ತನ್ನ ವಿಮಾನದಲ್ಲಿಟ್ಟುಕೊಂಡು ಹಾರಿದ. ಇದನ್ನು ಕಂಡ ಜಟಾಯುವು ಅವನೊಡನೆ ಸೆಣೆಸಲು, ರಾವಣನು ಅವನ ರೆಕ್ಕೆಗಳನ್ನು ಕತ್ತರಿಸಿ ನೆಲಕ್ಕುರುಳಿಸಿದ. ಮುಂದೆ ಸಾಗುತ್ತಿರುವಾಗ ಪ್ರಲಾಪಿಸುತ್ತಿದ್ದ ಸೀತೆಯ ಆರ್ತನಾದವನ್ನು ಕೇಳಿದ ಆರ್ಕಜಟಿಯೆಂಬುವನ ಮಗ ರತ್ನಜಟಿಯು ರಾವಣನನ್ನು ಅಡ್ಡಗಟ್ಟಿದ. ರಾವಣನು ವಿದ್ಯಾಚ್ಛೇದದಿಂದ ಅವನನ್ನು ಕೆಡಹಿ ಮುಂದೆ ಸಾಗಿದ. ಲಂಕೆಗೆ ಬಂದು ಸೀತೆಯನ್ನು ವನವೊಂದರಲ್ಲಿರಿಸಿ ಕಾವಲಿರಿಸಿದ.

ಇತ್ತ, ಲಕ್ಷ್ಮಣನು ತನ್ನೆಡೆಗೆ ಬರುವ ರಾಮನನ್ನು ಕಂಡು ಇದೆಲ್ಲ ಮಾಯಾವಿಗಳಿಂದಾದುದೆಂದು ಬಗೆದು ರಾಮನನ್ನು ವಾಪಸ್ಸು ಕಳಿಸಿ ತಾನು ಯುದ್ಧವನ್ನು ಮುಂದುವರಿಸಿದ. ರಾಮನು ಮತ್ತೆ ಪಂಚವಟಿಗೆ ಬಂದಾಗ ಸೀತೆಯನ್ನು ಕಾಣದೆ ವಿರಹಾನಲದಿಂದ ಬೇಯತೊಡಗಿದ. ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿದ್ದ ಜಟಾಯುವಿನಿಂದ ಸೀತಾಪಹರಣದ ವಿಷಯ ಅವನಿಗೆ ತಿಳಿಯಿತು. ಸ್ವಲ್ಪ ಕಾಲಾನಂತರ ಲಕ್ಷ್ಮಣನೂ ಅಲ್ಲಿಗೆ ಬಂದ.

ತನ್ನ ತಂದೆಯನ್ನು ಕೊಂದು ತಮ್ಮ ಪುರವನ್ನಾಕ್ರಮಿಸಿದ್ದ ಖರನನ್ನು ಕೊಂದ ಲಕ್ಷ್ಮಣನಿಂದ ಉಪಕೃತನಾಗಿದ್ದ ವಿರಾಧಿತನು ರಾಮಲಕ್ಷ್ಮಣರಲ್ಲಿಗೆ ಬಂದು, ಸೀತೆಯನ್ನು ಹುಡುಕಲು ತಾನು ಏರ್ಪಾಟು ಮಾಡುವುದಾಗಿ ಹೇಳಿ ಅವರನ್ನು ಪಾತಾಳ ಲಂಕೆಗೆ ಕರೆದೊಯ್ದ. ರಾಮ ಲಕ್ಷ್ಮಣರ ವಿಚಾರವನ್ನು ಕೇಳಿದ ಸತಿ ವಿರಹದಿಂದ ಪರಿತಪಿಸುತ್ತಿದ್ದ

ಸುಗ್ರೀವನು ತನಗೆ ಸಹಾಯವಾಗಬಹುದೆಂದು ಭಾವಿಸಿ ರಾಮಲಕ್ಷ್ಮಣರಿದ್ದೆಡೆಗೆ ಬಂದ. ವಿರಾಧಿತನು ಅವನ ವಿಷಯವನ್ನು ವಿವರಿಸಿದ: ಖಳನೊಬ್ಬನು ಸುಗ್ರೀವನ ಸತಿಯಾದ ತಾರೆಯಲ್ಲಿ ಮೋಹಗೊಂಡು ಸುಗ್ರೀವನಂತೆಯೇ ವೇಷಧರಿಸಿ ಅರಮನೆಯನ್ನು ಹೊಕ್ಕ; ಬೇರೆಯವರೆಲ್ಲ ಮೋಸಗೊಂಡರೂ ತಾರೆಯು ಮಾತ್ರ ಅವನು ಮಾಯಾಸುಗ್ರೀವನೆಂದು ತಿಳಿದು ಅಡಗಿಕೊಳ್ಳುತ್ತಾಳೆ. ನಿಜ ಸುಗ್ರೀವ-ಮಾಯಾ ಸುಗ್ರೀವರಿಗೆ ಯುದ್ಧವಾಗುತ್ತದೆ; ಆದರೆ ಸುಗ್ರೀವ ಆ ಕಪಟಿಯನ್ನು ಗೆಲ್ಲಲಾರದವನಾಗಿದ್ದಾನೆ; ಅವನಿಗೆ ಸಹಾಯ ಮಾಡಿ ತಾರೆಯನ್ನು ದೊರಕಿಸಿಕೊಡಬೇಕೆಂದು ಜಾಂಬವಂತನು ಕೇಳಿಕೊಳ್ಳುತ್ತಾನೆ. ಅದರಂತೆ ರಾಮನು ಮಾಯಾ ಸುಗ್ರೀವನನ್ನು ಸಂಹರಿಸುತ್ತಾನೆ. ಸುಗ್ರೀವನು ತಾನು ಮಾತು ಕೊಟ್ಟಂತೆ ಸೀತೆಯನ್ನು ಹುಡುಕಲು ವಿದ್ಯಾಧರರನ್ನು ಎಲ್ಲೆಡೆಗೆ ಕಳಿಸುತ್ತಾನೆ; ತಾನೂ ಹುಡುಕುತ್ತ ಹೊರಡುತ್ತಾನೆ. ವಿದ್ಯಾಚ್ಛೇದದಿಂದ ಕೆಳಗುರುಳಿ ಬಿದ್ದಿದ್ದ ರತ್ನಜಟಿಯಿಂದ ರಾವಣನು ಸೀತೆಯನ್ನು ಅಪಹರಿಸಿರುವ ವಿಷಯವನ್ನು ತಿಳಿದು ಅದನ್ನು ರಾಮನಿಗೆ ತಿಳಿಸುತ್ತಾನೆ. ರತ್ನಜಟಿಗೆ ಮತ್ತೆ ಅವನ ರಾಜ್ಯ ದೊರೆಯುತ್ತದೆ. ರಾಮನು ಬೆಸಗೊಳ್ಳಲು ಜೈನಾಗಮಕೋವಿದನಾದ ಜಾಂಬೂನದನು ಲಂಕೆ ಹಾಗೂ ರಾವಣರ ವಿಷಯವನ್ನೆಲ್ಲ ವಿಶದವಾಗಿ ನಿರೂಪಿಸುತ್ತಾನೆ.

ರಾವಣನು ತೋಯದವಾಹನನ ವಂಶದಲ್ಲಿ ಹುಟ್ಟಿದವನು. ಮಗು ಹುಟ್ಟಿದ ಹತ್ತನೆಯ ದಿನ ಭೀಮನೆಂಬ ರಾಕ್ಷಸನು ನೀಡಿದ ನವಮುಖರತ್ನಭೂಷಣದಲ್ಲಿ ಮಗುವಿನ ಪ್ರತಿಬಿಂಬ ಬಿದ್ದುದರಿಂದ ಅವನಿಗೆ ದಶವದನ ಎಂಬ ಹೆಸರಾಯಿತು. ವಯಸ್ಸಿಗೆ ಬಂದಾಗ ಅವನು ತಮ್ಮಂದಿರೊಡನೆ ತಪಸ್ಸು ಮಾಡಿ ಆಕಾಶಗಾಮಿನೀ ವಿದ್ಯೆ ಮುಂತಾದವನ್ನು ವಶಪಡಿಸಿಕೊಂಡ. ಇದನ್ನು ತಿಳಿದ ಮಯ ತನ್ನ ಮಗಳು ಮಂಡೋದರಿಯನ್ನು ಅವನಿಗಿತ್ತು ಮದುವೆ ಮಾಡುತ್ತಾನೆ. ತನ್ನ ಮುತ್ತಜ್ಜ ಮಾಲಿಯನ್ನು ಕೊಂದು ಲಂಕೆಯನ್ನು ವಶಪಡಿಸಿಕೊಂಡಿದ್ದ ವೈಶ್ರವಣನನ್ನು ಯುದ್ಧದಲ್ಲಿ ಸೋಲಿಸಿದ ರಾವಣನು ಅವನ ಪುಷ್ಪಕ ವಿಮಾನವನ್ನು ತನ್ನ ವಶಪಡಿಸಿಕೊಳ್ಳುತ್ತಾನೆ; ಶಕ್ತ್ಯಾಯುಧವನ್ನು ಪಡೆಯುತ್ತಾನೆ. ಮುಂದೆ ಅವನು ದಿಗ್ವಿಜಯೋದ್ಯುಕ್ತನಾಗುತ್ತಾನೆ. ಅವನನ್ನೆದುರಿಸಿದ ಎಲ್ಲ ರಾಜರೂ ಸೋತು ಶರಣಾಗುತ್ತಾರೆ. ಆದರೆ ಒಬ್ಬನೂ ಅವನಿಂದ ಹತನಾಗುವುದಿಲ್ಲ. ಇದಕ್ಕೆ ಕಾರಣ ಅವನ ದಯಾಳು ಸ್ವಭಾವ. ಮಹಿಷ್ಮತೀಪುರದ ಒಡೆಯನಾದ ಸಹಸ್ರಬಾಹುವನ್ನು ಸೆರೆಹಿಡಿದಾಗ, ಜೈನಮುನಿಗಳು ಅವನನ್ನು ಬಿಟ್ಟು ಬಿಡುವಂತೆ ಹೇಳಲು ರಾವಣನು ಹಾಗೆಯೇ ಮಾಡುತ್ತಾನೆ; ವರುಣನನ್ನು ಸೆರೆಹಿಡಿದಾಗ, ಪುರಜನರ ಗೋಳನ್ನು, ಕೇಳಿ ಅವನನ್ನು ಮುಕ್ತಗೊಳಿಸುತ್ತಾನೆ; ಅಂತೆಯೇ, ವಿಜಯಾರ್ಧಪರ್ವತದ ಪ್ರದೇಶವನ್ನು ಆಳುತ್ತಿದ್ದ ಇಂದ್ರನನ್ನು ಕಟ್ಟಿ ಹಾಕುತ್ತಾನೆ; ಆದರೆ ಅವನ ತಂದೆ ಸಹಸ್ರಾರನು ಬಂದು ಬೇಡಿಕೊಳ್ಳಲು ಬಿಡುಗಡೆ ಮಾಡುತ್ತಾನೆ. ಹೀಗೆ ರಾವಣನು ಯುದ್ಧ ಮಾಡುವುದು ಜೈನಧರ್ಮವನ್ನು ನೆಲೆಗೊಳಿಸಿ ತನ್ನ ಪೌರುಷವನ್ನು ಸಾರ್ಥಕಗೊಳಿಸಿಕೊಳ್ಳಲು.

ತನ್ನ ಜೈತ್ರಯಾತ್ರೆಯ ಕಾಲದಲ್ಲಿ ಅವನು ದುರ್ಲಂಘ್ಯಪುರಕ್ಕೆ ಬರುತ್ತಾನೆ. ದುರ್ಗಮವಾದ ಅದರ ಕೋಟೆಯನ್ನು ಭೇದಿಸುವ ಉಪಾಯ ಅವನಿಗೆ ಹೊಳೆಯುವುದಿಲ್ಲ. ಅಲ್ಲಿನ ರಾಜ ನಳಕೂಬರನ ಹೆಂಡತಿ ಉಪರಂಭೆ; ರಾವಣನ ವೈಭವವನ್ನು ಕೇಳಿ ಹಿಂದಿನಿಂದಲೂ ಅವನ ಬಗ್ಗೆ ಮೋಹವಿರಿಸಿಕೊಂಡಿದ್ದವಳು. ತನ್ನ ಪ್ರಿಯಕರನು ತನ್ನ ಊರಿಗೇ ಬಂದಿರುವಾಗ ಅವಳು ತನ್ನ ಪರವಾಗಿ ಮೋಹನಿವೇದನೆ ಮಾಡಲು ದೂತಿಯನ್ನು ಅವನೆಡೆಗೆ ಕಳಿಸುತ್ತಾಳೆ. ಉಪರಂಭೆಗೆ ಸಾಲಭಂಜಿನೀ ವಿದ್ಯೆ ಕೈವಶವಾಗಿರುತ್ತದೆ; ತನ್ನ ದುರ್ಗದ ರಕ್ಷಣೆಯ ಉಪಾಯ ಅವಳದೇ. ಇದನ್ನು ತಿಳಿದ ರಾವಣನು, ವಿಭೀಷಣನ ಸಲಹೆಯ ಮೇರೆಗೆ ಉಪರಂಭೆಯನ್ನು ಒಲಿದ ಹಾಗೆ ನಟಿಸಿ ಅವಳನ್ನು ರಹಸ್ಯದಲ್ಲಿ ಭೇಟಿಯಾಗಿ ಅವಳಿಂದ ವಿದ್ಯೆಯನ್ನು ಕಲಿಯುತ್ತಾನೆ. ದುರ್ಗವನ್ನು ಭೇದಿಸಿದ ಮೇಲೆ ಧರ್ಮವನ್ನು ಹೇಳಿ ಉಪರಂಭೆಯು ಗಂಡನೊಡನೆ ಬಾಳುವಂತೆ ಮಾಡುತ್ತಾನೆ. ಮುಂದೆ ಅವನು ಅನಂತವೀರ್ಯ ಯತಿಗಳನ್ನು ಕಂಡಾಗ 'ಪರಮಹಿಳಾವಿರತಿವ್ರತ'ವನ್ನು ಸ್ವೀಕರಿಸುತ್ತಾನೆ. ಇಂತಹ ಮಹಿಮಾವಂತನಾದವನು ರಾವಣ.

ಇಂತಹ ರಾವಣನ ಲಂಕೆಗೆ ಹೋಗಿ ಸೀತೆಯನ್ನು ಕಂಡು ಆಕೆಗೆ ತನ್ನ ಮುದ್ರಿಕೆಯಿತ್ತು ಆಕೆ ಕೊಡುವ ಚೂಡಾಮಣಿಯನ್ನು ತರಲು ಯಾರನ್ನು ನಿಯೋಜಿಸಬೇಕೆಂದು ರಾಮನು ಸಭೆಯಲ್ಲಿ ವಿಚಾರಿಸುತ್ತಾನೆ. ಅದಕ್ಕೆ ಹನುಮಂತನು ಸಿದ್ಧನಾಗುತ್ತಾನೆ. ಅಂತೆಯೇ ತನ್ನ ವಿಮಾನವನ್ನೇರಿ ಹೊರಟು ಲಂಕೆಗೆ ಬಂದು ಲಂಕಿಣಿಯೆಂಬ ಹೆಸರಿನ ಕೋಟೆಯನ್ನೊಡೆದು, ದ್ವಾರಪಾಲಕನಾದ ವಜ್ರಮುಖನೆಂಬ ಅಸುರನನ್ನು ಕೊಂದು ಅವನ ಮಗಳಾದ ಲಂಕಾಸುಂದರಿಯನ್ನು ಮದುವೆಯಾಗುತ್ತಾನೆ. ಲಂಕೆಯನ್ನು ಹೊಕ್ಕು ಸೀತೆಗೆ ಮಾತ್ರ ಕಾಣುವಂತೆ ಅವಳ ಮುಂದೆ ನಿಂತು ರಾಮನ ವಿಚಾರಗಳನ್ನು ವಿನಯದಿಂದ ಬಿನ್ನವಿಸುತ್ತಾನೆ. ರಾಮನ ಮುದ್ರಿಕೆಯಿತ್ತು, ರಾಮಲಕ್ಷ್ಮಣರು ಅನತಿಕಾಲದಲ್ಲಿಯೇ ಬಂದು ಆಕೆಯನ್ನು ಕರೆದೊಯ್ಯುವರೆಂದು ಸಮಾಧಾನಪಡಿಸುತ್ತಾನೆ. ಸೀತೆಗೆ ಸಂತಸವಾಗುತ್ತದೆ; ಆಕೆ ತನ್ನ ಚೂಡಾಮಣಿಯನ್ನು ನೀಡುತ್ತಾಳೆ. ಅನಂತರ ಹನುಮಂತನು ಎಲ್ಲರಿಗೂ ಕಾಣಿಸಿಕೊಳ್ಳುತ್ತಾನೆ. ಕಾಪಿನಾಳುಗಳು ಅವನನ್ನು ಕೊಲ್ಲಲು ಹವಣಿಸುತ್ತಾರೆ. ಅನೇಕ ಮಂದಿ ಅಸುರರನ್ನು ಕೊಂದು, ಲಂಕೆಯನ್ನು ಸುಟ್ಟುರುಹಿ ಹನುಮಂತನು ವಾಪಸ್ಸಾಗಿ ರಾಮನಿಗೆ ಸೀತೆಯಿತ್ತಿದ್ದ ಚೂಡಾಮಣಿಯನ್ನು ಕೊಡುತ್ತಾನೆ.

ರಾಮಲಕ್ಷ್ಮಣರು ಮಿತ್ರರೊಡಗೂಡಿ ಲಂಕಾಪುರದತ್ತ ದಿಗ್ವಿಜಯಯಾತ್ರೆಯನ್ನು ಕೈಗೊಳ್ಳುತ್ತಾರೆ. ಆ ವಿಚಾರವನ್ನು ಕೇಳಿದ ರಾವಣನು ಕೆರಳಿದ. ಸೀತೆಯನ್ನು ರಾಮನಿಗೆ ಒಪ್ಪಿಸಲು ವಿಭೀಷಣನು ಕೇಳಿಕೊಂಡಾಗ ಅವನನ್ನೇ ಕೊಲ್ಲಲುದ್ಯುಕ್ತನಾಗುವನು. ಗೋತ್ರವಧೆ ಸರಿಯುಲ್ಲವೆಂದೂ, ಬೇಕಾದರೆ ಅವನನ್ನು ಲಂಕೆಯಿಂದ ಹೊರಗಟ್ಟಬಹುದೆಂದೂ ಹಿರಿಯರು ಸಲಹೆಯಿತ್ತಾಗ ರಾವಣನು ಅದನ್ನೊಪ್ಪಿಕೊಂಡು

ಹಾಗೆಯೇ ಮಾಡುತ್ತಾನೆ. ವಿಭೀಷಣನು ರಾಮನ ಬಳಿ ಬಂದು ಸ್ನೇಹವನ್ನು ಪಡೆಯುತ್ತಾನೆ. ಅವರೆಲ್ಲ ಸಮುದ್ರಕ್ಕೆ ಸೇತುವೆಯನ್ನು ನಿರ್ಮಿಸಿ ಲಂಕೆಯನ್ನು ತಲುಪುತ್ತಾರೆ.

ಇತ್ತ, ರಾವಣನು ಲಕ್ಷ್ಮಣನ ಪುಣ್ಯ ಪ್ರಭಾವವನ್ನು ಕೇಳಿ ಬಹುರೂಪಿಣಿ ವಿದ್ಯೆಯನ್ನು ಸಾಧಿಸಲು ನಿರ್ಧರಿಸಿ, ತನ್ನನ್ನಾರೂ ಯಾವ ಕಾರಣಕ್ಕೂ ಎಬ್ಬಿಸಬಾರದೆಂದು ಎಚ್ಚರಿಸಿ ದಿವ್ಯಮಂತ್ರೋಚ್ಚಾರ ಮಾಡಲು ತೊಡಗುತ್ತಾನೆ. ಕಪಿಧ್ವಜ ಸೈನ್ಯವು ರಾವಣನ ಅಂತಃಪುರವನ್ನು ಹೊಕ್ಕು ಕುಲವನಿತೆಯರಲ್ಲಿ ಹಾಹಾಕಾರವನ್ನುಂಟು ಮಾಡುತ್ತದೆ. ಮಂಡೋದರಿಯೇ ಮೊದಲಾದ ಸ್ತ್ರೀಯರು ರಾವಣನ ಬಳಿ ಬಂದು ಗೋಳಾಡುತ್ತಾರೆ. ಆದರೆ ರಾವಣನು ಮಾತ್ರ ವಿಚಲಿತನಾಗುವುದಿಲ್ಲ. ತದೇಕವಾಗಿ ತಪಸ್ಸನ್ನು ಮುಂದುವರಿಸಿದ ಅವನಿಗೆ ಕೊನೆಗೂ ವಿದ್ಯೆ ಸಾಧಿತವಾಗುತ್ತದೆ. ದೇವತೆಯು ಪ್ರತ್ಯಕ್ಷವಾಗಿ ರಾವಣನ ಮನೋಭೀಷ್ಟವನ್ನು ತಿಳಿದು ರಾಮಲಕ್ಷ್ಮಣರನ್ನು ಕೊಲ್ಲಲು ಸಾಧ್ಯವಿಲ್ಲವೆಂದೂ, ಆದರೆ ಮಿಕ್ಕವರನ್ನು ಸಂಹರಿಸಬಹುದೆಂದೂ ಹೇಳಲು ರಾವಣನು ವಿದ್ಯಾಧಿದೇವತೆಗೆ ನಮಸ್ಕರಿಸಿ ಹೊರಡುತ್ತಾನೆ.

ತನಗೀಗ ಯಾರೂ ಎದುರಿಲ್ಲವೆಂಬ ಮದದಿಂದ ಸೀತೆಯಿದ್ದ ಚಿತ್ರಮಂಟಪಕ್ಕೆ ಬಂದು ಸೀತೆಯ ಅವಸ್ಥೆಯನ್ನು ಕಾಣುತ್ತಾನೆ. ಅವಳ ದುಃಖವನ್ನು ಕಂಡು ಅವನ ಮನಸ್ಸಿನಲ್ಲಿ ಪಶ್ಚಾತ್ತಾಪ ಉದಯಿಸುತ್ತದೆ; ಈ ಮಹಾಸತಿಗೆ ತಾನು ಅನ್ಯಾಯ ಮಾಡಿದೆನೆಂಬ ಪರಿತಾಪ ಕಾಡುತ್ತದೆ. "ದೋರ್ಗರ್ವಮನಿರ್ವಲಂ ಪೊಗಟ್ವಿನಂ ಸೌಮಿತ್ರಿಯಂ ರಾಮನಂ ವಿರಥರ್ ಮಾಡಿ ರಣಾಗ್ರದೊಳ್ ಪಿಡಿದು ತಂದು ಆನ್ ಕೊಟ್ಟಪೆಂ ಸೀತೆಯಂ" ಎಂದು ತೀರ್ಮಾನಿಸುತ್ತಾನೆ. ತಿಳಿಯಾದ ನೀರು ಬಗ್ಗಡವಾದದ್ದು ಮತ್ತೆ ತಿಳಿಯಾದಂತಾಗುತ್ತದೆ. ಆದರೆ ರಾವಣನು ಲಕ್ಷ್ಮಣನನ್ನು ಎದುರಿಸಲಾರದೇ ಹೋದ. ಅವನ ಚಂದ್ರಹಾಸವನ್ನು ಲಕ್ಷ್ಮಣನು ತನ್ನ ಸೂರ್ಯಹಾಸದಿಂದ ಖಂಡಿಸುತ್ತಾನೆ. ರಾವಣನು ಸುದರ್ಶನ ಚಕ್ರವನ್ನು ಪ್ರಯೋಗಿಸಲು ಅದು ಲಕ್ಷ್ಮಣನನ್ನು ಪ್ರದಕ್ಷಿಣೆ ಬಂದು ನಿಂತುಬಿಡುತ್ತದೆ. ಆ ಚಕ್ರದಿಂದಲೇ ರಾವಣನನ್ನು ಹೊಡೆ ಎಂದು ಬಲಭದ್ರ ರಾಮನು ಲಕ್ಷ್ಮಣನಿಗೆ ಸಲಹೆಯೀಯಲು ಅವನು ಹಾಗೆಯೇ ಮಾಡುತ್ತಾನೆ; ದಶಶಿರನು ಗತಪ್ರಾಣನಾಗುತ್ತಾನೆ. ರಾವಣನ ಸಾವಿನಿಂದ ವಿಭೀಷಣನು ಮೂರ್ಛೆಹೋಗುತ್ತಾನೆ; ಅಂತಃಪುರ ಸ್ತ್ರೀಯರು ಗೋಳಾಡುತ್ತಾರೆ. ರಾವಣಸಂಹಾರಾನಂತರ ರಾಮನು ಲಕ್ಷ್ಮಣ-ಸೀತೆಯರೊಡನೆ ರಾವಣನ ಅರಮನೆಯನ್ನು ಸೇರಿ ಅಲ್ಲಿನ ಶಾಂತಿಜಿನಭವನದಲ್ಲಿ ಅರ್ಚನೆಗೈಯುತ್ತಾನೆ. ವಿಭೀಷಣಾದಿಗಳು ರಾಮಲಕ್ಷ್ಮಣರಿಗೆ ವೈಭವದಿಂದ ರಾಜ್ಯಾಭಿಷೇಕ ಮಾಡುತ್ತಾರೆ.

ಇತ್ತ, ಅಯೋಧ್ಯೆಯಲ್ಲಿ ರಾಮನನ್ನು ನೆನೆದು ಅಪರಾಜಿತೆಯು ಶೋಕಾಕುಲಿತಳಾಗಿರುವ ವಿಷಯವನ್ನು ತಿಳಿದು ರಾಮಲಕ್ಷ್ಮಣರು ಸೀತೆಯೊಡನೆ

ವಿಮಾನವನ್ನೇರಿ ಅಯೋಧ್ಯೆಯ ಕಡೆಗೆ ಪಯಣ ಬೆಳೆಸುತ್ತಾರೆ. ಕಾಲಾನುಕ್ರಮದಲ್ಲಿ ಲಕ್ಷ್ಮಣನಿಗೆ ತನ್ನ ವಿವಿಧ ಪತ್ನಿಯರಲ್ಲಿ ಎಂಟು ಮಂದಿ ಮಕ್ಕಳು ಹುಟ್ಟುತ್ತಾರೆ. ಸೀತೆಗೂ ಗರ್ಭಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಹೀಗಿರಲು ಒಮ್ಮೆ ಒಂದು ದಿನ ಹಳ್ಳಿಯ ಜನರ ತಂಡವೊಂದು ಬಂದು, ದುರಾತ್ಮನಾದ ರಾವಣನ ಮನೆಯಲ್ಲಿದ್ದ ಸೀತೆಯನ್ನು ರಾಮನು ಸ್ವೀಕರಿಸುವುದನ್ನು ಕುರಿತು ಆಕ್ಷೇಪಿಸುತ್ತಾರೆ. ಆಗ ರಾಮನು ಸೀತೆಯನ್ನು ಪರಿತ್ಯಜಿಸಲು ನಿರ್ಧರಿಸುತ್ತಾನೆ. ಅಯೋಧ್ಯೆಯ ಬಳಿಯಿರುವ ಸಮ್ಮೇದ ಪರ್ವತದ ಸಮೀಪದಲ್ಲಿನ ಜಿನಾಲಯಗಳನ್ನು ಸಂದರ್ಶಿಸಬೇಕೆಂಬ ಅವಳ ಬಯಕೆಯನ್ನು ತೀರಿಸುವ ನೆಪದಲ್ಲಿ ರಾಮನು ಸೀತೆಯನ್ನು ಕೃತಾಂತವಕ್ತ್ರನೆಂಬುವವನೊಡನೆ ಅರಣ್ಯಕ್ಕೆ ಕಳಿಸುತ್ತಾನೆ. ಅಂತೆಯೇ ಮಾಡಿದ ಅವನು ಕಣ್ಣೀರಿಡುತ್ತಾ ರಾಮನ ಇಂಗಿತವನ್ನರುಹಿ ಒಬ್ಬನೇ ಅಯೋಧ್ಯೆಗೆ ಮರಳುತ್ತಾನೆ.

ಇತ್ತ, ವಜ್ರಜಂಘನೆಂಬ ಅರಸುಕುವರನೊಬ್ಬನು ಸೀತೆಯನ್ನು ಕಂಡು ತನ್ನ ಊರಾದ ಪುಂಡರೀಕಿಣೀಪುರಕ್ಕೆ ಕರೆದೊಯ್ದು ತಂಗಿಯಂತೆ ಸಲಹುತ್ತಾನೆ. ನವಮಾಸಗಳು ತುಂಬಲು ಸೀತೆ ಅಲ್ಲಿಯೇ ಬಾಳಿ ಮಕ್ಕಳಿಗೆ ಜನನವೀಯುತ್ತಾಳೆ. ಅವರು ಬೆಳೆದು ದೊಡ್ಡವರಾಗುತ್ತಾರೆ. ಶಾಸ್ತ್ರ-ಶಸ್ತ್ರವಿದ್ಯೆಗಳನ್ನೆಲ್ಲ ಕಲಿಯುತ್ತಾರೆ; ಅವರಿಗೆ ಮದುವೆಯೂ ಆಗುತ್ತದೆ. ಚತುರಂಗಬಲದೊಡನೆ ಅವರು ದಿಗ್ವಿಜಯಯಾತ್ರೆಯನ್ನು ಕೈಗೊಂಡು ಎಲ್ಲರನ್ನೂ ಗೆಲ್ಲುತ್ತಾರೆ. ಅಲ್ಲಿಗೆ ಬಂದ ನಾರದನಿಂದ ಲವಕುಶರಿಗೆ ತಮ್ಮ ತಾಯಿಯ ಹಿಂದಿನ ವಿಷಯವೆಲ್ಲ ತಿಳಿಯುತ್ತದೆ. ಅವರು ಸಮಸ್ತಬಲದೊಡನೆ ಅಯೋಧ್ಯೆಗೆ ತೆರಳುತ್ತಾರೆ. ಅವರನ್ನೆದುರಿಸಲು ಸಾಧ್ಯವಾಗದ ರಾಮಲಕ್ಷ್ಮಣರಿಗೆ ನಭದಲ್ಲಿದ್ದ ನಾರದನು ಲವಕುಶರ ವಿಷಯವನ್ನು ತಿಳಿಸುತ್ತಾನೆ. ಅವರು ಲವಕುಶರನ್ನು ವಾತ್ಸಲ್ಯದಿಂದ ಅಯೋಧ್ಯಾಪುರಕ್ಕೆ ಕರೆದೊಯ್ಯುತ್ತಾರೆ; ಸೀತೆ ಪುಂಡರೀಕಿಣಿಪುರಕ್ಕೆ ವಾಪಸಾಗುತ್ತಾಳೆ. ಸುಗ್ರೀವ ಮುಂತಾದವರು ಸಚ್ಚರಿತೆಯಾದ ಸೀತೆಯನ್ನು ಕರೆಸಲು ಬೇಡಿಕೊಂಡಾಗ ರಾಮನು ಆಕೆಯ ಪಾತಿವ್ರತ್ಯದಲ್ಲಿ ತನಗೆ ನಂಬಿಕೆಯಿದ್ದರೂ ಅಪವಾದ ನಿವಾರಣೆಗಾಗಿ ಆಕೆಯನ್ನು ಅಗ್ನಿಪರೀಕ್ಷೆಗೆ ಗುರಿಪಡಿಸಿದ ನಂತರ ಸ್ವೀಕರಿಸುವುದಾಗಿ ಹೇಳುತ್ತಾನೆ. ಸೀತೆಯು ಪಂಚಪರಮೇಷ್ಠಿಗಳನ್ನು ನೆನೆದು ಅಗ್ನಿಯನ್ನು ಪ್ರವೇಶಿಸುತ್ತಾಳೆ; ತಿಳಿಗೊಳದಲ್ಲಿರುವಂತೆ ಅಲ್ಲಿ ನಿಶ್ಚಲಳಾಗಿರುತ್ತಾಳೆ. ಆಗ ರಾಮನು ತನ್ನ ತಪ್ಪನ್ನು ಮನ್ನಿಸಲು ಕೇಳಿಕೊಂಡು ಮುನ್ನಿನಂತೆ ತನ್ನೊಡನೆ ಬಾಳಲು ಹೇಳುತ್ತಾನೆ. ಕೇಡುಳ್ಳ ಸಂಸಾರದಲ್ಲಿದ್ದು ಪ್ರಯೋಜನವಿಲ್ಲವೆಂದೂ ಕೇಡಿಲ್ಲದ ಮೋಕ್ಷಕ್ಕೆ ಕಾರಣವಾದ ತಪಸ್ಸನ್ನು ಕೈಗೊಳ್ಳುವುದಾಗಿಯೂ ಹೇಳಿ ಸೀತೆಯು ಪೃಥುಮತಿ ಕಂತಿಯರ ಹತ್ತಿರ ದೀಕ್ಷೆ ಪಡೆಯುತ್ತಾಳೆ.

ರಾಮನು ಲಕ್ಷ್ಮಣನ ಮೇಲಿನ ಮೋಹದಿಂದ ಮೋಕ್ಷವನ್ನುಪೇಕ್ಷಿಸಿರುವನೆಂದು ಹೇಳಿದ ಸೌಧರ್ಮೇಂದ್ರನ ಮಾತನ್ನು ಪರೀಕ್ಷಿಸಲು ರತ್ನಚೂಲ-ಅಮೃತಚೂಲರೆಂಬ

ದೇವರುಗಳು ಭೂಮಿಗೆ ಬಂದು ರಾಮನು ಪರಲೋಕಪ್ರಾಪ್ತನಾದಂತೆ ರಾಮನಾಕೃತಿಯನ್ನು ನಿರ್ಮಿಸುತ್ತಾರೆ; ಅದನ್ನು ಕಂಡು ಲಕ್ಷ್ಮಣನು ಗತಪ್ರಾಣನಾಗುತ್ತಾನೆ. ರಾಮನು ಮೋಹದಿಂದ ಅವನ ಶವವನ್ನು ಆರು ತಿಂಗಳ ಕಾಲ ಹೊತ್ತುಕೊಂಡಿರುತ್ತಾನೆ. ದೇವಗತಿ ಪಡೆದಿದ್ದ ಜಟಾಯು–ಕೃತಾಂತವಕ್ತ್ರರು ಅವನ ಬಳಿ ಬಂದು ಬೋಧೆ ಮಾಡಿ ಅವನ ವಿಕಲತೆಯನ್ನು ಹೋಗಲಾಡಿಸುತ್ತಾರೆ. ಆನಂತರ ಲಕ್ಷ್ಮಣನ ದೇಹವನ್ನು ಸರಯೂನದಿ ತೀರದಲ್ಲಿ ಸಂಸ್ಕರಿಸಿ, ಅವನ ಹಿರಿಯ ಮಗನಿಗೆ ಪಟ್ಟ ಕಟ್ಟಿ ಸುವ್ರತ ಚಾರಣರ ಬಳಿ ರಾಮನು ದೀಕ್ಷೆ ಪಡೆಯುತ್ತಾನೆ. ಉಗ್ರೋಗ್ರ ತಪಸ್ಸನ್ನು ಕೈಗೊಂಡು ಶುಕ್ಲಧ್ಯಾನಪ್ರವಿಷ್ಟನಾಗಿ ಮಾಘ ಶುದ್ಧ ದ್ವಾದಶಿಯ ಬೆಳಗಿನ ಜಾವದಲ್ಲಿ ಕೇವಲಜ್ಞಾನವನ್ನು ಪಡೆಯುತ್ತಾನೆ. ದೇವತೆಗಳು ರಾಮಕೇವಲಿಯನ್ನು ಪೂಜಿಸುತ್ತಾರೆ. ಇಪ್ಪತ್ತೈದು ವರ್ಷಗಳ ಕಾಲ ರಾಮಕೇವಲಿಯು ಪೂಜೆಗೊಂಡು ಅನಂತರ ಮುಕ್ತಿಯನ್ನು ಪಡೆಯುತ್ತಾನೆ. ದೇವತೆಗಳು ರಾಮಕೇವಲಿಯನ್ನು ಪೂಜಿಸುತ್ತಾರೆ. ಆಗ ಹೂಮಳೆಯಾಯಿತು. ದೇವನಿಕಾಯುವೆಲ್ಲ ಅವನ ನಿರ್ವಾಣಪೂಜೆಗೈದರು.

ನಾಗಚಂದ್ರನ ಕಾವ್ಯವು ಕಥಾಸರಣಿಯಲ್ಲಿ ವಿಮಲಸೂರಿಯನ್ನು ಅನುಸರಿಸಿದ್ದರೂ, ಕೆಲವು ವೈಶಿಷ್ಟ್ಯಗಳಿಂದ ಕೂಡಿ ಗಣ್ಯವಾಗಿದೆ. ಅದರಲ್ಲಿ ಮುಖ್ಯವಾದುದು ರಾವಣನನ್ನು ದುರಂತಪಾತ್ರವಾಗಿಸಿದ್ದು, ಇದರ ಸುಳುಹು ವಿಮಲಸೂರಿಯಲ್ಲಿಯೇ ಇದ್ದರೂ ಅದನ್ನು ನಾಗಚಂದ್ರನು ತನ್ನ ವರ್ಣನೆ ಮತ್ತು ವಿಶ್ಲೇಷಣೆಗಳ ಮೂಲಕ ಸ್ಪಷ್ಟವಾಗಿ ಕಡೆಯುತ್ತಾನೆ. ಉದಾತ್ತನಾಗಿ ಶತ್ರುಗಳನ್ನೂ ಕೊಲ್ಲದೆ ಬಿಟ್ಟ, ಅನ್ಯಾಂಗನಾವಿರತಿ ವ್ರತವನ್ನು ತೊಟ್ಟು ಶುಚಿಯನ್ನು ಕಾಪಾಡಿಕೊಂಡಿದ್ದ ರಾವಣನು ಸೀತೆಯ ಮೇಲೆ ಮೋಹಗೊಂಡದ್ದು ಕಾಲಮಹಿಮೆ ಅಥವಾ ವಿಧಿಯ ಸಂಚಿನಿಂದ ಎಂದು ವಿಶ್ಲೇಷಿಸುವುದರ ಮೂಲಕ ಕವಿಯು, ಪಂಪನು ದುರ್ಯೋಧನ ಪಾತ್ರವನ್ನು ಮಾನವೀಕರಣಗೊಳಿಸುವುದರ ಮುಂದಿನ ಹೆಜ್ಜೆಯಾಗಿ ರಾವಣನನ್ನು ದುರಂತಪಾತ್ರವಾಗಿಸಿದ್ದಾನೆ. ಇದು ಕೇವಲ ರಾವಣನಿಗೆ ಸಂಬಂಧಿಸಿದ ಪ್ರಶ್ನೆಯಲ್ಲ, ಕಾಣದ ಶಕ್ತಿ ಬದುಕಿನಲ್ಲಿ ಪ್ರವೇಶಿಸಿ ದಾಂಧಲೆ ಮಾಡುವ ಬಗೆಯನ್ನು ಕುರಿತಂತೆ ಎಲ್ಲ ಮಾನವರನ್ನೂ ಪೀಡಿಸುವ ಸಮಸ್ಯೆ. ಹಾಗಾಗಿ ಮಾನವ ಬದುಕಿನಲ್ಲಿನ ವಿಧಿಯ ಪಾತ್ರವನ್ನು ಕುರಿತ ಚಿಂತನೆಯಾಗಿ ಇದು ಇಲ್ಲಿ ಸಾಧಾರಣೀಕರಣಗೊಂಡಿದೆ. ಆ ಕಾರಣದಿಂದಲೇ ಬಿಎಂಶ್ರೀ ಅವರು ನಾಗಚಂದ್ರನ ರಾವಣನನ್ನು ಗ್ರೀಕ್ ದುರಂತ ನಾಯಕರ ಜೊತೆಯಲ್ಲಿ ಹೋಲಿಸಿದುದು. ಶ್ರೇಷ್ಠ ವ್ಯಕ್ತಿಯಾಗಿದ್ದರೂ ರಾವಣ ಏಕೆ ಸಲ್ಲದ ಕೃತ್ಯಗಳನ್ನು ಕೈಗೊಂಡ ಎಂಬುದಕ್ಕೆ ನಾವು ಕೊಡಬಹುದಾದ ಏಕೈಕ ಉತ್ತರ: ವಿಧಿ. ಅವನ ದುರಂತವನ್ನು ಚಿತ್ರಿಸುವ ಹಿನ್ನೆಲೆಯಲ್ಲಿ ನಾಗಚಂದ್ರನು ನೀಡುವ ರಾವಣನ ಪಾತ್ರದ ಔಜ್ವಲ್ಯವನ್ನು ಇಲ್ಲಿ ಪರಿಶೀಲಿಸಬಹುದು.

ಹಿಂದೆಯೇ ನೋಡಿದಂತೆ ರಾವಣ ತನ್ನನ್ನು ಎದುರಿಸಿದ ಯಾವ ರಾಜನನ್ನೂ ಕೊಲ್ಲುವುದಿಲ್ಲ. ಅವನು ಅಷ್ಟು ದಯಾಳು. ಹಾಗೆಯೇ ಅವನು ಪರಾಂಗನಾವಿರತಿವ್ರತವನ್ನು ಅನುಸರಿಸುತ್ತಿದ್ದವನು, ಅಂಥವನು ಸೀತೆಯನ್ನು ಕಂಡಾಕ್ಷಣ ಅವಳಲ್ಲಿ ಮೋಹಗೊಂಡದ್ದು ಗ್ರೀಕ್ ದುರಂತನಾಯಕನ ಹಮಾರ್ಷಿಯ(hamartia)ದಂತೆ ಅವನ ದುರಂತಕ್ಕೆ ಕಾರಣವಾಯಿತು; ಅವನ ಪರಾಂಗನಾವಿರತಿವ್ರತನಿಷ್ಠೆಯ ಸ್ವರೂಪವು ಯತಿಗಳ ಪಾದಮೂಲದಲ್ಲಿ ಸ್ವೀಕರಿಸುವ ಮೊದಲೇ ಖಚಿತವಾಗಿತ್ತು. ಅದು ವ್ಯಕ್ತವಾಗುವುದು ಉಪರಂಭೆಯ ಪ್ರಸಂಗದಲ್ಲಿ. ರಾವಣನು ದಿಗ್ವಿಜಯಯಾತ್ರೆಯನ್ನು ಕೈಗೊಂಡು ನಳಕೂಬರನೆಂಬ ರಾಜನು ಆಳುತ್ತಿದ್ದ ದುರ್ಲಂಘ್ಯಪುರದ ಬಳಿ ಬಂದ. ಆದರೆ ಆ ಊರಿನ ದುರ್ಗ ದುರ್ಗಮವಾದದ್ದು; ನಳಕೂಬರನು ಒಂದು ಯೋಜನ ದೂರದಲ್ಲಿದ್ದವನ್ನೂ ನುಂಗಬಲ್ಲ ಬೇತಾಳ ಯಂತ್ರಗಳು, ದೂರದಲ್ಲಿ ನಿಂತಿದ್ದವರನ್ನು ಫೂತ್ಕರಿಸುತ್ತ ಅಟ್ಟಿಸಿಕೊಂಡು ಹೋಗಿ ಕಚ್ಚುವ ಮಹಾ ಉರಗಗಳು, ದೂರದಲ್ಲಿದ್ದುವನ್ನು ಸುಡುವ ಕೆಂಜುರಿಯ ಪ್ರಾಕಾರಗಳು, ನಾನಾ ಬಗೆಯಲ್ಲಿ ಉಪದ್ರವ ನೀಡಬಲ್ಲ ರೌದ್ರಮೃಗಗಳು – ಇವುಗಳನ್ನೊಳಗೊಂಡ ವಜ್ರಸಾಲ ಎಂಬ ಕೋಟೆಯನ್ನು ಅವನು ನಿರ್ಮಿಸಿದ್ದ. ಅದನ್ನು ವಶಪಡಿಸಿಕೊಳ್ಳುವುದು ಹೇಗೆಂಬ ಯೋಚನೆ ರಾವಣನನ್ನು ಕಾಡಿತು. ಇತ್ತ, ನಳಕೂಬರನ ಕುಲಾಂಗನೆಯಾದ ಉಪರಂಭೆಯು ನಿಡುಗಾಲದಿಂದ ರಾವಣನ ಬಗ್ಗೆ ಮೋಹವಿರಿಸಿಕೊಂಡಿದ್ದವಳು, ಅವನು ಸಮೀಪ ಬಂದುದರಿಂದ ಕಾಮಕಾತರೆಯಾಗಿ ತನ್ನ ಕೆಳದಿಯ ಮೂಲಕ ಸಂದೇಶವೊಂದನ್ನು ಕಳಿಸುತ್ತಾಳೆ. ದೂತಿಯು ರಾವಣನ ಬಳಿ ಬಂದು "ಏ ಪೊಗಳ್ವೆನ್, ಅತನು ವಿದ್ಯಾದೇವತೆ ನಿರತಿಶಯಮೆನಿಪ ರೂಪಿಂ, ವಿದ್ಯಾದೇವತೆ ಸಾಮರ್ಥ್ಯದಿಂ ಎನಿಪ ಆ ವಧು ಬರೆ, ದೇವ, ನಿನಗೆ ತೀರದುದುಂಟೆ?" ಎನ್ನುತ್ತಾಳೆ. ಆದರೆ ಅವನಿಗೆ ಅವಳ ಮೇಲೆ ಆಸಕ್ತಿಯಿಲ್ಲ. ವಿಭೀಷಣನೊಡನೆ ಈ ವಿಷಯವನ್ನು ಪ್ರಸ್ತಾಪಿಸಿ, ಅವನ ಸಲಹೆಯಂತೆ, ಅವಳನ್ನು ಉಪಾಯದಿಂದ ಸಂಧಿಸಿ ದುರ್ಲಂಘ್ಯಪುರದ ಕೋಟೆಯನ್ನು ಒಡೆಯುವ ಪ್ರತಿಸಾಲಭಂಜಿನಿಯನ್ನು ಕಲಿಯಬೇಕೆಂದು "ಒಡಂಬಟ್ಟೆನ್, 'ಆಕೆಯಂ ತಾಯೆಂ' ದು" (ಕರೆದು ತಾ ಎಂದು ಮತ್ತು ತಾಯಿ ಎಂದು) ಶ್ಲೇಷೆಯಿಂದ ಹೇಳಿಕಳಿಸುತ್ತಾನೆ. ರಾವಣನನ್ನು ಏಕಾಂತದಲ್ಲಿ ಭೇಟಿಯಾದ ಉಪರಂಭೆಯು ಅವನಿಗೆ ವಿದ್ಯೆಯನ್ನು ಹೇಳಿಕೊಡುತ್ತಾಳೆ. ಅದರ ನೆರವಿನಿಂದ ಕೋಟೆಯನ್ನು ಗೆದ್ದ ರಾವಣನು ಅವಳಿಗೆ "ನೀಂ ವಿಶುದ್ಧಕುಲದ ಕುಶಧ್ವಜಂಗಂ ಮಧುಕಾಂತೆಗಂ ಪುಟ್ಟಿದುದಱಿಂ ನಿಜಕುಲಾಚಾರಮಂ ಬಗೆದು ಶೀಲಪರಿಪಾಲನಂ ಮಾಟ್ಪುದು; ಅಂತಲ್ಲದೆಯುಂ ನೀನ್ ಎನಗೆ ವಿದ್ಯೋಪದೇಶಂಗೆಯ್ದುದಱಿಂ ಗುರುವಾದೆ" ಎಂದು ತಿಳಿವಳಿಕೆಯನ್ನು ಹೇಳಿ ಅವಳು ಗಂಡನೊಡನೆ ಬಾಳುವಂತೆ ಮಾಡುತ್ತಾನೆ; ನಳಕೂಬರನ ಬಗ್ಗೆ ತನ್ನ ಮಗನೇನೋ ಎಂಬಂತಹ ವಾತ್ಸಲ್ಯವನ್ನು ತೋರಿಸಿ ಅವನಿಗೆ ಮರಳಿ ರಾಜ್ಯವನ್ನೀಯುತ್ತಾನೆ.

ಈ ಪ್ರಸಂಗದ ಹಿನ್ನೆಲೆಯಲ್ಲಿ ರಾವಣನು ಸೀತೆಯನ್ನಪಹರಿಸುವ ಸನ್ನಿವೇಶವನ್ನು ಪರಿಭಾವಿಸಬೇಕು. ತನ್ನ ತಂಗಿಯಾದ ಚಂದ್ರನಖಿಯ ಮಗ ಶಂಭುಕನನ್ನು ಕೊಂದವನನ್ನು ಸಂಹರಿಸಲೆಂದು ರಾವಣನು ದಂಡಕಾರಣ್ಯಕ್ಕೆ ಬರುತ್ತಾನೆ. ಅವನಿಗೆ ಮೊದಲು ಕಾಣಿಸಿದ್ದೇ ಸೀತೆ; ಅವಳು ಹೇಗಿದ್ದಳು? "ಬರಸಿಡಿಲ ಬೞಿವಿಡಿದು ಪೊಳೆವ ಕುಡುಮಿಂಚಿನಂತೆ." ಸೀತೆಯೇನೋ ಕುಡುಮಿಂಚು; ಆದರೆ ಅವಳ ಪಕ್ಕದಲ್ಲಿದ್ದ ರಾಮ ಬರಸಿಡಿಲು! ರಾವಣನಿಗೆ "ಬಲೆ ದೃಷ್ಟಿಗೆ, ವಜ್ರದ ಸಂಕಲೆ ಹೃದಯಕ್ಕೆ ಎನಿಪ ಸೀತೆ ಕಣ್ ಪೊಲದೊಳಿರೆ ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ." ರಾವಣನ ವಿರುದ್ಧ ಸಂಚು ಮಾಡುತ್ತಿದ್ದ ಮನ್ಮಥನು "ಪಲರುಂ ವಿದ್ಯಾಧರಸ್ತ್ರೀಯರುಂ ಅಮರಸ್ತ್ರೀಯರುಂ ಮಾನವಸ್ತ್ರೀಯರುಂ ತಮ್ಮೊಲವಿಂ ಮೇಲ್ವಾಯ್ದೊಡಂ ಮುಂ ಬಗೆಯದ ಬಗೆ ಏನಾದುದು ಎಂದು ಉದ್ಧತಂ ಮೂದಲಿಸುತ್ತುಂ 'ರೂಪಿನೊಳ್ ಮಚ್ಚರಿಸುವನ್ ಎನಗೆ' ಎಂದು ಅಂಬನ್ ಅಂಬು ಅಟ್ಟುವನ್ನಂ ಪಲಕಾಲಕ್ಕೇಸುವೆತ್ತಂ ದಶಮುಖನ್ ಎನುತುಂ ಮನ್ಮಥಂ ಮಾಣದೆ ಎಚ್ಚಂ" ('ಹಲವು ಮಂದಿ ವಿದ್ಯಾಧರಸ್ತ್ರೀಯರೂ ದೇವತಾಸ್ತ್ರೀಯರೂ ಮಾನವಸ್ತ್ರೀಯರೂ ತಾವಾಗಿ ಮೇಲೆ ಬಿದ್ದು ಬಂದು ಒಲಿದರೂ ಅದನ್ನು ಕಡೆಗಣಿಸಿದ ಇವನ ಬಗೆ ಏನಾಯಿತು' ಎನ್ನುತ್ತ, 'ರೂಪದಲ್ಲಿ ತನ್ನೊಂದಿಗೇ ಸ್ಪರ್ಧಿಸುತ್ತಾನಲ್ಲ' ಎಂಬ ಸಿಟ್ಟಿನಿಂದ, 'ಬಹುಕಾಲದ ನಂತರ ತನ್ನ ಬಾಣಕ್ಕೆ ಆಹುತಿಯಾಗಲು ಸಿಕ್ಕಿದ್ದಾನೆ' ಎಂದುಕೊಂಡು ಮನ್ಮಥನು ರಾವಣನ ಮೇಲೆ ಒಂದೇ ಸಮನೆ ಬಾಣಗಳನ್ನು ಬಿಟ್ಟ). ಇದರಿಂದ ತತ್ತರಗೊಂಡ ರಾವಣನ ಪರಾಂಗನಾವಿರತಿವ್ರತ ಸೋರಿಹೋಯಿತು; "ವಿಹಿತಾಚಾರಮನ್, ಅನ್ವಯಾಗತಗುಣಪ್ರಖ್ಯಾತಿಯಂ, ದುಷ್ಟನಿಗ್ರಹಶಿಷ್ಟಪ್ರತಿ ಪಾಲನಕ್ಷಮತೆಯಂ ಕಯ್ಗಾಯದೆ ಅನ್ಯಾಂಗನಾಸ್ಪೃಹೆಯಂ ತಾಳ್ದಿದನಲ್ತೆ 'ಕಾಲವಶದಿಂ' ಲಂಕೇಶ್ವರಂ! ವಿಸ್ಮಯಾವಹಂ, ಅಬ್ಧಿಯುಮ್ ಒರ್ಮೆ 'ಕಾಲವಶದಿಂ' ಮರ್ಯಾದೆಯಂ ದಾಂಟದೇ!" (ತನ್ನ ಶ್ರೇಷ್ಠ ನಡವಳಿಕೆಯನ್ನೂ ವಂಶದಲ್ಲಿ ಬಂದ ಗುಣಪ್ರಖ್ಯಾತಿಯನ್ನೂ, ದುಷ್ಟನಿಗ್ರಹಶಿಷ್ಟರಕ್ಷಣ ಗುಣವನ್ನೂ ಕಾಪಾಡಿಕೊಳ್ಳದ ರಾವಣನು ಕಾಲವಶದಿಂದ ಪರಸ್ತ್ರೀಯರಲ್ಲಿ ಮೋಹಿತನಾದ. ಕಾಲವಶದಿಂದ ಒಮ್ಮೊಮ್ಮೆ ಸಾಗರವೂ ತನ್ನ ಮರ್ಯಾದೆಯನ್ನು ಮೀರುತ್ತದಲ್ಲವೇ?) ರಾವಣ ತನ್ನ ವ್ರತವನ್ನು ಉಲ್ಲಂಘಿಸಿದ್ದು ಕಾಲದ ಮಹಿಮೆಯಿಂದ, ಅದು ಸಾಗರವು ಮೇರೆ ಮೀರುವುದನ್ನು ಹೋಲುತ್ತಿತ್ತು. ಕವಿಚೇತನ ರಾವಣನನ್ನು ಸಾಗರಕ್ಕೆ ಹೋಲಿಸುತ್ತದೆ; ಆ ಮೂಲಕ ಅವನ ವ್ಯಕ್ತಿತ್ವದ ಘನತೆಯನ್ನು ಎತ್ತಿ ತೋರಿಸುತ್ತದೆ.

ಮೋಹದಿಂದಾಗಿ ರಾವಣ ತನ್ನ ಗಟ್ಟಿತನವನ್ನು ಕ್ಷಣಾರ್ಧದಲ್ಲಿ ಕಳೆದುಕೊಂಡ ಚಿತ್ರವನ್ನು ಕವಿ ಮಾರ್ಮಿಕವಾಗಿ ವರ್ಣಿಸುತ್ತಾನೆ: "ಪರವಧುಗೆ ಆಸೆಗೆಯ್ವ ಅಧಿಕ ಪಾತಕಮ್ ಒಂದು, ರಘುಪ್ರವೀರನೊಳ್ ಧುರದೊಳ್ ಇದಿರ್ಚದೆ ಓಸರಿಸಿ ವಂಚಿಸಿ

ಸೀತೆಯನುಯ್ವ ಭೀತಿಯೊಂದು, ಎರಡಱೊಳಂ ಜಸಂ ಮಸುಳೆ, ತನ್ನವಲೋಕಿನಿಯಂ ದಶಾನನಂ ಸ್ಮರಿಸಿದಂ, ಆತ್ಮಸತ್ವಗುಣಹಾನಿಯೇ ಸೂಚಿಸದೆ ವಿನಾಶಮಮಂ". ಅನ್ಯ ಸ್ತ್ರೀಯಲ್ಲಿನ ಮೋಹವು ರಾಮನನ್ನು ಎದುರಿಸಲಾಗದ ಆತ್ಮವಿಶ್ವಾಸಹೀನತೆಗೂ ಮೋಸದಿಂದ ಗಂಡಹೆಂಡಿರನ್ನು ಬೇರ್ಪಡಿಸುವ ವಂಚನೆಗೂ ಎಡೆಗೊಡುತ್ತದೆ. ಇದು ಅವನ ವಿನಾಶವನ್ನೇ ಮುನ್ಸೂಚಿಸುತ್ತಿದೆ. ಅವನು ನೆನೆಸಿಕೊಂಡ ತಕ್ಷಣ ಅವಲೋಕಿನೀ ವಿದ್ಯಾದೇವತೆ ಎದುರು ನಿಂತಳು; ಅವಳನ್ನು ಕಂಡ ರಾವಣನ ಪ್ರಶ್ನೆ 'ಎದುರಿಗಿರುವವರು ಯಾರು ಅವರನ್ನು ಬೇರ್ಪಡಿಸುವ ಉಪಾಯ ಯಾವುದು' ಎಂಬುದು. ಈ ಪ್ರಶ್ನೆಯಿಂದಲೇ ಅವನ ಮನಸ್ಸಿನ ಲೆಕ್ಕಾಚಾರವನ್ನು ಅರಿತು ದೇವತೆ 'ಭಯಚಕಿತೆ'ಯಾದಳು.

ರಾವಣನಿಗೆ ಕೆಲವು ಬುದ್ಧಿಮಾತುಗಳನ್ನು ಹೇಳಿದಳು: "ಆರಯ್ಯೆ ವಿರೋಧಂ ಸಾಧಾರಣಪುರುಷರೊಳಂ ಉಚಿತಂ ಅಲ್ತು; ಅಧಿಕಬಲರ್, ಕಾರಣಪುರುಷರ್ ಇವರ್; ನಿಷ್ಕಾರಣವಿವರೊಳ್ ವಿರೋಧಮಂ ಮಾಡುವುದೇ?" (ಸಾಮಾನ್ಯರನ್ನು ಕೂಡಾ ದ್ವೇಷಿಸಬಾರದು; ಹಾಗಿರುವಾಗ ಅಧಿಕಬಲರೂ ಕಾರಣಪುರುಷರೂ ಆದ ಇವರ ವಿರೋಧವನ್ನೇಕೆ ಕಟ್ಟಿಕೊಳ್ಳುತ್ತೀಯೆ?) "ಕಾವ ಬೆಸಂ ನಿನ್ನದು ಸಕಲ ಅವನಿಯಂ, ಅಧರ್ಮನಿರತರಂ ನಿಯಮಿಸಿ; ನೀನ್ ಈ ವಿಷಯಕ್ಕೆಱಗುವುದುಂ 'ಕಾವರೆ ಕಣೆಗೊಂಡರ್' ಎಂಬ ನುಡಿಗೆ ಎಡೆಯಕ್ಕುಂ" (ಅಧರ್ಮದಲ್ಲಿ ನಿರತರಾದವರನ್ನು ಹಿಡಿತದಲ್ಲಿರಿಸಿಕೊಂಡು ರಾಜ್ಯವನ್ನು ಕಾಪಾಡುವ ಕರ್ತವ್ಯ ನಿನ್ನದಾಗಿರುವಾಗ, ನೀನೇ ವಿಷಯ ಸುಖಕ್ಕೆ ಬಲಿಯಾಗುವುದೇ? ಇದರಿಂದ ಕಾಪಾಡಬೇಕಾದವರೇ ಕತ್ತಿ ಹಿಡಿದರು ಆದಂತಾಗುವುದಿಲ್ಲವೇ?) "ಅನ್ನೆಯದಿಂ ನಡವವರನ್ ನೀನ್ ನಿಯಮಿಸುವಯ್, ದಶಾಸ್ಯ, ಪೆಱನ್ ಆವಂ ನಿನ್ನನ್ ನಿಯಮಿಸುವಂ? ಮುನ್ನೀರ್ ಬೆನ್ನೀರ್ ಎನೆ ಬೆರಸಲ್, ಅಣ್ಣ, ತಣ್ಣೀರ್ ಒಳವೇ?" (ಅನ್ಯಾಯ ಮಾರ್ಗದಲ್ಲಿ ನಡೆಯುವವರನ್ನು ರಾಜನಾದ ನೀನು ನಿಯಂತ್ರಿಸುತ್ತೀಯೆ; ಆದರೆ ಎಲೈ ರಾವಣನೇ, ನೀನು ತಪ್ಪಿ ನಡೆದರೆ ನಿನ್ನನ್ನು ಶಿಕ್ಷಿಸುವವರಾರು? ಸಮುದ್ರದ ನೀರೆಲ್ಲ ಬಿಸಿಯಾದರೆ ಅದನ್ನು ತಣ್ಣಗಾಗಿಸಲು ತಣ್ಣೀರನ್ನು ಎಲ್ಲಿಂದ ತರುವುದು?) ಈ ರೀತಿಯಿಂದ ವಿದ್ಯೆ ರಾವಣನ ಮನಸ್ಸನ್ನು ಬದಲಿಸಲು ಪ್ರಯತ್ನಿಸಿತು. ಆದರೆ ಕಾಮನ ಜಯಭೇರಿಯ ನಾದವೇ ತುಂಬಿಕೊಂಡಿದ್ದುದರಿಂದ ದೇವತೆಯ ಬುದ್ಧಿಮಾತುಗಳು ರಾವಣನ ಕಿವಿಯನ್ನು ಹೋಗಲೇ ಇಲ್ಲ! 'ಜನಕಜೆಯನ್ ಉಯ್ಯೆ ದಶರಥತನೂಜರಿಂ ಮರಣಮಾಗಲೆಂದಿರ್ಪುದು' (ಸೀತೆಯನ್ನು ಕದ್ದೊಯ್ದು ದಶರಥಕುಮಾರರಿಂದ ಸಾಯಬೇಕೆಂಬುದು ಇವನ ಹಣೆಯಲ್ಲಿ ಬರೆದಿದೆ) ಎಂದುಕೊಂಡು ದೇವತೆಯು ವಿಧಿಯಿಲ್ಲದೆ, ಯುದ್ಧಕ್ಕೆ ಹೋಗುವಾಗ ತನಗೇನಾದರೂ ಕೇಡುಂಟಾದರೆ ಸಿಂಹನಾದ ಮಾಡುವುದಾಗಿಯೂ ಆಗ ತನ್ನ ನೆರವಿಗೆ ಬರಬೇಕೆಂದೂ ರಾಮನಿಗೆ ಹೇಳಿ ಲಕ್ಷ್ಮಣನು ಹೋಗಿದ್ದಾನೆ ಎಂಬ ವಿಷಯವನ್ನು ತಿಳಿಸಿ, ರಾವಣನ ಆಜ್ಞೆಯಂತೆ

ರಾಮಸೀತೆಯರಿಗೆ ಮಾತ್ರ ಕೇಳುವಂತೆ ಸಿಂಹನಾದ ಮಾಡುತ್ತಾಳೆ. ಆಗಬೇಕಾದ ಘಟನೆಗಳೆಲ್ಲ ಪೂರ್ವನಿಶ್ಚಿತ; ಹೀಗಾಗಿ ಸಿಂಹನಾದವನ್ನು ಕೇಳಿದ ರಾಮನನ್ನೂ ಮಂಕು ಆವರಿಸಿದಂತೆ, "ಧುರದೊಳ್ ದುರ್ಜಯನ್ ಆರ್ಗಮ್ ಎನ್ನ ಅನುಜನ್ ಎಂಬ ಈ ನಿಶ್ಚಯಂಗೆಟ್ಟು, 'ಸಿಂಹರವಂ ತೋಱಿದನ್, ಆಹವಂ ವಿಷಮಂ' ಎಂಬೀ ವಿಸ್ಮಯಂ ಚಿತ್ತದೊಳ್ ದೊರೆಕೊಂಡತ್ತು ರಘೂದ್ವಹಂಗಂ' ಉಱಿದಂದು ಎಂತಕ್ಕುಮೋ! ಜಾನಕೀಹರಣಂ ಕರ್ಮವಿಪಾಕಂ, ಆರ ಬಗೆಗಂ ವೈಕಲ್ಯಮಂ ತಾರದೇ!" (ಲಕ್ಷ್ಮಣನನ್ನು ಯುದ್ಧದಲ್ಲಿ ಸೋಲಿಸಲು ಯಾರಿಗೂ ಸಾಧ್ಯವಿಲ್ಲ ಎಂಬ ಅಂಶವನ್ನೇ ಮರೆತ ರಾಮ, ಲಕ್ಷ್ಮಣನು ಸಿಂಹನಾದ ಮಾಡಿದ್ದಾನೆ, ಅವನಿಗೆ ಏನೋ ಕೇಡೊದಗಿದೆ' ಎಂಬ ಭಾವನೆಯಿಂದ ಕೂಡಿದ. ವಿಧಿಯ ನಿರ್ಧಾರದಂತೆ ಆಗಬೇಕಾದುದು ನಡೆಯಲು ಎಂತಹವರ ಮನಸ್ಸೂ ವಿಕಲಗೊಳ್ಳುವುದಲ್ಲವೇ?) ಅಂದರೆ ರಾಮನು ಈ ಸನ್ನಿವೇಶದಲ್ಲಿ ದಿಕ್ಕುಗೆಟ್ಟುದು ನಡೆಯಬೇಕಾದದ್ದು ನಡೆದೇ ತೀರುತ್ತದೆ, ಆ ಕಾರಣದಿಂದಲೇ ರಾಮನಿಗೂ ಮಂಕು ಆವರಿಸುವುದು! ಸೀತಾಪಹರಣದ ಸನ್ನಿವೇಶದಲ್ಲಿ ಕವಿ ಮತ್ತೆ ಮತ್ತೆ ವಿಧಿ ಮತ್ತು ಕಾಲಗಳ ಬಗ್ಗೆ ಪ್ರಸ್ತಾಪ ಮಾಡಿ, ರಾವಣ ಚಿತ್ರದ ಮೂಲಕ ಇಡೀ ಮಾನವನ ಬದುಕಿನಲ್ಲಿ ಅಗೋಚರ ಶಕ್ತಿಗಳು ದಾಂಧಲೆ ನಡೆಸುವ ಪರಿಯನ್ನು ಕುರಿತು ದಿಗ್ಭ್ರಮೆ ವ್ಯಕ್ತಪಡಿಸುತ್ತಾನೆ.

ಹೀಗೆ ರಾವಣನ ಅವಸಾನ ಹತ್ತಿರವಾಯಿತು. ಅವನು ಸೀತೆಯನ್ನು ಕದ್ದೊಯ್ಯುವ ರೀತಿಯನ್ನು ಕವಿ ವರ್ಣಿಸುವ ರೀತಿಯನ್ನು ನೋಡಿ: "ಅಱಿಪಿ ಪರವಧುಗೆ ಅಧೋಗತಿಗೆ ಇೞಿವುದನ್ ಅಭಿನಯಿಸುವಂತೆ ಸೀತೆಯ ಸಾರಣ್ಗೆ ಇೞಿದನ್ ನಭದಿಂ ಖಚರಂ; ಪೞಿಗಂ ಪಾಪಕ್ಕಂ ಅಂಜದವರ್ ಏಗೆಯ್ಯರ್" (ಪರಸ್ತ್ರೀಗೆ ಆಸೆ ಪಟ್ಟು ದುರ್ಗತಿಗೆ ಇಳಿಯುವುದನ್ನು ಅಭಿನಯಿಸಿ ತೋರಿಸುವಂತೆ ಖೇಚರಚಕ್ರವರ್ತಿಯಾದ ರಾವಣನು ನೆಲಕ್ಕಿಳಿದ; ನಿಂದೆ-ಪಾಪಗಳಿಗೆ ಹೆದರದವರು ಏನು ತಾನೇ ಮಾಡಲಾರರು!) 'ದೋಷಿ ಪಿಡಿವಂತೆ ದಿವ್ಯದ ಕಾಸಿದ ಕುಟವಂ' (ಅಪರಾಧಿಯು ದಿವ್ಯವನ್ನು ಹಿಡಿಯುವಂತೆ) ರಾವಣನು ಸೀತೆಯನ್ನು ಹಿಡಿದುಕೊಂಡು ವಿಮಾನವನ್ನು ಹತ್ತಿದ.

ಮುಂದೆ ರಾಮಲಕ್ಷ್ಮಣರು ಸುಗ್ರೀವಾದಿಗಳ ಜೊತೆಯಲ್ಲಿ ಲಂಕೆಯ ಮೇಲೆ ದಾಳಿ ನಡೆಸಿದಾಗ, ಅಸಾಧಾರಣರಾದ ಅವರನ್ನು ಬಹುರೂಪಿಣಿ ವಿದ್ಯೆಯನ್ನು ಸಾಧಿಸಿ ಗೆಲ್ಲುವೆನೆಂದು ಬಗೆದು ರಾವಣನು ನಿಶ್ಚಲನಾಗಿ ಧ್ಯಾನಿಸಿ ವಿದ್ಯೆಯನ್ನು ಕೈವಶಮಾಡಿಕೊಂಡು ಬೀಗುತ್ತಾನೆ. ಸೀತೆಯ ಬಳಿ ಬಂದು "ಬಹುರೂಪಿಣಿ ವಿದ್ಯೆ ಸಾಧಿತವಾದುದು, ಎನಗೆ ಅಸಾಧ್ಯಮಪ್ಪ ಮಱುವಕ್ಕಮ್ (ಎದುರು ಪಕ್ಷ) ಇಲ್ಲ, ನಿನ್ನ ನೆಚ್ಚಿನ ರಾಮನ ದೆಸೆಯಂ ಬಿಟ್ಟು ಎನಗೆ ಒಡಂಬಟ್ಟು ಸಾಮ್ರಾಜ್ಯಸುಖಮನ್ ಅನುಭವಿಸು" ಎಂದು ಕೇಳುತ್ತಾನೆ. ಇದನ್ನು ಕೇಳಿ ಜಾನಕಿ ಮೂರ್ಛಿತಳಾಗುತ್ತಾಳೆ. ಇದರಿಂದ ಮತ್ತೆ ರಾವಣನ ವಿವೇಕ

ಜಾಗ್ರತವಾಗುತ್ತದೆ. "ಕದಡಿದ ಸಲಿಲಂ ತಿಳಿವಂದದೆ ತನ್ನಿಂ ತಾನೆ ತಿಳಿದ ದಶವದನಂಗೆ ಆದುದು ವೈರಾಗ್ಯಂ ಸೀತೆಯೊಳ್; ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ" (ಬಗ್ಗಡಗೊಂಡ ನೀರಿನಂತಿದ್ದ ರಾವಣನ ಮನಸ್ಸು ತಿಳಿಗೊಂಡಿತು; ಸೀತೆಯ ಬಗ್ಗೆ ವೈರಾಗ್ಯಭಾವ ಮೂಡಿತು' ಉದಾತ್ತನಾದವನಲ್ಲಿ ಸ್ಥಿರವ್ಯಾಮೋಹ ಉಂಟಾಗುವುದಿಲ್ಲ ಅಲ್ಲವೇ!) ಅವನಿಗೆ ಸೀತೆಯ ಬಗ್ಗೆ ಕರುಣೆಯುಕ್ಕಿತು; "ಇವರಂ ಪ್ರಾಣಪ್ರಿಯರಂ ನೆವಮಿಲ್ಲದೆ, ಕರ್ಮವಶಮೆ ನೆವಮೆನೆ, ಕಂದರ್ಪವಿಮೋಹದಿಂದೆ ಅಗಲ್ಚಿದೆನ್ ಅವಿವೇಕಿಯೆನ್, ಎನ್ನ ಕುಲದ ಪೆಂಪು ಅೞಿವಿನೆಗಂ" (ಪ್ರಾಣಪ್ರಿಯರಾದ ರಾಮಸೀತೆಯರನ್ನು ಕರ್ಮವಶವೆ ನೆವವಾಗಿರಲು ಮೋಹವಶನಾಗಿ ನನ್ನ ಕುಲದ ಮಹಿಮೆಗೆ ಮಂಕು ಕವಿಯುವಂತೆ ಅವಿವೇಕಿಯಾದ ನಾನು ಬೇರೆ ಮಾಡಿದೆ) ಎಂದು ಹಲುಬುತ್ತಾನೆ. ಹಿಂದೆ ವಿಭೀಷಣನು ಹಿತವನ್ನು ಹೇಳಿದರೂ ಕೇಳದಿದ್ದ ತನ್ನ ಬಗ್ಗೆಯೇ ಅವನಿಗೆ ಬೇಸರವಾಗುತ್ತದೆ; ಮನಸ್ಸಿನಲ್ಲಿ ಹೀಗೆ ನಿಶ್ಚೈಸಿಕೊಳ್ಳುತ್ತಾನೆ: "ಇರದೆ ಉಯ್ದು ಈಗಳೆ ಕೊಟ್ಟೊಡೆ ಎನ್ನ ಕಡುಪುಂ ಕಟ್ಟಾಯಮುಂ ಬೀರಮುಂ ಬಿರುದುಂ ಬೀಸರಮ್ ಅಕ್ಕುಂ; ಅಂತಾಗದಂತಿರೆ ದೋರ್ಗರ್ವಮನ್ ಇರ್ವಲಂ ಪೊಗೞ್ವಿನಂ ಸೌಮಿತ್ರಿಯಂ ರಾಮನಂ ವಿರಥರ್ ಮಾಡಿ ರಣಾಗ್ರದೊಳ್ ಪಿಡಿದು ತಂದು ಆಂ ಕೊಟ್ಟಪೆಂ ಸೀತೆಯಂ" (ಈಗಲೇ ಹೋಗಿ ಸೀತೆಯನ್ನು ರಾಮನಿಗೊಪ್ಪಿಸಿದರೆ ನನ್ನ ಪರಾಕ್ರಮ ಸಾಮರ್ಥ್ಯ ಶೌರ್ಯ ಬಿರುದುಗಳಿಗೆ ಕುಂದುಂಟಾಗುತ್ತದೆ; ಆದ್ದರಿಂದ ಎರಡು ಕಡೆಯ ಸೈನ್ಯಗಳೂ ಹೊಗಳುವಂತೆ ರಾಮಲಕ್ಷ್ಮಣರನ್ನು ಯುದ್ಧರಂಗದಲ್ಲಿ ವಿರಥರನ್ನಾಗಿಸಿ ಆನಂತರ ಸೀತೆಯನ್ನು ಒಪ್ಪಿಸುತ್ತೇನೆ). ಇಲ್ಲಿಯೂ ಬಿಗುಮಾನವೆಂಬ – ಅವನೇ ಹೇಳಿದ? ಕರ್ಮವಶಕ್ಕೊಳಗಾಗಿ ರಾವಣನು ಯುದ್ಧಕ್ಕೆ ಹೋಗಿ ಸಾಯುತ್ತಾನೆ. ಸ್ವಲ್ಪ ಕಾಲ ತಿಳಿಯಾಗಿದ್ದ ಅವನ ಮನಸ್ಸು ಮತ್ತೆ ಬಗ್ಗಡಗೊಳ್ಳುತ್ತದೆ. ಆದರೆ ಈ ಸಲ ಮೋಹದ ಬದಲು ಬಿಗುಮಾನದಿಂದ ಅಥವಾ ಅಹಂಕಾರದಿಂದ; ಅದು ಮರುಕಳಿಸುವುದಕ್ಕೂ ವಿಧಿಯೇ ಕಾರಣ ತಾನೇ!

ಹೀಗೆ ನಾಗಚಂದ್ರನ ರಾವಣನು ದುರಂತನಾಯಕನಾಗುತ್ತಾನೆ. ತನ್ನದಲ್ಲದ ತಪ್ಪಿನಿಂದ, ಅಂದರೆ ಯಾರನ್ನಾದರೂ ಕಾಡಬಲ್ಲ ವಿಧಿಯ ಸಂಚಿಗೆ ಒಳಗಾಗಿ ಅವನು ದಿಕ್ಕು ತಪ್ಪುತ್ತಾನೆ. ಅವನ ಸ್ವಭಾವ ಪರಸ್ತ್ರೀಯರನ್ನು ಗೌರವಿಸುವಂಥದು; ಆದರೆ ವಿಧಿ ಅವನಿಂದ ಅದಕ್ಕೆ ವ್ಯತಿರಿಕ್ತ ಕೆಲಸವನ್ನು ಮಾಡಿಸಿತು. ರಾಮಸೀತೆಯರ ಪ್ರೇಮದ ಬಗ್ಗೆ ಗೌರವ ತಾಳಿ ತಿಳಿಗೊಂಡ ಮನಸ್ಸನ್ನು ವಿಧಿ ಮತ್ತೆ ಬಿಗುಮಾನದ ರೂಪದಲ್ಲಿ ಬಗ್ಗಡಗೊಳಿಸಿತು. ಮನುಷ್ಯರು ಕೆಲವು ವೇಳೆ ತಮ್ಮ ಸಹಜ ಸ್ವಭಾವಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದೇಕೆ ಎಂಬ ಚಿಂತೆ ರಾವಣನ ಪಾತ್ರವನ್ನು ಚಿತ್ರಿಸುವಾಗ ಕವಿಯ ಮನಸ್ಸನ್ನು ಕಾಡಿರುವಂತೆ ಕಾಣುತ್ತದೆ. ತಾನಾಗಿ ಬಂದ ಉಪರಂಭೆಗೆ ಬುದ್ಧಿ ಹೇಳಿದ್ದ

ರಾವಣ ಸೀತೆಯನ್ನು ಕಂಡಾಗ ಮೋಹಗೊಂಡಿದ್ದೇಕೆ ಎಂಬುದು ನಿಗೂಢ ಪ್ರಶ್ನೆ. ಈ ಬಗೆಯ ಚಿತ್ರಣದಿಂದಾಗಿ ಓದುಗನಿಗೆ ರಾವಣನ ಬಗ್ಗೆ ಸಹಾನುಭೂತಿಯುಂಟಾಗುತ್ತದೆ; ಮಾನವರನ್ನು ಕಾಣುವ ಅಗೋಚರ ಶಕ್ತಿಗಳ ಬಗ್ಗೆ ಆಕ್ರೋಶವುಂಟಾಗುತ್ತದೆ. ಹೀಗೆ ಮಾಡಬಲ್ಲ ಕವಿ ಶಕ್ತಿಯುತನೇ ಆಗಿರಬೇಕು. ನಾಗಚಂದ್ರ ಅಂಥವನು. ಕಾವ್ಯವನ್ನು ಓದುವಷ್ಟು ಕಾಲ ಓದುಗ ರಾವಣನ ಪರವಾಗಿಯೇ ಇರುತ್ತಾನೆ. ಹೀಗೆ, ಕಾಲ ಎಂತಹವನನ್ನಾದರೂ ಮಣಿಸಿಬಿಡಬಹುದೆಂಬ ಆಶಯ, ಸೂಕ್ಷ್ಮವಾದ ರೀತಿಯ ಮನೋಭಾವಚಿತ್ರಣ ಅವನದು.

ಇನ್ನು, ನಾಗಚಂದ್ರನ ಶೈಲಿಯ ಬಗ್ಗೆ ಒಂದೆರಡು ಮಾತುಗಳು: ಅಕ್ಷರ ವೃತ್ತರಚನೆಯಲ್ಲಿ ಗುರುಲಘುಗಳ (ಅರ್ಥಾತ್ ಗಣಗಳ) ನಿರ್ದಿಷ್ಟ ವಿನ್ಯಾಸದ ಕಾರಣದಿಂದ ಸಂಸ್ಕೃತದಲ್ಲಿನಂತೆಯೇ ಸಮಾಸಭೂಯಿಷ್ಟ ಶೈಲಿಯನ್ನು ಅನುಸರಿಸುವುದು ಮಾರ್ಗ ಕವಿಗಳ ಹಣೆಬರಹವಾಗಿತ್ತು; ಆದರೆ 'ದೇಸಿ'ಯನ್ನು ನೆಚ್ಚಿಕೊಂಡ ಪಂಪನಂತಹ ಸಮರ್ಥರು ಅಲ್ಲಿಯೂ, ಕನ್ನಡದ ಸಮಾಸಪದಗಳ ಬಳಕೆಯಲ್ಲಿಯೂ ಕನ್ನಡತನವನ್ನು ತುಂಬಿದರು. ಅವನನ್ನು ಅನುಸರಿಸಿದ ಮುಖ್ಯ ಕವಿ, ತನ್ನನ್ನು 'ಅಭಿನಂವ ಪಂಪ'ನೆಂದು ಅಭಿಮಾನದಿಂದ ಕರೆದುಕೊಂಡ ಕವಿಯಾದ ನಾಗಚಂದ್ರನು ರಚಿಸಿದ ರಾಮಾಯಣವು 'ರಾಮಚಂದ್ರಚರಿತ ಪುರಾಣ' ವಾದರೂ, ಅವನ ಪಂಪಾನುಸರಣೆಯಿಂದಾಗಿ 'ಪಂಪರಾಮಾಯಣ'ವೆಂದು ಪ್ರಸಿದ್ಧವಾಯಿತು. ಅಂತೆಯೇ ಅವನ ಶೈಲಿಯು ಸಂಸ್ಕೃತಭೂಯಿಷ್ಠವಾಗಿರುವಾಗಲೂ, 'ಕವಿರಾಜಮಾರ್ಗಕಾರನು ಹೇಳುವ' 'ಚತುರರುಚಿರ ಪದರಚನೆ'ಯನ್ನು ಒಳಗೊಂಡುದು. ಒಂದೆರಡು ಉದಾಹರಣೆಗಳನ್ನು ನೋಡೋಣ: "ಪ್ರಾಕೃತನಲ್ಲನ್ ಈ ದಶರಥಾಗ್ರ ತನೂಭವನ್: ಏಕವಾಕ್ಯನ್, ಆಶಾಕರಿಕರ್ಣ ಚಾಮರಯಶಂ, ಚರಮಾಂಗಂ, ಅನಂತವೀರ್ಯನ್, ಇಕ್ಷ್ವಾಕುಕುಲಾಮೃತಾರ್ಣವ ಸುಧಾಕಿರಣಂ, ರಣಮೇರು, ಲೋಕಲುಂಟಾಕ ನಿದಾಘ ತಾಪಹರ ವರ್ಷಣಮೇಘನ್, ಉದಾತ್ತರಾಘವಂ." ಶ್ರೀರಾಮನು ಉದಾತ್ತ ರಾಘವನೆಂಬುದಕ್ಕೆ ಕವಿಯು ಹೇಳುತ್ತಿರುವ ಗುಣಗಳನ್ನು ಪದವಿಭಾಗ ಮಾಡಿಕೊಂಡು ಓದಿದರೆ ಉದ್ದವಾದ ಹ್ರಸ್ವವಾದ ವಾಕ್ಯಖಂಡಗಳ ಮೂಲಕ ಶೈಲಿಯು ಓಲಾಡುತ್ತದೆ. ಬಳಸಿರುವ ಶಬ್ದಗಳಲ್ಲಿ ಬಹುಪಾಲು ಸಂಸ್ಕೃತದ ಶಬ್ದಗಳು, ಆದರೆ ಓದಬೇಕಾದ ರೀತಿ ಕನ್ನಡದ್ದು. ಹಾಗೆಯೇ ದಶರಥ ಮಹಾರಾಜನು ತಾನು ತಪಸ್ಸಿಗೆ ಹೋಗುವಾಗ ಎಲ್ಲವನ್ನೂ ಹಿರಿಯ ಪುತ್ರನಾದ ಅವನಿಗೆ ಒಪ್ಪಿಸಿ ಹೇಳುವ ಮಾತುಗಳನ್ನು ಕೇಳಿರಿ: "ನೊಸಲೊಳ್ ಕಣ್ ಪಡೆದಂತೆ ಪುತ್ರ ಪಡೆದೆಂ ನಿನ್ನಂ, ಸ್ಫುರತ್ ತೇಜನಂ; ವಸುಧಾರಾಜ್ಯಮನ್ ಒಪ್ಪುಗೊಳ್, ನಿಲಿಸು ನೀನ್ ಎನ್ನಂ ತಪೋರಾಜ್ಯದೊಳ್; ಪಸುಗೂಸಿಂಗೆ ಎನಗೆ ಇತ್ತು ಮತ್ ಜನಕನ್ ಈ ಸಂಪತ್ತಿಯಂ ಪೂಣ್ದು ಸಾಧಿಸಿದಂ ಸಜ್ಜನತಾ ಶರಣ್ಯನ್, ಅನರಣ್ಯಂ ಮೋಕ್ಷಸಂಪತ್ತಿಯಂ". ಪದ್ಯದಲ್ಲಿ ಕ್ರಮವಿಲ್ಲದೆ ಚೆದುರಿರುವ

ಶಬ್ದಗಳನ್ನು ಸರಿಯಾದ ಕ್ರಮದಲ್ಲಿ ಅನ್ವಯ ಮಾಡಿಕೊಂಡರೆ ಮಾತಾಡುವ ರೀತಿಯನ್ನೇ ಇಲ್ಲಿ ಕಾಣುತ್ತೇವೆ. ಇಂತಹ ಪದಶಯ್ಯೆಗೆ ಈ ಕಾವ್ಯದಲ್ಲಿ ಬೇಕಾದಷ್ಟು ಉದಾಹರಣೆಗಳನ್ನು ನೀಡಬಹುದು.

ನಾಗಚಂದ್ರನ ಶೈಲಿಯ ಹೈಲೈಟ್ ಎಂದರೆ ಅರ್ಥಾಂತರನ್ಯಾಸ ಅಲಂಕಾರದ ಬಳಕೆ ಎಂಬುದನ್ನು ವಿದ್ವಾಂಸರು ಎತ್ತಿ ಹೇಳಿದ್ದಾರೆ. ನಾಗಚಂದ್ರನಲ್ಲಿ ಆ ಅಲಂಕಾರದ್ದು ಸಾರ್ಥಕವೂ ಚೇತೋಹಾರಿಯೂ ಆದ ಬಳಕೆ. ಈ ಅಲಂಕಾರದ ಸ್ವರೂಪವೆಂದರೆ ಸಾಮಾನ್ಯಾರ್ಥದಿಂದ ವಿಶಿಷ್ಟಾರ್ಥವನ್ನೂ, ವಿಶಿಷ್ಟಾರ್ಥದಿಂದ ಸಾಮಾನ್ಯಾರ್ಥವನ್ನೂ ಪುಷ್ಟಿಗೊಳಿಸುವ ಪರಿ. "ಕಾರಣವಿಘಟನಮೆ ಕಾರ್ಯವಿಘಟನಮಲ್ತೇ", "ತಕ್ಕುದಲ್ತು ತಕ್ಕಂಗೆ ತಗದ ಹರ್ಷ ವಿಷಾದಂ", "ದೈವಘಟನೆಯಿಂದಾಗದುದೇಂ" "ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ" "ಆತ್ಮ ಸತ್ವ ಗುಣಹಾನಿಯೆ ಸೂಚಿಸದೆ ವಿನಾಶಮಂ" ಎಂಬಂತೆ ಮಿಕ್ಕ ಕಡೆಗಳಲ್ಲಿಯೂ ಕಾಣುವ ಈ ಅಲಂಕಾರದ ಬಳಕೆ, ವಿಶೇಷ ಹೊಳಪಿನಿಂದ ಕೂಡಿರುವುದು ಅವಲೋಕಿನೀ ವಿದ್ಯೆಯು ರಾವಣನಿಗೆ ಹೇಳುವ ಬುದ್ಧಿ ಮಾತುಗಳಲ್ಲಿ: "ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ", "ಮುನ್ನೀರ್ ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ", "ಬಿದಿಯಂ ಮೀಱುಗುಮೆ ಪೆಱರ ಪೇೞ್ದುಪದೇಶಂ", "ಪುರಾತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ" "ಪೞಿಗಂ ಪಾಪಕ್ಕಂ ಅಂಜದವರೇಗೆಯ್ಯರ್" ಮುಂತಾದ ಕಡೆಗಳಲ್ಲಿ ಚೆಲ್ಲವರಿದಿದೆ.

ಹಾಗೆಯೇ, ನಾಗಚಂದ್ರನ ಶೈಲಿಯ ವಿಶಿಷ್ಟ ಲಕ್ಷಣ ಮೃದುಭಾವಗಳಿಗೆ ತಕ್ಕುದಾದ ಪದಸಂಯೋಜನೆ. ಸೀತಾವಿಯೋಗದಿಂದ ವ್ಯಾಕುಲಗೊಂಡ ರಾಮನ ವಿರಹದ ವರ್ಣನಾವೈಖರಿಯಂತಹ ಕಾರಣದಿಂದ ನಾಗಚಂದ್ರ ಕನ್ನಡದಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದಾನೆ. ಸೀತಾವಿರಹದಿಂದ ಸೀತೆಯನ್ನು ಕಂಡಿರೇ ಎಂದು ರಾಮನು ಪ್ರಕೃತಿಯ ವಸ್ತುವಿಶೇಷಗಳನ್ನೇ ಕೇಳುವಾಗ ಅವಳ ಗುರುತು ಹೇಳುವ ಪರಿಯು ಮನಕಲಕುವಂತಿದೆ: "ಕಳಹಂಸಾಲಸಯಾನೆಯಂ, ಮೃಗಮದಾಮೋದಾಸ್ಯನಿಶ್ವಾಸೆಯಂ, ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತಕೋಕಿಳಮೇ, ಕಂಡಿರೇ ಪಲ್ಲವಾಧರೆಯನ್ ಅಂಭೋಜಾಸ್ಯೆಯಂ, ಭೃಂಗಕುಂತಳೆಯಂ, ಕೈರವನೇತ್ರೆಯಂ, ಪಿಕರವ ಪ್ರಖ್ಯಾತೆಯಂ, ಸೀತೆಯಂ"; (ಈ ಮಾತುಗಳು ಪ್ರಕೃತಿಯ ವಸ್ತುಗಳನ್ನೇ ಚೆನ್ನಮಲ್ಲಿಕಾರ್ಜುನನೆಲ್ಲಿ ಎಂದು ಕೇಳುವ, ಮಹಾದೇವಿಯಕ್ಕನ ವಚನಗಳನ್ನು ನೆನಪಿಗೆ ತರುವುದರಲ್ಲಿ ಅಚ್ಚರಿಯಿಲ್ಲ) "ಮಲಯಜ ಗಂಧ ಬಂಧುರ ಸರೋರುಹಮಂ, ದರಹಾಸ ಚಂದ್ರಿಕಾವಿಲಸಿತ ಚಂದ್ರಮಂಡಲಮನ್, ಆ ರಮಣೀ ರಮಣೀಯ ಲೋಚನೋತ್ಪಲ ಸಹಜ ಪ್ರಸನ್ನ ಕಮಲಾಕರಮಂ, ಸ್ಮರರಾಜ ರಾಜ್ಯಮಂಗಲ ಮಣಿದರ್ಪಣೋಪಮನ್ ಓಪಳ ವಕ್ತ್ರಮನ್,

ಎಲ್ಲಿ ಕಾಣ್ಬೆನೋ"; "ಕಳರುತಿ ಮತ್ತಕೋಕಿಲಮನ್, ಈಕ್ಷಣಮುತ್ಪಲಮಂ, ವಿನೀಲ ಕುಂತಳಂ ಅಳಿಮಾಲೆಯಂ, ಕಚಭರಂ ನವಿಲಂ, ನಡೆ ಹಂಸಿಯಂ, ತಳಂ ತಳಿರ್ಗಳನ್, ಆನನಂ ಕಮಲಮಂ, ನಳಿತೋಳ್ ಲತೆಯಂ – ಲತಾಂತಕೋಮಳೆ – ಮಱೆಗೊಂಡು ಮೆಯ್ಗರೆದು ಕಾಡುವ ಕಾರಣಮೇನೊ ಜಾನಕೀ!" ಎಂಬಂತಹ ಸಾಲುಗಳಲ್ಲಿ ವಿರಹದ ಭಾವನೆ ದಟ್ಟವಾಗಿ ಹುದುಗಿದೆ.

ಹಳೆಯ ವಸ್ತುವಾದರೂ ನಿರೂಪಣೆಯ ಹೊಸತನ, ಸಾಂಪ್ರದಾಯಿಕವಾದ ದುಷ್ಟಪಾತ್ರಗಳ ಮಾನವೀಕರಣ ಇವುಗಳ ಮೂಲಕ ಹೊಸ ಕಾವ್ಯ ಮಾರ್ಗವನ್ನು ಸೃಷ್ಟಿಸಿದ್ದ ಪಂಪನನ್ನು ಅನುಸರಿಸಿದ ನಾಗಚಂದ್ರನು, ಇಂದಿಗೂ ಎಂದಿಗೂ ಮನುಷ್ಯನನ್ನು ಕಾಡುವ 'ಕಾಲ', 'ಅದೃಷ್ಟ', 'ವಿಧಿ'ಯಂತಹ ಬದುಕಿನ ನಿಗೂಢಗಳ ಬಗೆಗಿನ ಚಿಂತನೆಯನ್ನು ತನ್ನ ಕಾವ್ಯದಲ್ಲಿ ಅಳವಡಿಸಿ ಚಿಂತನೆಯ ತೇರನ್ನು ಮುಂದಕ್ಕೆಳೆದ ಕವಿ. ಹೀಗಾಗಿ ಕನ್ನಡ ಕಾವ್ಯ ಪರಂಪರೆಯಲ್ಲಿ ಅವನೊಬ್ಬ ಮೈಲಿಗಲ್ಲು ಕವಿಯಾಗಿದ್ದಾನೆ.

□□

ಡಾ. ಕರೀಗೌಡ ಬೀಚನಹಳ್ಳಿ ಅವರ 'ಬಿ.ಎಂ.ಶ್ರೀಕಂಠಯ್ಯ' ಅಪೂರ್ವ ಮಾಹಿತಿ ಕೋಶ

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

❖

ಡಾ. ಕರೀಗೌಡ ಬೀಚನಹಳ್ಳಿಯವರು ಬರೆದಿರುವ ಕನ್ನಡ ನಾಡಿನ ಹಿರಿಯ ಹಾಗೂ ನವೋದಯದ ಲೇಖಕರಾದ ಬಿ.ಎಂ.ಶ್ರೀಕಂಠಯ್ಯನವರ ಜೀವನ, ಸಾಧನೆ ಹಾಗೂ ಅವರ ಸಾಹಿತ್ಯವನ್ನು ಕುರಿತ ಈ ಕೃತಿ ಅಧ್ಯಯನ ಯೋಗ್ಯವಾದದ್ದು. ಈ ಕೃತಿ ಬಿ.ಎಂ.ಶ್ರೀ ಅವರ ಸಮಗ್ರ ಸಾಹಿತ್ಯದ ಅವಲೋಕನವಾಗಿದೆ. ಬಿ.ಎಂ.ಶ್ರೀ ಅವರ ಬಗೆಗೆ ಈಗಾಗಲೇ ಹಲವಾರು ಕೃತಿಗಳು, ಬಿಡಿ ಲೇಖನಗಳೂ ಪ್ರಕಟವಾಗಿವೆಯಾದರೂ ಅವುಗಳಿಗಿಂತ ಭಿನ್ನವಾದ, ವಿಶೇಷವಾದ ಹಾಗೂ ಕೆಲವು ಅಪರೂಪದ ಎಲ್ಲಿಯೂ ದಾಖಲಾಗದ ಮಾಹಿತಿಗಳನ್ನು ಈ ಕೃತಿ ಒಳಗೊಂಡಿರುವುದು ಒಂದು ವಿಶೇಷ. ಕಥೆಗಾರರೂ, ಅನುವಾದಕರೂ, ವಿಮರ್ಶಕರೂ ಆದ ಬೀಚನಹಳ್ಳಿ ಅವರ ಆಳವಾದ ಓದು ವಿದ್ವತ್ಪೂರ್ಣ ವಿಶ್ಲೇಷಣೆ, ಘಟನೆಗಳನ್ನು ಮತ್ತು ಸಂದರ್ಭಗಳನ್ನು ಒರೆಗಲ್ಲಿಗೆ ಹಚ್ಚಿ ಬೆಲೆಕಟ್ಟುವ ಅವರ ಎಂದಿನ ಶೈಲಿ ಇಲ್ಲಿಯೂ ಕಂಡುಬರುತ್ತದೆ. ಶ್ರೀ ಅವರ ಸ್ವತಂತ್ರ ಕವನಗಳು ಮತ್ತು ಅನುವಾದಿತ ಕವನಗಳ ವಸ್ತು, ಉದ್ದೇಶ, ಭಾಷಾ ಶೈಲಿಯನ್ನು ಕುರಿತು ಬಹಳ ಸೊಗಸಾಗಿ ವಿವರಿಸಿರುವುದು ಈ ಕೃತಿಯ ಇನ್ನೊಂದು ಮೆರುಗು.

ಡಾ. ಕರೀಗೌಡ ಬೀಚನಹಳ್ಳಿಯವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಓದುವಾಗಲೇ ಮೂರನೇ ರ್‍ಯಾಂಕ್‌ನೊಂದಿಗೆ "ಬಿ.ಎಂ.ಶ್ರೀಕಂಠಯ್ಯ ಸ್ಮಾರಕ ಚಿನ್ನದ ಪದಕ" ಪಡೆದಿರುತ್ತಾರೆ. ಅಂದು ತನ್ನ ಮನದಲ್ಲಿ ಎಂದಾದರೂ "ಬಿ.ಎಂ.ಶ್ರೀ ಅವರ –ಬಗ್ಗೆ ಪುಸ್ತಕ ಬರೆದು ಋಣ ತೀರಿಸಬೇಕೆಂಬ" ಆಸೆ ಮೊಳಕೆಯೊಡೆದಿರುತ್ತದೆ. ಆ ಆಸೆ ೩೭ ವರ್ಷಗಳ ನಂತರ ಹೆಮ್ಮರವಾಗಿ "ಬಿ.ಎಂ.ಶ್ರೀಕಂಠಯ್ಯ" ಎನ್ನುವ ಶೀರ್ಷಿಕೆಯೊಂದಿಗೆ ರೂಪ ಪಡೆದು ೨೦೧೩ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ಮೂಲಕ ಪ್ರಕಟವಾಗಿ ಓದುಗರ ಕೈ ಸೇರಿದೆ. ಇದೂ ಸಹ ಒಂದು ವಿಶೇಷವೇ; ಈ ವೇಳೆಗಾಗಲೇ ಕನ್ನಡ ಸಾಹಿತ್ಯ ಅಧ್ಯಯನ,

ಅಧ್ಯಾಪನ, ಬರಹದಲ್ಲಿ ಗಟ್ಟಿಯಾಗಿ ನೆಲೆಯೂರಿರುವ ಬೀಚನಹಳ್ಳಿ ಕರೀಗೌಡರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದೊಡ್ಡ ಹೆಸರು ಗಳಿಸಿದ್ದಾರೆ. ಈ ಸುದೀರ್ಘ ಕಾಲದಲ್ಲಿನ ಅನುಭವ ವಿಶ್ಲೇಷಣೆ ಈ 'ಬಿ.ಎಂ.ಶ್ರೀಕಂಠಯ್ಯ' ಎನ್ನುವ ಕೃತಿಯಲ್ಲಿ ಸಮರ್ಥವಾಗಿ ಮಡುಗಟ್ಟಿ ಮೈದಾಳಿರುವುದು ಓದುಗರಿಗೆ ವೇದ್ಯವಾಗುತ್ತದೆ.

ಈ ಕೃತಿಯನ್ನು ಓದುತ್ತಾ ಹೋದರೆ ಒಳಹೊಕ್ಕಂತೆ ಕರೀಗೌಡರು ಕೊಡುವ ಉಲ್ಲೇಖಗಳು, ಬಿ.ಎಂ.ಶ್ರೀ ಅವರ ಒಡನಾಡಿಗಳ ಹೆಸರುಗಳು, ಅವರ ಮೇಲೆ ಬಂದಿರುವ ಬರಹ, ಅವುಗಳ ಇತಿಮಿತಿ, ಅವುಗಳ ಪ್ರಕಟಣೆ, ವರ್ಷ, ಸಂಸ್ಥೆ, ಗೆಳೆಯರ ಬಳಗ, ಗುರುಗಳು, ಅವರ ಅಲೆದಾಟ, ಭಾಷಣಗಳ ಮಹತ್ವ, ಕನ್ನಡ ಕಾಯಕದ ಕೈಂಕರ್ಯ, ಅವರ ಶಿಕ್ಷಣ, ಬಾಲ್ಯ, ಕೌಟುಂಬಿಕ ಪರಿಸರ, ಎದುರಿಸಿದ ಸವಾಲುಗಳು, ನುಂಗಿದ ಸಂಕಷ್ಟಗಳು, ದಾಂಪತ್ಯ, ಉದ್ಯೋಗ, ಅವರ ಪಾಠ ಪ್ರವಚನದ ಶೈಲಿ, ಅವರು ಕೊಡುತ್ತಿದ್ದ ಉದಾಹರಣೆಗಳು, ಅವರ ಉದ್ಯೋಗದ ಸಂದರ್ಭದಲ್ಲಿ ಅನ್ಯ ದೇಶಿಯ ಒಡನಾಡಿಗಳು, ವಿಚಾರ ಸಂಕಿರಣದ ಗೋಷ್ಠಿಗಳಲ್ಲಿ ಮಾತನಾಡುತ್ತಿದ್ದ ಬಗೆ, ಅಧ್ಯಕ್ಷೀಯ ಮಾತುಗಳು – ಹೀಗೆ ಪಟ್ಟಿ ಮಾಡಿದರೆ ಇಷ್ಟೊಂದು ಮಾಹಿತಿಯನ್ನು ಕರೀಗೌಡರು ಹೇಗೆ ಸಂಗ್ರಹಿಸಿದರು ಎಂದು ಅಚ್ಚರಿ ಆಗುತ್ತದೆ. ಬಿ.ಎಂ.ಶ್ರೀಕಂಠಯ್ಯ ಎನ್ನುವ ಮೊದಲ ಭಾಗದಲ್ಲಿ ಸುದೀರ್ಘವಾಗಿ ಇದನ್ನೆಲ್ಲಾ ವಿವರಿಸಿದ್ದಾರೆ. ಅಲ್ಲದೆ, ಮೈಸೂರು ವಿಶ್ವವಿದ್ಯಾಲಯ, ಮಹಾರಾಜ ಕಾಲೇಜು, ಅಲ್ಲಿನ ಶಿಕ್ಷಣ, ಒಡನಾಡಿಗಳು, ಕನ್ನಡ ಕೈಂಕರ್ಯ, ಮಹಾರಾಜರ ಸಂಪರ್ಕ, ಶಿಷ್ಯರನ್ನು ರೂಪಿಸುತ್ತಿದ್ದ ಬಗೆ, ವಿಶ್ವವಿದ್ಯಾಲಯದ ಕುಲಸಚಿವರಾಗಿ ಮಾಡಿದ ಕೆಲಸಗಳು ಇವೆಲ್ಲವೂ ಈ ಭಾಗದಲ್ಲಿ ಸಂಗ್ರಹಿತವಾಗಿವೆ. ಬಿ.ಎಂ.ಶ್ರೀ ಅವರ ಜೀವನ ವಿವರ ತಿಳಿಯಲು ಇದು ಹೆಚ್ಚು ಸಹಕಾರಿಯಾಗಿದೆ.

ಬಿ.ಎಂ.ಶ್ರೀ ಅವರು ಕನ್ನಡದ ಏಳ್ಗೆಗಾಗಿ ನಡೆಸಿದ ಹೋರಾಟದ ಬದುಕನ್ನು ೧೯೦೯ ರಿಂದ ೧೯೩೦ರವರೆಗೆ ಮೈಸೂರಿನಲ್ಲಿಯೂ, ೧೯೩೦ ರಿಂದ ೧೯೪೨ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿಯೂ, ನಿವೃತ್ತಿ ನಂತರವೂ ಕನ್ನಡ ಕಟ್ಟುವ ಬಗೆಯನ್ನು ರೂಪಿಸುತ್ತಲೇ ಬಂದರು. ಸದಾ ಕನ್ನಡ ನಾಡು ನುಡಿ 'ವಿಶ್ವಮಟ್ಟದಲ್ಲಿ ತಲೆ ಎತ್ತುವಂತೆ' ಮಾಡಬೇಕು ಅದಕ್ಕೆ ಬೇಕಾದ ಕಸುವನ್ನು ಬರಹ, ಭಾಷಣ, ಸಂಘಟನೆಗಳ ಮೂಲಕ ತುಂಬುತ್ತಾ ಬಂದವರು. ಅದಕ್ಕಾಗಿಯೇ ಅತ್ಯುನ್ನತವಾದ ಶಿಷ್ಯ ಪಡೆಯನ್ನೇ ಕಟ್ಟಿದರು. ನಾಡಿನುದ್ದಗಲಕ್ಕೂ ಸಂಚರಿಸಿದರು ಎನ್ನುವ ಮಾಹಿತಿಯನ್ನು ಡಾ. ಕರೀಗೌಡ ಬೀಚನಹಳ್ಳಿಯವರು ಕೃತಿಯ ಮೊದಲ ಭಾಗದಲ್ಲಿಯೇ ಬಹಳ ಅನನ್ಯವಾಗಿ ನಿರೂಪಿಸಿದ್ದಾರೆ.

ಬಿ.ಎಂ.ಶ್ರೀ. ಅವರ ಸ್ವತಂತ್ರ ಕವನ ಸಂಕಲನವಾದ 'ಹೊಂಗನಸುಗಳು' ಕುರಿತ ವಿಮರ್ಶೆಯೂ ಮನೋಜ್ಞವಾಗಿದೆ. ೧೯೧೪ ರಿಂದ ೧೯೪೪೮ರ ಅವಧಿಯಲ್ಲಿ ಬರೆದ

ಇಲ್ಲಿನ ಪದ್ಯಗಳಲ್ಲಿ ಬ್ರಿಟೀಷರು, ಮೈಸೂರು ಅರಸರನ್ನು ಕುರಿತ ಚಿತ್ರಣಗಳು ಹಾಗೂ ಕನ್ನಡ ತಾಯಿ, ಭರತ ಮಾತೆಯ ನುಡಿ, 'ಕಡಲರಾಣಿ ಬ್ರಿಟಾನಿಯಾಳ' ಮುಂತಾದ ಸುಮಾರು ಹದಿನಾಲ್ಕು ಕವನ ಸಂಕಲನವಾದ 'ಹೊಂಗನಸುಗಳು'ನ್ನು ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿದ್ದಾರೆ. ಇದೇ ಭಾಗದಲ್ಲಿ ಅವರ ಐತಿಹಾಸಿಕ ಪದ್ಯಗಳು ಹಾಗೂ ಪ್ರಗಾಥಗಳೂ ವಿಮರ್ಶೆಗೆ ಒಳಗಾಗಿವೆ. ಈ ಸಂಕಲನದಲ್ಲಿರುವ ಹದಿನಾಲ್ಕು ಪದ್ಯಗಳೂ ಒಂದಕ್ಕಿಂತ ಒಂದು ಭಿನ್ನ ಸ್ವರೂಪವುಗಳು. ನಾಡು, ನುಡಿ, ಆಂಗ್ಲರ ಆಡಳಿತ, ಮೈಸೂರು ರಾಜರ ಆಡಳಿತ, ಪ್ರೀತಿ, ವಾತ್ಸಲ್ಯ ಮುಂತಾದವುಗಳನ್ನು 'ವಸ್ತು'ವಾಗುಳ್ಳ ಈ ಪದ್ಯಗಳನ್ನು ಡಾ. ಕರೀಗೌಡ ಅವರು ಸೂಕ್ಷ್ಮ ಸಂವೇದನೆಯಿಂದ ಪರಾಮರ್ಶಿಸಿದ್ದಾರೆ. ಶ್ರೀ ಅವರ ಕಾಲದಲ್ಲಿದ್ದ ಸಮಾಜದ ವಾಸ್ತವತೆಯ ಹತ್ತಿರಕ್ಕೆ ಹೋಗಿ ಇಂದು ಸಮಕಾಲೀನರಿಗೆ ಅದರ ಬಹುತ್ವ ಮತ್ತು ಮಹತ್ವವನ್ನು ಉಣಬಡಿಸಿದ್ದಾರೆ. ಶ್ರೀ ಅವರ ಸೃಜನಶೀಲತೆ, ಭಾಷಾ ಪ್ರೌಢಿಮೆ, ಭಾರತಮಾತೆ ಮತ್ತು ಕನ್ನಡಮ್ಮನ ಮೇಲಿನ ಅನನ್ಯ ಪ್ರೇಮವನ್ನು ವಿಮರ್ಶಕರು ಗುರುತಿಸಿದ್ದಾರೆ. ಬೇರೆ ಬೇರೆ ವಿಮರ್ಶಕರು ಶ್ರೀ ಅವರ ಕಾವ್ಯದ ಬಗ್ಗೆ ತಳೆದಿರುವ ನಿಲುವುಗಳನ್ನು ತಮ್ಮ ಅಭಿಪ್ರಾಯದ ಮೂಲಕ ಒರೆಗಚ್ಚಿ ಬೆಲೆ ಕಟ್ಟಿರುವುದೂ ಸಹ ಶ್ರೀ ಅವರ ಕಾವ್ಯಕ್ಕೆ ಕನ್ನಡಿಯಂತಿದೆ.

"ಕಾವ್ಯ, ನಾಟಕ, ವಿಮರ್ಶೆ, ಸಂಶೋಧನೆ, ಮುನ್ನುಡಿಗಳು, ಭಾಷಣಗಳು ಹೀಗೆ ವಿವಿಧ ಪ್ರಕಾರಗಳಲ್ಲಿ ಬಿ.ಎಂ.ಶ್ರೀ. ಅವರು ಸಾಹಿತ್ಯ ರಚನೆ ಮಾಡಿದ್ದಾರೆ. ಈ ಪ್ರಕಾರಗಳೆಲ್ಲಾ ಒಂದರೊಳಗೆ ಒಂದು ಬೆರೆತು ಎಲ್ಲವೂ ಅವರ ಸೃಜನಶೀಲ ಅಭಿವ್ಯಕ್ತಿಯಲ್ಲಿ ಮೈ ಪಡೆದಿವೆ. ಅವರಿಗಿದ್ದ ಇಂಗ್ಲಿಷ್ ಮತ್ತು ಗ್ರೀಕ್ ಸಾಹಿತ್ಯದ ಬಗೆಗಿನ ಆಳವಾದ ಅಧ್ಯಯನ ಹಾಗೂ ಅನುಭವಗಳು ಅವರ ಪ್ರತಿಭೆಯಲ್ಲಿ ಹೊಸರೂಪವನ್ನು ಪಡೆದಿವೆ. ಇದರ ಜೊತೆಗೆ ಹೊಸಗನ್ನಡ ಸಾಹಿತ್ಯಕ್ಕೆ ಹಳೆಗನ್ನಡದ ಅಭಿಜಾತತೆ ಮತ್ತು ಔನ್ನತ್ಯಗುಣಗಳನ್ನು ತರಲು ಯತ್ನಿಸಿದ್ದಾರೆ." (ಬಿ.ಎಂ.ಶ್ರೀಕಂಠಯ್ಯ, ಡಾ. ಕರೀಗೌಡ ಬೀಚನಹಳ್ಳಿ, ಪುಟ ೩೧, ಪ್ರಸಾರಾಂಗ, ಕ.ವಿ.ವಿ.) ಅದರ ಫಲವಾಗಿಯೇ ಅಶ್ವತ್ಥಾಮ, ಗದಾಯುದ್ಧ, ಪಾರಸಿಕರು, ನಾಟಕಗಳು ಮೂಡಿ ಬಂದಿವೆ. ಈ ಮೂಲಕ ಪಂಪ, ರನ್ನರ ಅಭಿವ್ಯಕ್ತಿಯನ್ನು ಸೃಜನಾತ್ಮಕವಾಗಿ ಪುನರ್ಲೇಖಿಸಿದ್ದಾರೆ.

ಶಕ್ತಿ ಕವಿ ರನ್ನನ 'ಸಾಹಸ ಭೀಮ ವಿಜಯಂ' ಚಂಪೂ ಕಾವ್ಯದ ಏಳು ಎಂಟನೆ ಆಶ್ವಾಸ ಶ್ರೀ ಅವರ ಗದಾಯುದ್ಧ ನಾಟಕಕ್ಕೆ ವಸ್ತು. ರನ್ನನ ಕಾವ್ಯದಲ್ಲಿದ್ದ 'ನಾಟಕೀಯ' ಗುಣ ಶ್ರೀ ಅವರನ್ನು ಹೇಗೆ ಸೆಳೆದಿದೆ ಅದನ್ನು ಅವರು ಹೇಗೆ ನಿರ್ವಹಿಸಿದ್ದಾರೆ ಹಾಗೂ ರನ್ನನ ಗದಾಯುದ್ಧದಲ್ಲಿದ್ದ ಪ್ರತಿಮಾ ಸ್ವರೂಪಿಯಾದ ಕಾವ್ಯ ಕೃತಿ ಶ್ರೀ ಅವರಲ್ಲಿ ಹೇಗೆ ಸಂವಾದ ಸ್ವರೂಪಿಯಾಗಿ ನಾಟಕ ರೂಪವನ್ನು ಪಡೆದುಕೊಂಡಿದೆ ಎಂಬುದನ್ನು ಕರೀಗೌಡ ಅವರು ಸವಿಸ್ತಾರವಾಗಿ ಉದಾ : ಸಮೇತ ವಿಶ್ಲೇಷಣೆಗೆ ಒಡ್ಡಿರುವುದು ಓದುಗರನ್ನು

ಆಪ್ತವಾಗಿ ಸೆಳೆಯುತ್ತದೆ. ಶ್ರೀಯವರು ಗ್ರೀಕ್ ರುದ್ರನಾಟಕಗಳ ಪ್ರಭಾವಕ್ಕೊಳಗಾದವರು. ರನ್ನನ ದುರ್ಯೋಧನ ಶ್ರೀಯವರ ದೃಷ್ಟಿಯಲ್ಲಿ ಒಬ್ಬ ದುರಂತನಾಯಕನಾಗಿ ಮೈದಾಳಿದ್ದಾನೆ. ಹಾಗಾಗಿಯೇ ಶ್ರೀಯವರು ದುರ್ಯೋಧನನ ಪಾತ್ರ ಚಿತ್ರಣದಲ್ಲಿ ಗ್ರೀಕ್ ರುದ್ರನಾಟಕದ ಅಂಶಗಳನ್ನು ಅಳವಡಿಸಿದ್ದಾರೆ. ಅಲ್ಲದೆ ಕೊನೆಯಲ್ಲಿ ನಾಟಕವು ಶಾಂತರಸದ ಕಡೆ ವಾಲುವಂತೆ ಚಿತ್ರಿಸಿರುವುದನ್ನು ವಿಮರ್ಶಕರು ಗುರುತಿಸಿದ್ದಾರೆ. 'ಗದಾಯುದ್ಧ' ನಾಟಕದ ರಚನಾ ವಿಧಾನ ಸಂಕ್ಷಿಪ್ತವಾಗಿದ್ದರೂ ಅದರ ಪರಿಣಾಮಕಾರಿಯ ಗುಣ ವಿಶಿಷ್ಟವಾದುದು ಎಂಬುದನ್ನು ಈ ಕೃತಿಯಲ್ಲಿ ಎಳೆಎಳೆಯಾಗಿ ಬಿಚ್ಚಿಟ್ಟಿರುವುದು ಕಂಡು ಬರುತ್ತದೆ. ಅಲ್ಲದೆ ಮೂಲವನ್ನು ಮಾರ್ಪಾಟು ಮಾಡಲು ಶ್ರೀ ಅವರು ನಡೆಸಿರುವ ಪ್ರಯತ್ನವನ್ನೂ ಇಲ್ಲಿ ವಿವರಿಸಿದೆ.

ಶ್ರೀ ಅವರ ಮತ್ತೊಂದು ನಾಟಕ 'ಅಶ್ವತ್ಥಾಮನ್'. ಇದು ಗ್ರೀಕ್ ನಾಟಕಕಾರ ಸಾಫೋಕ್ಲೀಸ್‌ನ 'ಏಜಾಕ್ಸ್' ಎಂಬ ರುದ್ರನಾಟಕವನ್ನು ಆಶ್ರುಸಿ, ಮಹಾಭಾರತದ ಸೌಪ್ತಿಕ ಪರ್ವದ ಕಥೆಯನ್ನು ಅದರೊಡನೆ ಹೊಂದಿಸಿಕೊಂಡು ರಚನೆ ಮಾಡಿರುವಂತಹುದು. 'ಏಜಾಕ್ಸ ಅಥವಾ ಅಯೇಸ್' ನಾಟಕವನ್ನು ಕನ್ನಡದ ಮನೋಧರ್ಮಕ್ಕೆ ಒಗ್ಗಿಸಿರುವುದು ಸಾಹಸವೇ ಸರಿ. ಇದರಲ್ಲಿ ದ್ರೋಣನ ತಾಯಿ ಭಾರ್ಗವಿ ಪರಶುರಾಮನ ತಂಗಿ, ದ್ರೋಣಾಶ್ವತ್ಥಾಮರು ಕನ್ನಡ ನಾಡಿನ ಬನವಾಸಿ ಪ್ರಾಂತ್ಯದಿಂದ ಕೌರವನ ಆಸ್ಥಾನಕ್ಕೆ ಹೋಗಿ ಸೇರುತ್ತಾರೆ. ಅದೇ ಪ್ರಾಂತ್ಯಕ್ಕೆ ಸೇರಿದ ಏಕಲವ್ಯನನ್ನು ತನ್ನ ಗುರುಗಳಿಗೆ ಬೆಂಬಲವಾಗಿ ಬೇಡರ ಸೈನ್ಯವನ್ನು ತೆಗೆದುಕೊಂಡು ಹೋಗಿ ಭಾರತ ಯುದ್ಧದಲ್ಲಿ ಕಾದಿದನೆಂದು ಕಲ್ಪಿಸಿಕೊಂಡು ಈ ನಾಟಕವನ್ನು ಬರೆದಿದ್ದಾರೆ ಎಂಬುದನ್ನು ವಿಮರ್ಶಕರಾದ ಕರೀಗೌಡ ಅವರು ಇಲ್ಲಿ ಎಳೆಎಳೆಯಾಗಿ ಶೋಧಿಸಿ ವಿವರಿಸಿದ್ದಾರೆ. ಮಹಾಭಾರತದ ಈ ಕಥೆಗೆ ಗ್ರೀಕ್‌ನ ವೇಷ ತೊಡಿಸಿ ಏನೆಲ್ಲಾ ಬದಲಾವಣೆಗಳನ್ನು ಹೊಸತನವನ್ನು ತಂದಿದ್ದಾರೆ ಎನ್ನುವುದು ಇಲ್ಲಿ ಕಂಡು ಬರುತ್ತದೆ. ಸ್ವತಃ ಶ್ರೀ ಅವರೇ ಚಿರಂಜೀವಿಯಾದ ಅಶ್ವತ್ಥಾಮನನ್ನು ಕೊಂದ ಪಾಪಿ ನೀನು ಎಂದು ವಿಷಾದಿಸಿದ್ದಾರೆ. ೧೯೨೬ರಲ್ಲಿ ಬರೆದ ಈ ನಾಟಕವನ್ನು ಮೊದಲು ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಸಂಘ ಅಭಿನುಸಿದ ರೀತಿ ಹಾಗೂ ಗ್ರೀಕ್ ನಾಟಕದ ಮರುಸೃಷ್ಟಿಯೊಂದು ಕನ್ನಡ ರಂಗಭೂಮಿಯಲ್ಲಿ ಒಂದು ಹೊಸ ಅಲೆಯನ್ನು ಹುಟ್ಟುಹಾಕಿದ ಸಂದರ್ಭವನ್ನೂ ವಿಮರ್ಶಕರು ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ.

ಅಶ್ವತ್ಥಾಮನ್ ನಾಟಕವು ಪಡೆದುಕೊಂಡದ್ದಕ್ಕಿಂತ ಕೊಟ್ಟದ್ದೇ ಹೆಚ್ಚು. ಅಲ್ಲಿ ಬರುವ ಅಶ್ವತ್ಥಾಮನ್, ಕೃಷ್ಣ, ರುದ್ರ, ಏಕಲವ್ಯರು ತಮ್ಮ ಮಹಾಭಾರತದ ಸಂಸ್ಕಾರವನ್ನು ಬಿಟ್ಟುಕೊಡದಂತೆ ಸೃಷ್ಟಿಸಿದ್ದಾರೆ. ಮಹಾಭಾರತದಲ್ಲಿ ಕಾಣಲಾರದ್ದನ್ನು ಇಲ್ಲಿ ಕಾಣಿಸಿದ್ದಾರೆ ಎನ್ನುವುದು ವಿಮರ್ಶಕರ ಅಭಿಪ್ರಾಯ ಅದು ನಿಜವೂ ಹೌದು. ಅಶ್ವತ್ಥಾಮನ್ ನಾಟಕದ

ಮೂಲಕ ಶ್ರೀ ಅವರು ಕನ್ನಡದಲ್ಲಿ ರುದ್ರನಾಟಕಗಳ ಪರಂಪರೆಯ ಸೃಷ್ಟಿಗೆ ಕಾರಣರಾಗಿದ್ದಾರೆ ಎಂಬುದನ್ನು ಚರಿತ್ರೆ ಮರೆಯಲಾರದು.

ಕನ್ನಡದ ಆಚಾರ್ಯರೆಂದೇ ಖ್ಯಾತರಾದ ಶ್ರೀ ಅವರ 'ಇಂಗ್ಲಿಷ್ ಗೀತಗಳು' ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಪ್ರಯೋಗ; ಆ ಮೂಲಕ ಕನ್ನಡಕ್ಕೆ ಹೊಸ ಲಯವನ್ನು ಸೇರಿಸುವ ಕೆಲಸವನ್ನು ಅವರು ಮಾಡಿದ್ದಾರೆ. ಇದಕ್ಕೂ ಮುಂಚೆ ಕನ್ನಡದಲ್ಲಿ ಎಸ್.ಜಿ. ನರಸಿಂಹಚಾರ್ಯ, ಹಟ್ಟಿಯಂಗಡಿ ನಾರಾಯಣರಾಯ, ಶಾಂತಕವಿ, ಪಂಜೆ, ಎಂ.ಎಲ್. ಶ್ರೀಕಂಠೇಶಗೌಡ ಮೊದಲಾದವರು ಭಾಷಾಂತರ ಕಾರ್ಯದಲ್ಲಿ ನಿರತರಾಗಿದ್ದರೂ, ಅವೆಲ್ಲವನ್ನೂ ಹಿಂದಿಕ್ಕಿ ಶ್ರೀ ಅವರ 'ಇಂಗ್ಲಿಷ್ ಗೀತಗಳು' ಶ್ರೇಷ್ಠತೆಯನ್ನು ಸಾಧಿಸಿದವು. ಅದಕ್ಕೆ ಕಾರಣ ಏನು, ಶ್ರೀ ಅವರಿಗಿದ್ದ ಅನ್ಯಭಾಷೆಗಳ ಪ್ರಬುದ್ಧತೆ ಎಂತಹುದು, ಅವರ ಆಳವಾದ ತಿಳಿವಳಿಕೆ ವಿಶಾಲವಾದ ಓದು ಇಂಥದೊಂದು ಮಹತ್ಕಾರ್ಯಕ್ಕೆ ಹೇಗೆ ಸಹಕಾರಿಯಾಯಿತು ಎಂಬುದನ್ನು ಡಾ. ಕರೀಗೌಡ ಅವರು ಈ ಕೃತಿಯಲ್ಲಿ ಶೋಧಿಸಿ, ಸಾಧಿಸಿ ತೋರಿಸಿದ್ದಾರೆ. ಅಲ್ಲಿ ಬಳಸಿರುವ ಭಾಷೆ, ಪದಸಂಪತ್ತು, ವಾಕ್ಯರಚನೆ, ಶೈಲಿ, ಹೊಸ ಪದಗಳ ಸೃಷ್ಟಿ ಎಲ್ಲವನ್ನೂ ಶ್ರೀಯುತರು ಬಹಳ ಸೂಕ್ಷ್ಮವಾಗಿ, ವಿವರಣಾತ್ಮಕವಾಗಿ ಪರಾಮರ್ಶನಕ್ಕೆ ಒಡ್ಡಿದ್ದಾರೆ. ಅಚ್ಚರಿ ಎಂದರೆ ಬಿಎಂಶ್ರೀ ಅವರ 'ಇಂಗ್ಲಿಷ್ ಗೀತಗಳು' ಸಂಕಲವನ್ನು ಕುರಿತು ವ್ಯಕ್ತವಾಗಿರುವ ಕನ್ನಡದ ಅನೇಕ ವಿದ್ವಾಂಸರ ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸಿರುವುದು. ಒಂದು ಕೃತಿಯ ವಿಮರ್ಶೆ ಮಾಡಿ ಬೆಲೆಕಟ್ಟುವ ಸಂದರ್ಭದಲ್ಲಿ ಜವಾಬ್ದಾರಿಯುತ ಶ್ರೇಷ್ಠ ವಿಮರ್ಶಕರಿಗೆ ಮಾತ್ರ ಈ ರೀತಿ ಓದು, ವ್ಯವದಾನ, ವೈಶಾಲ್ಯತೆ ಸಾಧ್ಯವಾಗುತ್ತದೆ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಈ ವಿಮರ್ಶೆ ಹತ್ತರ ಜೊತೆ ಹನ್ನೊಂದಾಗದೆ ಭಿನ್ನವಾಗಿ ನಮ್ಮ ಮುಂದೆ ಇರುವುದೇ ಸಂತೋಷ.

ಬಿಎಂಶ್ರೀ ಅವರ 'ಕನ್ನಡ ಸಾಹಿತ್ಯ ಚರಿತ್ರೆ'ಯನ್ನು ಕುರಿತು ವಿವರಿಸುತ್ತಾ ಇದೊಂದು ಅಪೂರ್ವ ಮತ್ತು ಅಪೂರ್ಣ ಕನ್ನಡ ಸಾಹಿತ್ಯ ಚರಿತ್ರೆ (ಬಿ.ಎಂ.ಶ್ರೀಕಂಠಯ್ಯ, ಪುಟ ೬೩) ಎಂದು ಕರೀಗೌಡರು ಕರೆಯುತ್ತಾರೆ. ಅದಕ್ಕೆ ಹಲವಾರು ಕಾರಣಗಳನ್ನು ಇಲ್ಲಿ ನೀಡಿದ್ದಾರೆ. ಬಿಎಂಶ್ರೀ ಅವರ 'ಕನ್ನಡ ಸಾಹಿತ್ಯ ಚರಿತ್ರೆ'ಯನ್ನು ನೆಪವಾಗಿಟ್ಟುಕೊಂಡು ಇದುವರೆಗೆ ಎಂದಿಗೂ ಕನ್ನಡ ಸಾಹಿತ್ಯ ಚರಿತ್ರೆಗಳ ಓರೆಕೋರೆಗಳನ್ನು ಅವುಗಳ ಇತಿಮಿತಿಗಳನ್ನು, ಅದಕ್ಕೆ ಕಾರಣಗಳನ್ನೂ ಸಹ ವಿಮರ್ಶಕರು ಸ್ಪಷ್ಟವಾಗಿ ನೀಡುವ ಪ್ರಯತ್ನ ಮಾಡಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಗೆ ಸುಮಾರು ಎರಡು ಸಾವಿರ ವರ್ಷಗಳ ದೀರ್ಘವಾದ ಇತಿಹಾಸವಿದೆ. ಅದು ಅನೇಕ ಕಾಲಘಟ್ಟಗಳ ಮೂಲಕ, ಚಳವಳಿಗಳ ಮೂಲಕ ವಿಸ್ತಾರವಾಗಿ ಸಾಗಿ ಬಂದಿರುವುದರಿಂದ ಅದನ್ನ ಒಂದು ನೆಲೆಯಲ್ಲಿ ಕಟ್ಟಿಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಲೇ ಬಿಎಂಶ್ರೀಯವರ "ಕನ್ನಡ ಸಾಹಿತ್ಯ

ಚರಿತ್ರೆಯ" ಅನನ್ಯತೆಯನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಕನ್ನಡನಾಡು ಮತ್ತು ನುಡಿಯ ಬಗೆಗಿನ ಅಪಾರವಾದ ಓದು, ಕಾಳಜಿ ಬಿಎಂಶ್ರೀ ಅವರಿಗೆ ಯಾವ ಪ್ರಮಾಣದಲ್ಲಿತ್ತು ಎಂಬುದನ್ನು ಕರೀಗೌಡರು ಇಲ್ಲಿ ತೋರಿಸಿಕೊಟ್ಟಿದ್ದಾರೆ.

೧೯೩೬ರಲ್ಲಿ ಬಿಎಂಶ್ರೀಯವರು ಪ್ರಕಟಿಸಿದ 'ಕನ್ನಡ ಛಂದಸ್ಸಿನ ಚರಿತ್ರೆ'ಯನ್ನೂ ಸಹ ಇಲ್ಲಿ ನಿಕಷಕ್ಕೆ ಒಡ್ಡಿದ್ದಾರೆ. ಛಂದಸ್ಸಿನ ಬಗ್ಗೆ, ಅದರ ಇತಿಹಾಸ ಹಾಗೂ ಬಳಕೆಯ ಬಗ್ಗೆ ಬಿಎಂಶ್ರೀ ಅವರಿಗಿದ್ದ ಜಿಜ್ಞಾಸೆ ಎಂಥದು ಎಂಬುದನ್ನು ಈ ಭಾಗದಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ವೈದಿಕ ಛಂದಸ್ಸು, ಲೌಕಿಕ ಛಂದಸ್ಸು, ವೃತ್ತಗಳು, ಕಂದ, ಕನ್ನಡ ಛಂದಸ್ಸುಗಳ ಬಗ್ಗೆ ಬಿಎಂಶ್ರೀ ಅವರಿಗಿದ್ದ ನಿಲುವು ಯಾವ ರೀತಿಯದು ಎಂಬುದನ್ನು ಗುರುತಿಸುವ ಪ್ರಯತ್ನವನ್ನು ಈ ಚಿಕ್ಕ ಲೇಖನದಲ್ಲಿ ಕಟ್ಟಿಕೊಟ್ಟಿರುವುದು ಕಂಡು ಬರುತ್ತದೆ.

ಬಿಎಂಶ್ರೀ ಅವರ ಅಪೂರ್ವವಾದ ಲೇಖನಗಳು / ಭಾಷಣಗಳನ್ನು ಈ ಕೃತಿಯಲ್ಲಿ ವಿಮರ್ಶೆಗೆ ಒಡ್ಡಿರುವುದು ಈ ಕೃತಿಯ ಮತ್ತೊಂದು ವಿಶೇಷ. ಇಲ್ಲಿ ೧೯೧೧ ರಲ್ಲಿ ಶ್ರೀ ಅವರು ಧಾರವಾಡದ ವಿದ್ಯಾವರ್ಧಕ ಸಂಘದ ವಾರ್ಷಿಕ ಸಭೆಯಲ್ಲಿ ಮಾಡಿದ ಉಪನ್ಯಾಸ 'ಕನ್ನಡ ಮಾತು ತಲೆ ಎತ್ತುವ ಬಗೆ, ೨. ಶ್ರೀ ಅವರು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷನ್ಮಂದಿರದಲ್ಲಿ (ಕನ್ನಡ ಸಾಹಿತ್ಯ ಪರಿಷತ್ತು) ಮಾಡಿದ ಭಾಷಣದ (೨೬.೦೪.೧೯೩೫) ಸಾರಾಂಶ "ಕನ್ನಡದ ಪುನರುಜ್ಜೀವನ" ಎನ್ನುವ ಲೇಖನಗಳನ್ನು ಅವುಗಳ ಇತಿಹಾಸ, ಭಾಷೆ, ಸಾಹಿತ್ಯ, ಚಳುವಳಿ, ಸಂಸ್ಕೃತಿಯ ಹಿನ್ನೆಲೆಯಲ್ಲಿ ಅವುಗಳ ಮಹತ್ವವನ್ನು ಕುರಿತು ಪರಿಶೀಲಿಸಿರುವುದು ಕಂಡು ಬರುತ್ತದೆ. ಈ ಎರಡೂ ಉಪನ್ಯಾಸಗಳ ವಿಷಯ, ವಸ್ತು, ವ್ಯಾಪ್ತಿ ಹಾಗೂ ದೃಷ್ಟಿಕೋನ ಭಿನ್ನ ಹಾಗೂ ಅನನ್ಯವಾದವುಗಳು ಎಂಬುದನ್ನು ಡಾ. ಕರೀಗೌಡ ಬೀಚನಹಳ್ಳಿಯವರು ಸವಿಸ್ತಾರವಾಗಿ ವಿವರಿಸಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ, ಇತಿಹಾಸ ಹಾಗೂ ಇತರ ಭಾಷೆಗಳೊಂದಿಗೆ ಕನ್ನಡ ನಡೆದು ಬಂದ ರೀತಿ, ನೀತಿ, ಸಂದರ್ಭ ಸಂಗತಿ, ಅದಕ್ಕೆ ಕಾರಣಗಳನ್ನು ಬಿಎಂಶ್ರೀ ಅವರ ದೃಷ್ಠಿಕೋನದಲ್ಲಿ ನೋಡುವ ಪ್ರಯತ್ನ ಮಾಡಿದ್ದಾರೆ.

'ಕನ್ನಡ ಮಾತು ತಲೆ ಎತ್ತುವ ಬಗೆ' ಲೇಖನದಲ್ಲಿ ಕನ್ನಡ ಕಾವ್ಯಗಳ ವಸ್ತು, ರೀತಿ, ಭಾವ, ವರ್ಣನೆ, ಶೈಲಿ, ರೂಪ ಎಂದು ಆರು ಬಗೆಗಳನ್ನು ತೆಗೆದುಕೊಂಡು ಒಂದೊಂದರ ಬಗ್ಗೆಯೂ ಶ್ರೀ ಅವರು ಮಾಡಿರುವ ವಿಚಾರದ ಆಳ, ಅಗಲ, ಮಹತ್ವ ಮತ್ತು ಈ ಲೇಖನದ ಇಂದಿನ ಅಧ್ಯಯನದ ಅಗತ್ಯವನ್ನು ಕುರಿತು ವಿಮರ್ಶಕರು ಬಹಳ ವಿಸ್ತಾರವಾಗಿ ಅವಲೋಕನ ಮಾಡಿದ್ದಾರೆ. ಇದರ ಜೊತೆಗೆ ಪ್ರಾಚೀನ ಹಸ್ತಪ್ರತಿಗಳಲ್ಲಿ ಅಡಕವಾಗಿರುವ ಗ್ರಂಥಗಳ ಮುದ್ರಣವಾಗಬೇಕು, ಅದರ ಜೊತೆಗೆ ಹೊಸಗನ್ನಡ ಭಾಷೆಯೂ ಬಲಿಷ್ಠವಾಗಬೇಕು ಎನ್ನುವ ಶ್ರೀ ಅವರ ಅಭಿಪ್ರಾಯವನ್ನು ಇಲ್ಲಿ ಒರೆಗೆ ಹಚ್ಚಲಾಗಿದೆ.

ಹಾಗೆಯೇ ಅನ್ಯಭಾಷಾ ಜ್ಞಾನ ಬಳಕೆಯ ರೀತಿ ನೀತಿಗಳನ್ನೂ ಇತಿಮಿತಿಗಳನ್ನೂ ಕುರಿತು ನಡೆಸಿರುವ ಚಿಂತನೆಗಳನ್ನು ಪರಾಮರ್ಶೆಗೆ ಒಡ್ಡಲಾಗಿದೆ.

'ಕನ್ನಡದ ಪುನರುಜ್ಜೀವನ' ಎನ್ನುವ ಲೇಖನದ ಮಹತ್ವವನ್ನು ಕುರಿತು ವಿವರಿಸಿರುವ ಈ ಭಾಗವೂ ಗಮನೀಯವಾದುದು. 'ಸರಸ್ವತಿ' ಎನ್ನುವ ರೂಪಕವನ್ನು ಅದೊಂದು ಜ್ಞಾನದ ಸಂಕೇತ. ಭಾಷೆ, ಸಾಹಿತ್ಯ, ಆನಂದವನ್ನೂ ಶ್ರೇಯಸ್ಸನ್ನೂ ಉಂಟು ಮಾಡುವವಳು ಸರಸ್ವತಿ ಎನ್ನುವ ಶ್ರೀ ಅವರ ವ್ಯಾಖ್ಯಾನದ ವಿವರ ಗಮನ ಸೆಳೆಯುತ್ತದೆ. ಒಂದು ಕಾಲದಲ್ಲಿ ಸಂಪದ್ಭರಿತವಾಗಿದ್ದು ಇಂದು ನಾಶದ ಅಂಚಿನಲ್ಲಿರುವ "ಭಾಷೆಯ ಪುನರುಜ್ಜೀವನ" ಯಾಕೆ ಆಗಬೇಕು, ಅದರ ಮಹತ್ವ ಏನು ಎನ್ನುವ ಶ್ರೀ ಅವರ ನಿಲುವನ್ನು ಕರೀಗೌಡರು ವಿವರಿಸುವ ಪ್ರಯತ್ನ ಮಾಡಿದ್ದಾರೆ. ರಾಜ ಭಾಷೆ, ರಾಷ್ಟ್ರ ಭಾಷೆಯ ವ್ಯತ್ಯಾಸಗಳು ಅವು ಒಳಗೊಳ್ಳಬೇಕಾದ ರೀತಿ ರಿವಾಜುಗಳು ಹಾಗೂ ಭಾಷೆಯ ಮಹತ್ವ, ಒಂದು ಭಾಷೆಯಿಂದ ಜನರ ಜೀವನ ಮಟ್ಟ, ವಿಚಾರಶಕ್ತಿ ಹೇಗೆ ವೃದ್ಧಿಯಾಗುತ್ತದೆ ಎನ್ನುವುದನ್ನೂ ಈ ಲೇಖನದಲ್ಲಿ ಶ್ರೀ ಅವರು ವಿವರಿಸಿದ್ದಾರೆ. ಅದರ ಜೊತೆಗೆ ದೇವ ಭಾಷೆ, ಹೂಣಭಾಷೆ, ಭಾಷೆಗಳ ಮೇಲಾಟ, ಕನ್ನಡ ನಾಡಿಗೆ ಕನ್ನಡವೇ ಗತಿ ಎಂಬುದು ಹೇಗೆ ಸತ್ಯ, ಬ್ರಾಹ್ಮಣ ಸಾಹಿತ್ಯ, ಕನ್ನಡದ ಸಾರಮಂತ್ರ ಮುಂತಾದವುಗಳ ಬಗ್ಗೆ ಬಿಎಂಶ್ರೀ ಅವರ ಅಭಿಪ್ರಾಯಗಳು ಎಂಥವು ಎಂಬುದು ಕರೀಗೌಡರು ಈ ಭಾಗದಲ್ಲಿ ವಿಸ್ತೃತವಾಗಿ ವಿವರಿಸಿಕೊಟ್ಟಿದ್ದಾರೆ.

ಈ ಕೃತಿಯ ಅನುಬಂಧದಲ್ಲಿ ನೀಡಿರುವ ಬಿಎಂಶ್ರೀ ಅವರ ಜೀವನ ವಿವರ ಮುಂತಾದವುಗಳು ಕನ್ನಡದ ಆಚಾರ್ಯ ಪುರುಷ, ಕನ್ನಡದ ಕಣ್ವ ಅವರ ಬಗ್ಗೆ ಆಸಕ್ತರು ತಿಳಿದುಕೊಳ್ಳಲೇ ಬೇಕಾಗಿರುವ ಹಲವಾರು ವಿಷಯಗಳನ್ನು ಪಟ್ಟಿ ಮಾಡಿಕೊಟ್ಟಿರುವುದು, ಈ ಕೃತಿಗೆ ಇನ್ನಷ್ಟು ಮೆರುಗನ್ನು, ಸಾರ್ಥಕ್ಯವನ್ನು ನೀಡಿದೆ.

ಬಿಎಂಶ್ರೀ ಅವರ ಬಗ್ಗೆ ಹಲವಾರು ಲೇಖನಗಳು ಹಾಗೂ ಕೃತಿಗಳನ್ನು ಕುರಿತು ವಿವರವಾಗಿ ಬರೆದಿರುವ ಭಾಗವಾಗಿ ಈ ಕೃತಿ ರೂಪುಗೊಂಡಿದೆ. ಈ ಕೃತಿಯಲ್ಲಿ ಉಲ್ಲೇಖಿತವಾದ ವಿಮರ್ಶಕರ ಅಭಿಪ್ರಾಯಗಳು, ಅವುಗಳನ್ನು ನಿಕಷಕ್ಕೆ ಒಡ್ಡಿರುವ ರೀತಿ, ಬಿಎಂಶ್ರೀ ಅವರ ಸಾಹಿತ್ಯದ, ಬದುಕಿನ, ಕನ್ನಡದ ಬಗೆಗಿನ ಕಾಳಜಿಯನ್ನು ಕೇಂದ್ರವಾಗಿಸಿ ರಚಿಸಿರುವ ಈ ಕೃತಿ ಇಂದಿನ ಯುವ ಪೀಳಿಗೆಗೆ ಕನ್ನಡ ಭಾಷೆ, ಸಾಹಿತ್ಯ, ಚರಿತ್ರೆ, ಚಳುವಳಿ, ಸಂಸ್ಕೃತಿಯ ಅನನ್ಯತೆ ಕಟ್ಟಿಕೊಡುವ ಪ್ರಯತ್ನ ಮಾಡಿದೆ. ಹಾಗಾಗಿಯೇ ಈ ಕೃತಿಯನ್ನು ಬಿಎಂಶ್ರೀ ಅವರ ಬಗೆಗಿನ ಅಪೂರ್ವ ಮಾಹಿತಿ ಕೋಶ ಹಾಗೂ ಅದರ ವಿಶ್ಲೇಷಣಾ ಕೃತಿ ಎಂದೇ ಕರೆಯುತ್ತೇನೆ.

□□

ಸಾಂಸ್ಕೃತಿಕ ಸ್ಥಿತ್ಯಂತರ ಹಾಗೂ ಕನ್ನಡ ಜೈನಸಾಹಿತ್ಯದ ಪ್ರತಿಕ್ರಿಯೆ-ಪ್ರವೃತ್ತಿಗಳು

ಡಾ. ಚಂದ್ರಮೋಹನ್

❖

ಹನ್ನೊಂದನೆಯ ಶತಮಾನದ ಕೊನೆ ಹಾಗೂ ಹನ್ನೆರಡನೆಯ ಶತಮಾನದ ಪ್ರಾರಂಭಕಾಲದಲ್ಲಿ ಕೃತಿರಚನೆ ಮಾಡಿರುವ ಕವಿಯೆಂದು ತಿಳಿಯಲಾಗಿರುವ, ಕನ್ನಡದ ಪ್ರಮುಖ ಕವಿಗಳಲ್ಲಿ ಓರ್ವನಾದ ನಾಗಚಂದ್ರ ತನ್ನ 'ಮಲ್ಲಿನಾಥಪುರಾಣ' ಕೃತಿಯಲ್ಲಿ ಪೂರ್ವಕವಿಗಳನ್ನು, ಕೃತಿಗಳನ್ನು ಸ್ಮರಿಸುವ ಸಂದರ್ಭದಲ್ಲಿ ಆಡುವ ಮಾತುಗಳಿವು:

> **ಮನ್ನಿಸುಗೆ ಕೃತಿಗೆ ಸೌಭಾ**
> **ಗ್ಯೋನ್ನತಿಯಂ ಸುಕವಿ ಪಂಪನಾದಿಪುರಾಣಂ।**
> **ಪೊನ್ನನ ಶಾಂತಿಪುರಾಣಂ**
> **ರನ್ನನ ಕೃತಿರತ್ನಮೆನಿಸಿದಜಿತಪುರಾಣಂ**
>
> **(ಮಲ್ಲಿನಾಥ ಪುರಾಣ, ೧-೨೫)**

ಇಲ್ಲಿ ಗಮನಿಸಬೇಕಾದ ಅಂಶವಿದು. ನಾಗಚಂದ್ರ ರತ್ನತ್ರಯರ ಕೃತಿಗಳನ್ನು ಸ್ಮರಿಸುತ್ತಿರುವನಾದರೂ ಅವನು ಹೆಸರಿಸುವ ಕೃತಿಗಳೆಲ್ಲವೂ ಆಗಮಿಕ ಕೃತಿಗಳಾಗಿವೆ. ಕನ್ನಡ ಮಾರ್ಗಸಾಹಿತ್ಯದಲ್ಲಿ ಜೈನಪುರಾಣಗಳ ಸ್ಥಾನ ಹಿರಿದಾದರೂ ಆದಿಕವಿ ಪಂಪನ ವಿಕ್ರಮಾರ್ಜುನವಿಜಯಂ ಹಾಗೂ ರನ್ನಕವಿಯ ಸಾಹಸಭೀಮವಿಜಯಂ ಕೃತಿಗಳಿಗೆ ವಿಶಿಷ್ಟವಾದ ಸ್ಥಾನವಿರುವುದೂ ವಿದಿತವೇ. ಸತ್ಕವಿಯಾದ ನಾಗಚಂದ್ರನಿಗೆ ಇದು ತಿಳಿಯದ ಅಂಶವೇನೂ ಅಲ್ಲ. ಪ್ರತಿಭಾಶೀಲ ಕವಿಗಳ ಕೃತಿಯಾಗಿರುವುದರ ಜೊತೆಗೆ ಇವೆರಡೂ ಕೃತಿಗಳು ಜೈನಮಹಾಭಾರತ ಪರಂಪರೆಯಲ್ಲಿ ರಚಿತವಾದ ಕೃತಿಗಳಾಗಿವೆ ಎನ್ನುವುದನ್ನೂ ಗಮನಿಸಬೇಕು. ಅಭಿನವಪಂಪನೆಂದು ಹೆಸರಾದ ನಾಗಚಂದ್ರನೇ ಸ್ವತಃ ಜೈನಪರಂಪರೆಯ ರಾಮಾಯಣಕ್ಕೆ ಕನ್ನಡ ಕಾವ್ಯದಲ್ಲಿ ನಾಂದಿ ಹಾಡಿರುವುದೂ ತಿಳಿದ ಸಂಗತಿಯೇ. ಆದರೆ ನಾಗಚಂದ್ರನದು ಕಾವ್ಯವಸ್ತು ಧರ್ಮಸಂಬಂಧಿಯಾಗಿರಬೇಕು ಎನ್ನುವ ದೃಢನಿಷ್ಠೆ. ಹಾಗಾಗಿ ಆತನಿಗೆ,

ಕಥೆ ಜಿನಚರಿತಮೆ ಕವಿ ಜಿನ
ಕಥೆಯಂ ಪೇೞ್ದವನೆ ರಾಜವಿಟಚೋರ ಕಥಾ
ಕಥೆ ಕಥೆಯೆ ಕವಿ ಕವಿಯೆ ತ
ತ್ಕಥೆಯಂ ಪೇೞ್ದಪಯಶಮಮಂ ಪುಟ್ಟಿಸುಗುಂ

(ಮಲ್ಲಿನಾಥ ಪುರಾಣ, ೧–೫೦)

ನಾಗಚಂದ್ರನ ದೃಢವಾದ ಧರ್ಮನಿಷ್ಠೆಯ ಮತ್ತೊಂದು ಮುಖ ಪ್ರಕಟವಾಗುವುದು ಹೀಗೆ:

ಜಿನಪತಿಗಂ ಜಿನಮುನಿಗಂ
ಜಿನಾಗಮಕ್ಕಂ ಜಿನಾಧಿಪತಿಭವನಕ್ಕಂ
ಜಿನಗುಣ ಸಂಪತ್ತಿಗಮೆಱ
ಪನೆಱಗನುಟಿದವರ್ಗೆ ನಾಗಚಂದ್ರ ಕವೀಂದ್ರಂ

(ಮಲ್ಲಿನಾಥ ಪುರಾಣ, ೧–೪೦)

ಕಾವ್ಯರಚನೆಯಿಂದ ಆಶಿಸುವ ಪೂಜೆ, ನೆಗೞ್ತೆ ಮತ್ತು ಲಾಭ (ಇಂದ್ರಪೂಜೆ, ಭುವನಸ್ತುತಮಪ್ಪ ನೆಗೞ್ತೆ, ಮುಕ್ತಿ ಸಂಭವಿಸುವ ಲಾಭ) ಜಿನೇಂದ್ರನ ಸ್ತುತಿಯಿಂದ ಕೈಸಾರುವಾಗ 'ಪೆಱರೀವುದೇಂ ಪೆಱರ ಮಾಡುವುದೇಂ ಪೆಱರಿಂದಪ್ಪುದೇಂ' ಎಂದು ಪಂಪನೂ 'ಆದಿಪುರಾಣ'ದಲ್ಲಿ ಜಿನನಿಷ್ಠೆಯನ್ನು ಪ್ರಕಟಿಸುತ್ತಾನಾದರೂ ನಾಗಚಂದ್ರನ ಧರ್ಮನಿಷ್ಠೆ ವೀರನಿಷ್ಠೆಯಾಗಿ ಮಾರ್ಪಟ್ಟಿರುವುದು ಕಾಣುತ್ತದೆ. ಪಂಪನಂತಲ್ಲದೆ ನಾಗಚಂದ್ರ ಮೇಲಿನ ತನ್ನ ನುಡಿಗಳಿಗೆ ಅನುಗುಣವಾಗಿ ತಾನು ರಚಿಸಿದ ಎರಡೂ ಕೃತಿಗಳಲ್ಲಿ ಜಿನಕಥೆಯನ್ನೇ ಹೇಳಿದ್ದಾನೆ. ಪಂಪನ ಕೃತಿರಚನೆ ಮಾಡಿದ ಕಾಲದಿಂದ ಸುಮಾರು ನೂರಐವತ್ತು ವರ್ಷಗಳ ಈಚೆಗೆ ಬರೆಯುತ್ತಿರುವ ನಾಗಚಂದ್ರನ ಧಾರ್ಮಿಕ ಧೋರಣೆಗಳು ಮತ್ತು ಕಾವ್ಯದೃಷ್ಟಿಯಲ್ಲಿ ಪ್ರಕಟವಾಗುವ ಗಣನೀಯವಾದ ಬದಲಾವಣೆಯ ಮೂಲವೇನು? ನಾಗಚಂದ್ರನಿಗಿಂತ ಸ್ವಲ್ಪ ಮೊದಲು ಜೀವಿಸಿದ್ದ ಶಾಂತಿನಾಥ ಕ್ರಿಶ ೧೦೭೦ರ ಹೊತ್ತಿಗೆ ತಾನು ರಚಿಸಿದ 'ಸುಕುಮಾರ ಚರಿತೆ' ಕೃತಿಯಲ್ಲಿ 'ಸುಕುಮಾರಚರಿತದೊಳ್ ನೋಳ್ಕೆ ಕಾವ್ಯಧರ್ಮಮನಮಳಜಿನಧರ್ಮಮುಮಂ' ಎಂದು ಹೇಳುತ್ತಾನೆ. ಈ ಮಾತುಗಳ ಇಂಗಿತವೂ ಮತ್ತೆ ಪಂಪನತ್ತಲೇ ನಮ್ಮನ್ನು ಒಯ್ಯುತ್ತದೆ. ಪಂಪನ ಪ್ರಸಿದ್ಧವಾದ 'ನೆಗೞ್ದಾದಿಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ' ಎನ್ನುವ ನುಡಿಗಳಿಗೆ ತಿದ್ದುಪಡಿಯಾಗಿ ಶಾಂತಿನಾಥನ ಮಾತುಗಳು ನಿಲ್ಲುವಂತೆ ತೋರುತ್ತದೆ. ಧರ್ಮ ಎನ್ನುವಾಗ ಪಂಪ ಜೈನಧರ್ಮವನ್ನೇ ಧ್ವನಿಸುತ್ತಾನಾದರೂ ಅದನ್ನು ಆತ ವಾಚ್ಯವಾಗಿಸಿಲ್ಲ. ಆದರೆ ಶಾಂತಿನಾಥ ಸುಸ್ಪಷ್ಟವಾಗಿ

ಜೈನಧರ್ಮವನ್ನೇ ಕುರಿತಿದ್ದಾನೆ. ನಾಗಚಂದ್ರನಿಗಿಂತ ಸುಮಾರು ಐವತ್ತು ವರ್ಷಗಳ ಈಚೆಗೆ, ಪಂಪನಿಗಿಂತ ಇನ್ನೂರು ವರ್ಷಗಳ ಈಚೆಗೆ, ಸುಮಾರು ೧೧೫೦ರ ಹೊತ್ತಿಗೆ 'ಸಮಯಪರೀಕ್ಷೆ' ಕೃತಿಯನ್ನು ರಚಿಸಿದ ಬ್ರಹ್ಮಶಿವ ಧರ್ಮನಿಷ್ಠೆಯ ಮತ್ತೊಂದು ಮುಖವನ್ನು ಪ್ರಕಟಿಸುತ್ತಾನೆ. ಅವನ ಕೃತಿ ಜಿನಸ್ತುತಿಯನ್ನೇ ಮುಖ್ಯವಾದ ಉದ್ದೇಶವಾಗಿ ಹೊಂದಿದ್ದರೂ ಅನ್ಯದೇವತಾನಿಂದೆ, ಅನ್ಯಮತವಿಡಂಬನೆ ಕೃತಿಯಲ್ಲಿ ಹಾಸುಹೊಕ್ಕಾಗಿ, ಮತೀಯ ಪಕ್ಷಪಾತ ಹಾಗೂ ಧಾರ್ಮಿಕ ಅಸಹನೀಯತೆಗಳ ಅಭಿವ್ಯಕ್ತಿಯಾಗಿ ಕೃತಿ ಉಳಿದುಬಿಡುತ್ತದೆ.

ಮೇಲೆ ಕಾಣಿಸಿದ ಬದಲಾವಣೆಗಳನ್ನು ಅನಿವಾರ್ಯಗೊಳಿಸಿದ ಅಂಶಗಳಾವುವು ಎಂಬ ಪ್ರಶ್ನೆಗೆ ಉತ್ತರ ಸಮಕಾಲೀನ ಧಾರ್ಮಿಕ ಮತ್ತು ರಾಜಕೀಯ ಪರಿಸರಗಳಲ್ಲಿದೆ. ನಾಗಚಂದ್ರನ ಕಾಲಕ್ಕೆ ಜೈನಧರ್ಮಕ್ಕೆ ಕರ್ನಾಟಕದಲ್ಲಿ ಸುದೀರ್ಘ ಇತಹಾಸವಿತ್ತಾದರೂ ಆತ ತನ್ನ ಕೃತಿಗಳನ್ನು ರಚಿಸುವ ಕಾಲಕ್ಕೆ ಅದು ತನ್ನ ಪ್ರಭಾವನ್ನು ಕಳೆದುಕೊಳ್ಳುತ್ತ ಸಾಗಿತ್ತು. ಸುಮಾರು ಐದುನೂರು ವರ್ಷಕ್ಕೂ ಹೆಚ್ಚು ಕಾಲ ದಕ್ಷಿಣಭಾರತದ ಬಹುಭಾಗವನ್ನು ನಿರಂತರವಾಗಿ ಆಳಿದ ಚಾಲುಕ್ಯ-ರಾಷ್ಟ್ರಕೂಟ-ಗಂಗ ಅರಸರಿಂದ ಜೈನಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹ, ಪೋಷಣೆಗಳು ಸಂದಿದ್ದವು. ಇದೇ ಮಟ್ಟದ ಬೆಂಬಲ ಹೊಯ್ಸಳರಿಂದ ಜೈನಧರ್ಮಕ್ಕೆ ಲಭಿಸಲಿಲ್ಲ. ವೀರಶೈವ ಮತ್ತು ಶ್ರೀವೈಷ್ಣವ ಧರ್ಮಗಳ ಪ್ರಸಾರದಿಂದಾಗಿಯೂ ಜೈನಧರ್ಮಕ್ಕೆ ಹೊಡೆತ ಬಿದ್ದಿತು. ಅತಂತ್ರ ಹಾಗೂ ಅಸ್ಥಿರತೆಯ ಈ ಸಂದರ್ಭಗಳು ಉತ್ತರಕಾಲೀನ ಜೈನಸಾಹಿತ್ಯದ ದೃಷ್ಟಿ-ಧೋರಣೆಗಳನ್ನು ವಿಶೇಷವಾಗಿ ಪ್ರಭಾವಿಸಿದವು. ಸಮಕಾಲೀನ ಸಂದರ್ಭಗಳಿಗೆ ಮಿಡಿದ ಜೈನ ಕೃತಿಕಾರರ ಧರ್ಮನಿಷ್ಠೆಯ ವಿಭಿನ್ನ ಮುಖಗಳನ್ನು ಅವರ ಕೃತಿಗಳು ಪ್ರತಿಬಿಂಬಿಸಿದವು. ಕನ್ನಡ ಸಾಹಿತ್ಯದ ಸುವರ್ಣಯುಗದ ಸಾರವತ್ತಾದ ರಚನೆಗಳಾಗಿ ಶೋಭಿಸುವ ಜೈನಕೃತಿಗಳು ಉತ್ತರಕಾಲೀನ ದೆಸೆಯಲ್ಲಿ ಪ್ರಕಟಿಸುವ ಪ್ರವೃತ್ತಿಗಳ ಅವಲೋಕನದ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಕನ್ನಡ ಜೈನಸಾಹಿತ್ಯ ವಿಪುಲವಾದದ್ದು, ಅದರ ವ್ಯಾಪ್ತಿ-ವಿಸ್ತಾರಗಳು ಹಿರಿದಾದುವು. ಪಂಪಪೂರ್ವ ಯುಗದಿಂದ ಪ್ರಾರಂಭವಾಗಿ ಜೈನಕೃತಿಗಳ ರಚನೆ ನಿರಂತರವಾಗಿ ಮುಂದುವರೆದಿದೆ. ಕನ್ನಡ ಸಾಹಿತ್ಯದ ವಿಶಿಷ್ಟ ಕೃತಿಗಳಲ್ಲಿ ಒಂದಾದ 'ವಡ್ಡಾರಾಧನೆ' ಪಂಪಪೂರ್ವ ಯುಗದ ಪ್ರತಿನಿಧಿ ಮಾತ್ರವಲ್ಲದೆ ಕನ್ನಡ ಭಾಷೆ, ಸಾಹಿತ್ಯ ಹಾಗೂ ಕನ್ನಡ ಸಂಸ್ಕೃತಿಯ ಮೇಲಿನ ಜೈನಧರ್ಮದ ಸಮಕಾಲೀನ ಪ್ರಭಾವಕ್ಕೆ ಸಾಕ್ಷಿಯಾಗಿದೆ. ಮತ್ತೊಂದು ತುದಿಯಲ್ಲಿ ಇತ್ತ ಹದಿನೆಂಟನೆಯ ಶತಮಾನದ ಉತ್ತರಾರ್ಧ ಮತ್ತು ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದ ಚಂದ್ರಸಾಗರವರ್ಣಿ ಎನ್ನುವ ಕವಿ ನಲವತ್ತೈದಕ್ಕೂ ಹೆಚ್ಚಿನ ಜೈನ ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಜಿನರಾಮಾಯಣ

ಮತ್ತು ಜಿನಭಾರತಗಳು ಸೇರಿವೆ. ಶಾಸ್ತ್ರಗ್ರಂಥಗಳು, ವ್ಯಾಖ್ಯಾನಗಳು, ತೀರ್ಥಂಕರ ಚರಿತೆಗಳನ್ನು ಹೇಳುವ ಪುರಾಣಕೃತಿಗಳು, ತೀರ್ಥಂಕರರನ್ನು ಉಳಿದ ಇತರ ಶಲಾಕಾಪುರುಷರ ಚರಿತೆಗಳು, ಮಹಾಪುರುಷರು–ಜಿನಭಕ್ತರ ಕಥೆಗಳು, ಕಥಾಕೋಶಗಳು, ನೋಂಪಿಯ ಕಥೆಗಳು, ಸ್ತೋತ್ರಸಾಹಿತ್ಯ, ಯಕ್ಷಗಾನ – ಹೀಗೆ ಅನನ್ಯವಾದ ವೈವಿಧ್ಯವನ್ನು ಕನ್ನಡ ಜೈನ ಸಾಹಿತ್ಯವು ಪ್ರಕಟಿಸುತ್ತದೆ. ಆದರೆ ಕನ್ನಡ ಜೈನಸಾಹಿತ್ಯದ ಈ ಎಲ್ಲ ಪ್ರಕಾರಗಳೂ ಏಕಪ್ರಕಾರವಾಗಿ ಸತ್ವಶೀಲ ಪ್ರತಿನಿಧಿಗಳನ್ನು ಸೃಷ್ಟಿಸಲಿಲ್ಲ. ಸಮಕಾಲೀನ ಸಾಂಸ್ಕೃತಿಕ ಪರಿಸ್ಥಿತಿಗಳು ಕನ್ನಡ ಜೈನ ಕೃತಿಕಾರರನ್ನು ಸಹಜವಾಗಿಯೇ ಪ್ರಭಾವಿಸಿವೆ, ಪ್ರಧಾನವಾಗಿ ಧಾರ್ಮಿಕ ದೃಷ್ಟಿ ಅವರನ್ನು ನಿರ್ದೇಶಿಸಿದೆ. ಪರಂಪರೆ ಹಾಗೂ ಸಮಕಾಲೀನ ಒತ್ತಡಗಳ ನಡುವಿನ ಸಂಘರ್ಷವನ್ನು ಯಾವುದೇ ಸಾಹಿತ್ಯದಂತೆ ಕನ್ನಡ ಜೈನಸಾಹಿತ್ಯವೂ ಪ್ರತಿಫಲಿಸುತ್ತದೆ. ಈ ಸಂಘರ್ಷದ ಧ್ವನಿ–ಪ್ರತಿಧ್ವನಿಗಳು ಹೆಚ್ಚಾಗಿ ಪ್ರಕಟವಾಗುವುದು ಉತ್ತರಕಾಲೀನ ಜೈನಸಾಹಿತ್ಯದಲ್ಲಿ.

ಕನ್ನಡ ಜೈನಸಾಹಿತ್ಯದ ಕಾಲವ್ಯಾಪ್ತಿ ಸುದೀರ್ಘವಾದುದು. ಹಾಗಾಗಿ ಅಲ್ಲಿ ಏರಿಳಿತಗಳು ಸಹಜವೇ. ಇದು ದೀರ್ಘಕಾಲೀನವಾದ ಯಾವುದೇ ಸಾಹಿತ್ಯಕ್ಕೂ ಅನ್ವಯವಾಗುವಂತಹುದೇ. ಪಂಪಪೂರ್ವ ಯುಗದಲ್ಲಿಯೇ ಚಿಗುರೊಡೆದ ಕನ್ನಡ ಜೈನ ಸಾಹಿತ್ಯವು ಪಂಪನ ಕಾಲವಾದ ಹತ್ತನೆಯ ಶತಮಾನದಲ್ಲಿ ತನ್ನ ಉತ್ಕರ್ಷವನ್ನು ತಲುಪಿತ್ತು. ಯೋಗಾಯೋಗವೆನ್ನುವಂತೆ ಹತ್ತನೆಯ ಶತಮಾನದ ಅವಧಿಯು ಕನ್ನಡ ಸಾಹಿತ್ಯದ ಸುವರ್ಣಯುಗವೂ ಆಗಿದ್ದಿತು. ಕನ್ನಡ ನಾಡಿನಲ್ಲಿ ಜೈನಧರ್ಮ ತನ್ನದಾಗಿಸಿಕೊಂಡಿದ್ದ ಅಸದೃಶವಾದ ಸ್ಥಾನಮಾನಗಳು ಈ ಚಲನಶೀಲತೆಗೆ ಕಾರಣವಾಗಿದ್ದವು. ಪಂಪ–ಪೊನ್ನ–ರನ್ನ–ಚಾವುಂಡರಾಯರ ಕೃತಿಗಳಿಂದ ಕನ್ನಡ ಸಾಹಿತ್ಯವು ದೀಪ್ತಗೊಂಡು ಹೊಸದಾದ ಪರಂಪರೆಯೊಂದಕ್ಕೆ ನಾಂದಿಯಾಯಿತು. ಒಂದರ್ಥದಲ್ಲಿ ಹತ್ತನೆಯ ಶತಮಾನವನ್ನು ಕನ್ನಡ ಜೈನಸಾಹಿತ್ಯದ ಸ್ಥಿತ್ಯಂತರದ ಬಿಂದುವಾಗಿ ಪರಿಗಣಿಸಬಹುದಾಗಿದೆ.

ಕನ್ನಡ ಜೈನಸಾಹಿತ್ಯದ ಸತ್ವಾತಿಶಯವನ್ನೆಲ್ಲ ತನ್ನಲ್ಲಿ ಗರ್ಭೀಕರಿಸಿಕೊಂಡಿರುವ ಪ್ರಕಾರವೆಂದರೆ ಕನ್ನಡ ಜೈನಪುರಾಣಗಳು. ಅಂತೆಯೇ ಕನ್ನಡ ಜೈನಸಾಹಿತ್ಯದಲ್ಲಿ ಪುರಾಣಗಳಿಗೆ ಅಗ್ರಸ್ಥಾನ. ಜೈನಸಾಹಿತ್ಯದಲ್ಲಿ ಮಾತ್ರವಲ್ಲದೆ ಕನ್ನಡ ಮಾರ್ಗ ಸಾಹಿತ್ಯದಲ್ಲಿಯೂ ಜೈನಪುರಾಣಗಳಿಗೆ ಕಳಶಪ್ರಯವಾದ ಸ್ಥಾನವಿದೆ. ಪಂಪನಿಂದ ಪ್ರವರ್ತಕವಾದ ಈ ಪರಂಪರೆಯಲ್ಲಿ ಆದಿನಾಥ, ಅಜಿತ, ಚಂದ್ರಪ್ರಭ, ಪುಷ್ಪದಂತ, ಅನಂತ, ಧರ್ಮ, ಶಾಂತಿ, ಮಲ್ಲಿ, ನೇಮಿ, ಪಾರ್ಶ್ವ ಮತ್ತು ವರ್ಧಮಾನ – ಈ ಹನ್ನೊಂದು ತೀರ್ಥಂಕರರನ್ನು ಕುರಿತ ಪುರಾಣಕೃತಿಗಳು ರಚಿತವಾಗಿವೆ. ಉಳಿತ ತೀರ್ಥಂಕರ ಚರಿತೆಗಳಿಗೆ ನಾವು 'ಚಾವುಂಡರಾಯಪುರಾಣ'ವನ್ನು ಆಶ್ರಯಿಸಬೇಕಾಗಿದೆ.

ಎರಡು ಅಂಶಗಳನ್ನು ಇಲ್ಲಿ ಗಮನಿಸಬೇಕಾಗಿದೆ. ಕಥಾಪುಷ್ಟಿಯನ್ನು ಹೊಂದಿರುವ ಆದಿ, ಶಾಂತಿ, ನೇಮಿ, ಪಾರ್ಶ್ವ ಮತ್ತು ವರ್ಧಮಾನರ ಚರಿತೆಗಳನ್ನು ಬಿಟ್ಟು ಉಳಿದ ಜೈನಪುರಾಣಗಳನ್ನು ಹಿಡಿದು ನಿಲ್ಲಿಸಿರುವುದು ಪುರಾಣಾಂಗಗಳು, ಪಂಚಕಲ್ಯಾಣಗಳು ಮತ್ತು ಅಷ್ಟಾದಶವರ್ಣನೆಗಳು. ಎರಡನೆಯ ಅಂಶವೆಂದರೆ ರಚಿತವಾಗಿರುವ ಹದಿನೈದು ಪುರಾಣಕೃತಿಗಳ ಪೈಕಿ ಕನ್ನಡ ಸಾಹಿತ್ಯದ ಸುವರ್ಣಯುಗವಾದ ಹತ್ತನೆಯ ಶತಮಾನದಲ್ಲಿ ರಚಿತವಾದ ಕೃತಿಗಳು ಕೇವಲ ಮೂರು. ಉಳಿದೆಲ್ಲವೂ ಉತ್ತರಕಾಲೀನ ರಚನೆಗಳಾಗಿವೆ. ಕ್ರಿ.ಶ ೧೪೦೦ರ ವರೆವಿಗೂ ಮಾರ್ಗಶೈಲಿಯಲ್ಲಿ ಜೈನಪುರಾಣಗಳ ರಚನೆ ಮುಂದುವರೆದಿದೆ. ಈ ನಿಟ್ಟಿನಲ್ಲಿ ಮಧುರನ 'ಧರ್ಮನಾಥಪುರಾಣ'ವು ಒಂದು ಮೈಲಿಗಲ್ಲು. ಇದು ಹದಿನೈದನೆಯ ತೀರ್ಥಂಕರನಾದ ಧರ್ಮನಾಥನನ್ನು ಕುರಿತ ಮೊದಲ ಕೃತಿ, ಆದರೆ ಚಂಪೂ ಶೈಲಿಯಲ್ಲಿ ರಚಿತವಾದ ಕೊನೆಯ ತೀರ್ಥಂಕರ ಕೃತಿಯಾಗಿದೆ.

ನಾಲ್ಕೂವರೆ ಶತಮಾನಗಳ ಸುದೀರ್ಘ ಅವಧಿಗೆ ಮಾರ್ಗಶೈಲಿಯ ಜೈನಪುರಾಣ ಕನ್ನಡ ಜೀವಂತವಾಗಿರಲು ಕಾರಣ ಕನ್ನಡ ಜೈನಸಾಹಿತ್ಯದ ಮೂಲಭೂತ ಆಶಯ. ಈ ಆಶಯವನ್ನು ರನ್ನನ ಕೆಳಗಿನ ಪದ್ಯ ಸುಸ್ಪಷ್ಟಗೊಳಿಸುತ್ತದೆ:

ಎನಿತುಂಟಾಗಮ ವರ್ಣನ
ಮನಿತುಮನೊಳಕೊಂಡು ಸಕಲಭವ್ಯಜನಂಗ।
ಳ್ಗನುರಾಗಮನೊಡರಿಸಿದಪು
ದೆನಿಪ ಪುರಾಣಂ ಪುರಾಣತಿಲಕಮಿದಲ್ತೇ ॥

ತಮ್ಮ ಧಾರ್ಮಿಕ ಆಶಯಗಳನ್ನು, ಧ್ಯೇಯೋದ್ದೇಶಗಳಗಳನ್ನು ಸಾಕಾರಗೊಳಿಸುವ ವಾಹಕವಾಗಿ ಚಂಪೂಶೈಲಿಯ ಪುರಾಣಕೃತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಾರವು ಎಂದೆನ್ನಿಸಿದಾಗ ಕನ್ನಡ ಜೈನ ಕೃತಿಕಾರರ ಗಮನ ಇತರ ಸಾಹಿತ್ಯರೂಪಗಳಾದ ಷಟ್ಪದಿ, ಸಾಂಗತ್ಯಗಳತ್ತ ಹೊರಳಿದೆ. ಈ ಪಲ್ಲಟ ಸಮಕಾಲೀನ ಸಾಹಿತ್ಯಿಕ ಪ್ರವೃತ್ತಿಗಳಿಗೆ ಹೊಂದುವಂತೆಯೂ ಇತ್ತು. ಮಾರ್ಗಶೈಲಿಯ ಚಂಪೂರೂಪದ ಸತ್ವ ಸವಕಲಾಗಿ ಅದರ ಸ್ಥಾನದಲ್ಲಿ ಷಟ್ಪದಿ, ದೇಸೀ ಛಂದೋಪ್ರಕಾರವಾದ ಸಾಂಗತ್ಯ ಬೇರೂರತೊಡಗಿದ್ದವು. ಇದರ ಜೊತೆಜೊತೆಗೇ ಘಟಿಸಿದ ಮತ್ತೊಂದು ಪ್ರಮುಖವಾದ ಬೆಳವಣಿಗೆಯೆಂದರೆ ಕನ್ನಡ ಜೈನಕೃತಿಕಾರರು ಪ್ರಚಾರಕ ಮನೋಧರ್ಮವನ್ನು ತಳೆದದ್ದು. ವೀರಶೈವರ ಪ್ರವರ್ಧಮಾನ ಮತ್ತು ಶ್ರೀವೈಷ್ಣವ ಧರ್ಮಪ್ರಸಾರವು ಕಡುನಿಷ್ಠರಾದ ಕನ್ನಡ ಜೈನಕವಿಗಳ ಮೇಲೆ ಗಂಭೀರವಾದ ಪರಿಣಾಮವನ್ನು ಮೂಡಿಸಿರಲು ಸಾಧ್ಯ. ಎಲ್ಲ ಕವಿಗಳೂ ಇದಕ್ಕೆ ಒಂದೇ ರೀತಿಯಲ್ಲಿ ಪ್ರತಿಕ್ರಿಯಿಸಿಲ್ಲವಾದರೂ ಪ್ರಚಾರಕ ಆವೇಶದ ಕಣ್ಣಿಗೆ ರಾಚುವ ಪ್ರತಿನಿಧಿಯಾಗಿ ಬ್ರಹ್ಮಶಿವನ 'ಸಮಯಪರೀಕ್ಷೆ' ನಿಲುತ್ತದೆ. ಕ್ರಿ.ಶ. ೧೧೫೦ರ ಸುಮಾರಿಗೆ ಈ ಕೃತಿ ರಚಿತವಾಗುವ ಹೊತ್ತಿಗೆ ವೀರಶೈವ ಧರ್ಮವು ತನ್ನ ನೆಲೆಗಳನ್ನು

ಭದ್ರಪಡಿಸಿಕೊಂಡಿತ್ತು. ವೀರಶೈವರ ಉತ್ಥಾನದೊಂದಿಗೆ ಮಂಕಾದಂತೆ ಕಂಡುಬರುವ ಜೈನಸಾಹಿತ್ಯವು ೧೩–೧೪ನೆಯ ಶತಮಾನಗಳಲ್ಲಿ ಹೊಸದಾದ ಉತ್ಸಾಹದಿಂದ ಮತ್ತೆ ಹೊರಹೊಮ್ಮಿದಂತೆ ಕಾಣುತ್ತದೆ. ಪುರಾಣಸಾಹಿತ್ಯದ ರಚನೆ ಈ ಅವಧಿಯಲ್ಲಿ ಮುಂದುವರೆದಿದೆಯಾದರೂ ಸಾಂಪ್ರದಾಯಿಕತೆ, ಶಾಸ್ತ್ರೋಕ್ತವಾದ ಓಜಸ್ಸನ್ನು ಅವು ಪ್ರಕಟಿಸುತ್ತವೆಯೇ ಹೊರತು ಅವುಗಳಲ್ಲಿ ನಾವೀನ್ಯದ ಸುಳಿವಿಲ್ಲ. ಪ್ರೌಢ, ಪಂಡಿತ ರಚನೆಗಳಾಗಿ ಅವು ಉಳಿಯುತ್ತವೆಯೇ ಹೊರತು ಸತ್ಕಾವ್ಯಗಳಾಗಿ ಅಲ್ಲ. ಪ್ರಮುಖ ಜೈನಕವಿಗಳಲ್ಲಿ ಓರ್ವನಾದ ಜನ್ನನ 'ಅನಂತನಾಥ ಪುರಾಣ' ಕೃತಿಗಿಂತಲೂ ಅವನ 'ಯಶೋಧರ ಚರಿತೆ' ಹಲವು ಕಾರಣಗಳಿಗಾಗಿ ಮಹತ್ವವನ್ನು ಹೊಂದಿರುವುದನ್ನು ಗಮನಿಸಬೇಕು, ಜೊತೆಗೆ ಸ್ಮರತಂತ್ರವನ್ನು ಹೇಳುವ 'ಅನುಭವ ಮುಕುರ' ಎನ್ನುವ ಗ್ರಂಥವನ್ನೂ ಜನ್ನ ರಚಿಸಿದ್ದಾನೆ ಎನ್ನುವ ಅಂಶವನ್ನೂ ಸಹ.

ಧರ್ಮಪ್ರಚಾರಕ್ಕೆ ಕವಿಗಳಿಗೆ ಒದಗಿದ ಮಾರ್ಗಗಳಲ್ಲಿ ಪ್ರಾಚೀನವಾದುದು ಮತ್ತು ಪರಿಣಾಮಕಾರಿಯಾದುದು ಕಥಾಸಾಹಿತ್ಯ. ಪಂಪಪೂರ್ವ ಯುಗದ 'ವಡ್ಡಾರಾಧನೆ' ಕನ್ನಡದಲ್ಲಿ ಈ ಪರಂಪರೆಗೆ ನಾಂದಿಹಾಡಿದ ಕೃತಿಯಾಗಿದೆ. ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ನಯಸೇನ 'ಧರ್ಮಾಮೃತ'ದ ಮೂಲಕ ಈ ಪರಂಪರೆಯನ್ನು ಮುಂದುವರೆಸಿದ. ನಾಗರಾಜನ 'ಪುಣ್ಯಾಸ್ರವ' ಮತ್ತು ವೃತ್ತವಿಲಾಸನ 'ಧರ್ಮಪರೀಕ್ಷೆ' ಇದೇ ಹಾದಿಯಲ್ಲಿ ಮುಂದುವರೆದವು. ಈ ಕೃತಿಗಳು ಸಮಕಾಲೀನ ನೆಲೆಯಲ್ಲಿ ಸ್ಥಾಪಿತವಾಗಿದ್ದ ಪ್ರೌಢವಾದ ಚಂಪೂಪರಂಪರೆಯಲ್ಲೇ ಮುಂದುವರೆದರೂ ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಸಾಮಾನ್ಯರಿಗೆ ದಕ್ಕುವಂತೆ ಸುಲಭವಾದ ಶೈಲಿಯನ್ನು ಹೊಂದಿದ್ದವು. ನಯಸೇನ ಮತ್ತು ವೃತ್ತವಿಲಾಸ ಕಥೆಗಳ ಮೂಲಕ ತಮ್ಮ ಧರ್ಮವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಅನ್ಯಧರ್ಮಗಳನ್ನು ಖಂಡಿಸುವುದನ್ನೂ ಸಹ ಕಾಣುತ್ತೇವೆ. ಸಮಕಾಲೀನ ಸಂದರ್ಭದಲ್ಲಿ ಅನ್ಯಮತಖಂಡನೆಯೇ ತಮ್ಮ ಧರ್ಮದ ಉಳಿವಿಗೆ, ಅಭಿವೃದ್ಧಿಗೆ ಅವರಿಗೆ ಕಂಡ ಏಕೈಕವಾದ ಮಾರ್ಗ ಎನ್ನುವ ಪರಿಸ್ಥಿತಿ ಉಂಟಾಗಿತ್ತು. ಕಥೆಗಳ ಮೂಲಕವಲ್ಲದಿದ್ದರೂ, ಜೈನೇತರ ಪುರಾಣಗಳಲ್ಲಿನ ಅಸಾಂಗತ್ಯಗಳನ್ನು ಮುಂದಿರಿಸಿ ಅನ್ಯಧರ್ಮಗಳನ್ನು ಖಂಡಿಸುವ ಈ ಪ್ರಕ್ರಿಯೆಗೆ ಬ್ರಹ್ಮಶಿವ ತನ್ನ ಸಮಯಪರೀಕ್ಷೆ ಕೃತಿಯಲ್ಲಿ ಆಗಲೇ ಚಾಲನೆಯನ್ನು ನೀಡಿದ್ದ. ಬ್ರಹ್ಮಶಿವ ತನ್ನ ಕಾವ್ಯಾರಂಭದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ, ಬೇರಾವುದೇ ಜೈನ ಕೃತಿಯಲ್ಲಿ ಕಂಡುಬಾರದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜೈನಾಚಾರ್ಯರನ್ನು, ಜೈನಧರ್ಮದ ಅಭಿವೃದ್ದಿಗೆ ಶ್ರಮಿಸಿದ ಐತಿಹಾಸಿಕ ವ್ಯಕ್ತಿಗಳನ್ನು ಹಾಗೂ ಪ್ರಾಚೀನ ಮತ್ತು ಸಮಕಾಲೀನ ಸಂಸ್ಕೃತ, ಕನ್ನಡ ಕವಿಗಳನ್ನು ಸ್ಮರಿಸುತ್ತಾನೆ. ಇದರ ಹಿಂದೆ ಇರುವುದೂ ಧರ್ಮಪ್ರಸಾರದ ಉದ್ದೇಶವೇ. ತನ್ನ ಕೃತಿಯನ್ನು ಓದುವ ಶ್ರಾವಕರಿಗೆ ತಾನು ಸ್ಮರಿಸುವ ಮಹನೀಯರ ಸಚ್ಚಾರಿತ್ರ್ಯ

ಸ್ಫೂರ್ತಿದಾಯಕವಾಗಲಿ ಎನ್ನುವ ಆಶಯ ಇಲ್ಲಿಯದು. ಧಾರ್ಮಿಕ ಅಸ್ಥಿರತೆ ಮನೆಮಾಡಿದ್ದ ವಾತಾವರಣದಲ್ಲಿ, ಧರ್ಮಗಳ ಮೇಲಾಟದಲ್ಲಿ ಜೈನಧರ್ಮದಲ್ಲಿ ಸಂದೇಹಯುಕ್ತವಾದ ನಿಲುವನ್ನು ತಳೆದು ಪರಧರ್ಮಗಳತ್ತ ಮುಖಮಾಡುತ್ತಿದ್ದ ಜೈನಸಮುದಾಯವನ್ನು ಹಿಡಿದಿಟ್ಟುಕೊಳ್ಳಲು ಜೈನಕೃತಿಕಾರರು ಅನುಸರಿಸಿದ ಮಾರ್ಗವಿದು. ವೃತ್ತವಿಲಾಸ ತನ್ನನ್ನು 'ಜಿನಪದಸೇವಕಂ ಜಿನನಮುನೀಂದ್ರಪದರ್ಚಕಂ ಅನ್ಯದೈವಮಂ ಕನಸಿನೊಳಾವಗಂ ನೆನೆಯದ ಉತ್ತಮಚಿತ್ತಂ' ಎಂದು ಕರೆದುಕೊಳುತ್ತಾನೆ (ಧರ್ಮಪರೀಕ್ಷೆ, ೧೦, ೯೮). ಕನಸಿನಲ್ಲಿಯೂ ಅನ್ಯದೈವವನ್ನು ನೆನೆಯದ ತನ್ನ ಧರ್ಮನಿಷ್ಠೆಯನ್ನು ಆತ ಪ್ರಕಟಿಸುತ್ತಿರುವ ಬಗೆಯಿದು. ಧರ್ಮದ ಮಹಿಮೆಯನ್ನು ಹೇಳುತ್ತ ಜನರಲ್ಲಿ ಧರ್ಮನಿಷ್ಠೆಯನ್ನು ತುಂಬುವ ಉದ್ದೇಶ ಈ ಪ್ರಯತ್ನಗಳ ಹಿಂದಿರುವುದು ಸ್ಪಷ್ಟ. ಶಾಂತಿನಾಥ ಮತ್ತು ನಾಗಚಂದ್ರರು ಲೌಕಿಕ ಕಾವ್ಯಗಳನ್ನು ರಚಿಸುವ ಪರಂಪರೆಯ ಬಗ್ಗೆ ತಳೆದ ಅಸಹನೆಯ ಭಾವದ ಹಿಂದಿರುವ ಸಂವೇದನೆಯೂ ಇದೇ ಆಗಿದೆ. ಜೈನಧರ್ಮವನ್ನು ಶತಮಾನಗಳ ಕಾಲ ಪೊರೆದಿದ್ದ ರಾಜಾಶ್ರಯ ತಪ್ಪಿಹೋದ ಬಗ್ಗೆ ತೀವ್ರತರವಾದ ಪ್ರತಿಕ್ರಿಯೆಯನ್ನು ಒಂದೆಡೆ ಇದು ಬಿಂಬಿಸಿದರೆ; ಮತ್ತೊಂದೆಡೆಯಲ್ಲಿ ಕುಸಿದುಹೋಗುತ್ತಿದ್ದ ಜೈಧರ್ಮವನ್ನು ಹೇಗಾದರೂ ಮಾಡಿ ನಿಲ್ಲಿಸಬೇಕೆನ್ನುವ ಧಾರ್ಮಿಕ ನಿಷ್ಠೆಯ ಎಳೆಗಳು ಇಲ್ಲಿ ವ್ಯಕ್ತವಾಗುತ್ತವೆ. ಆಗಿನ ಜೈನಮಠಗಳು ಮತ್ತು ಜೈನಸಮುದಾಯಗಳು ಜೈನಕೃತಿಕಾರರ ಈ ಪ್ರಯತ್ನಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದವು. 'ಪಂಪಭಾರತ', 'ಗದಾಯುದ್ಧ' ಮುಂತಾದ ಲೌಕಿಕ ಕೃತಿಗಳ ಒಂದೆರಡು ಪ್ರತಿಗಳು ಮಾತ್ರ ಇಂದು ಉಪಲಬ್ಧವಾಗಿರುವುದು ಮತ್ತು ಪೊನ್ನನಿಂದ ರಚಿತವಾದುದೆಂದು ತಿಳಿಯಲಾಗಿರುವ 'ಭುವನೈಕರಾಮಾಭ್ಯುದಯ' ಕೃತಿಯ ಒಂದೇ ಒಂದು ಪ್ರತಿಯೂ ಉಪಲಬ್ಧವಿಲ್ಲದಿರುವುದು ಈ ನಿಟ್ಟಿನಲ್ಲಿ ಗಮನಿಸಬೇಕಾದ ಅಂಶವಾಗಿದೆ.

ಮಾರ್ಗಶೈಲಿಯ ಪುರಾಣಗಳ ರಚನೆಯ ಜೊತೆಜೊತೆಗೇ ಘಟಿಸಿದ ಮತ್ತೊಂದು ಬೆಳವಣಿಗೆಯೆಂದರೆ ಶಾಸ್ತ್ರಗ್ರಂಥಗಳ ರಚನೆ, ಜೈನ ತತ್ತ್ವ-ಸಿದ್ಧಾಂತಗಳನ್ನು ಹೇಳುವ ಕೃತಿಗಳ ರಚನೆ. ಉಪಲಬ್ಧ ಸಾಹಿತ್ಯವನ್ನು ಅನುಲಕ್ಷಿಸಿದರೆ ತಿಳಿಯುವಂತೆ ಹನ್ನೊಂದನೆಯ ಶತಮಾನದಿಂದಲೇ ಶಾಸ್ತ್ರಗ್ರಂಥಗಳ ರಚನೆ ಕಂಡುಬರುತ್ತದೆ. ಈ ಶತಮಾನದ ಮಧ್ಯಭಾಗದಲ್ಲಿ ಕೃತಿರಚನೆ ಮಾಡಿದ ಶ್ರೀಧರ 'ಜಾತಕತಿಲಕ' ಎನ್ನುವ ಜ್ಯೋತಿಷ್ಯಗ್ರಂಥವೊಂದನ್ನು ರಚಿಸಿದ್ದಾನೆ. ಅಲ್ಲಿಂದೀಚೆಗೆ ಶಾಸ್ತ್ರಗ್ರಂಥಗಳು ಮತ್ತು ಸೈದ್ಧಾಂತಿಕ ವಿಷಯಗಳನ್ನು ಹೇಳುವ ಕೃತಿಗಳ ಸಂಖ್ಯೆಯಲ್ಲಿ ನಿರಂತರವಾದ ಏರಿಕೆ ಕಂಡುಬರುತ್ತದೆ. ಈ ಬೆಳವಣಿಗೆಯ ಹಿಂದೆಯೂ ಧಾರ್ಮಿಕ ಮೇಲಾಟದ ಅಂಶ ತನ್ನ ಇರವನ್ನು ಪ್ರಕಟಿಸುತ್ತದೆ. ತಮಗೆ ರಾಜಾಶ್ರಯ ತಪ್ಪಿಹೋಗುತ್ತಿದ್ದುದು ಮತ್ತು ಅದಕ್ಕೆ ಪ್ರತಿಯಾಗಿ ವೈದಿಕರಿಗೆ ಅದರ ಬಲ ಒದಗಿದುದನ್ನು ಅರಗಿಸಿಕೊಳ್ಳುವುದು ಜೈನರಿಗೆ ಕಷ್ಟವಾಗಿರಬೇಕು. ಹಾಗಾಗಿ ವೈದಿಕರಿಗೆ ಸರಿಸಮಾನರೆನಿಸಲು ಜೈನರು ಅವರಂತೆಯೇ ಶಾಸ್ತ್ರ ಮತ್ತು ಸಿದ್ಧಾಂತ ಗ್ರಂಥಗಳ ರಚನೆಯತ್ತ ವಿಶೇಷವಾಗಿ ಮನಸ್ಸನ್ನು ಹರಿಸಿದರು. ಈ ಪ್ರಕ್ರಿಯೆಗೆ

ಸಮಾನಾಂತರವಾಗಿ ಮಾರ್ಗಪರಂಪರೆಯ ಪುರಾಣಕೃತಿಗಳ ತಮ್ಮ ಸತ್ವವನ್ನು ಕಳೆದುಕೊಂಡು ಸವಕಲು ರಚನೆಗಳಾಗಿ ಉಳಿದುಬಿಟ್ಟುದನ್ನು ಗಮನಿಸಬೇಕು.

ಕೃತಿಗಳ ಆಶಯ, ದೃಷ್ಟಿ-ಧೋರಣೆಗಳ ಹಾಗೂ ಪ್ರವೃತ್ತಿಗಳ ನೆಲೆಯಲ್ಲಿ ಕನ್ನಡ ಜೈನಸಾಹಿತ್ಯದ ಮೂರು ಘಟ್ಟಗಳನ್ನು ಗುರುತಿಸಬಹುದಾಗಿದೆ. ಪಂಪಪೂರ್ವಯುಗದಿಂದ ಹಿಡಿದು ಹತ್ತನೆಯ ಶತಮಾನದ ಕೊನೆಯವರೆಗಿನದು ಮೊದಲ ಘಟ್ಟ. ಕನ್ನಡನಾಡಿನಲ್ಲಿ ಅಡಿಯಿರಿಸಿ ಕ್ರಮೇಣವಾಗಿ ತನ್ನ ನೆಲೆಗಳನ್ನು ವಿಸ್ತರಿಸಿಕೊಂಡು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಮಾನ್ಯತೆಯ ಸ್ಥಾನವನ್ನು ಜೈನಧರ್ಮ ಗಳಿಸಿಕೊಂಡ ಘಟ್ಟವಿದು. ಹತ್ತನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ಸುವರ್ಣಯುಗಕ್ಕೆ ನಾಂದಿಹಾಡಿದ್ದು ಈ ಸಾಂಸ್ಕೃತಿಕ ಸತ್ವಶೀಲತೆಯ ಚಲನಶೀಲತೆಗಳ ಪರಾಕಾಷ್ಠೆಯೇ.

ಎರಡನೆಯ ಘಟ್ಟದ ವಿಸ್ತಾರ ಹನ್ನೊಂದನೆಯ ಶತಮಾನದ ಆದಿಯಿಂದ ಹಿಡಿದು ಹದಿನೈದನೆಯ ಶತಮಾನದ ಕೊನೆಯವರೆಗೆ. ತನ್ನ ಸಾಂಸ್ಕೃತಿಕ ಔನ್ನತ್ಯದ ಸ್ಥಿತಿಯನ್ನು ಕಾಯ್ದುಕೊಳ್ಳಲು ಜೈನಧರ್ಮ ಸಮಕಾಲೀನ ಸಂದರ್ಭ-ಸನ್ನಿವೇಶಗಳೊಂದಿಗೆ ನಿರಂತರವಾಗಿ ಸಂಘರ್ಷದಲ್ಲಿದ್ದ ಕಾಲವಿದು. ಈ ಅವಧಿಯುದ್ದಕ್ಕೂ ಮಾರ್ಗಶೈಲಿಯ ಜೈನ ಪುರಾಣ ಸಾಹಿತ್ಯದ ರಚನೆ ಮುಂದುವರೆದಿತ್ತು. ವಾಸ್ತವದಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಜೈನಪುರಾಣಗಳ ರಚನೆಯಾದದ್ದು ಈ ಘಟ್ಟದಲ್ಲಿಯೇ. ಇದಕ್ಕೆ ನೇರವಾಗಿ ಸಂವಾದಿಯಾಗುವಂತೆ ಜೈನ ಕೃತಿಕಾರರು ಸಾಧ್ಯತೆಯ ಇತರ ದಾರಿಗಳನ್ನು ಪರಿಶೀಲಿಸಿ ತಕ್ಕಮಟ್ಟಿಗೆ ಯಶಸ್ವಿಯಾದದ್ದೂ ಸಹ ಈ ಘಟ್ಟದಲ್ಲಿಯೇ. ಚಂಪೂಕೃತಿಗಳ ಜೀವಂತಿಕೆ ನಷ್ಟವಾಗಿ ಅವುಗಳ ಸ್ಥಾನದಲ್ಲಿ ಷಟ್ಪದಿಸಾಹಿತ್ಯ ನೆಲೆಗೊಂಡಿದ್ದೂ ಈ ಘಟ್ಟದಲ್ಲಿಯೇ. ಈ ಘಟ್ಟದಲ್ಲಿ ಶಾಸ್ತ್ರಸಾಹಿತ್ಯ ಹಾಗೂ ಜೈನಸಿದ್ಧಾಂತವನ್ನು ಹೇಳುವ ಕೃತಿಗಳ ರಚನೆಯಲ್ಲಿ ವಿಶೇಷವಾದ ಆಧಿಕ್ಯವನ್ನು ಕಾಣಬಹುದಾಗಿದೆ. ಕನ್ನಡದ ಮೊದಲ ಸಂಕಲನ ಗ್ರಂಥವಾದ 'ಸೂಕ್ತಿಸುಧಾರ್ಣವ' ಕೃತಿಯನ್ನು ಮಲ್ಲಿಕಾರ್ಜುನನು ಈ ಅವಧಿಯಲ್ಲಿ ರಚಿಸಿದ. 'ಶಾಸ್ತ್ರಸಾರ ಸಮುಚ್ಚಯ' ಹಾಗೂ 'ಪದಾರ್ಥಸಾರ' ಕೃತಿಗಳಿಗೆ ಮಾಘಣಂದಿಯ ಕನ್ನಡ ಟೀಕೆ, ವರ್ಷಾಶಾಸ್ತ್ರವನ್ನು ಕುರಿತ ಅರ್ಹದ್ದಾಸನ 'ರಟ್ಟಮತ', ವಿಷವೈದ್ಯವನ್ನು ಕುರಿತ ಮಂಗರಾಜನ 'ಖಗೇಂದ್ರಮಣಿದರ್ಪಣ', ಕವಿಕಾಮನ 'ಶೃಂಗಾರ ರತ್ನಾಕರ', ಬಂಧುವರ್ಮನ 'ಜೀವಸಂಬೋಧನೆ', ಕೇಶಿರಾಜನ 'ಶಬ್ದಮಣಿದರ್ಪಣ', ಮಧುರನ 'ಗೊಮ್ಮಟಸ್ತುತಿಯಷ್ಟಕ', ಆಯತವರ್ಮನ 'ರತ್ನಕರಂಡಕ' – ಹೀಗೆ ಈ ಅವಧಿಯ ಜೈನಸಾಹಿತ್ಯದ ವೈವಿಧ್ಯದ ದ್ಯೋತಕವಾಗಿದೆ.

ಮೂರನೆಯ ಘಟ್ಟ ಹದಿನೈದನೆಯ ಶತಮಾನದ ಆದಿಭಾಗದಿಂದ ಆಧುನಿಕಪೂರ್ವ ಯುಗದವರೆಗೂ ವಿಸ್ತರಿಸುತ್ತದೆ. ಜೈನಧರ್ಮವನ್ನು ಜೀವಂತವಿರಿಸುವ ಅದಮ್ಯವಾದ ಹಂಬಲದ ಜೊತೆಗೇ ಕಾವ್ಯೋದ್ಯೋಗದ ಅರ್ಥವಂತಿಕೆಯ ಅನ್ವೇಷಣೆಯಲ್ಲಿ

ಮುಂದುವರೆದು ಜೈನಕೃತಿಕಾರರು ವಿಪುಲವಾಗಿ ವೈವಿಧ್ಯಮಯವಾದ ಕೃತಿಗಳನ್ನು ಸೃಷ್ಟಿಸಿದ್ದು ಈ ಅವಧಿಯಲ್ಲಿಯೇ. ಶಾಸ್ತ್ರಸಾಹಿತ್ಯ, ಮಹಾಪುರುಷರ ಕಥೆಗಳು, ಸೈದ್ಧಾಂತಿಕ ಗ್ರಂಥಗಳು, ಸ್ತೋತ್ರ ಸಾಹಿತ್ಯ, ಸಂಕಲನ ಸಾಹಿತ್ಯ – ಹೀಗೆ ವಿವಿಧ ಪ್ರಕಾರಗಳಲ್ಲಿ ಜೈನರು ಕೃತಿಗಳನ್ನು ಸೃಷ್ಟಿಸಿದರು. ಭಾಸ್ಕರನ 'ಜೀವಂಧರ ಚರಿತೆ', ಕಲ್ಯಾಣಕೀರ್ತಿಯ 'ನಾಗಕುಮಾರ ಚರಿತೆ', ತೆರಕಣಾಂಬಿ ಬೊಮ್ಮರಸನ 'ಸನತ್ಕುಮಾರ ಚರಿತೆ', 'ಜೀವಂಧರ ಸಾಂಗತ್ಯ', ಶಿಶುಮಾಯಣನ 'ತ್ರಿಪುರದಹನ ಸಾಂಗತ್ಯ' ಮತ್ತು 'ಅಂಜನಾ ಚರಿತೆ', ಮೂರನೆಯ ಮಂಗರಸನ 'ಜಯನೃಪಕಾವ್ಯ', 'ಪ್ರಭಂಜನ ಚರಿತೆ', 'ಶ್ರೀಪಾಲಚರಿತೆ', ಕಥಾಸಾಹಿತ್ಯದ ಪರಂಪರೆಯನ್ನು ಮುಂದುವರೆಸಿದರೆ ವಿಜಯಣ್ಣನ 'ದ್ವಾದಶಾನುಪ್ರೇಕ್ಷೆ' ಮತ್ತು 'ಚಿನ್ಮಯ ಜೀವಚಿಂತಾಮಣಿ', ಕಲ್ಯಾಣಕೀರ್ತಿಯ 'ಅನುಪ್ರೇಕ್ಷೆ', ತತ್ತ್ವಭೇದಾಷ್ಟಕ' ಜೈನಸಿದ್ಧಾಂತವನ್ನು ಹೇಳುವ ರಚನೆಗಳಾಗಿವೆ. ಸಾಳ್ವಕವಿಯ 'ರಸರತ್ನಾಕರ', ಮೂರನೆಯ ಮಂಗರಸನ 'ಸೂಪಶಾಸ್ತ್ರ', ಭಟ್ಟಾಕಳಂಕನ 'ಶಬ್ದಾನುಶಾಸನ' ಶಾಸ್ತ್ರಸಾಹಿತ್ಯವನ್ನು ಹೇಳುವ ಕೃತಿಗಳಾಗಿವೆ. ಕೃತಿಗಳ ವಿಷಯದ ನೆಲೆಯಲ್ಲಿ ಮಾತ್ರವಲ್ಲದೇ ಕೃತಿಗಳ ರೂಪದಲ್ಲಿಯೂ ನಾವೀನ್ಯವು ಪ್ರಕಟವಾದ ಕಾಲವಿದು. ಹಾಡುಗಬ್ಬದ ಮಾಧ್ಯಮವಾಗಿ ಸಾಂಗತ್ಯವು ಮುಂಚೂಣಿಯಲ್ಲಿ ಪ್ರತಿಷ್ಠಾಪಿತಗೊಂಡಿದ್ದು ಈ ಕಾಲದಲ್ಲಿಯೇ. ಇದರ ಅತ್ಯುಚ್ಚ ಪ್ರತಿನಿಧಿಯಾಗಿ ಪ್ರಕಾಶಿಸಿದ್ದು ರತ್ನಾಕರವರ್ಣಿಯ 'ಭರತೇಶವೈಭವ'. ಅಷ್ಟೇ ಅಲ್ಲ, ಕಾಲದ ಗತಿಗೆ ವ್ಯತಿರಿಕ್ತವಾಗಿ, ಮಾರ್ಗಕಾವ್ಯದ ವಿಶಿಷ್ಟವಾದ ಸತ್ವಶೀಲತೆಗೆ ಸರಿದೊರೆಯಾಗಿ ಅನನ್ಯಸದೃಶವಾದ, ಅಪೂರ್ವವಾದ ಜೀವಂತಿಕೆಯನ್ನು ಭರತೇಶವೈಭವ ಪ್ರಕಟಿಸಿತು. ಆ ಕಾಲಕ್ಕೆ ಕನ್ನಡನಾಡಿನ ದಕ್ಷಿಣ ಕರಾವಳಿಯ ಭಾಗದಲ್ಲಿ ಜೈನಧರ್ಮ ಸಾಂಸ್ಕೃತಿಕವಾದ ಚಲನಶೀಲತೆಯನ್ನು ಇನ್ನೂ ಉಳಿಸಿಕೊಂಡಿದ್ದುದಕ್ಕೆ ಭರತೇಶವೈಭವ ಸಾಕ್ಷಿಯಾಗಿ ಉಳಿಯುತ್ತದೆ. ಮೂರನೆಯ ಮಂಗರಸನ 'ನೇಮಿಜಿನೇಶನ ಸಂಗತಿ' ಸಾಂಗತ್ಯದಲ್ಲಿ ತೀರ್ಥಂಕರನ ಕಥೆಯನ್ನು ಹೇಳುವ ಮತ್ತೊಂದು ಕೃತಿ. ಸಾಳ್ವ ಭಾರತಕಥೆಯನ್ನು ಷಟ್ಪದಿಯಲ್ಲಿ ಹೇಳಿದ. ಕೃತಿಗಳ ಸಂಖ್ಯೆಯಲ್ಲಿ ಹೆಚ್ಚಳವನ್ನು ಕಂಡರೂ ಕಾವ್ಯಸತ್ವದಲ್ಲಿ ಗಣನೀಯವಾದ ಇಳಿಕೆಗೆ ಸಾಕ್ಷಿಯಾದ ಕಾಲವಿದು. ಇದಕ್ಕೆ ಅಪವಾದವೆನ್ನುವಂತೆ 'ಭರತೇಶವೈಭವ' ಮುಂತಾದ ಬೆರಳೆಣಿಕೆಯ ಕೃತಿಗಳು ಉಳಿಯುವವು. ಇಲ್ಲಿ ಪಂಪನ 'ಮುನ್ನಿನ ಕಬ್ಬಂಗಳೆಲ್ಲಮನಿಕ್ಕಿ ಮೆಟ್ಟಿದವು' ಎನ್ನುವ ಮಾತುಗಳನ್ನು ನೆನಯುವುದು ಸೂಕ್ತ. ಕನ್ನಡ ಜೈನಪುರಾಣಸಾಹಿತ್ಯದ ಮೌಲ್ಯಮಾಪನಕ್ಕೆ ಅಳತೆಗೋಲು ಅವನ 'ಆದಿಪುರಾಣ'. ಅದರ ಮುಂದೆ ಉಳಿದ ಕೃತಿಗಳು ಮಂಕಾಗುತ್ತವೆ. ಮತ್ತೊಂದು ಅಂಶವನ್ನು ಇಲ್ಲಿ ಗಮನಿಸಬೇಕು. ಪಂಪ ತನ್ನ ಕೃತಿಗಳನ್ನು ರಚಿಸಿದ ಕಾಲಕ್ಕೆ ಕನ್ನಡನಾಡಿನಲ್ಲಿ ಜೈಸಧರ್ಮದ ಅವನತಿ ಅಡಿಯಿರಿಸಿರಲಿಲ್ಲ, ಅವನ ಕೃತಿಗಳು ಜೈನಧರ್ಮದ ಸುಭಿಕ್ಷ ಸ್ಥಿತಿಯಲ್ಲಿ ಅರಳಿದ ಕುಸುಮಗಳಾಗಿ ಕಂಪನ್ನು ಸೂಸುತ್ತವೆ. ಕುಸಿಯುವ ಸೂರಿನ

ಚಿಂತೆ ಆತನಿಗೆ ಇರಲಿಲ್ಲ. ಆದರೆ ಪಂಪನಿಗೆ ಬಹಳ ಹತ್ತಿರದಲ್ಲೇ ಕೃತಿರಚನೆ ಮಾಡಿದ ಕವಿಚಕ್ರವರ್ತಿ ಪೊನ್ನ ಕಾವ್ಯಧರ್ಮದ ಪ್ರಕಾಶದಲ್ಲಿ ಸೋಲುತ್ತಾನೆ. ಅವನ 'ಶಾಂತಿಪುರಾಣ' ಪುರಾಣಚೂಡಾಮಣಿಯಾಗಿ ಉಳಿಯುತ್ತದೆ. ಅಲ್ಲಿಂದ ಕಾಲುಶತಮಾನದ ಈಚೆಗೆ ಬರೆದ ರನ್ನನ 'ಅಜಿತಪುರಾಣ' 'ಆದಿಪುರಾಣ'ದ ಪೇಲವ ನೆರಳಾಗಿ ಪ್ರಕಟವಾಗುತ್ತದೆ. ಕೃತಿಯ ಆಂತರ್ಯದೊಂದಿಗೆ ಮಿಳಿತವಾಗದೆ ಶುಷ್ಕವಾದ ಧರ್ಮಪ್ರತಿಪಾದನೆಯ ಅಭಿವ್ಯಕ್ತಿಗೆ ರನ್ನನ ಕೃತಿ ಸಾಕ್ಷಿಯಾಗುತ್ತದೆ. ಚಾವುಂಡರಾಯನ ಮಹಾಪುರಾಣ ಕೃತಿಯನ್ನೂ ಸಹ ಧರ್ಮಪ್ರತಿಪಾದನೆಯ, ಕುಸಿಯುತ್ತಿದ್ದ ಜೈಧರ್ಮದ ಸೂರನ್ನು ಹಿಡಿದುನಿಲ್ಲಿಸುವ ಪ್ರಯತ್ನವಾಗಿಯೇ ನೋಡಬೇಕು. ಗಂಗರ ಆಶ್ರಯ ತಪ್ಪುತ್ತಿದ್ದಂತೆಯೇ ಜೈನಧರ್ಮದ ಸಾಂಸ್ಕೃತಿಕ ವೈಭವ ಇತಿಹಾಸದ ಮಾತಾಗಿತ್ತು. ಅಲ್ಲಿಂದ ಮುಂದೆ ನಡೆದುದೆಲ್ಲ ಪ್ರವಾಹದ ಎದುರಿಗೆ ಈಜುತ್ತ ಒಂದು ಕಾಲದಲ್ಲಿ ಉಜ್ವಲವಾದ ದಿನಗಳನ್ನು ಕಂಡ ಜೈನಧರ್ಮದ ನಾವೆಯನ್ನು ಸುರಕ್ಷತೆ, ಸುಭಿಕ್ಷತೆಯ ದಡದತ್ತ ಮತ್ತೆ ಒಯ್ಯುವ ಕಡುಧರ್ಮಿಷ್ಠರ ಸಾಹಸವೇ ಸರಿ. ಸಂಪೂರ್ಣವಾಗಿ ತಮ್ಮ ಹಿಡಿತದಿಂದ ಜಾರಿಹೋಗುತ್ತಿದ್ದ ಸಂದರ್ಭವನ್ನು ಮತ್ತೆ ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ನಿಟ್ಟಿನಲ್ಲಿ ಜೈನರು ಹೃನ್ಮನಗಳನ್ನು ನಿಷ್ಠೆಯಿಂದ ತೊಡಗಿಸಿದುದಂತೂ ನಿಜ. ಅವರ ಪ್ರಯತ್ನಗಳ ಮುಖವಾಣಿಗಳಾಗಿ ಅವರ ಕೃತಿಗಳು, ಪ್ರಯತ್ನಗಳಿಗೆ ಒದಗಿದ ಫಲ-ನಿಷ್ಫಲಗಳು ಕನ್ನಡನಾಡಿನ ಸಾಂಸ್ಕೃತಿಕ ಚರಿತೆಯ ಚಲನಶೀಲ ಅಧ್ಯಾಯಗಳಾಗಿ ಉಳಿದುಬಿಟ್ಟಿವೆ.

ಪರಾಮರ್ಶನ:

೧. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ, ಗೀತಾ ಬುಕ್ ಹೌಸ್, ಮೈಸೂರು, ೧೯೯೩.

೨. ಶಾಸ್ತ್ರೀಯ : ಸಂಪುಟ ೩, ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ, ಸಪ್ನಾ ಬುಕ್ ಹೌಸ್, ಬೆಂಗಳೂರು, ೧೯೯೯.

೩. ಕನ್ನಡ ಸಾಹಿತ್ಯ : ಚಾರಿತ್ರಿಕ ಬೆಳವಣಿಗೆ – ಪ್ರಾಚೀನ ಸಾಹಿತ್ಯ, ಸಿ. ವೀರಣ್ಣ, ನವಕರ್ನಾಟಕ ಪ್ರಕಾಶನ, ೧೯೮೬

೪. ಹದಿಮೂರನೆಯ ಶತಮಾನದ ಕರ್ನಾಟಕಾಂಧ್ರ ಮಹಾರಾಷ್ಟ್ರ ಸಾಹಿತ್ಯಾವಲೋಕನ, ಪ್ರೊ. ಡಿ. ಕೆ. ಭೀಮಸೇನರಾವ್, ನಿಶಾಂತ ಪ್ರಕಾಶನ, ಬೆಳಗಾವಿ, ೧೯೯೯.

೫. ಚಂದ್ರಸಾಗರವರ್ಣಿಯ ಕೃತಿಗಳು, ಸಂ. ಡಾ. ಹಂಪನಾ & ಎಸ್ ಶಿವಣ್ಣ, ಕನ್ನಡ ಸಾಹಿತ್ಯ ಪರಿಷತ್ತು, ೧೮೯೧.

೬. ಧರ್ಮಪರೀಕ್ಷೆ : ಸಂ. ಡಾ. ಕೆ. ರಾಘವೇಂದ್ರರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ೧೯೮೨.

೭. ಕವಿ ಬ್ರಹ್ಮಶಿವ : ಒಂದು ಅಧ್ಯಯನ, ಡಾ. ಕೆ. ಅನಂತರಾಮು, ಅನಂತ ಪ್ರಕಾಶನ, ಮೈಸೂರು, ೧೯೯೧.

□□

ಅಸದೃಶ ಸಾಹಿತ್ಯ ಸನಾಥ ಸೋಮನಾಥ

ಡಾ. ಜೆ. ಸದಾನಂದ ಶಾಸ್ತ್ರಿ

❖

'ಸಹಿತಸ್ಯ ಭಾವಃ ಸಾಹಿತ್ಯಂ'. ಹಿತದಿಂದ ಕೂಡಿರುವುವೇ ಸಾಹಿತ್ಯ. ಯಾರಿಗೆ ಹಿತ? ಅದನ್ನು ಓದುವವರಿಗೆ, ಕೇಳುವವರಿಗೆ, ಸ್ವಯಂ ಅದನ್ನು ಸೃಷ್ಟಿಸಿದವರಿಗೆ. ಆ ಹಿತ ಕೇವಲ ಲೌಕಿಕ ಮಾತ್ರವಲ್ಲ. ಪಾರಮಾರ್ಥಿಕವೂ ಆಗಿರಬೇಕು. ಅದನ್ನೇ ಶಿವೇತರ ಕ್ಷತಿ ಎನ್ನುವ ಕಾವ್ಯಗುಣವಾಗಿ ಹೇಳಿದ್ದಾರೆ ಶಾಸ್ತ್ರಕಾರರು. ಇಡೀ ಭಾರತೀಯ ಸಾಹಿತ್ಯವನ್ನು ನೋಡಿದಾಗ ಪ್ರಾಚೀನ ಸಾಹಿತ್ಯಸೌಧ ಬಹಳಷ್ಟು ಪಾಲು ಧಾರ್ಮಿಕತೆಯ ತಳಹದಿಯ ಮೇಲೆಯೇ ನಿರ್ಮಿತವಾದದ್ದು. ಧರ್ಮ ಎನ್ನುವುದನ್ನು ಎರಡು ಹಂತಗಳಲ್ಲಿ ನೋಡಬಹುದಾಗಿದೆ. ಒಂದು ಸಾಮಾನ್ಯ ಮಾನವೀಯ ಧರ್ಮ. ಮತ್ತೊಂದು ಜೀವ, ದೇವ, ಜನ್ಮ, ಮೃತ್ಯು, ಮೋಕ್ಷ, ಇತ್ಯಾದಿಗಳನ್ನು ಪ್ರತಿಪಾದಿಸುವಂಥದ್ದು. ಮೊದಲನೆಯದನ್ನು ವಿಚಾರಿಸಿ ನೋಡಿದಾಗ ಪ್ರಪಂಚಸಾಹಿತ್ಯದಲ್ಲಿ ಎಲ್ಲಕಡೆ ಒಂದೇ ಲಕ್ಷಣವನ್ನು ನಾವು ಕಾಣಬಹುದು. ಮಾನವನ ಗುಣ ಹೇಗಿರಬೇಕು. ಸಮಾಜದಲ್ಲಿ ಬದುಕುವ ಪರಿ ಹೇಗೆ. ಜೀವನದ ಮೌಲ್ಯಗಳು ಏನು? ಯಾವುವು? ಉತ್ತಮ ಮಾನವನ ಲಕ್ಷಣವೇನು? ಪ್ರಕೃತಿಯ ಜೊತೆಯಲ್ಲಿ, ಇತರ ಪ್ರಾಣಿಗಳ ಜೊತೆಯಲ್ಲಿ ಮನುಷ್ಯನ ವರ್ತನೆ ಹೇಗಿರಬೇಕು? ಇತ್ಯಾದಿಗಳನ್ನು ಕುರಿತಂತೆ ವಿಶ್ವಸಾಹಿತ್ಯವೆಲ್ಲ ಒಮ್ಮುಖವಾಗಿ ನಡೆದಂತೆ ಕಾಣಬಹುದು. ಎಲ್ಲೋ ಒಂದು ಕಡೆ ಇದಕ್ಕೆ ಅಪವಾದ ಕಂಡರೂ ಅದಕ್ಕೆ ಧಾರ್ಮಿಕತೆಯ ಮತ್ತಾವುದೋ ಪ್ರಭಾವ ಕಾರಣವಾಗಿರುತ್ತದೆ ಎನ್ನುವುದು ನಿಜ.

ಎರಡನೆಯದು ಮೋಕ್ಷಧರ್ಮ. ಬಹುಶಃ ಪ್ರಪಂಚದಲ್ಲಿ ಈ ಎರಡನೆಯ ವಿಷಯದ ಚಿಂತನೆಯನ್ನು ಮಾಡದ ಮಾನವ ಸಮಾಜವೇ ಇಲ್ಲ ಎಂದರೆ ಸುಳ್ಳಲ್ಲ. ನಾಸ್ತಿಕರೆನಿಸಿಕೊಂಡವರು ಸಹ ಈ ಬಗೆಗೆ ಚಿಂತನೆ ನಡೆಸಿದ್ದಾರೆ. ಅಸ್ತಿ ಎನ್ನುವುದು ಒಂದು ನಿಲುವಾದರೆ ನಾಸ್ತಿ ಎನ್ನುವುದು ಸಹ ಮತ್ತೊಂದು ನಿಲುವಾಗುತ್ತದೆ ತಾನೆ. ಈ ಬಗೆಗೆ ಚಿಂತನೆ ನಡೆಸಿದ ಮಹಿತಾತ್ಮರು ತಮ್ಮ ತಮ್ಮವೇ ಆದ ದಾರ್ಶನಿಕ ನಿರೂಪಣೆಗಳನ್ನು

ಮಂಡಿಸಿದ್ದಾರೆ. ಒಬ್ಬೊಬ್ಬರದು ಒಂದೊಂದು ದೃಷ್ಟಿಕೋನ. ಪ್ರಪಂಚದಲ್ಲಿ ಈ ಎಲ್ಲರನ್ನೂ ಅನುಸರಿಸಿದ ಸಮೂಹಗಳು ಇವೆ. ಇಂತಹ ಚಿಂತನೆಗಳಲ್ಲಿ ಪ್ರಮುಖವೆನಿಸಿದ ಒಂದು ಚಿಂತನೆ ಶೈವಕ್ಕೆ ಸಂಬಂಧಪಟ್ಟದ್ದು.

ಭಾರತೀಯ ಅಧ್ಯಾತ್ಮಪ್ರಪಂಚದಲ್ಲಿ ಉಪಾಸ್ಯದೇವತಾ ಮೂರ್ತಿಗಳಲ್ಲಿ ಪ್ರಮುಖವಾದ ಸ್ಥಾನ ಶಿವ ಕೇಶವರದು. ಆಚಾರ್ಯ ಶಂಕರರ ಕಾಲಕ್ಕೆ ಈ ದೇಶದಲ್ಲಿ ಎಪ್ಪತ್ತನಾಲಕ್ಕು ವಿಧವಾದ ಆರಾಧನೆಗಳು ಇದ್ದವು ಎನ್ನುತ್ತಾರೆ. ಈ ಎಲ್ಲವನ್ನೂ ಅವರು ಆರಕ್ಕೆ ಇಳಿಸಿ ಷಣ್ಮತಸ್ಥಾಪನಾಚಾರ್ಯರೆಂದು ಹೆಸರು ಪಡೆದರು. ಶಿವ, ವಿಷ್ಣು, ದುರ್ಗೆ, ಸೂರ್ಯ, ಕುಮಾರ, ಗಣೇಶ– ಈ ದೇವತೆಗಳ ಉಪಾಸನೆಗೆ ಸಂಬಂಧಿಸಿದಹಾಗೆ ಶೈವ, ವೈಷ್ಣವ, ಶಾಕ್ತೇಯ, ಸೌರ, ಕೌಮಾರ, ಗಾಣಪತ್ಯಗಳು ಎನ್ನುವ ಆರು ವಿಧವಾದ ಉಪಾಸನಾ ಮಾರ್ಗಗಳನ್ನು ಅವರು ಸೂಚಿಸಿದರು. ಇಂದು ಈ ಆರು ರೀತಿಯ ಉಪಾಸನೆಗಳನ್ನು ದೇಶದಾದ್ಯಂತ ನಾವು ಕಾಣಬಹುದು.

ಶಿವಾರಾಧನೆ

ಭಾರತದೇಶದಲ್ಲೇ ಅಲ್ಲದೆ ಖಂಡಖಂಡಾಂತರಗಳಲ್ಲಿಯೂ ಬಹಳ ಹಳೆಯ ಕಾಲದಿಂದಲೂ ಶಿವಾರಾಧನೆ ನಡೆಯುತ್ತಿತ್ತು ಎನ್ನುವುದಕ್ಕೆ ಈದೇಶದ ಸಿಂಧೂನದಿಯ ಕೊಲ್ಲಿಯಲ್ಲಿ, ಹರಪ್ಪಾ, ಮೊಹೆಂಜೋದಾರೋ ಮುಂತಾದ ಪ್ರದೇಶಗಳಲ್ಲಿ ಮಿಕ್ಕ ಪ್ರಪಂಚದ ಆಯಾ ಪ್ರದೇಶಗಳಲ್ಲಿ ಹಲವು ಕಡೆ ಶಿವಲಿಂಗಗಳು ಕಂಡುಬಂದ ಕಾರಣದಿಂದ ಈ ಅಭಿಪ್ರಾಯ ಸರಿಯೆಂದು ಸಂಶೋಧಕರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಭಾರತೀಯ ವಾಙ್ಮಯದ ವೇದ, ಉಪನಿಷತ್ತು, ಸ್ಮೃತಿ, ಪುರಾಣ, ಶೈವಾಗಮಗಳು, ಶೈವಮತದ ಪ್ರಾಚೀನತೆಯನ್ನು ಸಾರುತ್ತವೆ. ಕೆಲವು ಶಿವಾಗಮಗಳಲ್ಲಿ ಸ್ಥೂಲದೃಷ್ಟಿಯಿಂದ ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ ಎಂದು ನಾಲಕ್ಕು ರೀತಿ ವಿಭಜನೆ ಮಾಡಿದರೆ, ಮತ್ತು ಕೆಲವುಕಡೆ ಇದಕ್ಕಿಂತ ವಿವರವಾಗಿ ಸಾಮಾನ್ಯಶೈವ, ಪೂರ್ವಶೈವ, ಮಿಶ್ರಶೈವ, ಶುದ್ಧಶೈವ, ಶ್ರೌತಶೈವ, ಮಾರ್ಗಶೈವ, ವೀರಶೈವ, ಸಾಮಾನ್ಯ ವೀರಶೈವ, ವಿಶೇಷ ವೀರಶೈವ, ನಿರಾಭಾರ ವೀರಶೈವ ಎನ್ನುವರೀತಿಯಲ್ಲಿ ಹತ್ತು ವಿಧ ಅಂತರಭೇದಗಳು ಹೇಳಲ್ಪಟ್ಟಿವೆ ಎನ್ನುತ್ತಾರೆ ಭಂಡಾರು ತಮ್ಮಯ್ಯನವರು.

ವೀರಶೈವ ಧರ್ಮದ ಚಿಂತನೆಯ ಮಾರ್ಗವನ್ನು ಅನುಸರಿಸಿದ ಮನೀಷಿ, ಮಹಾನ್ ವಿದ್ವಾಂಸ, ಶಾಸ್ತ್ರಕೋವಿದ, ಕವಿವರೇಣ್ಯ, ಭಾಷಾಸಂಪ್ರದಾಯ ಪ್ರವರ್ತಕ, ತನ್ನದೇ ಆದ ಶೈಲಿಯನ್ನು ರೂಪಿಸಿಕೊಂಡ ಕಾವ್ಯಶೈಲಿಯ ರೂವಾರಿ, ಅಸಮಾನ ವೀರಶಿವಭಕ್ತ, ವೇದವೇದಾಂಗ ಪಾರಂಗತ, ಸಮಾಜ ಪರಿಶೀಲಕ, ನಿಶಿತ ವಿಮರ್ಶಕ, ವೀರಧರ್ಮಾನುವರ್ತಿಯಾದ ಪಾಲ್ಕುರಿಕೆಯ ಸೋಮನಾಥ.

ಪಾಲ್ಕುರಿಕಿ ಸೋಮನಾಥನ ಚರಿತ್ರೆ

ತೆಲುಗಿನಲ್ಲಿ ಪಿಡುಪರ್ತಿ ಬಸವನ ಕವಿ ಬಸವಪುರಾಣವನ್ನು ಬರೆದಿದ್ದಾನೆ. ಅದರ ಪೀಠಿಕೆಯಲ್ಲಿ ಸೋಮನಾಥನ ಚರಿತ್ರೆಯನ್ನು ತಿಳಿಸಿದ್ದಾನೆ. "ಲಿಪಿಯನ್ನು ಬರೆಯುವುದಕ್ಕೆ ಮುಂಚೆಯೇ ಸೋಮನಾಥನ ಜಿಹ್ವೆಯಲ್ಲಿ ಅಪರಿಮಿತಾರ್ಥೋಕ್ತಿ ಶೋಭಿಸುತ್ತದೆ. ಛಂದೋಧಿಕರಣಾದಿಗಳ ಕ್ರಮವನ್ನು ನೋಡುವುದಕ್ಕೆ ಮುಂಚೆಯೇ ಅವನ ಮನಸ್ಸಿನಲ್ಲಿ ಕಾವ್ಯನಿರ್ಮಾಣಶಕ್ತಿ ಇರುತ್ತದೆ. ಭಾಷ್ಯಗಳ ಸಂಗತಿಯನ್ನು ಹೇಳುವುದಕ್ಕೂ, ನೋಡುವುದಕ್ಕೂ ಮುಂಚೆಯೇ ರುದ್ರಭಾಷ್ಯಕ್ರಿಯಾ ರೂಢಿ ಶೋಭಿಸುತ್ತದೆ. ತರ್ಕಶಾಸ್ತ್ರಾದಿಗಳನ್ನು ಓದುವುದಕ್ಕೆ ಮುಂಚೆಯೇ ಪರಪಕ್ಷವನ್ನು ಗೆಲ್ಲುವ ಪ್ರೌಢಿಮೆ ಶೋಭಿಸುತ್ತದೆ" ಎಂದು ಹೇಳಿದ್ದಾನೆ.

ಅಂತಹ ಸೋಮನಾಥನನ್ನು ನುತಿಸುವುದಕ್ಕೆ ನನಗೆಲ್ಲಿ ಸಾಧ್ಯವೆಂದು ಹೇಳಿ, ಸೋಮನಾಥನನ್ನು 'ಜೈನರ ತಲೆಯಮೇಲೆ ಇಟ್ಟ ಹರಿತವಾದ ಶೂಲ ಉಳ್ಳವನೆಂದೂ, ಬಿಜ್ಜಳತಲಗುಂಡುಗಂಡ ಬಿರುದಶೋಭಿತನೆಂದೂ' ಕೀರ್ತಿಸುತ್ತಾನೆ. ಇದರ ಮೂಲಕ ಸೋಮನಾಥನ ಪಾಂಡಿತ್ಯಪ್ರೌಢಿಮೆ, ವಾದಪಟಿಮೆ, ಶಾಸ್ತ್ರಾಭಿಜ್ಞತೆ, ವೀರಶೈವಧರ್ಮದ ದೀಕ್ಷೆ ಸ್ಪಷ್ಟವಾಗುತ್ತವೆ.

ಒಮ್ಮೆ ಓರುಗಲ್ಲಿನಲ್ಲಿ ಸ್ವಯಂಭೂದೇವನ ಆಲಯದಲ್ಲಿ ಮಂಟಪದಮೇಲೆ ಕೆಲವರು ಬಸವಪುರಾಣವನ್ನು ಕೇಳುತ್ತಿದ್ದರು. ಅದೇ ವೇಳೆಗೆ ಪ್ರತಾಪರುದ್ರ ಚಕ್ರವರ್ತಿ, ದೇವರ ದರ್ಶನಕ್ಕಾಗಿ ಅಲ್ಲಿಗೆ ಬಂದು ಇದೇನು ಸಂಭ್ರಮ ಎಂದು ಕೇಳುತ್ತಾನೆ. ಬಸವ ಪುರಾಣ ಕೇಳುತ್ತಿದ್ದೇವೆ ಎಂದು ಅವರು ಹೇಳುತ್ತಾರೆ. ಬಸವಪುರಾಣ ಎಂಥದ್ದು ಎಂದು ರಾಜನು ಕೇಳಿದಾಗ ಒಬ್ಬ 'ಧೂರ್ತ ವಿಪ್ರನು' "ಇತ್ತೀಚೆಗೆ ಪಾಲ್ಕುರಿಕಿ ಸೋಮನಾಥನೆನ್ನುವ ಪತಿತನು (ಪ್ರಾಸವಡಿಯನ್ನು ಉಪಯೋಗಿಸಿ) ದ್ವಿಪದ ರೂಪದಲ್ಲಿ ಕಲ್ಪಿಸಿದ್ದಾನೆ. ಅದು ಅಪ್ರಾಮಾಣಿಕ, ಅನಾದರಣೀಯ" ಎಂದು ತೆಗಳಿ ನುಡಿಯುತ್ತಾನೆ. ಇದನ್ನು ಕೇಳಿದ ಅಲ್ಲಿನ ಪುರಾಣಶ್ರೋತೃಗಳಾದ ಶಿವಭಕ್ತರಿಗೆ ಸಿಟ್ಟು ಬಂದು ಆ ಬ್ರಾಹ್ಮಣನನ್ನು ಕೊಲ್ಲಬೇಕೆಂದು ಅನುಮತಿಗಾಗಿ ಪಾಲ್ಕುರಿಕಿಯಲ್ಲಿರುವ ಸೋಮನಾಥನ ಬಳಿಗೆ ಹೋಗುತ್ತಾರೆ.

ತಾನು ಸುಮ್ಮನಿದ್ದರೆ ಶಿವಭಕ್ತರಿಗೆ ಅವಮಾನವಾದೀತೆಂದು ಸೋಮನಾಥನು ಭವಿಗಳ ಮುಖವನ್ನು ನೋಡಬಾರದು, ಮಾತನಾಡಬಾರದು ಎನ್ನುವ ನಿಯಮ ಇಟ್ಟುಕೊಂಡವನಾದರೂ ವಿಧಿಯಿಲ್ಲದೆ ವಾದಕ್ಕೆ ಸಿದ್ಧನಾಗುತ್ತಾನೆ. ಸಾಮಾನ್ಯನಿಂದ ಅವರು ಸೋಲುವಂತೆ ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾನೆ. ಓರುಗಲ್ಲಿಗೆ ಹೋಗುತ್ತಾನೆ. ಲಿಂಗಮುದ್ರೆಗಳಿರುವ ಎತ್ತುಗಳ ಬಂಡಿಯಲ್ಲಿಯೇ ಅವನು ಹೋದನೆನ್ನುವುದು ಗಮನಾರ್ಹಸಂಗತಿ.

ಪ್ರತಿವಾದಿಗಳು ಕೆಲವರು ತುಂಟರಿಗೆ ಲಿಂಗಮುದ್ರೆ ಹಾಕಿ ಸೋಮನಾಥನ ಬಳಿಗೆ ಕಳಿಸುತ್ತಾರೆ. ಅವರು ನಮನ ಮಾಡಿದಾಗ ಕೃತ್ರಿಮ ಲಿಂಗದ ಚಿಹ್ನೆಗಳು ಸಹಜ ಚಿಹ್ನೆ ಆಗುತ್ತವೆ. ಅವರು ಸೋಮನಾಥನ ಶಿಷ್ಯರಾಗುತ್ತಾರೆ. ಕೋಟೆಯ ಬಾಗಿಲಲ್ಲಿರುವ ಗಜಲಕ್ಷ್ಮಿಯ ವಿಗ್ರಹವನ್ನು ತೊಲಗು ಎಂದ ತಕ್ಷಣ ಅದು ಮುರಿದು ನೆಲಕ್ಕೆ ಬೀಳುತ್ತದೆ. ಇದನ್ನು ಕೇಳಿ ಪ್ರತಾಪರುದ್ರನು ಮತ್ತು ಪ್ರತ್ಯರ್ಥಿಗಳು ಬಂದು ಸೋಮನಾಥನಿಗೆ ಶರಣಾಗುತ್ತಾರೆ.

ಸೋಮನಾಥನು ಕೆಲಕಾಲ ಅಲ್ಲಿದ್ದು ಪಿಡುಪರ್ತಿ ಶಿವರಾತ್ರಿ ಕೊಪ್ಪಯ್ಯನಂತಹ ಶಿಷ್ಯರನ್ನು ಕರೆದು ಇನ್ನು ಆ ದೇಶ ತುರುಷ್ಕರಿಂದ ಆಕ್ರಾಂತವಾಗುವುದೆಂದೂ ತಾವು ಅಲ್ಲಿ ಇರಬಾರದೆಂದೂ ಹೇಳಿ ಶಿಷ್ಯರಿಗಾಗಿ ದೋಕಿಪರ್ತಿ ಅಗ್ರಹಾರವನ್ನು ರಾಜನ ಮಂತ್ರಿಯಾದ ಇಂದುಟೂರಿ ಅಯ್ಯನ್ನನಿಂದ ಕೊಡಿಸುತ್ತಾನೆ. ತನಗೆ ವಾರ್ಧಕ್ಯ ಸಮೀಪಿಸಿದೆ. ಸಮಾಧಿಸ್ಥನಾಗಬೇಕೆಂದು ಶಿಷ್ಯರಿಗೆ ಹೇಳಿ ಕರ್ನಾಟದೇಶಕ್ಕೆ ಬಂದು ಶಿವಗಂಗಾ ಕ್ಷೇತ್ರಕ್ಕೆ ಸಮೀಪದಲ್ಲಿರುವ ಕಲಿಕವೆನ್ನುವ ಅಗ್ರಹಾರದಲ್ಲಿ ನೆಲೆಸುತ್ತಾನೆ. ಅಲ್ಲಿ ಒಂದು ಸಮಾಧಿಯನ್ನು ನಿರ್ಮಾಣಮಾಡಿಸಿ ಅದರಲ್ಲಿ ವಿಭೂತಿ ಹಾಕಿ ಮೇಲೆ ಕೂತು ತನ್ನ ಶರೀರವನ್ನು ಕಾಯಬೇಕೆಂದು ಶಿಷ್ಯರಿಗೆ ಹೇಳಿ ಸಮಾಧಿಸ್ಥನಾಗುತ್ತಾನೆ.

ಶಿವನು ಪ್ರತ್ಯಕ್ಷನಾಗಿ ಸೊಮನಾಥನು ಬಯಸಿದಂತೆಯೇ ಜನಾಪವಾದವಿಲ್ಲದ ರೀತಿಯಲ್ಲಿ ನಂದಿಯ ರೂಪವನ್ನು ಸ್ಫಟಿಕಮಯವಾಗಿ ಮಾಡಿ ಅದರ ಗರ್ಭದಲ್ಲಿ ಸೋಮನಾಥನನ್ನು ಸೇರಿಸಿಕೊಂಡು ಜನರಿಗೆ ಸ್ವಲ್ಪ ಹೊತ್ತು ಕಾಣಿಸಿಕೊಂಡು ನಂತರ ತನ್ನ ಲೋಕಕ್ಕೆ ಕರೆದೊಯ್ಯುತ್ತಾನೆ. ಈ ವಿಷಯಗಳು ಸೋಮನಾಥನ ಶಿಷ್ಯನಿಗೆ ಆರನೆಯ ತಲೆಮಾರಿನವನು ಹೇಳಿದವು. ಹೇಳಿದವನು ಕ್ರಿ.ಶ. ೧೪೮೦ ಪ್ರಾಂತದವನು.

ಸೋಮನಾಥನ ದೇಶಕಾಲಾದಿಗಳು

ಸಾಧಾರಣವಾಗಿ ಭಾರತದ ಎಲ್ಲ ಕವಿಗಳಂತೆಯೇ ಸೋಮನಾಥನು ಸಹ ಸ್ಪಷ್ಟವಾಗಿ ತನ್ನ ದೇಶಕಾಲಾದಿಗಳನ್ನು ಕುರಿತು ಹೇಳಿಕೊಂಡಿಲ್ಲ. ಹೇಳಿದ ಒಂದೆರಡು ಮಾತುಗಳು ಸಹ ಸ್ಪಷ್ಟವಾದ ಬೆಳಕು ನೀಡುವಂಥವು ಅಲ್ಲ. ಸೋಮನನು ತನ್ನ ಬಗೆಗೆ ಪಂಡಿತಾರಾಧ್ಯ ಚರಿತ್ರೆಯಲ್ಲಿ ಹೇಳಿಕೊಂಡದ್ದು "'ಪಾರ್ವತಿಯೇ ತಾಯಿ, ಪರಮೇಶ್ವರನೇ ತಂದೆ' ಎನ್ನುವಂತೆ ಶ್ರೇಷ್ಠಪುರಾಣಗಳ ವಚನದಂತೆ –ನಾನು ಈಶ್ವರ ಕುಲದಲ್ಲಿ ಜನಿಸಿದವನು. ಪ್ರಸಿದ್ಧರಾದ ಶ್ರೀಬೆಲಿದೇವ ವೇಮನಾರಾಧ್ಯರೆನ್ನುವ ಮಹನೀಯರ ಮೊಮ್ಮಗನಿಗೆ ಶಿಷ್ಯ ನಾನು. ಆತನು ಪರಮಾರಾಧ್ಯದೇವನು. ನಾನು ಶ್ರೀಮದ್ಗುರುಲಿಂಗನ ಘನ ಕರುಣಾಹಸ್ತಗರ್ಭದಲ್ಲಿ ಹುಟ್ಟಿದವನು. ಹಿಂದೆ ಬಸವಪುರಾಣದಲ್ಲಿ ಗಣಿಸಲಾದ ಹಿರಿಯಜನರಿಗೆ ಸಾಕುಮಗನು. ಬಸವಪುರಾಣ ಪ್ರಬಂಧವೆನ್ನುವ ಹೆಸರಿನ ಮಗಳನ್ನು ಉಳ್ಳವನು. ನಾನು ಬಸವಗೋತ್ರದವನು" ಎಂದು.

ಪಂಡಿತಾರಾಧ್ಯಚರಿತ್ರೆಯಲ್ಲಿ ವೇಮನಾರಾಧ್ಯರ ಕಥೆ ಇದೆ. ಅವರಿಗೆ ಒಬ್ಬ ರಾಜಕುಮಾರನು ನಮಸ್ಕರಿಸುತ್ತಾನೆ. ಆಗ ಅವನ ಭವಿಷ್ಯವನ್ನು ತಿಳಿದ ವೇಮನಾರಾಧ್ಯರು ಅವನನ್ನು ಆಶೀರ್ವದಿಸುವುದಿಲ್ಲ. ಆಗ ಆ ರಾಜನು ಬಿಡದೆ ಸ್ವಲ್ಪಭಕ್ತಿಯು ತೋರುವ ರೀತಿಯಲ್ಲಿ "ಬ್ರಾಹ್ಮಣರು ಸಂತತಾಭ್ಯುದಯ ಕಾರಕರು, ಮಹಾಭಕ್ತರು. ಹರನ ವೇಷದಲ್ಲಿರುವವರು. ಪಾಪನಾಶಕರು. ಚಿತ್ಪರರು. ಇಂಥವರು ನೀವೆಂದು ನಮಸ್ಕಾರಮಾಡಿದರೆ ಒಳ್ಳೆಯದಾಗಲಿ ಎಂದು ಆಶೀರ್ವದಿಸದೆ ಸುಮ್ಮನಿರುವುದು ಉಚಿತವೇ?ಪೆಂಪೇ?" ಎಂದು ಕೇಳುತ್ತಾನೆ. ಇದರಿಂದ ಬೆಲಿದೇವ ವೇಮನಾರಾಧ್ಯರು ಬ್ರಾಹ್ಮಣರೆಂದಹಾಗಾಯಿತು. ಅವರ ಮೊಮ್ಮಗನು ಬ್ರಾಹ್ಮಣನೇ ಆಗುತ್ತಾನೆ. ಆತನ ಶಿಷ್ಯನಾದ ಸೋಮನಾಥನು ಬ್ರಾಹ್ಮಣನೇ ಎನ್ನುವುದು ವೇಟೂರಿ ಪ್ರಭಾಕರಶಾಸ್ತ್ರಿಗಳ ಅಭಿಪ್ರಾಯ. ಭಂಡಾರು ತಮ್ಮಯ್ಯನವರ ಅಭಿಪ್ರಾಯದಲ್ಲಿ ಸೋಮನಾಥ ಒಬ್ಬ ಜಂಗಮನು. ಇದಕ್ಕೆ ಅವರು ತೋರಿಸುವ ನಿದರ್ಶನ ಸೋಮನಾಥ ಭೃಂಗಿರಿಟಿ ಗೋತ್ರದವನೆಂದು ಹೇಳಿಕೊಂಡಿರುವುದು. ಈ ಗೋತ್ರ ಬ್ರಾಹ್ಮಣರಿಗೆ ಇರುವುದಿಲ್ಲವಲ್ಲಾ ಎನ್ನುವುದು ಅವರ ಪ್ರಶ್ನೆ. ಕಾವ್ಯದ ಶ್ರೋತೃವಾದ ಸೂರನಾರ್ಯನನ್ನು ಮುದ್ದಿನ ಮೈದುನನೆಂದು ಹೇಳಿಕೊಂಡಿರುವುದರಿಂದ ಹರಿತಸ ಗೋತ್ರದವನಾದ ಸೂರನನ ಮೈದುನ ಸೋಮನಾಥ ಬ್ರಾಹ್ಮಣನೇ ಅಗಿರಬೇಕು ಎನ್ನುವುದು ಮೊದಲಿನ ಪಕ್ಷದವರ ಅಭಿಪ್ರಾಯ. ಸೋಮನ ತನ್ನ ಬಸವಪುರಾಣದಲ್ಲಿ "ಭ್ರಾಜಿಷ್ಣುವಾದ ವಿಷ್ಣುರಾಮಿದೇವನು, ತೇಜಿಷ್ಣುವಾದ ಶ್ರಿಯಾದೇವಿ ಅಮ್ಮನೂ ಪ್ರೀತಿಸುವ ಮುದ್ದಿನ ಮಗನು ನಾನು" ಎಂದು ತನ್ನ ತಂದೆ ತಾಯಿಯ ಹೆಸರನ್ನು ಹೇಳಿಕೊಂಡಿದ್ದಾನೆ. ಆದರೆ ನಂತರದ ಕೃತಿಯಲ್ಲಿ ಅವರ ಹೆಸರು ಹೇಳಿಲ್ಲ. ಈಶ್ವರ ಕುಲಜನು ಎಂದು ಹೇಳಿದ್ದಾನೆ. ಇದಕ್ಕೆ ಕಾರಣ ತನ್ನ ಅನುಭವಸಾರದಲ್ಲಿ ಹೇಳಿದ "ಲೋಕದಲ್ಲಿ ಶಿವದೀಕ್ಷಿತರಾದ ಶಿವಭಕ್ತರ ಪೂರ್ವಕುಲಗೋತ್ರಾದಿಗಳನ್ನು ನೋಡಬಾರದು" ಎನ್ನುವ ಸಿದ್ಧಾಂತ ಕಾರಣವಾಗಿರಬಹುದು. ಬಸವಪುರಾಣದಲ್ಲಿ ಹೇಳಿದ ತಂದೆತಾಯಿಗಳ ಹೆಸರು ವಿಷ್ಣುಸಂಬಂಧವಾಗಿವೆ. ಅವರು ಜಂಗಮರಾಗಿದ್ದರೆ ಅಂಥಹ ಹೆಸರು ಹೇಗೆ ಇರಲು ಸಾಧ್ಯ ಎನ್ನುವುದು ಬ್ರಾಹ್ಮಣಪಕ್ಷದವರ ವಾದವಾದರೆ, ವಿಷ್ಣುವು ಶಿವನ ಭಕ್ತನು. ತಪಸ್ಸುಮಾಡಿ ಅವನಿಂದ ಸುದರ್ಶನ ಚಕ್ರ ಪಡೆದವನು. ಆದಕಾರಣ ಏಕೋರಾಮನಂತಹ ವಿಷ್ಣುಪರವಾದ ಹೆಸರು ಶೈವರಿಗೆ ಇರುವುದರಲ್ಲಿ ಯಾವ ಅಭ್ಯಂತರವಿಲ್ಲ ಎನ್ನುತ್ತಾರೆ ಭಂಡಾರು ತಮ್ಮಯ್ಯನವರು.

ಪಂಡಿತಾರಾಧ್ಯಚರಿತ್ರೆ ನೋಡಿದಾಗ ಜಂಗಮ ಶಬ್ದಕ್ಕೆ ಈಗಿನ ಜಂಗಮರು ಎನ್ನುವ ಒಂದು ಜಾತಿಗೆ ಸಂಬಂಧಿಸಿದವರು ಎನ್ನುವ ಭಾವನೆ ಬರುವುದಿಲ್ಲ. ನಿದರ್ಶನಕ್ಕೆ ಸೂರಸಾನಮ್ಮ, ಬೆಲಿದೇವ ವೇಮನಾರಾಧ್ಯರು ಶೈವದ್ವಿಜರೆನ್ನುವುದರಲ್ಲಿ ಸಂದೇಹವಿಲ್ಲ. ಸೂರಸಾನಮ್ಮ ಬ್ರಾಹ್ಮಣಿಯಾದಕಾರಣದಿಂದಲೇ 'ಇವಳು ಹೊಲೆಯನನ್ನು ಮನೆಯೊಳಗೆ

ಕರೆದುಕೊಂಡು ಬ್ರಾಹ್ಮಣ್ಯವನ್ನು ಹೊಲೆಗಲಿಸಿದ'ಳೆಂದು ಬ್ರಾಹ್ಮಣರೆಲ್ಲರು ಆಕೆಯಮೇಲೆ ರಾಜನಿಗೆ ದೂರು ಹೇಳಿದರು. ಆದರೆ ಇವರಿಬ್ಬರೂ ಇಷ್ಟಲಿಂಗಾರ್ಚನೆಯಲ್ಲಿ ಮಲ್ಲಿಕಾರ್ಜುನಪಂಡಿತರು ಮೈಮರೆತಿರುವಾಗ ಅವರ ಸನ್ನಿಧಿಗೆ ಬಂದಾಗ ಅವರು ತಮ್ಮ ಕರಸ್ಥಳದಲ್ಲಿರುವ ಲಿಂಗದಲ್ಲೇ "ಜಂಗಮದರ್ಶನ ಸಂಸ್ಪೃಹಾನಂದ ಮಂಗಳಾಮೃತವಾರ್ಧಿ ಮಧ್ಯಾವಗಾಹ ವಿತತವಿಭ್ರಮಕೃತ ವಿಸ್ಮರಣಪ್ರಯುತ ನಿಜಾಂತಃಕರಣೋಪೇತ"ರಾಗುತ್ತಾರೆ (ಪಂ.ಚ.ಮೂಲ ೪೮). ಸ್ಥಾವರವಲ್ಲದ್ದು ಜಂಗಮ ಎನ್ನುವುದೇ ಇಲ್ಲಿ ಗ್ರಾಹ್ಯ.

ಮಲ್ಲಿಕಾರ್ಜುನ ಪಂಡಿತಾರಾಧ್ಯರೂ ಶೈವಧರ್ಮಾನುಯಾಯಿಗಳಾದ ಬ್ರಾಹ್ಮಣರೇ. ಅವರ ತಂದೆ ಭೀಮನಪಂಡಿತರು ದಕ್ಷಾರಾಮ ಭೀಮೇಶ್ವರನ ದೇಗುಲದ 'ಪುರೋಹಿತಶ್ರೇಷ್ಠರು'. 'ಬ್ರಾಹ್ಮಣೋತ್ತಮ'ರು. ವಾನಸ ವಂಶದವರು. ಸೋಮನಾಥನು ಪಂಡಿತರ ಉಪನಯನವನ್ನು ಕುರಿತು ಹೇಳಿಲ್ಲವಾದರೂ ಕಾವ್ಯದಲ್ಲಿ ಹಲವು ಕಡೆ ಉಪನಯನವನ್ನು ಕುರಿತು ಹೇಳಿದ್ದಾನೆ. ಕನ್ನಡಿಯಲ್ಲಿ ತನ್ನ ಮೂರ್ತಿಯನ್ನು ಕಂಡು ಶಿವನು ಮುಗ್ಧನಾದಾಗ ಅದೇ ಮೂರ್ತಿ ರೂಪತಾಳಿ ಹೊರಗೆ ಬರುತ್ತದೆ. ಅವನೇ ಶಿವದ್ವಿಜನಾದ ಜಡಯಾರಿಗೆ ಮಗನಾಗಿ ಸುಂದರನಂಬಿಯೆನಿಸುತ್ತಾನೆ. ಜಡಯಾರಿ ಅವನಿಗೆ ಗರ್ಭಾಷ್ಟಮದಲ್ಲಿ ಉಪನಯನಮಾಡಲು ಅಣಿಯಾದ ಸಂಗತಿಯನ್ನು ಸೋಮನಾಥನು ಮಹಿಮಾಪ್ರಕರಣದಲ್ಲಿ ಹೇಳುತ್ತಾನೆ. ಇದೇ ಕಥೆಯಲ್ಲಿ ಈ ಸುಂದರ ನಂಬಿಯ ಅನುಗ್ರಹದಿಂದ ಮಗನನ್ನು ಪಡೆದು ಚಿಕ್ಕಂದಿನಲ್ಲೇ ಅವನನ್ನು ಸಮುದ್ರದ ಮೊಸಳೆಯೊಂದು ನುಂಗಿದನಂತರ ಶಿವದ್ವಿಜನ ಪತ್ನಿ ವಿರಿಯನಂಗೆಯ ನೆಗೆಣ್ಣಿಯ ಮಗನಿಗೆ ಗರ್ಭಾಷ್ಟಮದಲ್ಲಿ ಉಪನಯನ ಮಾಡುತ್ತಾಳೆ. ಆ ಸಂದರ್ಭದಲ್ಲಿ ತಮ್ಮ ಮಗನನ್ನು ನೆನೆದು ವಿರಿಯನಂಗೆ ದುಃಖಿಸಿದಳೆಂದು ವರ್ಣಿತವಾಗಿದೆ. ಹೀಗೆ ಸೋಮನಾಥನು ವೈದಿಕಾಚಾರಗಳನ್ನು ತನ್ನ ಕಾವ್ಯದಲ್ಲಿ ಹೇಳಿದ್ದಾನೆ. ಶಿವದ್ವಿಜರಿಗೆ ಉಪನಯನಾದಿ ಸಂಸ್ಕಾರಗಳು ಉಂಟು. ಆರಾಧ್ಯರಲ್ಲಿಯೂ ಈ ಸಂಸ್ಕಾರಗಳು ಇದ್ದರೂ ಅಶೌಚಾದಿಗಳು ಅವರಲ್ಲಿ ಇಲ್ಲ. ಶ್ರಾದ್ಧಾದಿಗಳ ನಿರ್ವಹಣೆಯೂ ಬ್ರಾಹ್ಮಣರ ಪದ್ಧತಿಯಂತೆ ಇರುವುದಿಲ್ಲ ಎನ್ನುವುದನ್ನೂ ಈಗಲೂ ನಾವು ಕಾಣಬಹುದು. ಇದಕ್ಕೆ ಬಸವಣ್ಣನವರ ಪ್ರಭಾವವೇ ಕಾರಣ ಎಂದು ಹೇಳಬಹುದು. ಈ ಕಾರಣದಿಂದಾಗಿ ಸೋಮನಾಥನನ್ನು ಜಂಗಮಜಾತಿಯಲ್ಲೇ ಹುಟ್ಟಿದವನೆಂದು ಹೇಳುವುದಕ್ಕೆ ಅವನ ಬಸವಭಕ್ತಿ, ಅವನು ಹೇಳಿಕೊಂಡಿರುವ ಭೃಂಗಿರಿಟಿ ಗೋತ್ರಗಳಲ್ಲದೆ ಇನ್ನೂ ಬಲವಾದ ಪುರಾವೆಗಳು ಲಭಿಸಬೇಕಾಗಿದೆ.

ಕಾಲದ ವಿಷಯದಲ್ಲಿ ಪಿಡುಪರ್ತಿ ಬಸವನ ಕಾಕತೀಯ ಪ್ರತಾಪರುದ್ರನ ಕಾಲದಲ್ಲಿ ಸೋಮನಾಥನು ಇದ್ದನೆಂದು ಹೇಳಿದ್ದಾನೆ. ಪ್ರತಾಪರುದ್ರರು ಇಬ್ಬರಿದ್ದಾರೆ. ಕ್ರಿ.ಶ. ೧೧೫೨

ರಿಂದ ೧೩೨೬ರ ತನಕ ಆಂಧ್ರದೇಶವನ್ನು ಪರಿಪಾಲಿಸಿದ ಪ್ರತಾಪರುದ್ರನು. ಕ್ರಿ.ಶ. ೧೧೩೨ ರಿಂದ ೧೧೯೮ರ ತನಕ ಪರಿಪಾಲಿಸಿದ ಕಾಕತೀಯ ರುದ್ರದೇವನು ಮತ್ತೊಬ್ಬನಿದ್ದಾನೆ. ಇವನು ಪ್ರತಾಪರುದ್ರದೇವನ ತಾಯಿಯ ತಾಯಿಗೆ ತಂದೆಯಾದ ಗಣಪತಿದೇವನಿಗೆ ದೊಡ್ಡಪ್ಪ. ಇವನನ್ನು ಪ್ರಥಮಪ್ರತಾಪರುದ್ರನೆಂದು ಈಗಿನವರು ಕರೆಯುವುದು ಉಂಟು. ಆದರೆ ಈತನ ಹೆಸರು ರುದ್ರದೇವನೆಂದೇ. ಪಿಡುಪರ್ತಿ ಬಸವನ ಹೇಳಿದವನು ಕ್ರಿ.ಶ. ೧೨೯೨ ರಿಂದ ೧೩೨೬ರ ತನಕ ಆಂಧ್ರದೇಶವನ್ನು ಪರಿಪಾಲಿಸಿದ ಪ್ರತಾಪರುದ್ರನೇ ಆಗಿರಬೇಕು. ಇನ್ನು ಅಲ್ಪಕಾಲದಲ್ಲಿ ರಾಜ್ಯ ತುರುಷ್ಕಾಕ್ರಾಂತವಾಗಲಿದೆ ಎಂದ ಪಿಡುಪರ್ತಿ ಬಸವನನ ಮಾತಿಗೆ ಇವನಾದರೆ ಹೊಂದಿಕೆಯಾಗುತ್ತದೆ ಎನ್ನುವ ಪ್ರಭಾಕರ ಶಾಸ್ತ್ರಿಗಳು, ಇನ್ನೂ ಬಲವಾದ ಕಾರಣಗಳಿಂದ ಸೋಮನಾಥನು ಮೊದಲ ಪ್ರತಾಪರುದ್ರನ ಕಾಲದವನೇ ಆಗಿರಬೇಕು ಎನ್ನಿಸುತ್ತದೆ ಎನ್ನುತ್ತಾರೆ.

ಪಂಡಿತಾರಾಧ್ಯರು ಬಸವಣ್ಣನವರನ್ನು ನೋಡುವುದಕ್ಕೆ ಕಲ್ಯಾಣಕಟಕಕ್ಕೆ ಪ್ರಯಾಣ ಮಾಡುತ್ತಾ ಬರುವಾಗ ನಡುವೆ ವನಿಪುರಮು ಎನ್ನುವ ಗ್ರಾಮದಲ್ಲಿರುವಾಗ ಅಲ್ಲಿಗೆ ಎಂಟು ದಿನಗಳಿಗೆ ಮುಂಚೆ ಕಪ್ಪಡಿ ಸಂಗಮೇಶ್ವರದಲ್ಲಿ ಬಸವೇಶ್ವರರು ಲಿಂಗೈಕ್ಯವನ್ನು ಹೊಂದಿದರು ಎಂದು ಒಂದು ವಾರ್ತೆ ಬರುತ್ತದೆ. ಆಗ ಪಂಡಿತರು ಪರಿಪರಿ ರೀತಿಯಲ್ಲಿ ಹಲುಬಿದಂತೆ; ವನಿಪುರಮು ಶಂಕರಯ್ಯ ಎನ್ನುವ ಭಕ್ತನ ಜೊತೆಯಲ್ಲಿ ಅಲ್ಲಿಂದಲೇ ಶ್ರೀಶೈಲಕ್ಕೆ ಹೊರಟರಂತೆ. ನಂತರ ಕೆಲವು ದಿನಗಳಿಗೆ ಶ್ರೀಶೈಲವನ್ನು ತಲುಪಿದರೂ, ಪರ್ವತವನ್ನು ಹತ್ತುವುದು ದೋಷವೆಂದು ಭಾವಿಸಿ ಶಿಷ್ಯನಾದ ದೋನಯ್ಯನನ್ನು ಶಿವರಾತ್ರಿ ಪುಣ್ಯೋತ್ಸವವನ್ನು ನಿರ್ವಹಿಸಲು ಶ್ರೀಶೈಲಕ್ಕೆ ಕಳಿಸಿದಂತೆ, ತಿರುಗಿಬಂದ ದೋನಯ್ಯನಿಂದ ಸಾಕ್ಷಾತ್ತು ಶಿವನೇ ತಮ್ಮ ಯೋಗಕ್ಷೇಮವನ್ನು ವಿಚಾರಿಸಿದಂತೆ ತಿಳಿದು ಸಂತೋಷಪಟ್ಟು ಶಿವನನ್ನು ಪ್ರಾರ್ಥಿಸಿದಾಗ ಮಲ್ಲಿಕಾರ್ಜುನನು ಪಂಡಿತರನ್ನು ಕುಟುಂಬದವರ ಸಹಿತ ತನ್ನಲ್ಲಿ ಐಕ್ಯಮಾಡಿಕೊಂಡಂತೆ ಸೊಮನಾಥನು ಪಂಡಿತಾರಾಧ್ಯ ಚರಿತ್ರೆಯಲ್ಲಿ ಬರೆದಿದ್ದಾನೆ.

ಬಸವಣ್ಣನವರು ೧೧೬೮ರಲ್ಲಿ ಲಿಂಗೈಕ್ಯಹೊಂದಿದರು. ಆದಕಾರಣ ಪಂಡಿತಾರಾಧ್ಯರು ೧೧೭೦ರಲ್ಲಿ ಲಿಂಗೈಕ್ಯವನ್ನು ಹೊಂದಿರಬಹುದು.

ಇಂತಹ ಪಂಡಿತಾರಾಧ್ಯರ ಕಾಲದವರೇ ಆದ ಬೆಲಿದೇವ ವೇಮನಾರಾಧ್ಯರ ಮೊಮ್ಮಗನಿಗೆ ಶಿಷ್ಯನು ನಾನು ಎಂದು ಸೋಮನಾಥನು ಹೇಳಿರುವುದರಿಂದ, ಮೂರುತಲೆಮಾರಿನ ನಂತರದವನು ಎನ್ನುವ ಅರ್ಥದಲ್ಲಿ ಸುಮಾರು ನೂರು ಅಥವಾ ನೂರೈವತ್ತು ವರುಷಗಳ ನಂತರದವನು ಎಂದು ಹೇಳಿ ಹರಿದೇವಾಚಾರ್ಯನನ್ನು, ವೃಷಭಸ್ತುತಿ ಮಾಡಿದ ಸೋಮನನ್ನು ಸ್ತುತಿಸಿದ ಪದ್ಮರಸನು ತನ್ನ ಉದ್ಭಟ ಕಾವ್ಯವನ್ನು

"ಸೋಮರಾಜನುಸಿರ್ದೀ ಕಾವ್ಯಂ ವಲಂ ಶಾಲಿವಾಹನ ಶಕಾಬ್ದಮದೆಯ್ದೆ ಸಾಸಿರದ ನೂರಿಂ ಸಂದ ನಾಲ್ವತ್ತು ನಾಲ್ಕನೆಯ ಆರಂಜಿತ ಚಿತ್ರಭಾನುವ ವರಾಶ್ವೀಜೋತ್ರಿಸ್ಸೈಕಾದಶೀ ಜನಜಾತಾರಿ ತನೂಜ ವಾರದೊಳು ಆದತ್ತಲ್ಲಮುಂಗರ್ಪಿತಂ" ಎಂದು ಹೇಳಿಕೊಂಡಿರುವುದರಿಂದ ಇದು ಶಕ ೧೧೪೪(ಕ್ರಿ.ಶ. ೧೨೨೨)ರಲ್ಲಿ ರಚಿತವಾಗಿದೆ ಎಂದು ತಿಳಿಯುತ್ತದೆ. ಆಗ ಪಾಲ್ಕುರಿಕಿ ಸೋಮನನು ಇದಕ್ಕೂ ಮುಂಚಿನವನಾಗುತ್ತಾನೆ. ಅದಲ್ಲದೆ ಸೋಮನಾಥನು ಯಾರಿಂದ ಬಸವಪುರಾಣದ ವೃತ್ತಾಂತವನ್ನು ತಿಳಿದನೋ ಅವರಲ್ಲಿ ಕರಸ್ಥಲಿ ಸೋಮನಾಥಯ್ಯನು ಇದ್ದಾನೆ. ಈತನು ಪಂಡಿತಾರಾಧ್ಯಕೃಪಾ ಸಮುದ್ಗತನು ಎಂದು ಸೋಮನನೇ ಹೇಳಿದ್ದಾನೆ. ಇದರಿಂದ ಈತ ಪಂಡಿತರಿಗೆ ಶಿಷ್ಯನೋ ಅವರ ಅನುಗ್ರಹದಿಂದ ಹುಟ್ಟಿದವನೋ ಆಗಿರಬಹುದು. ಶಿಷ್ಯನೆಂದುಕೊಂಡರೆ ಪಂಡಿತರ ಶಿಷ್ಯ ಕರಸ್ಥಲಿ ಸೊಮನಾಥಯ್ಯನಿಗೆ ಸಮಕಾಲಿಕನಾಗುತ್ತಾನೆ. ಪಂಡಿತಾರಾಧ್ಯರು ಶ್ರೀಶೈಲಕ್ಕೆ ಹೋಗುತ್ತಾ ವನಿಪುರದಲ್ಲಿ ಇರುವಾಗ ಬಸವಣ್ಣನವರು ವಿಧಿವಶರಾದದ್ದು ತಿಳಿಯುತ್ತದೆ. ಈ ಸಂಗತಿ ಪಂಡಿತಾರಾಧ್ಯಚರಿತ್ರೆಯಲ್ಲಿದೆ. ಬಸವಣ್ಣ ಕ್ರಿ.ಶ. ೧೧೬೮ರಲ್ಲಿ ವಿಧಿವಶರಾದರು. ಪಂಡಿತರು ಕ್ರಿ.ಶ. ೧೧೭೦ರಲ್ಲಿ ಲಿಂಗೈಕ್ಯವಾಗಿರಬಹುದು. ಪಂಡಿತರ ಶಿಷ್ಯನಾದ ದೋನಮಯ್ಯ, ಅವರ ಮೊದಲ ಮಗನಾದ, ಕೇದಾರಯ್ಯನಿಗೆ ಲೋಕಾರಾಧ್ಯಪಟ್ಟವನ್ನು ಕಟ್ಟಿದಂತೆ ಆತನಿಗೆ ನಾಲಕ್ಕುಮಂದಿ ಮಕ್ಕಳಿಂದ ವಂಶಾಭಿವೃದ್ಧಿಯಾಗಿದೆಯೆಂದು ಸೋಮನಾಥನು ಪಂಡಿತಾರಾಧ್ಯವನ್ನು ರಚಿಸುವ ಕಾಲಕ್ಕೆ ಅವರ ಶಿಷ್ಯ ಮತ್ತು ಮಗ ಜೀವಂತವಾಗಿದ್ದಾರೆಂದು ಮೊಮ್ಮಕ್ಕಳಿದ್ದರೆಂದು ಇದರಿಂದ ತಿಳಿಯುತ್ತದೆ. ಇದರಿಂದ ಪಂಡಿತಾರಾಧ್ಯರು ಲಿಂಗೈಕ್ಯವಾದ ಮುವ್ವತ್ತು ವರುಷಗಳಿಗೆ ರುದ್ರದೇವನ ಕಾಲದಲ್ಲಿಯೇ (ಸುಮಾರು ಕ್ರಿ.ಶ. ೧೧೯೦) ಸೋಮನಾಥ ಪ್ರಸಿದ್ಧಗ್ರಂಥಕರ್ತನು ಎಂದು ಸ್ಪಷ್ಟವಾಗುತ್ತದೆ ಎನ್ನುವುದು ಪ್ರಭಾಕರ ಶಾಸ್ತ್ರಿಗಳ ವಾದ. ಆರು ತಲೆಮಾರಿನ ನಂತರದವನಾದ ಪಿಡುಪರ್ತಿ ಬಸವನನ ಬರಹ ಸಮಕಾಲಿಕರಾದವರ ಗ್ರಂಥಕ್ಕಿಂತ ಬಲವಾದ ಪ್ರಮಾಣ ಆಗಲಾರದು ಆದಕಾರಣ ಸೋಮನಾಥನು ಕ್ರಿ.ಶ. ೧೧೯೦ರ ಪ್ರಾಂತದವನು ಎನ್ನುತ್ತಾರೆ ಅವರು.

ಹೀಗೆ ಸೋಮನಾಥನ ಕಾಲವನ್ನು ಪರಿಚಯವನ್ನು ನೀಡುವ ಎಲ್ಲರೂ ತಮ್ಮ ಮಾತುಗಳಲ್ಲೆಲ್ಲ 'ಆಗಿರಬಹುದು' 'ಎನಿಸುತ್ತದೆ' ಇತ್ಯಾದಿ ಮಾತುಗಳನ್ನು ಉಪಯೋಗಿಸಿದ್ದಾರೆ. ತಮಗೆ ದೊರೆತ ಮಾಹಿತಿಗಳಿಗೆ ತಮಗೆ ತೋಚಿದರೀತಿಯಲ್ಲಿ ಅವರು ಸಮರ್ಪಕ ಎನ್ನುವ ರೀತಿಯ ಊಹೆಗಳನ್ನು ಮಾಡಿದ್ದಾರೆ. ಆ ಪುರಾವೆಗಳಿಗಿಂತಲು ಖಚಿತವಾದ ಮಾಹಿತಿಯನ್ನು ನೀಡಬಲ್ಲ ಆಧಾರಗಳು ಸಿಕ್ಕಾಗ ಇದಮಿತ್ಥಂ ಎಂದು ನಿರ್ಣಯಿಸಬಹುದು. ಅಲ್ಲಿತನಕ ಅವರವರ ನಿರ್ಣಯಗಳನ್ನು ಹೌದು ಅಲ್ಲ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಸೋಮನನ ವೀರಧರ್ಮ ನಿಷ್ಠೆ–

ತನ್ನ ಇಡೀ ಜೀವನವನ್ನು ಶೈವ ಧರ್ಮ ಪ್ರಚಾರಕ್ಕಾಗಿಯೇ ದುಡಿಯುವುದರಲ್ಲಿ ಕಳೆದ ಸೋಮನಾಥನು ತನ್ನ ಬದುಕನ್ನೂ ಅದರಂತೆಯೇ ಕಳೆದು ಮಾದರಿಯಾಗಿ ನಿಂತವನು. ನಡೆ ನುಡಿ ಒಂದಾದ ಜೀವನ ಆತನದು. "ಭವಿಗಳು ಮಾಡಿದ ಪ್ರಯತ್ನದಿಂದ ಬೆಳೆದ ಧಾನ್ಯಸಮೂಹವನ್ನು, ಭವಿಗಳ ದರ್ಶನವನ್ನು, ರಸಪಾಕಾದಿಗಳನ್ನು, ಭವಿಗಳ ಮನೆಯಲ್ಲಿ ಹೆಜ್ಜೆ ಇಡುವುದನ್ನು ಮತ್ತು ಅವರ ಧನವನ್ನು ಸ್ವೀಕರಿಸುವುದನ್ನು ತ್ಯಜಿಸಿದವನು ನಾನು. ಭವಿಜನರನ್ನು ನೋಡುವುದು, ಮುಟ್ಟುವುದು, ಮಾತಾಡುವುದು, ವಿವಿಧ ದಾನಗಳನ್ನು ನೀಡುವುದು, ತೆಗೆದುಕೊಳ್ಳುವುದು ಇತ್ಯಾದಿಗಳಿಂದ ದೂರನು. ಶುದ್ಧವಾದ ಭಕ್ತಿಸ್ಥಲ, ಶ್ರುತಿಮತಾಚಾರಗಳಿಂದ ಸಿದ್ಧವಾದ ವೀರವ್ರತಶೀಲದಿಂದ ಕೂಡಿದವನು" ಎಂದು ಸೋಮನಾಥನು ತನ್ನನ್ನು ಕುರಿತು ಹೇಳಿಕೊಂಡಿದ್ದಾನೆ.

"ಲೋಕದಲ್ಲಿ 'ಪಾರ್ವತಿಯೇ ತಾಯಿ, ಪರಮೇಶ್ವರನೇ ತಂದೆ' ಎನ್ನುವಂತೆ ಶೇಷ್ಠಪುರಾಣಗಳ ವಚನದಂತೆ ನಾನು ಈಶ್ವರ ಕುಲದಲ್ಲಿ ಜನಿಸಿದವನು. ಪ್ರಸಿದ್ಧರಾದ ಶ್ರೀಬೆಲಿದೇವ ವೇಮನಾರಾಧ್ಯರೆನ್ನುವ ಮಹನೀಯರ ಮೊಮ್ಮಗನಿಗೆ ಶಿಷ್ಯ ನಾನು. ಆತನು ಪರಮಾರಾಧ್ಯದೇವನು. ಶ್ರೀಮದ್ಗುರುಲಿಂಗನ ಘನ ಕರುಣಾಹಸ್ತಗರ್ಭದಲ್ಲಿ ಹುಟ್ಟಿದವನು. ಹಿಂದೆ ಬಸವಪುರಾಣದಲ್ಲಿ ಗಣಿಸಲಾದ ಹಿರಿಯಜನರಿಗೆ ಸಾಕುಮಗನು. ಬಸವಪುರಾಣ ಪ್ರಬಂಧವೆನ್ನುವ ಹೆಸರಿನ ಮಗಳನ್ನು ಉಳ್ಳವನು." ಎಂದು ಹೇಳಿಕೊಂಡಿದ್ದಾನೆ. (ಪಂಡಿತಾರಾಧ್ಯ ಚರಿತ್ರೆ. ದೀಕ್ಷಾಪ್ರಕರಣ.)

ಬಸವ ಎನ್ನುವ ಮೂರಕ್ಷರಗಳನ್ನು ಕುರಿತಾದ ಮಾತು ಬಂದರೆ ಸಾಕು ತನ್ನನ್ನು ತಾನು ಮರೆಯುತ್ತಾನೆ ಸೋಮನ. ಹತ್ತು ಹಲವಾರು ರೀತಿಯಲ್ಲಿ ಬಸವ ನಾಮವನ್ನು ಬಣ್ಣಿಸುತ್ತಾನೆ. ಆ ನಾಮದ ಒಂದೊಂದು ಅಕ್ಷರದ ಮಹಿಮೆಯನ್ನೂ ಹೇಳಿ ತೃಪ್ತನಾಗುತ್ತಾನೆ. ಪಂಡಿತಾರಾಧ್ಯರು ಬಸವಣ್ಣನವರ ಶಿವೈಕ್ಯದ ಬಗೆಗೆ ಕೇಳಿ ದುಃಖಿಸುವ ಸಂದರ್ಭದಲ್ಲಿ "ಅವರ ಹೆಸರಿನಲ್ಲಿನ ಒಂದೊಂದು ಅಕ್ಷರವೂ ಅತ್ಯಂತ ಮಹಿಮಾನ್ವಿತ. ಅನುಪಮಾಲ ಫಲದಾಯಕ. 'ಬ' ಎಂದರೆ ಲಿಂಗಸಂಬಂಧಸೌಖ್ಯವನ್ನು ಆ ಅಕ್ಷರ ಸಂಧಿಸುವಂತೆ ಮಾಡುತ್ತದೆ. 'ಸ' ಎಂದರೆ ಸದ್ಗುರು ಸತ್ಕೃಪೆ ಸಮಗ್ರವಾಗಿ ಸಿದ್ಧಿಸುತ್ತದೆ. 'ವ' ಎಂದರೆ ಪ್ರಸಾದ ವಹನೆ ಲಭಿಸುತ್ತದೆ. ಆದಕಾರಣ 'ಬಸವಾ' ಎಂದು ಯಾರು ಉಚ್ಚರಿಸಿದರೂ ಅವರಿಗೆ ಉತ್ತಮೋತ್ತಮ ಭಕ್ತಿ ಉಜ್ವಲವಾಗಿ ಹಬ್ಬುತ್ತದೆ" ಎಂದು ಹೇಳುವುದನ್ನು ಇಲ್ಲಿ ನೆನೆಯಬಹುದು. ತನ್ನ ವೀರಭಕ್ತಿಯ ಶೈವದ ಮುಂದೆ ಜಗತ್ತಿನ ಯಾವ ಧರ್ಮವೂ ಸರಿಯಲ್ಲ. ಹಾಗೆ ಯಾರಾದರೂ ನುಡಿದರೆ ಅವರನ್ನು ಕ್ಷಮಿಸುವ ಪಶ್ನೆಯೇ ಇಲ್ಲ ಎನ್ನುವುದು ಸೋಮನನ ನಿಲುವು.

ಮೊರದ ವೇಮಯ್ಯನವರ ಎಲ್ಲ ಕಥೆಯಲ್ಲಿ ತನ್ನ ಬಳಿಗೆ ಬಂದ ಬಾಲಕನಲ್ಲೇ ಬಸವಣ್ಣನವರನ್ನು ಕಂಡ ವೇಮಯ್ಯನವರು ಪಡೆದ ಅನುಭೂತಿಯನ್ನು ಕುರಿತು ಬಸವಭಕ್ತಿಪುರಸ್ಸರವಾಗಿ ಸೋಮನಾಥನು ಮಾಡಿದ ನಿರೂಪಣೆ ಅತ್ಯಂತ ಹೃದ್ಯವಾದದ್ದು.

ವಸ್ತು, ನಾಯಕ, ಪಾತ್ರ, ಛಂದಸ್ಸುಗಳ ಆಯ್ಕೆಯ ಸ್ವಾತಂತ್ರ್ಯ

ಪರಿಮಾಣದಲ್ಲಿ ಪರಿಣಾಮದಲ್ಲಿ ತೆಲುಗು ಕವಿತ್ರಯವೆನಿಸಿದ ನನ್ನಯ ತಿಕ್ಕನ ಎರ್ರಾಪ್ರಗಡರ ರಚನೆಗಳಿಗೆ ಸಮನಾಗಬಲ್ಲ ಮಹಾಕೃತಿಗಳು ಸೋಮನಾಥನ ಬಸವಪುರಾಣ ಮತ್ತು ಪಂಡಿತಾರಾಧ್ಯ ಚರಿತ್ರೆಗಳು. ರಾಜರ ಪ್ರೇರಣೆಯಿಂದ ಅಥವಾ ಅವರ ಆಶ್ರಯದಲ್ಲಿ ಕಾವ್ಯರಚನೆ ನಡೆಯುತ್ತಿದ್ದ ಕಾಲದಲ್ಲಿ ಸ್ವತಂತ್ರವಾಗಿ ಕೇವಲ ವೀರಶೈವಸಿದ್ಧಾಂತ ಪ್ರಚಾರಕ್ಕಾಗಿ ಸಾಹಿತ್ಯಸೃಷ್ಟಿ ಮಾಡಿದ ವ್ಯಕ್ತಿತ್ವ ಸೊಮನಾಥನದು. ತನ್ನ ಸಾಹಿತ್ಯವ್ಯವಸಾಯದಲ್ಲಿ ಲೇಖನಿಯ ನೇಗಿಲಯೋಗಿಯಾಗಿ ದುಡಿದರೂ ಯಾವ ಫಲವನ್ನೂ ಅವನು ಆಸೆಪಟ್ಟಿಲ್ಲ. "ಕರಮರ್ಥಿ ನೀಕು ಶೃಂಗಾರಂಬುಗಾ ಪೂಜ ಸೇಯುದು ಗಾನಿ ಯಾಶಿಂಪ ಫಲಮು" (ಚನ್ನಮಲ್ಲು ಸೀಸಮುಲು.ಪದ್ಯ. ೧೫)(ಬಹಳ ಇಷ್ಟಪಟ್ಟು ನಿನಗೆ ಶೃಂಗಾರವಾಗುವಂತೆ ಪೂಜೆ ಮಾಡುತ್ತೇನೆ. ಅಷ್ಟೇ ಹೊರತು ಫಲವನ್ನು ಆಶಿಸುವುದಿಲ್ಲ) ಎನ್ನುವ ಸೋಮನನು ನಂತರಕಾಲದಲ್ಲಿ ತೆಲುಗು ಸಾಹಿತ್ಯ ಕೃಷಿಕಾರರಲ್ಲಿ ಹೀಗೇ ಬದುಕಿದ ಪೋತನಾಮಾತ್ಯನಿಗೆ ಮಾರ್ಗದರ್ಶಿ. ತೆಲುಗಿನ ಓದುಗರು ಈಗಲೂ ಭಕ್ತಿಯಿಂದ ಭಾವಿಸುವ, ಗೌರವಿಸುವ ಪೋತನಾಮಾತ್ಯನ ಭಕ್ತಿಯ ಉದ್ರೇಕ, ಅಂತ್ಯಾನುಪ್ರಾಸಗಳ ಸುರಿಮಳೆ ಇತ್ಯಾದಿಗಳ ಜೊತೆಗೆ ಸೋಮನಾಥನ ಕೆಲವು ಪದ್ಯಗಳು ಅದೇ ರೀತಿಯ ಲಕ್ಷಣಗಳೊಂದಿಗೆ ಪೋತನಾಮಾತ್ಯನಲ್ಲಿ ಕಾಣಿಸುವುದು ಪೋತನನ ಮೇಲೆ ಇವನ ಪ್ರಭಾವಕ್ಕೆ ನಿದರ್ಶನ.

ಧಾರ್ಮಿಕ ಸಿದ್ಧಾಂತ ಪ್ರಚಾರಕ್ಕಾಗಿಯೇ ಕಾವ್ಯರಚನೆ ಮಾಡಿದ್ದರೂ ಬರಿ ಧಾರ್ಮಿಕ ಉಪನ್ಯಾಸಗಳಿಂದ, ಸಿದ್ಧಾಂತರಾದ್ಧಾಂತಗಳಿಂದ ತನ್ನ ರಚನೆಯನ್ನು ತುಂಬಿ ಓದುಗನ ಉತ್ಸಾಹಕ್ಕೆ ನೀರೆರಚದ ರೀತಿಯಲ್ಲಿ ಕಾವ್ಯಾದ್ಯಂತ ಎಲ್ಲೂ ನಿಲ್ಲದೆ ಓದಿಸಿಕೊಂಡು ಹೋಗಬಲ್ಲ ಕವಿತ್ವವನ್ನು ಸೃಷ್ಟಿಸಿದವನು ಸೋಮನಾಥ. ಚರಿತ್ರೆಯನ್ನು ನೋಡಿದಾಗ ಸರ್ವೇಸಾಮಾನ್ಯ, ಯಾವುದೇ ಧರ್ಮರಾಜರ ಆಶ್ರಯದಲ್ಲಿ ಬೆಳೆದಿರುವುದನ್ನು ಕಾಣಬಹುದು. ಅಂಥಾದ್ದರಲ್ಲಿ ವೀರಶೈವಧರ್ಮ ಪ್ರಚಾರಕ್ಕೆಂದು ಟೊಂಕಬಿಗಿದ ಸೋಮನನು ಯಾವ ರಾಜನನ್ನೂ ಆಶ್ರಯಿಸದೆ ಸ್ವತಂತ್ರವಾಗಿ ಆ ಕೆಲಸ ಮಾಡಿರುವುದು ಆಶ್ಚರ್ಯಕರ. ನಂತರದ ಕಾಲದಲ್ಲಿ ಈರೀತಿ ರಾಜರನ್ನು ಆಶ್ರಯಿಸದೆ ಸ್ವತಂತ್ರವಾಗಿ ತೆಲುಗು ಸಾಹಿತ್ಯಚರಿತ್ರೆಯಲ್ಲಿ ಕವಿತಾಸೃಷ್ಟಿಮಾಡಿದ ಕವಿ ಪೋತನಾಮಾತ್ಯನು.

ತಮಿಳು ಕನ್ನಡ ಭಾಷೆಗಳಲ್ಲಿ ಶೈವ ವೀರಶೈವ ಕವಿಗಳು ನಡೆದ ದಾರಿಯಲ್ಲಿ ನಡೆದು, ತೆಲುಗಿನಲ್ಲಿ ನನ್ನಯನು ಹಾಕಿದ ದಾರಿಗೆ ಭಿನ್ನವಾಗಿ ಪೌರಾಣಿಕ ಇತಿವೃತ್ತಕ್ಕೆ ಬದಲಾಗಿ ಲೌಕಿಕ ವ್ಯಕ್ತಿಯ ಚರಿತ್ರೆಯನ್ನೇ ವಸ್ತುವನ್ನಾಗಿ ಸ್ವೀಕರಿಸಿ ಕಾವ್ಯನಿರ್ಮಿಸಿದ ಸೋಮನನು ಒಂದು ಹೊಸ ಹೆದ್ದಾರಿಯನ್ನು ನಿರ್ಮಿಸಿ ಸ್ವಾತಂತ್ರ್ಯವನ್ನು ಮೆರೆದಿದ್ದಾನೆ.

ಸೋಮನಾಥನು ಜನ್ಮತಾಳಿದ್ದೇ ವೀರಶೈವಧರ್ಮದ ಪ್ರಚಾರಕ್ಕಾಗಿ, ಬಸವಣ್ಣನವರನ್ನು ಜೀವನದುದ್ದಕ್ಕೂ ವಾಕ್ಪುಷ್ಪಗಳಿಂದ ಅರ್ಚಿಸುವದಕ್ಕಾಗಿ. ಬಸವ ಎಂದರೆ ಸಾಕು ಸೋಮನಾಥನು ಭಾವಾವೇಶಕ್ಕೆ ಒಳಗಾಗುತ್ತಾನೆ. ಕಾವ್ಯಾದಿಯಲ್ಲಿ ತಾನು ಬಸವಗೋತ್ರನೆಂದೂ ಬಸವನ ಬಂಟನೆಂದೂ ಲೆಂಕನೆಂದೂ ಹೇಳಿಕೊಂಡಿರುವುದನ್ನು ಇಲ್ಲಿ ನೆನೆಯಬಹುದು. ಪಂಡಿತಾರಾಧ್ಯರು ಬಸವಣ್ಣನವರ ನಿಧನಕ್ಕೆ ಮರುಗುವ ಸಂದರ್ಭದಲ್ಲಿ ಸೋಮನಾಥನೇ ಪಂಡಿತರರೂಪದಲ್ಲಿ ಹಲುಬಿದಂತೆ ಇದೆ. ಯಾರೋ ಬೇರೊಬ್ಬರು ಕೇಳಿದಾಗ ಸೋಮನಾಥನು ಕಾವ್ಯರಚನೆ ಮಾಡಲಿಲ್ಲ. ಬಸವಣ್ಣನವರನ್ನು ಕುರಿತು ಬಲ್ಲ ಕರಸ್ಥಲಿ ಸೋಮನಾಥಯ್ಯನವರು, ನಿಯಮಗಳ ಮಲ್ಲಿನಾಥನು, ರೆಂಟಾಲ ಮಲ್ಲಿನಾಥನು, ದೋಚಮಾಂಬ, ಗೋಡಗಿ ತ್ರಿಪುರಾರಿ ಮುಂತಾದ ಅಸಂಖ್ಯಾತ ಮಾಹೇಶ್ವರರು ಒಂದೆಡೆಯಲ್ಲಿ ಸೇರಿದ್ದಾಗ ಅವರನ್ನು ಪ್ರಾರ್ಥಿಸಿ ಬಸವಣ್ಣನವರ ಕಥಾಸೂತ್ರವನ್ನು ಕೇಳಿ ತಿಳಿದು ಸ್ವೋಪಜ್ಞತೆಯಿಂದ ಅನೇಕ ಭಕ್ತರ ಕಥೆಗಳನ್ನು ಜೋಡಿಸಿ ವೇದವಿದು ಎನ್ನುವ ಭಾವನೆಯಿಂದ ಓದಲು ತಕ್ಕ ಕಾವ್ಯವನ್ನು ರಚಿಸಿದ್ದಾನೆ. ಸಾಹಸವನ್ನು ತೋರಿ ಭಕ್ತರ ಮತ್ತು ಬಸವಣ್ಣ, ಮತ್ತು ಪಂಡಿತಾರಾಧ್ಯರಂತಹ ಲೋಕದ ವ್ಯಕ್ತಿಗಳ ಕಥೆಯನ್ನೇ ಕಾವ್ಯವಸ್ತುವಾಗಿ ಸ್ವೀಕರಿಸಿ ಕಾವ್ಯರಚನೆ ಮಾಡಿದ್ದಾನೆ.

ಸೋಮನಾಥನ ಎರಡು ಕಾವ್ಯಗಳಲ್ಲಿ ಬಸವಣ್ಣ, ಮತ್ತು ಪಂಡಿತಾರಾಧ್ಯರು ನಾಯಕರು. ಆದರೆ ಈ ಕಾವ್ಯಗಳಲ್ಲಿ ನಾಯಕ ಶಿವನೆಂದು ಕೆಲವರು ಪಂಡಿತರ ಅಭಿಪ್ರಾಯ.

ಸೋಮನನು ಸ್ವೀಕರಿಸಿದ ಛಂದಸ್ಸು ಆತನ ಸ್ವತಂತ್ರವಾದ ಚಿಂತನೆಗೆ ಬಲವಾದ ನಿದರ್ಶನ. ಈ ಸ್ವೀಕರಣೆಯಲ್ಲಿಯೂ ತಮಿಳು ಕನ್ನಡ ಭಾಷಾಸಾಹಿತ್ಯಗಳ ಪ್ರೇರಣೆ ಇದೆ ಎನ್ನಬಹುದು. ತಮಿಳು ಸಾಹಿತ್ಯದಲ್ಲಿ ಮೊದಲಿನಿಂದಲೂ ಮಾರ್ಗಕ್ಕೆ ಭಿನ್ನವಾದ ದೇಸಿಯ ದೃಷ್ಟಿಕೋನವನ್ನು ಗಮನಿಸಬಹುದು. ವಿರುತ್ತಪ (ವೃತ್ತಪದ್ಯ) ಸಂಸ್ಕೃತ ಛಂದಸ್ಸಿಗೆ ಭಿನ್ನವಾದದ್ದು. ಇದು ವಚನ(ಗದ್ಯ)ದಂತೆ ಲಯವಿರಹಿತ ಎಂಬಂತೆ ಅನಿಸಿದರೂ ಇದನ್ನು ಕೇಳುವಾಗ ಪ್ರತಿ ಪಾದದ ಅರ್ಧದಲ್ಲಿ ಒಂದು ವಿರಾಮವಿದ್ದು ಅದಕ್ಕೆ ತನ್ನದೇ ಆದ ಒಂದು ಲಯವಿರುವುದನ್ನು ಗಮನಿಸಬಹುದು. ಏಳು ಮತ್ತು ಎಂಟನೆಯ ಶತಮಾನಗಳಲ್ಲಿಯೇ ತಿರುಜ್ಞಾನ ಸಂಬಂಧರ್, ಸುಂದರಮೂರ್ತಿ ನಾಯನಾರ್,

ತಿರುನಾವುಕ್ಕರಸು ತಮ್ಮ ರಚನೆಗಳನ್ನು ಲಯಾನ್ವಿತವಾದ ಛಂದಸ್ಸಿನಲ್ಲಿ ನಡೆಸಿದ್ದಾರೆ. ನಂತರ ಹನ್ನೆರಡನೆಯ ಶತಮಾನದವನಾದ ಶೇಕ್ಕಿಳಾರ್ ವಿರುತ್ತಪದಲ್ಲಿಯೇ ತನ್ನ ರಚನೆ ಮಾಡಿದರೂ, ಆ ಕಾಲದ ಕಂಬನು ತನ್ನ ರಾಮಾಯಣವನ್ನು ಲಯಾನ್ವಿತವಾದ ಛಂದಸ್ಸಿನಲ್ಲಿಯೇ ನಡೆಸಿದ್ದಾನೆ. ಅದೇ ಕಾಲಕ್ಕೆ ಕನ್ನಡ ಸಾಹಿತ್ಯದಲ್ಲಿ ವೀರಶೈವ ಧರ್ಮದ ಪ್ರಭಾವದಿಂದ ಸಾಹಿತ್ಯದಲ್ಲಿ ಒಂದು ರೀತಿಯ ಬಂಡಾಯವೇ ಆರಂಭವಾಯಿತು.

ಪಂಪ, ಪೊನ್ನ, ರನ್ನರ ಹಳಗನ್ನಡದ ಮಾರ್ಗಛಂದಸ್ಸಿನಿಂದ ದೇಸಿಯಕಡೆಗೆ ಹೊರಳಿದ ಕನ್ನಡ ಸಾಹಿತ್ಯ ವೀರಶೈವ ಧರ್ಮದ ಕಾರಣದಿಂದಾಗಿ ಸಂಪೂರ್ಣವಾಗಿ ಪೂರ್ವಸಾಹಿತ್ಯಕ್ಕಿಂತ ವಿಭಿನ್ನವಾದ ದಾರಿಯಲ್ಲಿ ನಡೆದು ಜನಸಾಮಾನ್ಯವನ್ನು ಪ್ರಚೋದಿಸಿತು. ವೀರಶೈವ ವಚನಕಾರರದು ದೇಸಿಯ ಪ್ರಯೋಗದ ಒಂದು ಮುಖವಾದರೆ ಷಟ್ಪದಿ, ರಗಳೆ ಮುಂತಾದ ಛಂದಗಳಲ್ಲಿ ರಚನೆ ಮಾಡಿದ ಕವಿಗಳದು ಮತ್ತೊಂದು ಮುಖ. ತೆಲುಗು ಭಾಷೆಯಲ್ಲಿ ನಂತರ ೧೫, ೧೬ ನೇ ಶತಮಾನಗಳ ಕಾಲದಲ್ಲಿ ತಾಳ್ಳಪಾಕ ಪೆದತಿರುಮಲಾಚಾರ್ಯರು ವೇಂಕಟೇಶ್ವರ ವಚನಮುಲು ಎನ್ನುವ ಹೆಸರಿನಿಂದ ವಚನಗಳನ್ನು ರಚಿಸಿದ್ದಾರೆ. ಕನ್ನಡದ ವಚನಗಳು ಈಗ ಹಾಡುಗಳಾಗಿ ಪರಿವರ್ತನೆಗೊಂಡಿವೆ. ಆದರೆ ತೆಲುಗಿನ ವಚನಗಳು ಹಾಡುಗಳಾಗಿಲ್ಲ. ಇದಕ್ಕೆ ಕಾರಣ ಕನ್ನಡದ ವಚನಗಳಲ್ಲಿ, ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಕನ್ನಡ ಕವಿಹೃದಯದಲ್ಲಿ ಅಡಕವಾಗಿರುವ ಲಯದಮೇಲಿನ ಪ್ರೀತಿ. ದ.ರಾ.ಬೇಂದ್ರೆ, ಕುವೆಂಪು, ರಾಜರತ್ನಂರಂತಹವರ ಮತ್ತು ಈಗಿನ ಕವಿಗಳ ಕವಿತೆಗಳಲ್ಲಿಯೂ ಈ ಲಯ ಇರುವುದನ್ನು ಗಮನಿಸಬಹುದು. ಇಂದಿನ ಆಧುನಿಕ ಕನ್ನಡ ಕವಿತೆಗಳಲ್ಲಿಯೂ ಕನ್ನಡದ ವಚನಕಾರರನ್ನು ಅನುಸರಿಸಿ ಆ ಸಾಹಿತ್ಯ ಪ್ರಕಾರ ಬೇರೊಂದು ರೂಪದಲ್ಲಿ ಬೆಳೆದಂತೆ ತೆಲುಗಿನಲ್ಲಿ ವಚನ ಪ್ರಾಕಾರ ಬೆಳೆಯಲಿಲ್ಲ. ಪೆದತಿರುಮಲಾಚಾರ್ಯರು ವಚನಗಳನ್ನಲ್ಲದೆ ಶತಕ, ದ್ವಿಪದಕಾವ್ಯ, ರಗಳೆ, ಸಂಕೀರ್ತನೆಗಳು, ದಂಡಕಾದಿಗಳನ್ನೂ ಸಹ ರಚಿಸಿದ್ದಾರೆ.

ಐದನೆಯ ಶತಮಾನದಲ್ಲಿ ತಮಿಳುದೇಶದಲ್ಲಿ ಪ್ರಚುರವಾದ ಶೈವಧರ್ಮ ನಂತರ ಒಂಭತ್ತನೆಯ ಶತಮಾನಕ್ಕೆ ಕನ್ನಡ ನಾಡಿಗೆ ಬಂದು, ನಂತರ ಬಸವಣ್ಣನವರಿಂದ ಹೊಸ ಆಯಾಮವನ್ನು ಪಡೆದು, ಜಾತಿಯನ್ನು ಧಿಕ್ಕರಿಸಿ ಸಮಾಜದಲ್ಲಿ ಸಮತೆಯನ್ನು ಸ್ಥಾಪಿಸಿ, ಅದೊಂದು ಸಾಮಾಜಿಕ ಚಳುವಳಿಯಾಗಿ, ಅಲ್ಲಿಂದ ಆಂಧ್ರಭೂಮಿಗೆ ಬಂದು ಅಲ್ಲಿಂದ ಮತ್ತೆ ತಮಿಳುನಾಡನ್ನು ಪ್ರವೇಶಿಸಿತು.

ಪಾಲ್ಕುರಿಕಿ ಸೋಮನಾಥನ ಕಾಲಕ್ಕೆ ಆಗಲೇ ಕರ್ನಾಟಕದಲ್ಲಿ ವೀರಶೈವ ತುಂಬಾ ಪ್ರಚಾರದಲ್ಲಿತ್ತು. ಅದರ ಪ್ರಭಾವ ಹಾಗೂ ಬಸವಣ್ಣನವರ ಕೀರ್ತಿ ತೆಲುಗುದೇಶದಲ್ಲೂ

ವ್ಯಾಪ್ತವಾಗಿತ್ತು. ಆದರೂ ವೀರಶೈವ ಕರ್ನಾಟಕದಲ್ಲಿ ವ್ಯಾಪಿಸಿದಂತೆ ತೆಲುಗು ಭೂಭಾಗದಲ್ಲಿ ವ್ಯಾಪಿಸಲಿಲ್ಲ. ಅದಕ್ಕೆ ಇಲ್ಲಿನ ಶೈವರಲ್ಲಿ ಆರಾಧ್ಯಬ್ರಾಹ್ಮಣ, ಮತ್ತು ಸ್ಮಾರ್ತಬ್ರಾಹ್ಮಣರ ಪ್ರಭಾವ ಹೆಚ್ಚಾಗಿದ್ದುದು ಸಹ ಒಂದು ಕಾರಣ.

ಕನ್ನಡದ ದೇಸಿ ರಚನಾವೈಭವವನ್ನು ಗ್ರಹಿಸಿದ ಸೋಮನನು ಅವರಂತೆ ತ್ರಿಪದಿ, ಷಟ್ಪದಿ ಛಂದಗಳನ್ನು ಸ್ವೀಕರಿಸಲಿಲ್ಲ. ರಗಳೆಗಳನ್ನು ಉದಾಹರಣೆಗಳನ್ನು ರಚಿಸಿದನು. ವಚನಗಳನ್ನು ಬರೆಯದಿದ್ದರೂ ಗದ್ಯಗಳನ್ನು ರಚಿಸಿದ್ದಾನೆ. ತೆಲುಗಿನಲ್ಲಿನ ಛಂದೋರಹಿತವಾದ ರಚನೆಯನ್ನು ವಚನ ಎನ್ನುತ್ತಾರೆ. ಸಂಸ್ಕೃತದಲ್ಲಿ ಇದನ್ನೇ ಗದ್ಯ ಎನ್ನುವುದುಂಟು. ಆದರೆ ಸೋಮನಾಥನು ರಚಿಸಿದ ಸಂಸ್ಕೃತ ಗದ್ಯಗಳಿಗೆ ಲಯಬದ್ಧವಾದ ಛಂದಸ್ಸು ಇದೆ. ಸೋಮನಾಥನು ಕನ್ನಡದಲ್ಲಿ ಹರಿಹರನ ರಗಳೆಗಳಿಗಿರುವ ಸುದೀರ್ಘತೆ ಎನ್ನುವ ಲಕ್ಷಣವನ್ನು ಹೊಂದಿರುವಂತೆ ತೆಲುಗಿನಲ್ಲಿ ದ್ವಿಪದಗಳನ್ನು ರಚಿಸಿದ್ದಾನೆ. ಸೋಮನನು ಸೃಜಿಸಿಕೊಂಡ ಹೊಸ ದಾರಿಯಿದು. ತೆಲುಗಿನ ತರುವೋಜವು ಎರಡು ದ್ವಿಪದ ಪಾದಗಳಾಗುತ್ತದೆ. ಈ ದ್ವಿಪದ ಛಂದಸ್ಸು ಸಹ ಜನಪದ ಗೀತೆಗಳಲ್ಲಿನ ರಚನೆಗಳನ್ನೇ ಹೋಲುವಂಥದ್ದು. ಜನಪದಗೀತೆಗಳ ಈ ರಚನಾಪದ್ಧತಿಗೆ ಕಾವ್ಯಗೌರವವನ್ನು ಸಲ್ಲಿಸಿದ ಸೋಮನನು ಅದಕ್ಕೆ ಸಾಹಿತ್ಯಚರಿತ್ರೆಯಲ್ಲೇ ಅಮೋಘವಾದ ಸ್ಥಾನವನ್ನು ಒದಗಿಸಿ ಕೊಟ್ಟನು.

ದ್ವಿಪದ ಛಂದಸ್ಸು ಸೋಮನಾಥನು ಸೃಷ್ಟಿಸಿದ್ದಲ್ಲ. ತೆಲುಗಿನಲ್ಲಿ ನನ್ನಯನಿಗೆ ಪೂರ್ವದಲ್ಲೇ ಈ ಛಂದಸ್ಸಿನ ಲಕ್ಷಣವಿರುವ ರಚನೆಗಳು ಸಿಗುತ್ತವೆ. ತಮಿಳಿನಲ್ಲಿಯೂ ಈ ಲಕ್ಷಣವಿರುವ ರಚನೆ ಸಿಗುತ್ತವೆ. ಆದರೆ ಅನೇಕ ಸಂಸ್ಕೃತ ದೇಸಿ ಛಂದಸ್ಸುಗಳನ್ನು ಬಳಸಿದ ನನ್ನಯ್ಯನು ತನ್ನ ಭಾರತ ರಚನೆಯಲ್ಲಿ ದ್ವಿಪದವನ್ನು ಬಳಸಿಲ್ಲ ಎನ್ನುವುದು ಒಂದು ಆಶ್ಚರ್ಯಕರವಾದ ಸಂಗತಿ. ನನ್ನಯ್ಯನು ತರುವೋಜವನ್ನು ಬಳಸಿದ್ದಾನೆ. ತರುವೋಜದಲ್ಲಿ ದ್ವಿಪದ ಅಡಕವಾಗಿರುತ್ತದೆ. ಬೃಹತ್ ಗಾತ್ರದ ಕಾವ್ಯನಿರ್ಮಾಣಕ್ಕೆ ದ್ವಿಪದವನ್ನು ಗ್ರಹಿಸಿ ಅದಕ್ಕೆ ಒಂದು ಮಾನ್ಯತೆಯನ್ನು ನೀಡಿ ನಂತರ ಆ ಛಂದಸ್ಸಿನಲ್ಲಿ ಅನೇಕ ಕವಿಗಳು ಕಾವ್ಯವನ್ನು ನಿರ್ಮಿಸುವುದಕ್ಕೆ ಪ್ರೇರಣೆ ನೀಡಿದ ಸೋಮನಾಥನು ದ್ವಿಪದ ಛಂದಸ್ಸಿನ ವಿಷಯದಲ್ಲಿ ಒಬ್ಬ ಹರಿಕಾರನೆಂದರೆ ತಪ್ಪಾಗಲಿಕ್ಕಿಲ್ಲ. ಕನ್ನಡದ ಹರಿಹರನ ಸುದೀರ್ಘರಗಳೆಗಳು ಸೋಮನಾಥನಿಗೆ ಈ ಸುದೀರ್ಘ ದ್ವಿಪದ ಕಾವ್ಯರಚನೆಗೆ ಪ್ರೇರಣೆ ನೀಡಿರಬಹುದು. ಸೋಮನನು ಪ್ರಾರಂಭಮಾಡಿದ ದ್ವಿಪದ ಛಂದಃಕಾವ್ಯರಚನೆಯನ್ನು ನಂತರಕಾಲದಲ್ಲಿ ಅನೇಕರು ಅನುಸರಿಸಿದರು. ಗೋನ ಬುದ್ಧಾರೆಡ್ಡಿ ಮೊದಲು ಸುಮಾರು ಅರವತ್ತುಮಂದಿಗಿಂತಲು ಹೆಚ್ಚಿನ ಕವಿಗಳು

ತೆಲುಗಿನಲ್ಲಿ ದ್ವಿಪದಕಾವ್ಯಗಳನ್ನು ರಚಿಸಿದ್ದಾರೆ. ಕನಕದಾಸರ ನಳಚರಿತ್ರೆಗೆ ಗುತ್ತಿ ಚಂದ್ರಶೇಖರರೆಡ್ಡಿಯವರ ತೆಲುಗಿನ ಅನುವಾದ ರಚನೆ ಇಂದಿಗೂ ಈ ಪರಂಪರೆ ಮುಂದುವರಿಯುತ್ತಿರುವುದಕ್ಕೆ ನಿದರ್ಶನವಾಗಿದೆ.

ಹೀಗೆ ಸೋಮನನು ಪೌರಾಣಿಕ ವಸ್ತುವನ್ನಲ್ಲದೆ ಸಮಕಾಲೀನ ವ್ಯಕ್ತಿಗಳ ಇತಿವೃತ್ತವನ್ನೇ ಸ್ವೀಕರಿಸುವುದರ ಮೂಲಕ ವಸ್ತುವಿನ ವಿಷಯದಲ್ಲೂ, ದ್ವಿಪದಛಂದಸ್ಸನ್ನು ಬಳಸುವುದರ ಮೂಲಕ ಛಂದಸ್ಸಿನಲ್ಲೂ, ಹೊಸತನವನ್ನು ಬೀರುವ ಸ್ವಾತಂತ್ರ್ಯದ ಜೊತೆಗೆ ಲೋಕದಲ್ಲಿನ ಪಾತ್ರಗಳಿಗೆ ಪೌರಾಣಿಕ ಪಾತ್ರಗಳ ಜೊತೆ ಸಂಬಂಧವನ್ನು ಕೂಡಿಸುವುದರ ಮೂಲಕ ಆಧ್ಯಾತ್ಮಿಕ ಪ್ರಚಾರ ಬಲವಾಗಿ ಜನರಲ್ಲಿ ಹರಡುವಂತೆ ಮಾಡಿದ್ದಾನೆ. ಅಷ್ಟೇ ಅಲ್ಲ ಯಾವಕಾಲದಲ್ಲಾದರೂ ಜನರು ಪವಾಡಗಳಿಗೆ ಮನವೊಲಿಯುವುದು ಸಹಜ. ಇದನ್ನು ಅರಿತ ಸೋಮನನು ತನ್ನ ರಚನೆಯ ಉದ್ದಕ್ಕೂ ಶಿವನ ಮತ್ತು ಶಿವಭಕ್ತರ ಮಹಿಮೆಗಳನ್ನು ಬಾಯಿ ತುಂಬ ವರ್ಣಿಸಿದ್ದಾನೆ. ಆ ವರ್ಣನೆಗಳ ಸಂದರ್ಭದಲ್ಲಿ ತಾನು ಭಾವಾವೇಶಕ್ಕೆ ಒಳಗಾಗುವುದಲ್ಲದೆ ಓದುಗರನ್ನು ಸಹ ಭಾವಾವಿಷ್ಟರನ್ನಾಗಿ ಮಾಡಬಲ್ಲ ಪವಾಡ ಸದೃಶವಾದ ವಿಶೇಷ ಪ್ರತಿಭೆ ಸೋಮನಾಥನದು.

ಗುರುಭಕ್ತಿ ಪ್ರತಿಪಾದನೆ

ಹರನು ಮುನಿದರೆ ಗುರುಕಾಯುತ್ತಾನೆ, ಆದರೆ ಗುರುವು ಮುನಿದರೆ ಕಾಯುವರು ಮತ್ತಾರೂ ಇಲ್ಲ ಎನ್ನುವುದು ವೀರಶೈವರ ಗುರುಭಕ್ತಿಯ ನಿಲುವು. ಮಾಧ್ವಸಂಪ್ರದಾಯದಲ್ಲಿಯೂ ಈ ನಿಲುವಿನ ಪ್ರಭಾವವನ್ನು 'ಹರೌ ರುಷ್ಟೇ ಗುರುಸ್ತ್ರಾತಾ, ಗುರೌ ರುಷ್ಟೇ ನ ಕಶ್ಚನ' ಎನ್ನುವ ಮಾತಿನಲ್ಲಿ ಕಾಣಬಹುದು. ಪುರಾತನ ಪ್ರಕರಣದಲ್ಲಿ ಗುರುಭಕ್ತಯ್ಯನ ಗುರುಭಕ್ತಿಯನ್ನು ನಿರೂಪಿಸುವ ಸಂದರ್ಭದಲ್ಲಿ ಸೋಮನಾಥನು ಹೀಗೆ ಹೇಳಿದ್ದಾನೆ.

"ಗುರುಭಕ್ತಿಯ ಮಹಿಮೆಯನ್ನು ಯಾರು ತಿಳಿಯಬಲ್ಲರು? ಗುರುಮಹಿಮೆಯನ್ನು ಗುರು ಮಾತ್ರ ಅರಿಯಬಲ್ಲನು. ಹರನಿಗೂ ಸಾಧ್ಯವಲ್ಲ. ಗುರುಭಕ್ತಿ ಮಹಿಮೆ ಪಾಪಮೇಘಗಳಿಗೆ ಪ್ರಭಂಜನ. ಪಾಪವೆನ್ನುವ ಮೇಘಗಳನ್ನು ಅದು ಚೆಲ್ಲಾಪಿಲ್ಲಿ ಮಾಡುತ್ತದೆ. ಆದು ಕಾಮವನವನ್ನು "ದಹಿಸುವ ದಾವಾಗ್ನಿ. ಆ ಗುರುಭಕ್ತಿ ದುಸ್ತರ ದುಃಖ ಧೂಮಕೇತು" ಗುರುಭಕ್ತಿ ಕರ್ಮಸಾಗರಕ್ಕೆ ಬಡಬಾಗ್ನಿ. ಆ ಗುರುಭಕ್ತಿ ಜನ್ಮ ಎನ್ನುವ ಮದಗಜಕ್ಕೆ ಕ್ರೂರಸಿಂಹ. ಸಾವಿರಮಾತೇಕೆ? ಗುರುಭಕ್ತಿ ಅಪುನರಾವೃತ್ತಿಹೇತುವು. (ಮತ್ತೆ ಜನ್ಮ ಇಲ್ಲದಂತೆ ಮಾಡುವಂಥದ್ದು). ಗುರುಭಕ್ತಿ ತಾಯಿಯಂತೆ ಎಲ್ಲ ರೀತಿಯಲ್ಲೂ ರಕ್ಷಿಸುತ್ತದೆ. ಗುರುಭಕ್ತಿ ಸೋದರನಂತೆ ಆಲಂಬನೆಯನ್ನು ನೀಡುತ್ತದೆ. ತಂದೆಯಂತೆ ವಿನಯವನ್ನು ಕಲಿಸುತ್ತದೆ.

ತಾತನಂತೆ ರಕ್ಷಿಸುತ್ತದೆ. ವೈದ್ಯನಾಗಿ ರೋಗ ನಿವಾರಣೆ ಮಾಡುತ್ತದೆ. ಆದ್ಯನಾಗಿ ಬೋಧಿಸುತ್ತದೆ.

ಗುರುಭಕ್ತಿ ಇಲ್ಲದೆ ಇತರ ಕೋಟಿಕೋಟಿ ರೀತಿಯ ಭಕ್ತಿಯನ್ನು ತೋರಿದರೂ ಅದು ನಿಷ್ಫಲ. ಹರಭಕ್ತಿಗೆ ಗುರುಭಕ್ತಿಯೇ ಸರಿಯಾದ ಮಾರ್ಗ. ಬಲವಾದ ಬೆಂಬಲ. ಸಡಿಲದ ಆಧಾರ ಗುರುಭಕ್ತಿ ಮಾತ್ರ. ಗುರುಭಕ್ತಿಯ ಬಯಕೆ ಇಲ್ಲದೆ ಹರಭಕ್ತಿಯ ನೈಪುಣ್ಯ ಸಿದ್ಧಿಸದು. ಹರನಲ್ಲಿ ಭಕ್ತಿಯನ್ನು ಮೂಡಿಸುವುದು ಗುರುಭಕ್ತಿ ಮಾತ್ರ. ಅದೇ ಎರಡಕ್ಕು ಅನುಸಂಧಾನ. ಎರಡನ್ನು ಜೊತೆಗೂಡಿಸುವ ಕೊಂಡಿ. ಹರಭಕ್ತಿಗೆ ಕುದುರು ಗುರುಭಕ್ತಿ. ಆದಕಾರಣ ಸಕಲ ಸಂಪತ್ತಿಗೆ, ಸಕಲಶಕ್ತಿಗಳಿಗೆ, ಸಕಲ ಮೋಕ್ಷಗಳಿಗೆ, ಸಕಲ ಸಿದ್ಧಿಗಳಿಗೆ, ಸಕಲೇಶ್ವರನ ಭಕ್ತಿಗೆ ಗುರುಭಕ್ತಿ ಮೂಲಮಂತ್ರ. ಅದೇ ಪ್ರಧಾನಹೇತು. ಆದಕಾರಣ ಸಾಧಕನು ಪ್ರಾಣ, ಧನ, ಶರೀರಗಳನ್ನು ಗುರುವಿಗೆ ಅಧೀನಮಾಡಬೇಕು. ಗುರುಪದಕ್ಕೆ ಅರ್ಪಿಸಬೇಕು. ಸದ್ಗುರುವಿನ ಸೇವೆಯೇ ಸಕಲಾರ್ಥಸಾಧನೆಯೆಂದು ಭಾವಿಸಬೇಕು" ಎನ್ನುವ ಮಾತುಗಳನ್ನು ಇಲ್ಲಿ ನಿದರ್ಶನವಾಗಿ ಸ್ವೀಕರಿಸತಕ್ಕದ್ದು. ಗುರುಭಕ್ತಾಂಡಾರಿಯ ಕಥೆಯಲ್ಲಿಯೂ ಈ ಗುರುಭಕ್ತಿಯನ್ನು ನೋಡಬಹುದು.

ಶೈವಧರ್ಮದಲ್ಲಿ ಗುರುಲಿಂಗಜಂಗಮವೆನ್ನುವ ಶಬ್ದದ ಬಳಕೆ ಹಲವುಸಲ ಕಂಡುಬರುತ್ತದೆ. ಇಲ್ಲಿ ಒಂದು ಸ್ವಾರಸ್ಯವಿದೆ ಎನಿಸುತ್ತದೆ. ಗುರು ಶಬ್ದಕ್ಕೂ ಜಂಗಮ ಶಬ್ದಕ್ಕೂ ನಡುವೆ ಲಿಂಗ ಶಬ್ದ ಇದೆ. ನಡುವಿನ ಲಿಂಗ ಜಂಗಮವೂ ಹೌದು ಗುರುವೂ ಹೌದು. ತುರೀಯ ಸ್ಥಿತಿಯಲ್ಲಿ ಈ ಮೂರಕ್ಕೂ ಅಭೇದದ ಚಿಂತನೆ ಇದೆ. ಅನೇಕ ಶರಣರ ಕಥೆಗಳ ಮೂಲಕ ಸೋಮನಾಥನು ಇದನ್ನು ನಿರೂಪಿಸುತ್ತಾನೆ. ಶರಣರ ಕಥೆಗಳಲ್ಲಿ ಮನೆಗೆ ಬಂದ ಜಂಗಮವನ್ನು, ಗುರುಲಿಂಗವೆಂದೇ ಭಾವಿಸಿರುವುದನ್ನು ನಾವು ಗಮನಿಸಬಹುದು. ಸರ್ವೇಶ್ವರನೇ ಗುರುರೂಪದಲ್ಲಿ ಇಷ್ಟಲಿಂಗವನ್ನು ದಯಪಾಲಿಸಿ ಇಷ್ಟಲಿಂಗದ ಅಂದರೆ ಗುರುವಿನಿಂದ ಅನುಗ್ರಹಿಸಲ್ಪಟ್ಟು ಜೀವನದ ಉದ್ದಕ್ಕೂ ತನ್ನ ಶರೀರದಮೇಲೆ ಇರುವ ಲಿಂಗದ ರೂಪದಲ್ಲಿ ಭಕ್ತನು ಮಾಡಿದ ಪೂಜೆ ಅರ್ಚನೆ ಇತ್ಯಾದಿಗಳನ್ನು ಸ್ವೀಕರಿಸಿ, ಅವನ ಧಾರ್ಮಿಕ ಜೀವನವನ್ನೂ ಪರೀಕ್ಷಿಸಿ, ಅದರಲ್ಲಿ ಗೆದ್ದವನಿಗೆ ಲಿಂಗಾಂಗ ಸಾಮರಸ್ಯವನ್ನು (ಜೀವಶಿವೈಕ್ಯವನ್ನು) ದಯಪಾಲಿಸಿ ಉದ್ಧರಿಸುತ್ತಾನೆ ಎನ್ನುವುದು ವೀರಶೈವರ ಅಚಂಚಲ ವಿಶ್ವಾಸ. ಇದನ್ನು ನಾವು ಸೋಮನಾಥನ ಎಲ್ಲ ರಚನೆಗಳಲ್ಲಿ ಕಾಣಬಹುದು. ಗುರುಲಿಂಗಜಂಗಮಗಳಲ್ಲಿ ಲಿಂಗವೆಂದರೆ ಇಷ್ಟಲಿಂಗವೇ. ದೇವಾಲಯದಲ್ಲಿನ ಲಿಂಗವೆಂದಲ್ಲ. ಗುರುಲಿಂಗಜಂಗಮಗಳಲ್ಲಿ ಅಭೇದವನ್ನೇ ನೋಡಬೇಕು. ಭೇದವನ್ನಲ್ಲ.

ಕಾವ್ಯರಚನೆಗೆ ಕಾರಣ ಮತ್ತು ಪ್ರೇರಣೆ

ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಕವಿಗಳೂ ತಮ್ಮ ಕಾವ್ಯ ರಚನೆಗೆ ಕಾರಣವೇನು, ಪ್ರೇರಣೆ ಯಾವುದು? ರಚನೆಯ ಉದ್ದೇಶವೇನು ಎನ್ನುವುದನ್ನು ಹೇಳಿಕೊಂಡಿದ್ದಾರೆ. ಕೆಲವರದು ಸಹಜವಾದ ನಿರೂಪಣೆಯೆನಿಸಿದರೆ ಕೆಲವರು ಕಲ್ಪಿಸಿ ಹೇಳಿರುವರೇನೋ ಎಂಬಂತೆ ತೋಚುವ ನಿರೂಪಣೆಯನ್ನು ಹೇಳಿದ್ದಾರೆ. 'ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ' ಎಂದು ಹೇಳಿಕೊಳ್ಳುವಷ್ಟು ರಾಮಾಯಣದ ರಚನೆಗಳು ಬಂದಿರುವಾಗ ಮತ್ತೆ ನೀನೇಕೆ ರಾಮಾಯಣ ಬರೆಯುವುದು? ಎನ್ನುವ ಪ್ರಶ್ನೆಗೆ ಉತ್ತರವಾಗಿ ತೆಲುಗಿನ ಮಹಾಕವಿ ವಿಶ್ವನಾಥ ಸತ್ಯನಾರಾಯಣರವರು ತಮ್ಮ ರಾಮಾಯಣ ಕಲ್ಪವೃಕ್ಷದಲ್ಲಿ 'ಲೋಕದಲ್ಲಿ ತಿಂದ ಅನ್ನವನ್ನೇ ಮತ್ತೆ ಮತ್ತೆ ತಿನ್ನುತ್ತಿದ್ದಾರೆ ಅವರವರ ರುಚಿ ಅವರದು ಆದಕಾರಣ. ಮಾಡಿದ ಸಂಸಾರವನ್ನೇ ಮಾಡುತ್ತಾರೆ. ಅವರವರ ಅನುಭೂತಿ ಅವರದಾದಕಾರಣ. ಸ್ಮರಿಸಿದ ರಾಮನನ್ನೇ ನಾನೂ ಸ್ಮರಿಸುತ್ತಿದ್ದೇನೆ, ನನ್ನ ಭಕ್ತಿಯ ರಚನೆ ನನ್ನದಾದಕಾರಣ' ಎನ್ನುತ್ತಾರೆ. ಇಲ್ಲಿ ಕಾರಣ ಸ್ಪಷ್ಟ ರಾಮನಮೇಲಿನ ಭಕ್ತಿಯಿಂದ ನಾನು ರಚಿಸುತ್ತಿದ್ದೇನೆ ಎಂದು ಹೇಳಿರುವುದು ಸ್ಪಷ್ಟ.

ತನ್ನ ಪ್ರಭುವಾದ ಅರಿಕೇಸರಿಯ ಕಥಾಭಿತ್ತಿಯಲ್ಲಿ ಅರ್ಜುನನ ಕಥೆ ಚಿತ್ರಿಸುವುದು ಪಂಪನ ಉದ್ದೇಶ. ಇದು ಸಹ ಸ್ಪಷ್ಟವಾಗಿದೆ. 'ವೇದವ್ಯಾಸರಿಂದ ಅಭಿಹಿತವಾದ ಭಾರತ ಬದ್ಧನಿರೂಪಿತಾರ್ಥ ಸ್ಪಷ್ಟವಾಗುವಂತೆ ಭಾರತವನ್ನು ರಚಿಸು' ಎಂದು ರಾಜರಾಜ ನರೇಂದ್ರನು ಕೇಳಿದ್ದಕ್ಕಾಗಿ ತೆಲುಗಿನ ಆದಿಕವಿ ನನ್ನಯನು ಭಾರತ ರಚನೆಗೆ ತೊಡಗುತ್ತಾನೆ. ಆದರೆ ತಿಕ್ಕನ ತನ್ನ ಕನಸಿನಲ್ಲಿ ತನ್ನ ತಂದೆ ಕೊಮ್ಮನಾಮಾತ್ಯನು ಹರಿಹರನಾಥನ ಹತ್ತಿರಕ್ಕೆ ಕರೆದೊಯ್ದಂತೆ, ಅಲ್ಲಿ ತಾನು ಹರಿಹರನನ್ನು "ಕಿಮಸ್ಥಿಮಾಲಾಂ ಕರಮುಕೌಸ್ತುಭಂವಾ ಪರಿಷ್ಕ್ರಿಯಾಯಾಂ ಬಹುಮನ್ಯಸೇ ತ್ವಂ? ಕಿಂ ಕಾಲಕೂಟಂ ಕಿಮುವಾ ಯಶೋದಾಸ್ತನ್ಯಂ ತವ ಸ್ವಾದು ವದ ಪ್ರಭೋ" (ಪ್ರಭೋ, ಅಸ್ಥಿಮಾಲೆ, ಕೌಸ್ತುಭಗಳಲ್ಲಿ ಅಲಂಕಾರವಾಗಿ ನೀನು ಯಾವುದನ್ನು ಇಷ್ಟಪಡುವೆ? ಕಾಲಕೂಟ ಯಶೋದೆಯ ಮೊಲೆಹಾಲು ಇವುಗಳಲ್ಲಿ ಯಾವುದು ನಿನಗೆ ಸ್ವಾದು? ಹೇಳು) ಎಂದು ಸ್ತುತಿಸಿದಂತೆ, ಆಗ ಹರಿಹರನಾಥನು ಆಜ್ಞಾಪಿಸಿದ ರೀತಿಯಲ್ಲಿ ತಾನು ಭಾರತ ರಚಿಸಿದಂತೆ ಹೇಳಿಕೊಂಡಿದ್ದಾನೆ. ತನ್ನ ಕಾವ್ಯವನ್ನು ಹರಿಹರನಾಥನಿಗೇ ಅಂಕಿತ ಮಾಡಿದ್ದಾನೆ.

ಪಾಲ್ಕುರಿಕಿಯ ಸೋಮನಾಥನು ಏನು ಹೇಳಿದರೂ ಒಂದು ಪ್ರತ್ಯೇಕತೆ ಇರುತ್ತದೆ. ಅಂತೆಯೇ ತನ್ನ ಪಂಡಿತಾರಾಧ್ಯಚರಿತ್ರೆಯ ರಚನೆಗೆ ಪ್ರೇರಣೆ ಮತ್ತು ಕಾರಣಗಳನ್ನು ಸಹ ಸೋಜಿಗವೆನಿಸುವ ರೀತಿಯಲ್ಲಿ ಹೇಳಿದ್ದಾನೆ. ಸಾಹಿತ್ಯ ಚರಿತ್ರೆಯಲ್ಲಿ ಹಿಂದೆ ಯಾರೂ ಹೇಳದ ರೀತಿಯಲ್ಲಿ ಸೋಮನಾಥ ನಿರೂಪಿಸಿದ್ದಾನೆ.

ಒಂದು ದಿನ ಶ್ರೀಶೈಲದಲ್ಲಿ ಉನ್ನತವಾದ ಮಂಟಪದ ಸಭೆಯಲ್ಲಿ ಶಿವಭಕ್ತಿಗೋಷ್ಠಿಯಲ್ಲಿ ನಿರತನಾಗಿದ್ದ ಶ್ರೀಮಲ್ಲಿಕಾರ್ಜುನ ದೇವನು, ನೂತನ ಪುರಾತನ ಭಕ್ತರ ಮಹಿಮೆಯನ್ನು ಪ್ರಶಂಸೆ ಮಾಡುತ್ತಾ ತನ್ನ ಕಡೆಗಣ್ಣಿನಿಂದ ಆನಂದಾಶ್ರು ಬಿಂದುಗಳು ಸುರಿಸುತ್ತಾ, ಸೋಮನಾಥನನ್ನು ಕಂಡು ಜೇನಿನಂತೆ ಮಧುರವಾದ ಮಾತುಗಳಿಂದ ಕಿವಿಗೆ ಇಂಪಾದ ರೀತಿಯಲ್ಲಿ ಹೀಗೆ ನುಡಿಯತ್ತಾನೆ.

"ಸೋಮನಾಥಾ! ನನ್ನ ಭಕ್ತರು ವೀರಮಾಹೇಶ್ವರಾಚಾರದಲ್ಲಿ ಸಂತತವಾಗಿ ಇರುವವರು, ಅವರ ಮಹಿಮೆಗಳಲ್ಲಿ ಕೆಲವು ಪ್ರಕಟವಾಗಿ ಕಂಡರಾದರೆ ಇನ್ನೂ ಲೋಕದ ಜನರಿಗೆ ತಿಳಿಯದ ಮಹಿಮೆಗಳೂ ಅನೇಕ ಇವೆ. ಅವರು ಒಪ್ಪುವ ರೀತಿಯಲ್ಲಿ ನೂತನವಾಗಿ ಲೋಕ ಮೆಚ್ಚುವಂತೆ ಹಿಂದೆ ನೀನು ಬಸವಪುರಾಣವನ್ನು ರಚಿಸಿದ. ಆ ಬಸವ ಪುರಾಣ ಪ್ರಬಂಧದಲ್ಲಿ ಕೀರ್ತಿಪಡೆದ ಪುರಾತನ ಭಕ್ತರನ್ನು ಕುರಿತ ಕಥನವನ್ನು ಇತಿಹಾಸದ ರೀತಿಯಲ್ಲಿ ರಚಿಸಿದೆ. ಶ್ರೇಷ್ಠವಾದ ವೀರಭಕ್ತಿಯಿಂದ ವೈದಿಕವಾದ ರೀತಿಯಲ್ಲಿ ಚತುರ್ವೇದ ಸಾರವನ್ನು ರಚಿಸಿದಿ.

ಈಗ ಕಿವಿಗೆ ಇಂಪಾಗುವಂತೆ ಗುರು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಚರಿತ್ರೆಯನ್ನು ವರ್ಣಿಸು. ಮಿಕ್ಕ ಪರಿಮಿತ ಪುರಾತನ ಭಕ್ತರ ಚರಿತೆಯನ್ನು ಇತಿಹಾಸ ರೀತಿಯಲ್ಲಿ ಪಂಡಿತನ ಚರಿತ್ರೆಯಲ್ಲಿ ಜೋಡಿಸು. ಬಂಧುರವಾದ ಆ ಮಹಾಭಕ್ತರ ಮಹಿಮೆಯನ್ನು ಕುರಿತು ರಚಿಸು. ಅದಕ್ಕೆ ತಕ್ಕ ಅಸಮಾನವಾದ ವಾಕ್ ಪಟುತ್ವವನ್ನು ರಚನಾಶಕ್ತಿಯನ್ನು ಅತಿಶಯವಾಗಿ ನೀಡಿದ್ದೇನೆ" ಎಂದು ಅನುಗ್ರಹವನ್ನು ಪ್ರಸಾದಿಸಿದಂತೆ ಸೋಮನಾಥನು ಹೇಳಿಕೊಂಡಿದ್ದಾನೆ. ರಚಿಸು ಎಂದು ಹೇಳಿದವನು ಶಿವನೇ. ಅದಕ್ಕೆ ಬೇಕಾದ ರಚನಾ ಶಕ್ತಿಯನ್ನು ನೀಡಿದವನೂ ಶಿವನೇ.

ಬಸವಪುರಾಣವನ್ನು ಬರೆದ ಸಂದರ್ಭವನ್ನು ಕುರಿತು ಸೋಮನಾಥನು ತನ್ನ ಬಸವಪುರಾಣದಲ್ಲಿ ಶ್ರೀಶೈಲಕ್ಕೆ ಪೂರ್ವದ್ವಾರವೆನಿಸಿದ ತ್ರಿಪುರಾಂತಕದಲ್ಲಿ ಶಿವನ ಸಾಕಾರವೆನಿಸಿದ ಜಂಗಮಶ್ರೇಷ್ಠನು, ಲಿಂಗೈಕ್ಯವರ್ತಿಯೂ ಪಂಡಿತಾರಾಧ್ಯರ ಕೃಪೆಗೆ ಪಾತ್ರನೂ, ಆದ ಕರಸ್ಥಲಿ ಸೋಮನಾಥಯ್ಯನವರು ಬಸವಣ್ಣನವರ ಕೃಪೆಗೆ ಪಾತ್ರರಾಗಿ ತತ್ತ್ವನಿರ್ಣಯವಾಗುವಂತೆ ಗೋಷ್ಠೀ ಸುಖಸ್ಥಿತಿಯಲ್ಲಿರುವಾಗ, ಮಲ್ಲಿನಾಥನೂ, ರೆಂಟಾಲ ಮಲ್ಲಿನಾಥನೂ, ಹರನಿಗೆ ತನ್ನ ಕಣ್ಣನ್ನು ಪುಷ್ಪವಾಗಿ ಸಮರ್ಪಿಸಿದ ದೋಮಾಂಬೆ, ಧೀರನಾದ ಮುನ್ನಯದೇವ ಯೋಗೀಶನ ಶಿಷ್ಯನೂ ಮತ್ತು ನಾರಯಾಂಕನ ಮಗನೂ ಆದ ಸಹಸ್ರಾವಧಾನಿ ಗೋಡಗಿ ತ್ರಿಪುರಾರಿಯೂ ಮುಂತಾದ ಭಕ್ತರು ಚಿರತರ ಮಹಿಮೆಯಿಂದ ಶೋಭಿಸುತ್ತಿರುವಾಗ ಸೋಮನಾಥನು ತನಗೆ ಬಸವಪುರಾಣವನ್ನು

ಹೇಳಬೇಕೆನ್ನುವ ಇಷ್ಟ ಉಂಟಾಗಿದೆಯೆಂದೂ ಆ ಕಥಾಸೂತ್ರವನ್ನು ತಿಳಿಸಿ ಧನ್ಯನನ್ನು ಮಾಡಬೇಕೆಂದೂ ಕೇಳಿಕೊಂಡಂತೆ ಹೇಳಿಕೊಂಡಿದ್ದಾನೆ.

ಕೇವಲ ಕಥಾಸೂತ್ರಮಾತ್ರ ಆ ಹಿರಿಯರು ಹೇಳಿದ್ದು. ಆದರೆ ಆ ಸೂತ್ರಕ್ಕೆ ಹಲವು ಭಕ್ತರ ಕಥೆಗಳ ಜೊತೆಗೆ ಪೌರಾಣಿಕ ಕಥಾಗುಚ್ಛಗಳನ್ನು ಜೋಡಿಸಿ, ಸಮಾಜದಲ್ಲಿನ ವ್ಯಕ್ತಿಗಳ ಜೊತೆಗೆ ಪೌರಾಣಿಕ ಪಾತ್ರಗಳನ್ನೂ ಜೋಡಿಸಿ ಸನ್ನಿವೇಶ ರಚನೆ ಮಾಡಿ ಸುಂದರವಾದ ಕಾವ್ಯಮಾಲೆಯಾಗಿ ಸಮರ್ಪಿಸಿದ ಘನತೆ ಸೋಮನಾಥನದೇ! ಈದೃಶವಾದ ಪ್ರತಿಭೆಯನ್ನು ಆತನ ಬಸವಪುರಾಣ, ಪಂಡಿತಾರಾಧ್ಯ ಚರಿತ್ರೆಗಳೆರಡರಲ್ಲೂ ನಾವು ಕಾಣಬಹುದು.

ನವೀನಗುಣ ಸನಾಥ ಸೋಮನಾಥ

ಹೊಸತನ ಎನ್ನುವುದು ಸೋಮನಾಥಕವಿಯಲ್ಲಿ ಎದ್ದು ಕಾಣುವ ಗುಣ. ಅದಕ್ಕು ಮುಂಚೆ ಸಂಸ್ಕೃತದ ಮಹಾಕಾವ್ಯಗಳಲ್ಲಿನ ಇತಿವೃತ್ತವನ್ನು ಗ್ರಹಿಸಿ ಕಾವ್ಯವನ್ನು ಹೆಣೆಯುವ ಪದ್ಧತಿ ಪ್ರಸಿದ್ಧವಾಗಿತ್ತು. ಆದರೆ ಸೋಮನಾಥನು ಈ ದಾರಿಯನ್ನು ಬಿಟ್ಟು ಹೊಸದಾರಿಯನ್ನು ನಿರ್ಮಿಸಿ ತೋರಿಸಿದನು. ಲೋಕದಲ್ಲಿನ ವ್ಯಕ್ತಿಯನ್ನು ಗ್ರಹಿಸಿ ಅವನ ಚರಿತ್ರೆಗೆ ಪೌರಾಣಿಕತೆಯನ್ನು ಗಂಟುಹಾಕಿ, ಅವನ ಸಮಕಾಲೀನರಾದ ಮತ್ತಿತರ ವ್ಯಕ್ತಿಗಳ ಚರಿತ್ರೆಗಳನ್ನು ಜೋಡಿಸಿ ಮಹತ್ತರ ಕಾವ್ಯವನ್ನು ನಿರೂಪಿಸಿದ ನೈಪುಣ್ಯ ಸೋಮನಾಥನದು. ಇದಕ್ಕೆ ತಮಿಳುನಾಡಿನ ಪ್ರಸಿದ್ಧವಾದ ಶಿವಭಕ್ತರ ಕಥೆಗಳು ಸೋಮನನಿಗೆ ಪ್ರೇರಣೆ ನೀಡಿರಬಹುದು.

ಸುಮಾರು ಮೂರನೆಯ ಶತಮಾನದಿಂದಲೂ ತಮಿಳುನಾಡಿನಲ್ಲಿ ಶೈವಮತದ ಮೂಲಗಳು ಕಾಣಿಸುತ್ತವೆ. ೫೩ರ ಪ್ರಾಂತದಲ್ಲಿ ತಿರುಮೂಲರ್ ಎನ್ನುವವರು ಬರೆದ ತಿರುಮಂತ್ರಮ್ ಎನ್ನುವ ರಚನೆ ಕಾಣಿಸುತ್ತದೆ. ೬೦೧ರಿಂದ ೭೫೦ರ ವೇಳೆಯ ವರೆಗೆ ತಿರುಜ್ಞಾನ ಸಂಬಂಧರ್, ಸುಂದರಮೂರ್ತಿನಾಯನಾರ್, ತಿರುನಾವುಕ್ಕರಸು, ಮಾಣಿಕ್ಯವಾಚಕರ್ ಎನ್ನುವ ನಾಲ್ವರು ಪ್ರಧಾನ ನಾಯನಾರುಗಳು ಪ್ರಸಿದ್ಧರಾಗಿ ಕಾಣಿಸುತ್ತಾರೆ. ೭೫೨ರ ಪ್ರಾಂತದ ವೇಳೆಗೆ ಹನ್ನೆರಡು ಮಂದಿ ಆಳ್ವಾರರು ಬಂದರು. ಈ ಕಾಲದಲ್ಲಿಯೇ ನಂಬಿ ಅಂಡಾರ್ ನಂಬಿ ೬೩ ಮಂದಿ ಶಿವಭಕ್ತರನ್ನು ಕುರಿತು ೧೮ ಪದ್ಯಗಳಲ್ಲಿ ಹೇಳಿದ್ದಾನೆ. ಇವನ್ನೇ ವಿರುತ್ತಪ (ವೃತ್ತ ಪದ್ಯ) ಎಂದು ಕರೆಯುತ್ತಾರೆ. ೯ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೆ ಇಲ್ಲಿ ಶೈವವು ಸುಪ್ತಾವಸ್ಥೆಯಲ್ಲಿತ್ತು. ೧೨ನೆಯ ಶತಮಾನದಲ್ಲಿ ಸೇಕ್ಕಿಲಾರ್ ಎನ್ನುವ ಚೋಳರಾಜನ ಮಂತ್ರಿ ಜಾನಪದರಿಂದ ಶಿವಭಕ್ತರನ್ನು ಕುರಿತು ಕೇಳಿ ರಾಜನ ಅನುಜ್ಞೆಯನ್ನು ಪಡೆದು, ದೇಶವನ್ನು ಸುತ್ತಿ

ವಿಷಯ ಸಂಗ್ರಹಣೆ ಮಾಡಿ ೬೨ ಮಂದಿ ಪುರುಷ ಒಬ್ಬ ಸ್ತ್ರೀ ಶಿವಭಕ್ತರನ್ನು ಕುರಿತು ಪೆರಿಯಪುರಾಣಮ್ ಎನ್ನುವ ಗ್ರಂಥವನ್ನು ಬರೆದನು. (ಮೊದಲು ಭಕ್ತ ಸುಂದರಾರು ೮ನೆಯ ಶತಮಾನದಲ್ಲಿ ಶಿವನ ಆಜ್ಞೆಯ ಮೇರೆಗೆ ೬೩ ಮಂದಿ ಶೈವಮಹಾಭಕ್ತರನ್ನು ಕುರಿತು ತಿರುವಾರೂರು ದೇವಾಲಯದಲ್ಲಿ ದಾಸಗಣದ ನಡುವೆ ಹಾಡಿದ್ದಾನೆ.) ಆ ನಂತರ ರಾಮಲಿಂಗಸ್ವಾಮಿ ಎನ್ನುವ ಶ್ಯಾನುಭೋಗರು ೪೦೦ ತಿರುವರುಪ್ಪಾತ್ (ತಿರು+ಅರುಳ್+ಪ= ಶ್ರೀಕರುಣಾ ಪದ್ಯ)ಎನ್ನುವ ಗ್ರಂಥವನ್ನು ಬರೆದಿದ್ದಾನೆ.

ಪಾಲ್ಕುರಿಕಿ ಸೋಮನನ ಸಮಕಾಲಿಕನೇ ಅದ ಹರಿಹರನು ಕನ್ನಡದಲ್ಲಿ ೬೩ ಮಂದಿ ಪುರಾತನ ಭಕ್ತರನ್ನು ಕುರಿತು, ಹಾಗೂ ೬೪ ಮಂದಿ ನೂತನ ಶಿವಭಕ್ತರನ್ನು ಕುರಿತು ರಗಳೆಗಳನ್ನು ರಚಿಸಿದ್ದಾನೆ. ಅವನು ಹೇಳಿದ ನೂತನ ಭಕ್ತರಲ್ಲಿ ಅಕ್ಕಮಹಾದೇವಿ, ಅಲ್ಲಮಪ್ರಭು, ಮಡಿವಾಳಮಾಚಯ್ಯ ಇತ್ಯಾದಿ ಭಕ್ತರಿದ್ದಾರೆ. ಇಂತಹ ನೂತನ ಭಕ್ತರನ್ನೂ ಕುರಿತು ಪಾಲ್ಕುರಿಕಿ ಸೋಮಮನು ತನ್ನ ಬಸವಪುರಾಣದಲ್ಲಿ ಮತ್ತು ಪಂಡಿತಾರಾಧ್ಯ ಚರಿತ್ರೆಯಲ್ಲಿ ಹೇಳಿದ್ದಾನೆ. ಹೀಗೆ ತಮಿಳು ರಚನೆಗಳಿಂದ ಕನ್ನಡ ರಚನೆಗಳಿಂದ ಸೋಮನಾಥನು ಪ್ರಭಾವಿತನಾಗಿದ್ದಾನೆ.

ಸೋಮನಾಥನ ಭಾಷಾವೈದುಷ್ಯ

ಯಾರಿಗಾದರೂ ಯಾವುದಾದರೂ ಒಂದು ಭಾಷೆಯಲ್ಲಿ ಪಾಂಡಿತ್ಯವನ್ನು ಗಳಿಸುವುದು ಗಗನ. ಅಂಥಾದ್ದರಲ್ಲಿ ಹಲವಾರು ಭಾಷೆಗಳಲ್ಲಿ ಪದ್ಯರಚನೆ ಮಾಡಬಲ್ಲ ವಿದ್ವತ್ತನ್ನು ಹೊಂದಿರುವುದು ಸೋಮನಾಥನ ಹೆಗ್ಗಳಿಕೆಯೊಂದೇ ಅಲ್ಲ, ಅವನ ಸಾಹಸಕ್ಕೂ, ನಿಷ್ಠೆಗೂ, ಶೈವಧರ್ಮಕ್ಕಾಗಿ ನಡೆದ ಅವನ ದುಡಿತಕ್ಕೂ ನಿದರ್ಶನ. ನಾಡಿನಾದ್ಯಂತ ವ್ಯಾಪ್ತವಾದ ಭಾಷೆ, ಸಂಸ್ಕೃತವಾದರೆ ಇತರೆ ಅನೇಕ ಭಾಷೆಗಳು ಸೋಮನಾಥನ ಕಾಲದಲ್ಲೇ ಪ್ರಾಂತೀಯವಾಗಿ ಉಪಯೋಗದಲ್ಲಿತ್ತಲ್ಲದೆ ಕನ್ನಡ, ತೆಲುಗು, ತಮಿಳು, ಮರಾಠಿಯಂತಹ ಭಾಷೆಗಳು ಕಾವ್ಯಭಾಷೆಗಳಾಗಿಯೂ ಮನ್ನಣೆಯ ಸ್ಥಾನವನ್ನು ಗಳಿಸಿದ್ದವು. ಇಂತಹ ಹಲವು ಭಾಷೆಗಳಮೇಲೆ ಸೋಮನಾಥನು ಅಧಿಕಾರವನ್ನು ಹೊಂದಿದ್ದನು. ಇದಕ್ಕೆ ಅವನ ಕಾವ್ಯಗಳೆಲ್ಲ ನಿದರ್ಶನಗಳನ್ನು ನೀಡುತ್ತವೆ.

ತೆಲುಗಿನಲ್ಲಿ ಆದಿಕವಿಯೆಂದು ಪ್ರಸಿದ್ಧನಾದ ನನ್ನಯಭಟ್ಟಾರಕನು ಸಂಸ್ಕೃತಭಾಷೆಯಲ್ಲಿ ಅಸದೃಶಪಾಂಡಿತ್ಯ ಉಳ್ಳವನು. ತನ್ನ ಮಹಾಭಾರತದಲ್ಲಿ ಭೀಮಸೇನನ ಪ್ರತಿಜ್ಞೆಯಲ್ಲಿ 'ದುರ್ವಾರಮದೀಯಬಾಹು ಪರಿಸರ್ಪಿತ ಚಂಡಗದಾಭಿಘಾತ ಭಗ್ನೋತರೋರುನ್' ಎನ್ನುವ ರೀತಿಯ ಸಂದರ್ಭಕ್ಕೆ ಹೊಂದುವ ಓಜೋಗುಣಾನ್ವಿತವಾದ ಸುದೀರ್ಘ ಸಮಾಸಗಳನ್ನು ರಚಿಸಿದ್ದಾನೆ ನನ್ನಯ. ನನ್ನಯನ ಕಾವ್ಯದಲ್ಲಿ ಸತ್ಸಮಪದಬಾಹುಳ್ಯವನ್ನು

ಸಹ ನಾವು ಗಮನಿಸಬಹುದು. ಮತ್ತೊಂದು ವಿಶೇಷವೆಂದರೆ ನನ್ನಯನ ರಚನೆಯೆಂದೇ ಪ್ರಸಿದ್ಧವಾಗಿರುವ ತೆಲುಗಿನ ವ್ಯಾಕರಣ ಗ್ರಂಥ 'ಆಂಧ್ರಶಬ್ದಚಿಂತಾಮಣಿ' ಸಂಸ್ಕೃತದಲ್ಲಿ ಇದೆ. ನನ್ನಯ್ಯನಿಗೂ ಹಿಂದಿನವನಾದ ಪಂಪನ ಮಹಾಕಾವ್ಯಗಳಲ್ಲಿಯೂ, ನಂತರದ ಅನೇಕ ಕನ್ನಡ ತೆಲುಗು ಕವಿಗಳಲ್ಲಿಯೂ ಈ ಸಂಸ್ಕೃತದ ಪ್ರಭಾವವನ್ನು ಕಾಣಬಹುದು. ತೆಲುಗಿನಮೇಲೆ ಇಂದಿಗೂ ಈ ಪ್ರಭಾವವಿದೆ. ಕನ್ನಡದಲ್ಲಿ ಬಂದಂತೆ ಹಳೆ, ನಡು, ಹೊಸ ಕನ್ನಡಭೇದ ತೆಲುಗಿನಲ್ಲಿ ಬರದ ಕಾರಣದಿಂದ ಪದ್ಯರಚನೆಯಲ್ಲಿ ತೆಲುಗು ಇಂದಿಗೂ ನನ್ನಯನು ಹಾಕಿಕೊಟ್ಟ ಹಾದಿಯಲ್ಲೇ ಸಾಗುತ್ತಿದೆ. ಇದನ್ನೇ ಗ್ರಾಂಥಿಕಭಾಷೆ ಎನ್ನುತ್ತಿದ್ದಾರೆ. ಇದಕ್ಕೆ ಅನ್ಯವಾದದ್ದು ವ್ಯಾವಹಾರಿಕಭಾಷೆ.

ಈಗ ತೆಲುಗಿನ ಗದ್ಯದಲ್ಲಿ ಎಂದರೆ ವಚನ ರಚನೆಯಲ್ಲಿ ವ್ಯಾವಹಾರಿಕಭಾಷೆಯದೇ ಮೇಲ್ಗೈ ಆಗಿದೆ. ತೆಲುಗಿನಲ್ಲಿ ಗದ್ಯವನ್ನು ವಚನ ಎಂದು ಕರೆಯುವುದು ಉಂಟು. ಗದ್ಯಪದ್ಯಾತ್ಮಕವಾದ ಕಾವ್ಯರಚನೆಯನ್ನು ಚಂಪೂ ಎನ್ನುತ್ತಾರೆ. ಕನ್ನಡದಲ್ಲಿ ಚಂಪೂಕಾವ್ಯಗಳು ಎನ್ನುವ ಮಾತು ಪ್ರಸಿದ್ಧವಾಗಿ ಬಳಕೆಯಾದಂತೆ ತೆಲುಗಿನಲ್ಲಿ ಆಗಿಲ್ಲ. ಅದಕ್ಕೆ ಕಾರಣ ಇಷ್ಟೇ. ಸ್ವಲ್ಪ ಹೆಚ್ಚುಕಡಿಮೆ ತೆಲುಗಿನ ಕಾವ್ಯಗಳೆಲ್ಲ ಚಂಪೂಗಳೆ. ಒಂದೆರಡು ಕ್ವಚಿತ್ತಾಗಿ ಬಂದ ಕೇವಲ ಪದ್ಯ ಕೃತಿಗಳನ್ನು ವಚನವಿಲ್ಲದ ಕಾರಣ ನಿರ್ವಚನ ಎಂದರು. ತಿಕ್ಕನ ಈ ರೀತಿ ಬರೆದ ಉತ್ತರರಾಮಾಯಣವನ್ನು ನಿರ್ವಚನೋತ್ತರ ರಾಮಾಯಣ ಎನ್ನುತ್ತಾರೆ. ಮೂರನೆಯ ಪ್ರಕಾರ ಸೋಮನಾಥನು ನಿರ್ಮಿಸಿಕೊಟ್ಟ ಮಾರ್ಗವಾದ ದ್ವಿಪದಕಾವ್ಯಗಳದ್ದು. ನಂತರ ಕಾಲದಲ್ಲಿ ಈ ರೀತಿ ದ್ವಿಪದದಲ್ಲಿ ಅನೇಕ ರಚನೆಗಳು ಸೋಮನಾಥನ ಕಾಲದಿಂದ ತಂಜಾವೂರು ಪ್ರಭುಗಳ ಕಾಲದವರೆಗೆ ಬಂದವು.

ತೆಲುಗು ಸಾಹಿತ್ಯದಲ್ಲಿ ಆದಿಕವಿ– ನನ್ನಯಭಟ್ಟಾರಕನೇ ಆದರೂ ಮೊದಲಿನ ತೆಲುಗು ಕವಿ ಪಾಲ್ಕುರಿಕಿ ಸೋಮನಾಥನು.

ಸಂಸ್ಕೃತಭಾಷೆಯ ಪ್ರಭಾವ ತೀವ್ರವಾಗಿ ಇದ್ದ ಕಾಲದವನಾದ ಸೋಮನಾಥನು ಸಹ ಆ ಪ್ರಭಾವಕ್ಕೆ ಹೊರತಾದವನಲ್ಲ. ಅವನಿಗೆ ಸಂಸ್ಕೃತ ಭಾಷೆಯ ಮೇಲೆ ಇದ್ದ ಅಧಿಕಾರ ಅಸದೃಶವಾದದ್ದು. ಆದರೆ ಸ್ವಾತಂತ್ರ್ಯಪ್ರಿಯನಾದ ಸೋಮನನು ಅನೇಕವಿಷಯಗಳಲ್ಲಿ ತನ್ನದೇ ಆದ ದಾರಿಯನ್ನು ರೂಪಿಸಿಕೊಂಡಂತೆ ಭಾಷೆಯ ಸ್ವರೂಪದ ವಿಷಯದಲ್ಲೂ ರೂಪಿಸಿಕೊಂಡನು. ಅವನ ಕಾಲದವರೆಗೆ ಬಂದ ತೆಲುಗು ಕನ್ನಡ ಕಾವ್ಯಗಳು ಹೆಚ್ಚಾಗಿ ಚಂಪೂಶೈಲಿಯವೇ. ಇದರಲ್ಲಿನ ಸುದೀರ್ಘ ತತ್ಸಮಸಮಾಸಪದ ಬಾಹುಳ್ಯವನ್ನೂ ಗಮನಿಸಿದ್ದಾನೆ ಸೋಮನ. ನಡುಗನ್ನಡದ ಷಟ್ಪದಿ ಸಾಹಿತ್ಯ ಪ್ರಾಚುರ್ಯವನ್ನು ಪಡೆಯುವ ತನಕ ಕನ್ನಡದಲ್ಲಿಯೂ ಈ ತರಹದ ರಚನೆಗಳನ್ನು ನಾವು ಕಾಣಬಹುದು.

ಸೋಮನನು ತನ್ನದೇ ಆದ ಶೈಲಿಯನ್ನೂ ರೂಪಿಸಿಕೊಂಡು ಸ್ವಾತಂತ್ರ್ಯವನ್ನು ಮೆರೆದಿದ್ದಾನೆ. ತನ್ನ ಈ ಅಭಿಪ್ರಾಯವನ್ನು ತನ್ನ ಬಸವಪುರಾಣ, ಪಂಡಿತಾರಾಧ್ಯ ಚರಿತ್ರೆಗಳಲ್ಲಿ ಸ್ಪಷ್ಟವಾಗಿ "ಉರುತರ ಗದ್ಯಪದ್ಯೋಕ್ತುಲಕಂಟೆ ಸರಸಮ್ಮೈ ಬರಗೆಡು ಜಾನುದೆನುಗು ಚರ್ಚಿಂಪ ಸರ್ವಸಾಮಾನ್ಯಮಗುಟ ಕೂರ್ಚೆದ ದ್ವಿಪದಲು ಕೂರ್ಮಿದೈವಾರ' ಎಂದು ಹೇಳಿಕೊಂಡಿದ್ದಾನೆ. ಇಲ್ಲಿ ಉರುತರ ಎಂದರೆ ಘನವಾದ ಎನ್ನುವುದು ಒಂದು ಅರ್ಥವಾದರೆ ಸುದೀರ್ಘವಾದ ಎನ್ನುವುದು ಮತ್ತೊಂದು ಅರ್ಥ. ಗದ್ಯಪದ್ಯಗಳಲ್ಲಿ ಸುದೀರ್ಘವಾದ ಸಮಾಸಗಳಿಂದ ಕೂಡಿದ ಮಾತುಗಳಿಗಿಂತಲು ಸರಸವಾಗಿರುವ ಜಾನು ತೆಲುಗು ಸರ್ವಸಾಮಾನ್ಯ. ಆದ ಕಾರಣ ಜಾನುದೆನುಗಿನಲ್ಲಿ ಕಾವ್ಯಕ್ಕೆ ಒಪ್ಪುವ ದ್ವಿಪದಗಳನ್ನು ರಚಿಸುತ್ತೇನೆ ಎಂದು ಸೋಮನ ಹೇಳಿದ್ದಾನೆ.

ಇಲ್ಲಿ ಹೇಳಿರುವ ಗದ್ಯ ಎನ್ನುವ ಮಾತನ್ನು ಸ್ವಲ್ಪ ವಿಚಾರಿಸಬೇಕು. ಪದ್ಯಗಳ ನಡುವೆ ಬರುವ ಛಂದೋರಹಿತವಾದ ಮಾತುಗಳಿಗೆ ಗದ್ಯ ಎಂದು ಹೆಸರು. ಅದನ್ನೇ ತೆಲುಗಿನಲ್ಲಿ ವಚನ ಎನ್ನುತ್ತಿದ್ದಾರೆ. ಸಂಸ್ಕೃತದಲ್ಲಿ ಗದ್ಯ ಎನ್ನುವ ಒಂದು ಪ್ರಕಾರವಿದೆ ಇದು ಅದಲ್ಲ. ಸೋಮನಾಥನ ಗದ್ಯ ಸಂಸ್ಕೃತದ ಗದ್ಯದ ಲಕ್ಷಣಗಳನ್ನು ಹೊಂದಿರುವಂಥದ್ದು. ಸುದೀರ್ಘವಾದ ಸಮಾಸಗಳನ್ನು ಒಳಗೊಂಡ ಗದ್ಯ ಅಥವಾ ಪದ್ಯ. ಇವುಗಳಿಗಿಂತಲೂ ಜಾನುದೆನುಗು ಶ್ರೇಷ್ಠವಾದ್ದು. ಅಂಥಹ ಸರ್ವಸಾಮಾನ್ಯವಾದ ಭಾಷೆಯಲ್ಲಿ ದ್ವಿಪದಗಳನ್ನು ನಿರ್ಮಿಸುತ್ತೇನೆ. ಆದರೆ "ಒಪ್ಪದು ದ್ವಿಪದ ಕಾವ್ಯೋಕ್ತಿನಾವಲದು. ಆರೂಢ ಪದ್ಯಪದ್ಯಾದಿ ಪ್ರಬಂಧ ಪೂರಿತ ಸಂಸ್ಕೃತಭೂಯಿಷ್ಠ ರಚನ ಮಾನುಗಾ ಸರ್ವಸಾಮಾನ್ಯಂಬುಗಾಮಿ ಜಾನುದೆನುಗು ವಿಶೇಷಮು ಪ್ರಸನ್ನತಗಕು" (ದ್ವಿಪದ – ಕಾವ್ಯವನ್ನು ಹೇಳುವುದಕ್ಕೆ ಒಪ್ಪುವುದಿಲ್ಲ ಎನ್ನಬೇಡ. ಆರೂಢ ಪದ್ಯಪದ್ಯಾದಿ ಪ್ರಬಂಧ ಪೂರಿತ ಸಂಸ್ಕೃತಭೂಯಿಷ್ಠ ರಚನ ಸರ್ವಸಾಮಾನ್ಯವೆಂದು ಮನ್ನಣೆ ಪಡೆಯದು ಆದಕಾರಣ ಜಾನುದೆನುಗು ಎನ್ನುವುದು ಪ್ರಸನ್ನತೆಗೆ ವಿಶೇಷವಾಗಿ ಒಪ್ಪುತ್ತದೆ) ಎಂದು ಪಂಡಿತಾರಾಧ್ಯ ಚರಿತ್ರೆಯಲ್ಲಿಯೂ ಹೇಳಿಕೊಂಡಿದ್ದಾನೆ.

ಅಷ್ಟು ಮಾತ್ರಕ್ಕೆ ಸೋಮನನ ಈ ದ್ವಿಪದಕಾವ್ಯಗಳಲ್ಲಿ ಅಂದರೆ ಬಸವ ಪುರಾಣ, ಪಂಡಿತಾರಾಧ್ಯಚರಿತ್ರೆಗಳಲ್ಲಿ ಸಂಸ್ಕೃತದ ಮಾತುಗಳೇ ಇಲ್ಲವೆಂದಾಗಲಿ ಸುದೀರ್ಘವಾದ ಮಾತುಗಳು ಎಲ್ಲೂ ಕಾಣುವುದಿಲ್ಲವೆಂದಾಗಲಿ ನಾವು ತಿಳಿಯುವಂತಿಲ್ಲ. "ಬಸವಪಾದಧ್ಯಾನ ಪಟುಕಲ್ಪವೃಕ್ಷಲಸಿತ ಚಿತ್ತಾಲವಾಲಪ್ರಶಸ್ತುಂಡು" "ಬಸವಾಕ್ಷರಾನರ್ಘಬಹುಮಣಿಸಂಪ್ರವಸನ ಸಮುದಯ ಜಿಹ್ವಾಕರಂಡುಂಡು" ಇತ್ಯಾದಿ ಪ್ರಯೋಗಗಳು ಅನೇಕ ಇವೆ. ಸೋಮನನ ಎರಡು ಕಾವ್ಯಗಳಲ್ಲಿಯೂ ನಾಲಕ್ಕು ದ್ವಿಪದದ ಪಾದಗಳನ್ನು ಓದುವಷ್ಟರಲ್ಲಿ ಒಂದಾದರೂ ತತ್ಸಮಪದ ಬಂದೇ ಬರುತ್ತದೆ. ಆದರೆ ಆ ಉಪಯೋಗಿಸಿದ ಪದಗಳು ತೆಲುಗು

ಪದಗಳಲ್ಲಿ ಬೆರೆತು ಹೋಗಿರುವುದು ಗಮನಾರ್ಹ. ಅವುಗಳಲ್ಲಿ ಜಟಿಲತೆ ಕಂಡುಬರದಿರುವುದು ಸೋಮನನ ರಚನೆಯ ವೈಶಿಷ್ಟ್ಯ. ಆದರೆ ಈ ಮಾತು ತೆಲುಗು ಪದಗಳ ನಡುವೆ ಬರುವ ತತ್ಸಮಪದಗಳಿಗೆ ಸಂಬಂಧಿಸಿದ್ದು ಮಾತ್ರ. ಈತನು ನಿದರ್ಶನವಾಗಿ ನೀಡಿರುವ ವೇದ ಪುರಾಣಾದಿಗಳಲ್ಲಿನ ಸಂಸ್ಕೃತವಾಕ್ಯಗಳ ತುಂಡುಗಳಿಗೆ ಸಂಬಂಧಿಸಿದ್ದಲ್ಲ.

ಆದರೆ ಜಾನುದೆನುಗು ಎನ್ನುವುದಕ್ಕೆ ಸೋಮನನು ನೀಡಿದ ಉದಾಹರಣೆಯೊಂದು ವೃಷಾಧಿಪ ಶತಕದಲ್ಲಿದೆ.

ಬಲುಪೊಡತೋಲು ಸೀರಯುನು ಬಾಪಸರುಲ್ ಗಿಲಿಪಾರುಕನ್ನು ವೆ
ನ್ನೆಲ ತಲ ಸೇದುಗುತ್ತುಕಯು ನಿಂಡಿನ ವೇಲುಪುಟೇರು ವಲ್ಗು ಪೂ
ಸಲು ಗಲರೇನಿ ಲೆಂಕ ವನಿ ಜಾನುದೆನುಂಗುನ ವಿನ್ನವಿಂಚೆದನ್
ವಲಪು ಮದಿನ್ ದಲಿರ್ಪ ಬಸವಾ ಬಸವಾ ಬಸವಾ ವೃಷಾಧಿಪಾ!

ಇದರಲ್ಲಿ ವೃಷಾಧಿಪಾ ಎನ್ನುವ ಸಂಬೋಧನೆಯನ್ನು ಬಿಟ್ಟರೆ ಮಿಕ್ಕೆಲ್ಲ ಪದಗಳು ತೆಲುಗಿನವೇ ಆಗಿರುವುದು ಗಮನಾರ್ಹ. ಬಸವಪುರಾಣದಲ್ಲಿ ಎಲ್ಲೆಡೆಯಲ್ಲೂ ಇಂತಹ ತೆಲುಗು ಪದಗಳನ್ನೇ ಒಳಗೊಂಡ ಭಾಷೆಯನ್ನೇ ಸೋಮನನು ಉಪಯೋಗಿಸಿದಂತೆ ಕಾಣುವುದಿಲ್ಲ. ಹಾಗಾದರೆ ಜಾನುದೆನುಗು ಎಂದರೆ ಏನು?

ಜಾನು ಎನ್ನುವುದು ಚದುನು ಶಬ್ದದ ರೂಪಾಂತರ. ಚದುನು ಎನ್ನುವುದು ಚದುರು ಶಬ್ದದ ರೂಪಾಂತರ. ಇದು ಚತುರ ಶಬ್ದಭವ. ಜಾನು ತೆನುಗು ಅಥವಾ ಚತುರವಾದ ಅಥವಾ ಲೋಕವ್ಯವಹಾರದಲ್ಲಿರುವ, ಸರ್ವಜನಸುಲಭವಾಗಿ ಅರ್ಥವಾಗುವ ತೆನುಗು. ಇದನ್ನೇ ಸೋಮನಾಥನು 'ತೇಟ ತೆನುಗು' ಎಂದೂ 'ತಿನ್ನನಿ ಸೂಕ್ತಿ' ಎಂದೂ ಅನ್ನುತ್ತಾನೆ. ಇದನ್ನೇ ಕರ್ನಾಟಕ ಲಾಕ್ಷಣಿಕರು 'ಸಮಸಂಸ್ಕೃತೋಕ್ತಿ'ಎಂದರು. ಹಿಂದಿನ ಕವಿಗಳು ವಿದ್ವತ್ತನ್ನು ಪ್ರಕಟಿಸುವುದಕ್ಕೆ ನಿಘಂಟುಗಳ ಮತ್ತು ವ್ಯಾಕರಣಮೂಲಕವಾಗಿ ಅರ್ಥತಿಳಿದುಕೊಳ್ಳಬೇಕಾಗಿರುವ ಸಂಸ್ಕೃತಪದಭೂಯಿಷ್ಠರಚನೆ ಅಲ್ಲದೆಯೂ, ಬುದ್ಧಿಪೂರ್ವಕವಾಗಿ ಸಂಸ್ಕೃತವನ್ನು ಬಿಟ್ಟು ಬಲವಂತವಾಗಿ ಮತ್ತು ಕೃತಕವಾಗಿ ಆರಿಸಿ ಜೋಡಿಸಿದ ಅಚ್ಚತೆನುಗು ಮಾತುಗಳು ಮಾತ್ರ ಇರುವ ಭಾಷೆಯೂ ಆಗಿರದೆ ಲೋಕವ್ಯವಹಾರಸಿದ್ಧವಾದ ಸಂಸ್ಕೃತಾಂಧ್ರಶಬ್ದಗಳಿಂದ ಶೋಭಿಸಬೇಕು. ಅದು ಜಾನುತೆನುಗು. ಆಗ "ತೆಲುಗು ಮಾತುಗಳು" ಎಂದು ನಿಂದಿಸಬೇಕಾಗಿಲ್ಲ. ಅದನ್ನು 'ವೇದಕ್ಕೆ ಸಮವಾಗಿ ಕಾಣಬೇಕು' ಎನ್ನುವುದು ಸೋಮನಾಥನ ಅಭಿಮತ.

ಇಂತಹ ಅಭಿಪ್ರಾಯವನ್ನೇ ಕನ್ನಡದ ಅನುಭವಾಮೃತಕಾರರಾದ ಮಹಲಿಂಗ ರಂಗ ಅವರು ವ್ಯಕ್ತಪಡಿಸಿದ್ದಾರೆ. ಅವರ ಮಾತಿನಲ್ಲಿ

"ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು (ಅನುಭವಾಮೃತ. ೧-೫)"

ಇದೇ ರೀತಿ ಶ್ರೀಜಗನ್ನಾಥದಾಸರ ಹರಿಕಥಾಮೃತಸಾರವನ್ನು ಕುರಿತು ಪ್ರಶಂಸಿಸುತ್ತಾ ಅದರ ಫಲಸ್ತುತಿ ಸಂಧಿಯಲ್ಲಿ ಶ್ರೀದವಿಠಲದಾಸರು-

"ಪ್ರಾಕೃತೋಕ್ತಿಗಳೆಂದು ಬರಿದೆ ಮ
ಹಾಕೃತಘ್ನರು ಜರಿವರಲ್ಲದೆ
ಸ್ವೀಕೃತವ ಮಾಡದಲೆ ಬಿಡುವರೆ ಸುಜನರಾದವರು
ಶ್ರೀಕೃತೀಪತಿಯಮಲಗುಣಗಳು
ಯೀ ಕೃತಿಯೊಳುಂಟಾದ ಬಳಿಕ
ಪ್ರಾಕೃತವೆ ಸಂಸ್ಕೃತದ ಸಡಗರವೇನು ಸುಗುಣರಿಗೆ"(೩೩-೫)

ಎನ್ನುತ್ತಾರೆ. ಯಾವ ಭಾಷೆಯಲ್ಲಿ ಹೇಳಿದೆ ಎನ್ನುವುದು ಮುಖ್ಯವಲ್ಲ, ಏನು ಹೇಗೆ ಹೇಳಿದೆ ಎನ್ನುವುದೇ ಮುಖ್ಯ.

ಜಾನುದೆನುಗಿನಲ್ಲಿ ಹೇಳಿದ ಕವಿತೆಯಲ್ಲಿ ಭಾವ ಸರಳವಾಗಿರಬೇಕು. ಇಂಪು ಪೆಂಪಾಗಿರಬೇಕು. ವರ್ಣನೆಗಳು ಚೊಕ್ಕಟವಾಗಿರಬೇಕು. ಅರ್ಥವತ್ತಾಗಿರಬೇಕು. ಪ್ರಾಣವಂತವಾಗಿ, ಮಧುರವಾಗಿ ಮೃದುವಾಗಿ ರಸವತ್ತಾಗಿ ಶೋಭಿಸಬೇಕು. ಪಂಡಿತರಿಗೆ ಸಜ್ಜನರಿಗೆ ಅಕ್ಷರಗಳು, ಸೂಕ್ತಿಗಳು ಕರ್ಣರಸಾಯನವಾಗಿರಬೇಕು ಎಂದು ತೆಲುಗಿನ ಶೈವಕವಿ ನನ್ನಿಚೋಡನು ತನ್ನ ಕುಮಾರಸಂಭವದಲ್ಲಿ ಹೇಳುತ್ತಾನೆ.

ಆದರೆ ಸೋಮನನು ಹೇಳಿದಂತೆ ಸಂಸ್ಕೃತಭೂಯಿಷ್ಠರಚನೆ ಸರ್ವಸಾಮಾನ್ಯವಲ್ಲ. ಉದಾಹರಣೆಯಾಗಿ ನೀಡಿದ ತೆಲುಗು ಪದಭೂಯಿಷ್ಠರಚನೆ ಸರ್ವಸಾಮಾನ್ಯ ಎನ್ನುವುದರಲ್ಲಿ ಸಂದೇಹವಿಲ್ಲ. ಸೋಮನನು ತತ್ಸಮಪದಗಳನ್ನು ಬಳಸಿದ್ದರೂ ಅವು ಅವನ ರಚನೆಯಲ್ಲಿ ತಮ್ಮ ಸಂಸ್ಕೃತತ್ವವನ್ನು ಕಳೆದುಕೊಂಡು ತೆಲುಗುಪದಗಳಂತೆಯೇ ಗ್ರಾಹ್ಯವಾಗುವಂತೆ ರಚಿಸಿರುವುದು ಅವನ ಕವಿತಾ ನೈಪುಣ್ಯಕ್ಕೆ ನಿದರ್ಶನ.

ಸೋಮನನು ನಿದರ್ಶನವಾಗಿ ತೋರಿದ ಮತ್ತು ಕಾವ್ಯದ ಉದ್ದಕ್ಕೂ ಬಳಸಿದ ಜಾನುದೆನುಗು ಆ ಕಾಲದಲ್ಲಿ ಪ್ರಸನ್ನವಾಗಿ ಸರ್ವಸಾಮಾನ್ಯವಾಗಿತ್ತು. ನಂತರದ ಕವಿಗಳು

ಈ ಜಾನುದೆನುಗಿಗೆ ದೂರವಾಗಿ ಸಂಸ್ಕೃತಭೂಯಿಷ್ಠವಾದ ತೆಲುಗನ್ನು ಕಾವ್ಯಗಳಲ್ಲಿ ತುಂಬಿದ ಕಾರಣದಿಂದ ಬರಬರುತ್ತ ಜಾನುದೆನುಗು ಕ್ಷೀಣವಾಯಿತು. ಸೋಮನಾಥನ, ನನ್ನೆಚೋಡನ, ಅಷ್ಟೇಕೆ ಅವರಿಗಿಂತ ಬಹಳ ನಂತರದವನಾದ ಅನ್ನಮಯ್ಯನ ರಚನೆಯಲ್ಲಿನ ತೆಲುಗು ಪದಗಳನ್ನು ಸಹ ಇಂದಿನ ಜನಸಾಮಾನ್ಯ ಅರ್ಥಮಾಡಿಕೊಳ್ಳುವುದರಲ್ಲಿ ಸೋಲುತ್ತಿದ್ದಾರೆ ಎನ್ನುವುದು ತೆಲುಗು ಭಾಷೆಯಮೇಲೆ ಸಂಸ್ಕೃತಭಾಷೆಯ ಆಧಿಪತ್ಯಕ್ಕೆ ನಿದರ್ಶನ. ಹೀಗಾಗಿ ತೆಲುಗಿನ ಜನ ಆಚೆ ಸಂಸ್ಕೃತಕ್ಕು ಈಚೆ ತೆಲುಗಿಗೂ ವ್ಯುತ್ಪತ್ತಿಯ ವಿಷಯದಲ್ಲಿ ದೂರಾದದ್ದು ಕಣ್ಣಮುಂದಿನ ನಿಜ.

ಭಾಷಾವೈದುಷ್ಯದ ವಿಷಯಕ್ಕೆ ಬಂದಾಗ, ಸೋಮನಾಥನ ಸಂಸ್ಕೃತಭಾಷಾ ಪಾಂಡಿತ್ಯ ಅಸದೃಶವಾದದ್ದು ಎಂಬುದರಲ್ಲಿ ಸಂದೇಹವೇ ಇಲ್ಲ. ತೆಲುಗು ಸಾಹಿತ್ಯ ಸಮುದ್ರದಲ್ಲಿ ಮಹಾಮೀನ ಸೋಮನಾಥನು. ಆದರೆ ಭಾಷಾಸ್ವರೂಪದ ವಿಷಯದಲ್ಲಿ ಸಂಸ್ಕೃತಕ್ಕಿಂತಲು ತೆಲುಗಿನಲ್ಲಿ ಸೋಮನಾಥನು ಅತ್ಯಂತ ಸ್ವಾತಂತ್ರ್ಯವನ್ನು ತೆಗೆದುಕೊಂಡಿದ್ದಾನೆ. ಅನೇಕಾನೇಕ ನೂತನ ಸ್ವತಂತ್ರ ಪ್ರಯೋಗಗಳನ್ನು ಮಾಡಿದ್ದಾನೆ. ತಮಿಳು ಮರಾಠಿ ಕನ್ನಡಾದಿ ಭಾಷೆಗಳಲ್ಲಿ ಸೋಮನಾಥನು ಅಸದೃಶಪಾಂಡಿತ್ಯ ಇರುವವನು ಎಂದು ಹೇಳಲಾಗದೆಹೋದರೂ ಆ ಎಲ್ಲ ಭಾಷಿಗರಿಗೂ ಅವರ ಭಾಷೆಯಲ್ಲೇ ಹೇಳಿ ಮನ ಒಲಿಸುವ ದಿಟ್ಟ ಪ್ರಯತ್ನವಂತೂ ಸೋಮನಾಥನು ನಡೆಸಿದ್ದಾನೆ ಎನ್ನುವುದಕ್ಕೆ ಅವನ ರಚನೆಗಳೇ ಪ್ರತ್ಯಕ್ಷ ಸಾಕ್ಷಿಗಳು.

ಭಾಷೆಯ ಜೊತೆಗೆ ಛಂದಸ್ಸು ಸಹ ಸರ್ವಸಾಮಾನ್ಯವಾಗಿರಬೇಕೆಂದು ಉರುತರ ಗದ್ಯಪದ್ಯೋಕ್ತಿಗಳನ್ನು ತೊರೆದು ಸರಸವಾದ ಸರ್ವಸಾಮಾನ್ಯವಾದ ಹಾಗೂ ಇಹ ಮತ್ತು ಪರ ಎನ್ನುವ ಎರಡು ಪದಗಳನ್ನು ನೀಡಬಲ್ಲ ದ್ವಿಪದವನ್ನು ಸೋಮನಾಥನು ಸ್ವೀಕರಿಸಿದನು. ಈ ದ್ವಿಪದಗಳು ಎನ್ನುವ ಕಮಲಗಳಿಂದ ನಿಷ್ಠೆಯಿಂದ ಬಸವೇಶ್ವರನ ಪಾದಪದ್ಮದ್ವಯವನ್ನು ಅತಿ ಪ್ರೀತಿಯಿಂದ ಪೂಜಿಸಿ ಧನ್ಯನಾದವನು ಪಾಲ್ಕುರಿಕಿ ಸೋಮನಾಥ.

"ಛಂದಸ್ಸಿನಲ್ಲಿ ಜಾತಿ ಎನಿಸುವವು ಮಾತ್ರಾ ಗಣಗಳಿಂದ ಕೂಡಿದವು ಆದಕಾರಣ 'ಅನಿಯತ ಗಣೈಃ' ಎಂದೂ, 'ಪ್ರಾಸೋವಾ' ಎಂದೂ 'ಯತಿರ್ವಾ' ಎಂದೂ ಛಂದಸ್ಸು ಹೇಳುತ್ತದೆ. ಆದಕಾರಣ, ಅನಿಯತ ಗಣಗಳಿಂದ ಪ್ರಾಸವನ್ನಾಗಲಿ, ಯತಿಯಮೇಲೆ ವಡಿಯನ್ನಾಗಲಿ ದೇಸಿಯಾಗಿ ನಿಲಿಸಿ ಆದಿಪ್ರಾಸದ ಪದ್ಧತಿಯನ್ನು ಬಿಡದಂತೆ ದ್ವಿಪದಗಳನ್ನು ರಚಿಸುತ್ತೇನೆ" ಎಂದ ಸೋಮನಾಥನು "ದ್ವಿಪದ ಛಂದಸ್ಸು ಕಾವ್ಯ ರಚನೆಗೆ ಒಪ್ಪುವುದಿಲ್ಲ ಎನಬಾರದು. ಪ್ರಸಿದ್ಧವಾದ ಗದ್ಯಪದ್ಯಗಳಿಂದ ಕೂಡಿದ ಪ್ರಬಂಧದಲ್ಲಿ ರಚಿತವಾದ ಸಂಸ್ಕೃತ ಭೂಯಿಷ್ಠವಾದ ರಚನೆ ಸರ್ವರಿಗೂ ಸಾಧಾರಣವಲ್ಲ. ಆದ ಕಾರಣ ಪ್ರಸನ್ನತೆಗೆ

ಜಾನುತೆನುಗು ವಿಶೇಷವಾದದ್ದು. ಹೀಗಾಗಿ ಹೆಚ್ಚಾದ ಕಾವ್ಯಪ್ರೌಢಿ ಒಪ್ಪುವಂತೆ ದೇಸಿ ತೆಲುಗಿನಲ್ಲಿ ರಚಿಸಲು ಕಲಿತರೆ ಸಾಕು" ಎನ್ನುತ್ತಾನೆ. ಗದ್ಯಪದ್ಯಾದಿ ಕೃತಿಗಳು ಮತ್ತು ದ್ವಿಪದವೂ ಸಮಾನವೇ ಎನ್ನುವುದು ಈತನ ನಿಲುವು.

ಸೋಮನಾಥನ ಪ್ರಕಾರ ದ್ವಿಪದದಲ್ಲಿ ಸರಳತೆ ಮುಖ್ಯಲಕ್ಷಣ. ಪ್ರಸನ್ನಗುಣವೂ ಇರುತ್ತದೆ. ಈ ಶೈಲಿಯಲ್ಲಿ ಗಣಗಳ ಪ್ರಯೋಗ, ಶಬ್ದಶುದ್ಧಿ, ಪ್ರಯೋಗಪ್ರಸಿದ್ಧಿ, ಕಳಾಸಮೃದ್ಧಿ, ಅರ್ಥಪುಷ್ಟಿ, ನಾಣ್ಣುಡಿ ದೇಸಿಪದಗಳ ಸೊಂಪು, ವಿನೂತನ ಸೃಷ್ಟಿ, ಸಹಜವಾದ ರಸಪುಷ್ಟಿ, ವಿಶೇಷ್ಯ ವಿಶೇಷಣಗಳ ಪ್ರಯೋಗ ಸೌಂದರ್ಯ, ತಾರುಣ್ಯಸೌಕುಮಾರ್ಯ, ಮಾಧುರ್ಯ, ಮೃದುತ್ವ, ಸೊಬಗು ವಿಶೇಷವಾಗಿ ಪ್ರಯೋಗಿಸಬಹುದು. ಯಮಕ, ಗಮಕ, ಯತಿ ನಿರ್ವಹಣೆಯಲ್ಲಿ ಸೊಗಸು, ಕಾರಕ ಪ್ರಯೋಗ ನೈಪುಣ್ಯ, ಕ್ರಿಯೆಯನ್ನು ಪ್ರಯೋಗಿಸುವುದರಲ್ಲಿ ಸೌಂದರ್ಯ, ಪಾದವಿರಾಮದಲ್ಲಿನ ಅಂದಚಂದ, ನಡಿಗೆಯಲ್ಲಿ ಒನಪು ವಯ್ಯಾರ, ಸಮವಾದ ತೂಗು, ಅಕ್ಷರಶಯ್ಯಾಸೌಂದರ್ಯ, ನೈಪುಣ್ಯ, ರಾಸಿಕ್ಯ, ಸಂವಾದ ರಚನೆಯ ರೀತಿ ವಿಶೇಷವಾಗಿ ಸ್ಪಷ್ಟವಾಗುತ್ತವೆ. ಉಪಮಾನ, ಸಮರ್ಥವಾದ ಉತ್ಪ್ರೇಕ್ಷೆ, ಲಕ್ಷ್ಯಲಕ್ಷಣಗಳ ಸಮನ್ವಯ, ಅಲಂಕಾರಯೋಜನೆ ಇರುವಂತೆ ಕೃತಿಯನ್ನು ರಚನೆ ಮಾಡಿದರೆ ಅದು ಉತ್ತಮವಾದ ಕಾವ್ಯ ಎನಿಸಿಕೊಳ್ಳುತ್ತದೆ ಎಂದು ಸೋಮನಾಥನು ತನ್ನ ಪಂಡಿತಾರಾಧ್ಯ ಚರಿತ್ರೆಯಲ್ಲಿ ಹೇಳುತ್ತಾನೆ. (ದೀಕ್ಷಾಪ್ರಕರಣ. ಪು.೯) ಇಲ್ಲಿ ಹೇಳಲಾದ ಲಕ್ಷಣಗಳೆಲ್ಲವೂ ಅವನ ಕಾವ್ಯದಲ್ಲಿ ಮೂಡಿಬಂದಿವೆ.

ಇದು ಕಾವ್ಯ ಹೇಗಿರಬೇಕು ಎನ್ನುವುದರ ವಿಷಯದಲ್ಲಿ ಸೋಮನಾಥನು ನಿರೂಪಿಸಿದ ರೀತಿ. ಕಾವ್ಯ ಹೇಗೆ ಇರಬಾರದು ಎನ್ನುವುದನ್ನು ಸಹ ಕುಕವಿ ನಿಂದಾರೂಪವಾಗಿ ಸೋಮನನು ಹೇಳಿದ್ದಾನೆ. "ಕೌದಿಯಂತೆ ತೇಪೆತೇಪೆಯಾಗಿ ಪೂರಣಕ್ಕಾಗಿ ಯಾವಾವೋ ಶಬ್ದಗಳನ್ನು ಬೆರೆಸುವುದು, ಅಪಶಬ್ದಗಳನ್ನು ಪ್ರಯೋಗಿಸುವುದು, ಕ್ರಮವಿಲ್ಲದೆ ಪ್ರಯೋಗ ಮಾಡುವುದು, ಹೊಂದಾಣಿಕೆ ಇಲ್ಲದ ಪದಗಳ ಪ್ರಯೋಗ, ಕ್ರಿಯಾಲೋಪ, ಸಂಘಟನೆಯ ದೋಷ, ವ್ಯರ್ಥವಾದ ಕಾಕು, ಅಸಂಗತಿ, ವಿರಸ, ವೈಕಲ್ಯ, ಅತ್ಯುಕ್ತಿ, ವ್ಯತಿರೇಕಪದ, ಪದಸ್ವರೂಪವನ್ನು ಮೊಟಕುಗೊಳಿಸುವುದು, ಅಸಮಗ್ರತೆ, ಶಿಥಿಲಬಂಧ, ಜಾಳುಜಾಳಾಗಿ ಪದಗಳ ಪ್ರಯೋಗ, ಗ್ರಾಮ್ಯ ಪದಪ್ರಯೊಗ, ಅರ್ಥವಾಗದ ಪದಪ್ರಯೋಗ, ಶಕ್ತಿಲೋಪ, ಛಂದೋವಿರುದ್ಧ ಮುಂತಾದವುಗಳು ಕಾವ್ಯಕ್ಕೆ ಅಪಕೀರ್ತಿಯನ್ನು ತಂದೊಡ್ಡುತ್ತವೆ. ಅಂತಹ ಶೈಲಿ ಅಪಲಾಪ, ಪ್ರಲಾಪಧೋರಣೆ ಎನಿಸಿಕೊಳ್ಳುತ್ತದೆ. ಇದರಂತೆ ಅವಮಾನಕರವೆಂದು, ಹಗುರವೆಂದು ಭಾವಿಸದೆ ಸಂಶಯವಿಲ್ಲದೆ, ನೆಲ್ಲು ಮೊಸರು ಕಲಿಸಿ ಹಿಸಿಗಿದಂಥ ಶೈಲಿಯಿಂದ ಕೂಡಿದ ಕೃತಿಗಳು ಕೃತಿಗಳಲ್ಲ. ಅವು ಅಲ್ಪಕೃತಿಗಳೆನಿಸುತ್ತವೆ" (ದೀಕ್ಷಾಪ್ರಕರಣ ಪು.೯) ಎನ್ನುವುದು ಸೋಮನಾಥನ ನಿಲುವು.

ಸಂಸ್ಕೃತ ಮತ್ತು ತೆಲುಗಿನ ವಿಷಯದಲ್ಲೇ ಅಲ್ಲದೆ ಮರಾಠೀ, ಕನ್ನಡ, ತಮಿಳು, ಭಾಷೆಗಳಲ್ಲಿಯೂ ಸೋಮನಾಥನಿಗೆ ಕವಿತ್ವಹೇಳುವಷ್ಟು ಪಾಂಡಿತ್ಯವಿತ್ತು ಎನ್ನುವುದಕ್ಕೆ ಪರ್ವತ ಪ್ರಕರಣದಲ್ಲಿ ಆಯಾಭಾಷೆಗಳಿಗೆ ಸಂಬಂಧಿಸಿದ ಯಾತ್ರಿಕರ ಗುಂಪುಗಳು ಹೇಳಿಕೊಂಡ ಮಾತುಗಳನ್ನು ಕುರಿತು ರಚಿಸಿದ ಭಾಗಗಳನ್ನು ಗಮನಿಸಬಹುದು. ಯಾವುದೇ ಮಾತನ್ನು ವಚನ ರೂಪದಲ್ಲಿ ಹೇಳುವುದಕ್ಕಿಂತಲೂ ಛಂದಸ್ಸಿನಲ್ಲಿ ಹೇಳುವುದು ಕಷ್ಟ. ಅದರಲ್ಲೂ ಪ್ರಾಸ, ವಡಿ ಇತ್ಯಾದಿಗಳ ಜೊತೆಗೆ ಹೇಳುವುದಕ್ಕೆ ಮತ್ತಷ್ಟು ವ್ಯುತ್ಪತ್ತಿ ಬೇಕಾಗುತ್ತದೆ.

ಸೋಮನಾಥನ ಬಹುಮುಖೀನ ಶಾಸ್ತ್ರಪರಿಜ್ಞಾನ

ಸೋಮನಾಥನು ಕೇವಲ ಕಾವ್ಯಬರೆಯಬೇಕೆನ್ನುವ ಉದ್ದೇಶದಿಂದ ತನ್ನ ರಚನೆಯನ್ನು ಪ್ರಾರಂಭಿಸಲಿಲ್ಲ. ಆತನ ಬರಹಗಳೆಲ್ಲವೂ ವೀಕಶೈವ ಮತ ಪ್ರಚಾರಕ್ಕೆಂದೇ ಮೀಸಲಾದವು. ವೀರಶೈವಮತ ಪ್ರಚಾರಕ್ಕೆ ಬದ್ಧಕಂಕಣನಾದ ಸೋಮನನು ಅನೇಕ ಇತರ (ಭಾರತೀಯ) ಧರ್ಮಗಳನ್ನು ಕುರಿತು ಸಮಗ್ರವಾಗಿ ತಿಳಿದವನಲ್ಲದೆ, ಅವುಗಳನ್ನು ಸಮರ್ಥವಾಗಿ ಖಂಡನೆ ಮಾಡಬಲ್ಲ ಪಾಂಡಿತ್ಯವನ್ನೂ ಉಳ್ಳವನಾಗಿದ್ದನೆನ್ನುವುದು ಆತನು ತನ್ನನ್ನು ಕುರಿತು ಹೇಳಿಕೊಂಡಿರುವ ಮಾತುಗಳಿಂದಲೂ, ಕಾವ್ಯಗಳಲ್ಲಿ ಹೆಸರಿಸಿದ ಶಾಸ್ತ್ರಗ್ರಂಥಗಳಿಂದಲೂ ನಮಗೆ ಸ್ಪಷ್ಟವಾಗುತ್ತದೆ. ಆತನ ಚತುರ್ವೇದಸಾರಮು, ಸೋಮನಾಥಭಾಷ್ಯಮು ಮೊದಲಾದ ಗ್ರಂಥಗಳಲ್ಲಿ ಆತನ ಪಾಂಡಿತ್ಯವನ್ನು ನಾವು ಕಾಣಬಹುದು. ಕೇವಲ ಪಾಂಡಿತ್ಯಪೂರ್ಣವಾದ ರಚನೆಗಳಿಂದ ಅವನ ಪಾಂಡಿತ್ಯಪ್ರಕಟವಾಗಬಹುದು, ಆದರೆ ತಾನು ಸಂಕಲ್ಪಿಸಿದ ವೀರಶೈವಧರ್ಮವ್ಯಾಪ್ತಿ ನಡೆಯಬೇಕಾದರೆ, ಮೊದಲು ತಾನು ಅದನ್ನು ಆಚರಿಸಿ ಲೋಕಕ್ಕೆ ಮಾದರಿ ಆಗಬೇಕು. ತನ್ನ ರಚನೆಗಳನ್ನು ಓದಿದವರಿಗೆ ನಾವೂ ಇದನ್ನೇ ಅನುಸರಿಸಿ ಧನ್ಯರಾಗಬೇಕು ಎನ್ನುವ ಭಾವನೆ ಮೂಡಬೇಕು. ಕೇವಲ ಸಂಕಲ್ಪದಿಂದ ಪ್ರಯೋಜನವಿಲ್ಲ. ಒಂದು ಧರ್ಮವನ್ನು ಅನುಸರಿಸಬೇಕೆನ್ನುವ ಬಯಕೆ ತೀವ್ರವಾಗಿ ಮೂಡಬೇಕಾದರೆ, ಅವನಲ್ಲಿ ಆ ಭಾವೋದ್ರೇಕವನ್ನು ಮೂಡುವಂತೆ ಮಾಡಬೇಕು. ಆ ಕೆಲಸ ಸೋಮನನಿಂದ ಸಮರ್ಥವಾಗಿ ನಡೆದಿದೆ. ತಾನು ಭಾವೋದ್ರೇಕಕ್ಕೆ ಒಳಗಾಗುವುದಲ್ಲದೆ ಓದುಗರನ್ನು ಸಹ ಭಾವಾವಿಷ್ಠರನ್ನಾಗಿಸಬಲ್ಲ ಸಾಮರ್ಥ್ಯ ಸೋಮನಾಥನದು. ಅದಕ್ಕೆ ಅವನು ದೇಶೀಯ ಇತಿವೃತ್ತ, ದೇಶೀಯ ಛಂದಸ್ಸು, ದೇಶೀಯ ವ್ಯಕ್ತಿಗಳ ಚರಿತೆ, ದೇಶೀಯವಾದ ಮಾತು ಭಾಷೆ ಇತ್ಯಾದಿಗಳನ್ನು ಮೈಗೂಡಿಸಿಕೊಂಡು ಅದನ್ನು ಜನಸಾಮಾನ್ಯಕ್ಕೆ ತಲುಪಿಸುವಲ್ಲಿ ಕೃತಕೃತ್ಯನಾಗಿದ್ದಾನೆ.

ಸೋಮನಾಥನು ಹೇಳಿದ ಗ್ರಂಥಗಳ ಹೆಸರುಗಳನ್ನು ನೋಡಿದರೆ ಆತನ ಶಾಸ್ತ್ರಪಾಂಡಿತ್ಯ ಸ್ಪಷ್ಟವಾಗುತ್ತದೆ. ಋಗ್ಯಜುಸ್ಸಾಮಾಥರ್ವವೇದಸಂಹಿತೆ, ಬ್ರಾಹ್ಮಣಗಳು,

ರುದ್ರಸೂಕ್ತ, ಶತರುದ್ರೀಯ, ಪುರುಷಸೂಕ್ತ, ಚರಣವ್ಯೂಹ, ವೇದಭಾಷ್ಯ, ವ್ಯಾಸಭಾಷ್ಯ, ಮಹಾಸ್ತೋತ್ರ, ಪವಮಾನ, ಕೈವಲ್ಯ, ಕೇನ, ಈಶ, ಜಾಬಾಲ, ಕಾಲಾಗ್ನಿರುದ್ರ, ಮಾನವ, ಜೈಗೀಷ, ಮಾರುತ, ನಾರಾಯಣ, ಬ್ರಾಹ್ಮಣ, ಶಿವಸಂಕಲ್ಪ, ರುದ್ರಚಯ, ಅಥರ್ವಶೀರ್ಷ, ಅಥರ್ವಶಿಖ, ಬೃಹದಾರಣ್ಯಕ, ಗರ್ಭ, ಹಂಸ, ಶ್ವೇತಾಶ್ವತರ, ರುದ್ರೋಪನಿಷತ್ತುಗಳು, ಕಾತ್ಯಾಯನಗೃಹ್ಯಸೂತ್ರ, ಜಾಬಾಲಿಸ್ಮೃತಿ, ರೌದ್ರಬೋಧಾಯನಸ್ಮೃತಿ, ಶಾತಾತಪಸ್ಮೃತಿ, ವಿಜ್ಞಾನೇಶ್ವರ, ವೃದ್ಧಶಾತಾತಪ, ಲೌಗಾಕ್ಷಿಕಸ್ಮೃತಿ, ಯುರ್ವೇದಸೂತ್ರ, ಪಾರಾಶರಸ್ಮೃತಿ, ಯಮಸ್ಮೃತಿ, ರುದ್ರಾಕ್ಷಕಲ್ಪ, ವ್ಯಾಸಸ್ಮೃತಿ, ಬೋಧಾಯನಸ್ಮೃತಿ, ವಸಿಷ್ಠಸ್ಮೃತಿ, ವಾಲ್ಮೀಕಿಸ್ಮೃತಿ, ವಾಧೂಲ, ಗೌತಮಸ್ಮೃತಿ, ಈಶಾನಸಂಹಿತ, ಜಾಬಾಲಸ್ಮೃತಿ, ಕೈವಲ್ಯಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ, ಇತ್ಯಾದಿ ಗ್ರಂಥಗಳು, ಶೈವ, ಸ್ಕಾಂದ, ಕೂರ್ಮ, ಲಿಂಗ, ವಾಯು, ವಾಮನ, ಬ್ರಹ್ಮವೈವರ್ತ, ಪದ್ಮ, ನಾರದ, ಬ್ರಹ್ಮಾಂಡ, ವಾರಾಹ, ಗಾರುಡ, ಮತ್ಸ್ಯ, ಮಾರ್ಕಂಡೇಯ, ಭಾಗವತ, ಭವಿಷ್ಯತ್, ಬ್ರಹ್ಮ, ವೈಷ್ಣವ, ಆಗ್ನೇಯ, ಮಾನವ, ವಾಸಿಷ್ಠರಾಮಾಯಣ, ವಾಸಿಷ್ಠಲೈಂಗ, ಸೂತಸಂಹಿತ, ಭಾರತ, ಭರಿವಂಶ, ಸಾವರ್ಣಿಸಂಹಿತ, ಶಿವ, ಶಿವಧರ್ಮಶಾಸ್ತ್ರ, ಈಶಾನಸಂಹಿತ, ಬೃಹತ್ಕಾಲೋತ್ತರ, ವ್ಯಾಸಜೈಮಿನಿ ಸಂವಾದ ಮುಂತಾದ ಪುರಾಣೋಪಪುರಾಣಗಳು. ವೀರಶೈವಧರ್ಮಶಾಸ್ತ್ರ, ಭೀಮಾಗಮ, ಸರ್ವಾಗಮೋತ್ತರ, ಕಾರಣಾಗಮ, ಪಾಣಿಸ್ಥತಲ, ದಿವ್ಯಾಗಮ, ಈಶ್ವರಭಾಗ ಮುಂತಾದ ವೀರಶೈವಧರ್ಮಪ್ರತಿಪಾದಕ ಆಗಮಾದಿ ಗ್ರಂಥಗಳು, ವ್ಯಾಕರಣ, ಛಂದೋಲಂಕಾರ, ಷಟ್ತರ್ಕ, ವೈಶೇಷಿಕ, ಹಠಯೋಗ, ನೇತ್ರವೇದ್ಯ, ವಿಷವೈದ್ಯ, ರಸವಾದ, ಜ್ಯೋತಿಷ, ಕೊಕ್ಕೋಕ, ಭರತ, ಸಂಗೀತಾದಿ ಶಾಸ್ತ್ರಗಳು, ಆಂಧ್ರ, ಕರ್ನಾಟ, ತಮಿಳು, ಮಹಾರಾಷ್ಟ್ರ, ಸಂಸ್ಕೃತ ಭಾಷಾಪಾಂಡಿತ್ಯ- ಇವೆಲ್ಲ ಸೋಮನಾಥನಿಗೆ ಅಂಗೈಯ ನೆಲ್ಲಿಯಂತಹ ವಿಷಯಗಳು.

ಇವಲ್ಲದೆ ನಾನಾದೇಶಗಳ, ಧರ್ಮಸಿದ್ಧಾಂತಗಳ, ಪರಿಚಯವೂ ಈತನಿಗೆ ಉಂಟು. ನಾನಾದೇಶಗಳ ಆಚಾರಗಳೂ, ನಾನಾವಿಧ ಆಹಾರಪದ್ಧತಿಗಳೂ, ವಿಹಾರಗಳೂ, ವೇಷಗಳೂ ಈತನಿಗೆ ಗೊತ್ತು. ವೇದವೇದಾಂಗ ಪಾರಂಗತನಾದರೂ ಕೇವಲ ಛಾಂದಸನಲ್ಲ. ಈತನ ಲೌಕಿಕವೃತ್ತಪರಿಜ್ಞಾನ ಪ್ರಶಂಸನೀಯ.

ತಾನು ಏನನ್ನು ನಿರೂಪಿಸಬೇಕು ಎಂದುಕೊಳ್ಳುತ್ತಾನೋ ಅದನ್ನು ಅತ್ಯಂತ ಪ್ರಭಾವಕಾರಿಯಾಗಿ ಹೇಳುವುದು ಸೋಮನಾಥನಿಗೆ ಅವಲೀಲವಿದ್ಯೆ. ಭಸ್ಮರುದ್ರಾಕ್ಷಧಾರಣಾದಿಗಳನ್ನು ಟೀಕಿಸಿದವರಿಗೆ ಸಮಾಧಾನ ಹೇಳುವ ಪಂಡಿತಾರಾಧ್ಯರ ಮೂಲಕ ವಿಭೂತಿಧಾರಣೆಯ ಮಹಿಮೆಯನ್ನು ನಿರೂಪಣೆಯನ್ನು ಓದಿದ ವೈಷ್ಣವನಿಗೂ ಭಸ್ಮವನ್ನು ಧರಿಸಬೇಕು ಎನಿಸುವಂತೆ ನಿರೂಪಿಸುತ್ತಾನೆ. ಸೋಮನಾಥ "ವಿಭೂತಿಯನ್ನು

ಅಡ್ಡವಾಗಿ ಧರಿಸಬೇಕೆಂದೇ ಬ್ರಹ್ಮನು ಹಣೆಯನ್ನು ಅಡ್ಡವಾಗಿ ನಿರ್ಮಿಸಿದನಲ್ಲದೆ ನಿಲುವಾಗಿಯೋ ಸೊಟ್ಟಸೊಟ್ಟವಾಗಿಯೋ, ದುಂಡಾಗಿಯೋ ಸೀಳಾಗಿಯೋ ನಿರ್ಮಿಸಲಿಲ್ಲ" ಎಂದು ಪಂಡಿತರ ಮೂಲಕ ಹೇಳುವ ಮಾತು ಚಮತ್ಕಾರ ಪೂರ್ಣವಾದದ್ದು. ಇದೇ ಸಂದರ್ಭದಲ್ಲಿ ರುದ್ರಾಕ್ಷಧಾರಣ, ಪಾದೋದಕ ಸ್ವೀಕರಣೆಯ ಮಹಿಮೆ, ಲಿಂಗಪೂಜೆಯ ವೈಶಿಷ್ಟ್ಯ, ಲಿಂಗಧಾರಣೆಯ ಆವಶ್ಯಕತೆ, ಲಿಂಗ ಎಲ್ಲೆಲ್ಲಿ ಧರಿಸಬಹುದು ಎನ್ನುವ ವಿವರ, ಶಿವನ ಪ್ರಸಾದ ಹೇಗೆ ಸ್ವೀಕಾರಾರ್ಹ ಎನ್ನುವ ನಿರೂಪಣೆಯನ್ನು ಅತ್ಯಂತ ಹೃದ್ಯವಾಗಿ ನಿರ್ವಹಿಸಿದ್ದಾನೆ. ಇಲ್ಲಿ ನಿರೂಪಿಸಿದ ಶ್ರಾದ್ಧಗಳಲ್ಲಿ ಬರುವ ಅಗ್ನೌಕರಣ, ಪಾಣಿಹೋಮಾದಿಗಳನ್ನು ಕುರಿತಾದ ವೈದಿಕ ನಿರೂಪಣೆ ಸೋಮನಾಥನ ಶಾಸ್ತ್ರೀಯ ಪಾಂಡಿತ್ಯಕ್ಕೆ ವೈದಿಕಾಚಾರವಿಷಯಕ ಜ್ಞಾನಕ್ಕೆ ನಿದರ್ಶನ.

ಪಂಡಿತಾರಾಧ್ಯಚರಿತ್ರೆಯಲ್ಲಿ ಬೌದ್ಧಗುರುವಿನ ಜೊತೆ ವಾದದ ಸಂದರ್ಭದಲ್ಲಿ ಸೋಮನನು ನಿರೂಪಿಸಿದ ಹಲವು ಇತರ ಮತಗಳ ಖಂಡನೆ ಪ್ರತ್ಯೇಕವಾದದ್ದು. ಇತರ ಧರ್ಮಗಳ ಸಿದ್ಧಾಂತವನ್ನು ಮೊದಲು ಮಂಡಿಸಿ ನಂತರ ಅದನ್ನು ವೇದೋಕ್ತಿಗಳಿಂದ, ಪುರಾಣಾದಿಗಳ ನಿದರ್ಶನಗಳಿಂದ ಪೂರ್ವಪಕ್ಷಮಾಡುವ ಪದ್ಧತಿ ಅತ್ಯಂತ ಪ್ರಭಾವಪೂರ್ಣವಾದದ್ದು. ತನ್ನ ವೀರಶೈವ ಸಿದ್ಧಾಂತವೇ ಸಮಗ್ರ ಮತ್ತು ಸರಿಯೆನ್ನುವ ನಿಲುವು ಈತನದು. ಆ ಕಾರಣದಿಂದಲೇ ಸೋಮನನು ಇತರೆ ವಾದಗಳನ್ನು ಸೀಳಿಸಿಬಿಡುತ್ತಾನೆ. ಮಾತಿನಿಂದಲೇ ಪರವಾದಿಗಳನ್ನು ಜರ್ಜರೀಭೂತರನ್ನಾಗಿ ಮಾಡಿಬಿಡುತ್ತಾನೆ. ಈತನು ಆಗ ಯಾರನ್ನೂ ಲೆಕ್ಕಿಸುವುದಿಲ್ಲ. "ಗೌರೀಶನಿಗೆ ಮೇಲೆ ಮತ್ತೊಬ್ಬ ದೇವರಿಲ್ಲವೆಂದು ತಲೆ ಸಮರ್ಪಿಸಿ ಮತ್ತೆ ಪಡೆಯುತ್ತೇನೆ. ಬೆಂಕಿಯನ್ನು ಹಿಡಿಯುತ್ತೇನೆ. ವಿತಂಡವಾದದಿಂದ ಒದರಿ, ಎದುರಿಸಿದರೆ ಗೆಲ್ಲುತ್ತೇನೆ". "ಶಿವನಮೇಲೆ ಮತ್ತೊಬ್ಬನಿದ್ದಾನೆಂದರೆ ನನ್ನ ಅಂಗಾಲೆತ್ತಿ ಅವನ ನಡುನೆತ್ತಿಯ ಮೇಲೆ ಒದೆಯುತ್ತೇನೆ" ಎನ್ನುವ ಉದ್ಧಟತನ ಅವನ ವೀರಶೈವಧರ್ಮಾಭಿಮಾನಕ್ಕೆ, ಕೆಚ್ಚೆದೆಗೆ, ತುಂಬು ಪಾಂಡಿತ್ಯದ ತುಳುಕುವ ನಂಬಿಕೆಗೆ ನಿದರ್ಶನ.

ವೇದ ಉಪನಿಷತ್ತು ಪುರಾಣಗಳಲ್ಲಿ ಪಾಂಡಿತ್ಯ ಮಾತ್ರವಲ್ಲದೆ ಇತರೆ ಶಾಸ್ತ್ರಗಳಲ್ಲಿಯೂ ಸೋಮನಾಥನ ವೈದುಷ್ಯ ಅಪಾರವಾದದ್ದು.

ಪುರಾತನ ಪ್ರಕರಣದಲ್ಲಿನ ಗುರು ಭಕ್ತಾಂಡಾರಿಯ ಕಥೆಯಲ್ಲಿ ಅವನು 'ದೈವಯೋಗದಿಂದ' ವೇಶ್ಯಾವಾಟಿಕೆಯನ್ನು ಪ್ರವೇಶಮಾಡಿ ಒಬ್ಬ ವೇಶ್ಯೆಯನ್ನು ಕಂಡು ಪರವಶನಾಗುತ್ತಾನೆ. ದೂತನ ಜೊತೆ ಕಳಿಸಿದ ಬೆಲೆಗೆ ಅವಳು ಒಪ್ಪದಿದ್ದಾಗ ತಾನೇ ಅವಳ ಬಳಿಗೆ ಹೊಗಿ ತಾನು ಚತುರನೆಂದೂ, ರಸಿಕತೆ ಗೊತ್ತೆಂದೂ, ಕಾಮಶಾಸ್ತ್ರದಲ್ಲಿ

ವಿಶಾರದನೆಂದೂ ಅದರ ರಹಸ್ಯಗಳೆಲ್ಲವೂ ಗೊತ್ತೆಂದೂ ಹೇಳಿ ತನ್ನ ಮಾತು ಮುಂದುವರಿಸಿ " ಗಂಡು ಹೆಣ್ಣುಗಳ ಜಾತಿ, ಗುಣ, ಅನ್ಯೋನ್ಯಾಭಿಲಾಷೆ, ಇಷ್ಟ, ತುಷ್ಟಿ ಇವೆಲ್ಲ ನನಗೆ ಚನ್ನಾಗಿ ಗೊತ್ತು. ಸಂಭೋಗ ವಿಜ್ಞಾನದಲ್ಲಿ ನಾನು ಗಟ್ಟಿಗನು. ಸ್ತ್ರೀ ಪುರುಷರು ಅವರ ಯೋನಿದಂಡಗಳ ಹೆಚ್ಚು ಕಡಿಮೆಗಳು ಸ್ಥಾನ ಕರಣಗಳ ಸಮತ್ವ, ಅಸಮತ್ವ, ಬಂಧಗಳ ಪೊಂಕ, ಕರಣಗಳು, ರತಿವಿಶೇಷಗಳೂ, ಕಾಲಗಳು, ಸ್ತ್ರೀಯರ ಮನಸಿನಲ್ಲಿನ ಭಾವಗಳನ್ನು ತಿಳಿಯುವ ತಿಳುವಳಿಕೆ, ಬಾಲ ಯೌವನ, ಪ್ರೌಢ, ವನಿತೆಯರ ವಯಸ್ಸಿಗೆ ತಕ್ಕ ಮನ್ಮಥ ಶೃಂಗಾರಾನುಭವಗಳು, ಪಾದಾಂಗುಷ್ಠ, ಅಂಗಾಲು, ಮೀನಕಂಡ, ಊರುಮೂಲ, ಮರ್ಮಾವಯವ, ಹೊಕ್ಕುಳು, ಎದೆ, ಭುಜ, ಗೋಣು, ಗಲ್ಲ, ತುಟಿ, ಕಣ್ಣೆವೆ, ಮುಖ, ತುರುಬು ಮುಂತಾದ ಕಲಾಸ್ಥಾನಗಳ ನೈಪುಣ್ಯ, ಕಟಿಯ ಕೆಳಗೆ ಕೈಹಾಕಿ ಮೆಲ್ಲಗೆ ಕೆಳಗೆ ಜಾರಿಸಿ ಹಾಗೇ ತಿರುವಿದಾಗ ಆ ಕೈಯನ್ನು ಹಿಡಿದಾಗ ವಿಲಾಸವಾಗಿ ಮುನ್ನಡೆಯುವ ನೈಪುಣ್ಯ ನನಗೆ ಚನ್ನಾಗಿ ಗೊತ್ತು...." ಇತ್ಯಾದಿಯಾಗಿ ತನ್ನ ಕಾಮಶಾಸ್ತ್ರಜ್ಞತೆಯನ್ನೆಲ್ಲ ಪ್ರಕಟಿಸುವ ಆ ಗುರುಭಕ್ತನ ಮುಖೇನ ಸೋಮನಾಥನು ತನ್ನ ಶಾಸ್ತ್ರಪರಿಜ್ಞಾನವನ್ನು ಸ್ಪಷ್ಟಪಡಿಸುತ್ತಾನೆ.

ಇದೇ ಕಥೆಯಲ್ಲಿ ಆ ವೇಶ್ಯೆ ಗುರುಭಕ್ತಾಂಡಾರಿಯನ್ನು ತಡೆಯುವುದಕ್ಕಾಗಿ ಹೇಳಿದ ಮಾತುಗಳಲ್ಲಿ ಸೋಮನಾಥನು ನಿರೂಪಿಸಿದ ವೇಶ್ಯೆಯರ ಮನೋವರ್ತನೆಗಳು ಎಂತಹ ಕಾಮಾತುರನಿಗೂ ಜುಗುಪ್ಸೆಯನ್ನು ಉಂಟುಮಾಡುವಂಥವು.

ಇದೇ ಪ್ರಕರಣದಲ್ಲಿ ಕುಮಾರಪಾಲ ಘೂರ್ಜರನ ಕಥೆಯಲ್ಲಿ ರಾಜನು ತನ್ನ ಹೆಂಡತಿಯ ಜೊತೆಯಲ್ಲಿ ದ್ಯೂತವನ್ನು ಆಡುತ್ತಿರಬೇಕಾದರೆ ಅದರಲ್ಲಿ ಬರುವ ದಾಳಗಳ ಸಂಖ್ಯೆಗಳಿಂದಲೇ ಅಧ್ಯಾತ್ಮವನ್ನು ಬೋಧಿಸುವುದು ಸೋಮನಾಥನ ಅತ್ಯಂತ ಚಮತ್ಕಾರ ಮತ್ತು ಪಾಂಡಿತ್ಯಪೂರ್ಣವಾದ ರಚನೆ!

ಇದೇ ಪ್ರಕರಣದಲ್ಲಿ ಬೆಲಿದೇವ ವೇಮನಾರಾಧ್ಯರ ಕಥೆಯಲ್ಲಿ ರಾಜನನ್ನು ಕಾಲಸರ್ಪ ಕಚ್ಚಿದ ಸಂದರ್ಭವನ್ನು ಹೇಳುವಾಗ ಸೋಮನಾಥನು ಮಹಾಭಯಂಕರ ಸರ್ಪಗಳ ಹೆಸರುಗಳನ್ನು, ಅವುಗಳ ಜಾತಿಗಳನ್ನೂ ಅವುಗಳ ವಿಷಪ್ರಭಾವವನ್ನೂ, ಗಾರುಡಮಂತ್ರತಂತ್ರಾದಿಗಳನ್ನೂ ವಿಷವೈದ್ಯದ ವಿವರಣೆಯನ್ನೂ ನೀಡುತ್ತಾನೆ. ಮೊರದ ವೇಮಯ್ಯನವರ ಕಥೆಯಲ್ಲಿ ರಸಸಿದ್ಧನು ಬಂಗಾರವನ್ನು ತಯಾರಿಸುವ ಬಗೆಯನ್ನು ಕುರಿತು ಹೇಳುವ ಸೋಮನಾಥನು ತನ್ನ ರಸವಿದ್ಯೆಯ ಪರಿಜ್ಞಾನವನ್ನು ನಿರೂಪಿಸುತ್ತಾನೆ.

ಪರ್ವತ ಪ್ರಕರಣದಲ್ಲಿ ಶ್ರೀಶೈಲದಲ್ಲಿ ನಿರ್ವಹಿಸಲಾದ ಶಿವರಾತ್ರಿಯ ಉತ್ಸವದ ವೇಳೆಯಲ್ಲಿ ಕಲಾವಿದರು ಪ್ರದರ್ಶಿಸಿದ ಆಟಪಾಟಗಳ, ಅವರ ವೇಷಭೂಷಣಗಳ,

ಭರತನಾಟ್ಯ ಪ್ರದರ್ಶನಗಳ, ಆಂಗಿಕ ವಿನ್ಯಾಸಗಳ, ಸಂಗೀತಗಾನದ, ವಾದ್ಯಗಳ, ತಾಳಗಳ, ರಾಗಗಳ ಬಗೆಗೆ ಸೋಮನಾಥನಿಂದ ಸಿಗುವ ಮಾಹಿತಿ ಎಂಥವರನ್ನೂ ಬೆರಗುಗೊಳಿಸುವಂಥದ್ದು. ಇಂದಿನ ಕಾಲದವರಿಗೆ ಎಂಟುನೂರು ವರುಷಗಳ ಹಿಂದಿನ ಕಾಲದ ಕಲೆಯ ಬಗೆಗೆ ಪರಿಚಯ ನೀಡಬಲ್ಲ, ಸಂಶೋಧಕರಿಗೆ ಆಕರವಾಗಬಲ್ಲ ಮಾಹಿತಿ ಸೋಮನಾಥನಲ್ಲಿ ಸಿಗುತ್ತದೆ. ಅನೇಕ ತಾಳಗತಿಗಳ, ರಾಗಗಳ, ವೀಣಾವಾದ್ಯಗಳ ಹೆಸರುಗಳಲ್ಲಿ, ಬರಹಗಾರರ, ಮುದ್ರಕರ ಕಾರಣದಿಂದಾಗಿ ಅನೇಕ ಬದಲಾವಣೆಗಳು ಕಂಡುಬರುತ್ತವೆ.

ಹಳೆಯ ಕಾವ್ಯಸಾಹಿತ್ಯದಲ್ಲಿ (ತೆಲುಗಿನ ಪ್ರಬಂಧ ಪ್ರಕಾರದ ಕಾವ್ಯಗಳಲ್ಲಿ) ಲಕ್ಷಣಕಾರರು ಹೇಳಿದ ಎಲ್ಲರೀತಿಯ ವರ್ಣನೆಗಳೂ ಸೋಮನಾಥನಲ್ಲಿ ಸಿಗುತ್ತವೆ. ಆದರೆ ವರ್ಣನೆಗಾಗಿ ವರ್ಣನೆ ಎನ್ನುವ ರೀತಿಯಲ್ಲಿ ಅಲ್ಲದೆ ಆ ಸಂದರ್ಭದಲ್ಲಿ ಅವು ಅತ್ಯಗತ್ಯ ಎನ್ನುವಂತೆ ಸೋಮನಾಥನು ರಚಿಸಿರುವುದು ಆತನ ವೈಭವ ಮತ್ತು ಪ್ರಜ್ಞಾಪೂರ್ಣವಾದ ಪ್ರತಿಭೆಗೆ ಜೀವಂತ ನಿದರ್ಶನ.

.... ಮುಂದಿನ ಸಂಚಿಕೆಯಲ್ಲಿ

□□

ಪಂಪ ಭಾರತದ ಶ್ರೀಕೃಷ್ಣ

ಪ್ರೊ. ಎಸ್. ಬಸವರಾಜು

❖

ಕನ್ನಡದ ಆದಿಮಹಾಕವಿಯಾದ ಪಂಪ ತನ್ನ ಭಾರತ (ವಿಕ್ರಮಾರ್ಜುನ ವಿಜಯದ ಕೊನೆಯಲ್ಲಿ ಕೊಟ್ಟಿರುವ ಲೋಕ ಪೂಜ್ಯರ ಪಟ್ಟಿ ಹೀಗಿದೆ.

ಚಲದೊಳ್ ದುರ್ಯೋಧನಂ ನನ್ನಿಯೊಳಿನ ತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮುದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಮ್ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
ರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕ ಪೂಜ್ಯಂ
(ಆಶ್ವಾಸ,-೧೪, ಪದ್ಯ-೬೪)

(ಚಲದಲ್ಲಿ ದುರ್ಯೋಧನನು, ಸತ್ಯದಲ್ಲಿ ಸೂರ್ಯ ಪುತ್ರನಾದ ಕರ್ಣನು, ಪೌರುಷದಲ್ಲಿ ಭೀಮಸೇನನು, ಶಕ್ತಿಯಲ್ಲಿ ಮದ್ರದೇಶದ ರಾಜನಾದ ಶಲ್ಯನು. ಅತ್ಯುನ್ನತಿಯಲ್ಲಿ ದೇವಗಂಗೆಯ ಮಗನಾದ ಭೀಷ್ಮನು, ಬಿಲ್ವಿದ್ಯೆಯ ಶಕ್ತಿಯಲ್ಲಿ ಕುಂಭದಲ್ಲಿ ಹುಟ್ಟಿದ ದ್ರೋಣನು, ಪರಾಕ್ರಮದ ಹಿರಿಮೆಯಲ್ಲಿ ಅರ್ಜುನನು, ಧರ್ಮದಲ್ಲಿ ನಿರ್ಮಲ ಮನಸ್ಸಿನ ಧರ್ಮರಾಯನು ಅಧಿಕರಾದವರು, ಇವರುಗಳಿಂದ ಈ ಮಹಾಭಾರತವು ಲೋಕದಿಂದ ಪೂಜ್ಯವಾಯಿತು.)

ಪಂಪ ಈ ಪದ್ಯದಲ್ಲಿ ಮಹಾಭಾರತದ ಮುಖ್ಯವ್ಯಕ್ತಿಗಳನ್ನೂ, ಅವರವರ ಪ್ರಧಾನ ಗುಣವನ್ನೂ ಸೂತ್ರೀಕರಿಸಿ ಹೇಳಿದ್ದಾನೆ. ಆದರೆ ಇಲ್ಲಿ ಮಹಾಭಾರತದ ಅತ್ಯಂತ ಮುಖ್ಯಪಾತ್ರವಾದ ಶ್ರೀಕೃಷ್ಣನನ್ನೇ ಕೈಬಿಟ್ಟಿದ್ದಾನೆ. ಈ ಸಂಗತಿ ಅನೇಕರನ್ನು ವಿಚಾರಕ್ಕೆ ಗುರಿಮಾಡಿದ್ದು, ಸಾಕಷ್ಟು ಚರ್ಚೆಯೂ ನಡೆದಿದೆ. ಇಲ್ಲಿ ಅದರ ವಿವರಗಳಿಗೆ ಹೋಗದೆ, ಆ ಚರ್ಚೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೃಷ್ಣನ ಲೋಕಪೂಜ್ಯತೆಯ ವಿಷಯವಾಗಿ ಮತ್ತು ಅವನ ಅಲೌಕಿಕತೆಯ ಬಗ್ಗೆ ಪಂಪನಿಗಿದ್ದ ನಂಬಿಕೆಯನ್ನು ಅವನ ಭಾರತದ

ಸನ್ನಿವೇಶ ಮತ್ತು ಪಾತ್ರಗಳ ಆಧಾರದ ಮೇಲೆ ವಿವೇಚಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಮೊದಲು 'ಶಿಶುಪಾಲವಧೆಯ ಪ್ರಸಂಗ'ವನ್ನು ನೋಡಬಹುದು. ಒಮ್ಮೆ ಇಂದ್ರ ಲೋಕದಿಂದ ನಾರದಮುನಿ ಪಾಂಡುರಾಜನ ಸಂದೇಶವನ್ನು ತೆಗೆದುಕೊಂಡು ಪಾಂಡವರ ಬಳಿಗೆ ಬರುತ್ತಾನೆ. ತಮ್ಮ ತಂದೆಯು ಪದೋನ್ನತಿಗಾಗಿ ಪಾಂಡವರು ರಾಜಸೂಯಯಾಗವನ್ನು ಕೈಗೊಳ್ಳುವಂತೆ ಅವರನ್ನು ಪ್ರೇರೇಪಿಸುತ್ತಾನೆ. ಧರ್ಮರಾಯನು ತಮ್ಮಂದಿರಲ್ಲಿ ಆಲೋಚಿಸಿ, ಕೃಷ್ಣನನ್ನು ಬರಮಾಡಿಕೊಂಡು ಯಾಗದ ವಿಚಾರವಾಗಿ ಚರ್ಚಿಸಿ ಅದರ ಸಾಧ್ಯಾಸಾಧ್ಯತೆಗಳನ್ನು ತಿಳಿದು, ಕೊನೆಗೆ ರಾಜಸೂಯವನ್ನು ಕೈಗೊಳ್ಳಲು ಸಂಕಲ್ಪಮಾಡುತ್ತಾನೆ. ರಾಜಸೂಯಕ್ಕೆ ಪೂರ್ವಭಾವಿಯಾಗಿ ಜರಾಸಂಧನನ್ನೂ ಭೀಮ ವಧಿಸುತ್ತಾನೆ. ಯಾಗಕ್ಕೆ ಬೇಕಾದ ಸಂಪನ್ಮೂಲಗಳನ್ನು ಸಂಗ್ರಹಿಸಲಾಗುತ್ತದೆ. ಯಾಗ ಪ್ರಾರಂಭವಾಗಿ ರಾಜ ಧರ್ಮರಾಯನು ಪತ್ನಿ ದ್ರೌಪದಿಯೊಂದಿಗೆ ಯಾಗದ 'ಯಜಮಾನ'ನಾಗಿ ಎಲ್ಲ ಕಾರ್ಯಗಳನ್ನು ಸಾಂಗವಾಗಿ ನಿರ್ವಹಿಸುತ್ತಾನೆ. ಪ್ರಮುಖರೆಲ್ಲರೂ ಸೇರಿರುತ್ತಾರೆ. ಯಾಗದ ಮುಖ್ಯ ಅಂಗವಾದ 'ಅಗ್ರಪೂಜೆ'ಯ ಹಂತದಲ್ಲಿ 'ಈ ಸಭೆಯೊಳ್ ಅಗ್ರಪೂಜೆಗೆ ಆರ್ ತಕ್ಕರ್' (ಈ ಸಭೆಯಲ್ಲಿ ಅಗ್ರಪೂಜೆಗೆ ಯಾರು ಯೋಗ್ಯರು) ಎಂದು ಧರ್ಮರಾಯ ಹಿರಿಯನಾದ ಭೀಷ್ಮನನ್ನು ಕೇಳುತ್ತಾನೆ. ಆಗ ಭೀಷ್ಮನು.

ಬಲಿಯಂ ಕಟ್ಟಿದನಾವನೀ ಧರಣಿಯಂ ವಿಕ್ರಾಂತದಿಂದಂ ರಸಾ
ತಲದಿಂದೆತ್ತಿದನಾವನಂದು ನರಸಿಂಹಾಕಾರದಿಂ ದೈತ್ಯನಂ
ಚಲದಿಂ ಸೀಳ್ದವನಾವನಬ್ಧಿಮಥನ ಪ್ರಾರಂಭದೊಳ್ ಮಂದರಾ
ಚಲಮಂ ತಂದವನಾವನಾತನೆ ವಲಂ ತಕ್ಕಂ ಪೆಱರ್ ತಕ್ಕರೇ (ಆಶ್ವಾಸ–೬, ಪದ್ಯ–೪೧)

(ಯಾವನು ಬಲಿ ಚಕ್ರವರ್ತಿಯನ್ನು ಕಟ್ಟಿದವನು, ಯಾವನು ಈ ಭೂಮಿಯನ್ನು ಪರಾಕ್ರಮದಿಂದ ಪಾತಾಳದಿಂದ ಎತ್ತಿ ತಂದವನು, ಯಾವನು ನರಸಿಂಹನ ರೂಪದಿಂದ ಹಿರಿಣ್ಯ ಕಶಿಪುವನ್ನು ಸೀಳಿದವನು. ಯಾವನು ಸಮುದ್ರವನ್ನು ಕಡೆಯುವುದಕ್ಕೆ ಮೊದಲು ಮಂದರ ಪರ್ವತವನ್ನು ತಂದವನು, ಅವನೇ 'ಅಗ್ರಪೂಜೆ'ಗೆ ಯೋಗ್ಯನಲ್ಲದೆ ಬೇರೆಯವರು ಅರ್ಹರಾಗುವರೇ?)

ಎಂದು ಧರ್ಮರಾಯನ ಮನಸ್ಸಿನಲ್ಲಿದ್ದುದನ್ನೇ ಪ್ರಕಟಪಡಿಸಿದಂತೆ ಹೇಳುತ್ತಾನೆ. ಈ ಸಂದರ್ಭದಲ್ಲಿ ಪಂಪ ಭೀಷ್ಮನ ಮೂಲಕ ಶ್ರೀ ಕೃಷ್ಣನ ಅವತಾರಗಳನ್ನು ಪ್ರಸ್ತಾಪಿಸಿರುವುದನ್ನು ಗಮನಿಸಬೇಕು.

ಭೀಷ್ಮನ ಮಾತಿನಂತೆ ಧರ್ಮರಾಯನು ಶ್ರೀ ಕೃಷ್ಣನಿಗೆ ಅರ್ಘ್ಯವೆತ್ತುತ್ತಾನೆ. ಆಗ ಚೇದಿದೇಶದ ರಾಜನಾದ ಶಿಶುಪಾಲನು 'ಕಳೆ ಕಳೆ ಹರಿಗೆತ್ತಿದನರ್ಘ್ಯದರ್ಘ್ಯಮಂ' (ತೆಗೆ ತೆಗೆ ಕೃಷ್ಣನಿಗೆ ಕೊಟ್ಟ ಅಮೂಲ್ಯವಾದ ಅರ್ಘ್ಯವನ್ನು) ಎಂದು ಆಸ್ಫೋಟಿಸಿ, ಆಕ್ಷೇಪಿಸುತ್ತಾನೆ. ಅಲ್ಲದೆ 'ತಲೆ ನೆರತ ಡೊಳ್ಳು ಹೊಟ್ಟೆಯ' ಭೀಷ್ಮನ ಸಲಹೆ ಅನುಚಿತವೆಂದು ವಾದಿಸುತ್ತಾನೆ. 'ಪಚ್ಚಪಸಿಯ ತುಱುಕಾಱಂಗಗ್ಗಳಿಕೆಯನೆ ಮಾಡಿ ನೀನುಂ ಪಳಿಯಂ ಕಟ್ಟಿದೆಯೊ ಭೂಪರಿನಿಬರ ಕೊರಲೊಳ್' (ಹಸಿ ಹಸಿ ದನ ಕಾಯುವವನಿಗೆ ಮರ್ಯಾದೆಯನ್ನು ಮಾಡಿ ಇಷ್ಟು ಮಂದಿ ರಾಜರಿಗೂ ಅಪಚಾರ ಮಾಡಿದೆಯಲ್ಲಾ!) ಎಂದು ಧರ್ಮರಾಯನನ್ನು ಮೂದಲಿಸುತ್ತಾನೆ. ಬಳಿಕ ಶಿಶುಪಾಲ ಕೃಷ್ಣನನ್ನೇ ನೇರವಾಗಿ ತರಾಟೆಗೆ ತೆಗೆದುಕೊಳ್ಳುತ್ತಾನೆ.

ಮೀನಾವೆ ಪಂದಿಯೆಂದೆನಿ
ತಾನುಂ ತೆಱನಾಗಿ ಡೊಂಬ ವಿದ್ದೆಯನಾಡಲ್
ನೀನಱಿವೆಯುಱದಿದಿರ್ಚಿದೊ
ಡಾನಱಿವೆಂ ನಿನ್ನನಿಲ್ಲಿ ದೆಸೆವಲಿಗೆಯ್ಯಲ್(ಆಶ್ವಾಸ-೬. ಪದ್ಯ-೫೭)

(ಮೀನು, ಆಮೆ, ಹಂದಿ ಹೀಗೆ ಎಷ್ಟೋಬಗೆಯಾಗಿ ಡೊಂಬರ ವಿದ್ಯೆಯನ್ನು ತೋರಿಸುವುದಕ್ಕೆ ನೀನು ಬಲ್ಲೆ. ನಿನ್ನನ್ನು ಬಿಡದೆ ಎದುರಿಸಿ ದಿಗ್ಬಲಿ ಕೊಡಲು ನಾನು ಬಲ್ಲೆ.)

ಈ ಪದ್ಯದಲ್ಲಿ ಲೇವಡಿಯ ನೆಲೆಯಲ್ಲಿ ಕೃಷ್ಣನ ಹಿಂದಿನ ಅವತಾರಗಳ ಉಲ್ಲೇಖವಿರುವುದು ಗಮನಿಸಬೇಕಾದುದು. ಶಿಶುಪಾಲನ ಬಾಯಿಂದ ಬೈಗುಳಗಳು ಬೆಳೆಯುತ್ತಾ ಹೋಗಲು, ಅದನ್ನು ಸಭೆ ಮೌನವಾಗಿ ಕೇಳುತ್ತಿರುತ್ತದೆ. ಆಗ ಕೃಷ್ಣನು ಶಿಶುಪಾಲನು ಹುಟ್ಟಿದ ಸಂದರ್ಭದ ವೃತ್ತಾಂತವೊಂದನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸುತ್ತಾನೆ.

ನಿನ್ನಯ ತಾಯ್ ಸಾತ್ವತಿಯುಂ
ನಿನ್ನಂ ತಂದೆನ್ನ ತೊಡೆಯ ಮೇಲಿಟಿಪುವುದುಂ
ನಿನ್ನ ಲಲಾಟದ ಕಣ್ಣದು
ಮುನ್ನಮೆ ಕಿಡೆ ನಿನ್ನ ಮೃತ್ಯುವೆನ್ನಯ ಕೈಯೊಳ್ (ಆಶ್ವಾಸ-೬, ಪದ್ಯ-೬೦)

(ನಿನ್ನ ತಾಯಿ ಸಾತ್ವತಿಯು ಮಗುವಾಗಿದ್ದ ನಿನ್ನನ್ನು ಎತ್ತಿತಂದು ನನ್ನ ತೊಡೆಯ ಮೇಲೆ ಇಡಲು ನಿನ್ನ ಹಣೆಯ ಕಣ್ಣು ನಷ್ಟವಾಗಲು, ನಿನ್ನ ಸಾವು ನನ್ನ ಕೈಯಲ್ಲಿ ಎಂಬುದು ಖಚಿತವಾಯಿತು.)

ಕೃಷ್ಣನ ಕೈಯಿಂದಲೇ ತನ್ನ ಮಗನೆ ಸಾವೆಂದು ಅರಿತ ಶಿಶುಪಾಲನ ತಾಯಿ ಸಾತ್ವತಿಯು ಅವನು ಅರಿಯದೆ 'ಕೆಡೆ ನುಡಿ'ದರೂ ನೂರರವರೆಗೂ ಸಹಿಸುವುದೆಂದು ಕೃಷ್ಣನನ್ನು ಕೇಳಿಕೊಳ್ಳುತ್ತಾಳೆ.

ಶಿಶುಪಾಲನ ಕೃಷ್ಣನಿಂದೆ ಮುಂದುವರೆಯುತ್ತದೆ. ಕೃಷ್ಣನನ್ನು ಅವನು ಬಾಯಿಗೆ ಬಂದಂತೆ ಬೈಯುತ್ತಾನೆ. ಸ್ವಲ್ಪವೂ ಕೋಪಗೊಳ್ಳದೆ ಆ ಬೈಗುಳಗಳನ್ನು ಕೇಳುತ್ತಿದ್ದ ಕೃಷ್ಣ ನೂರರವರೆಗೂ ಮನ್ನಿಸಿ, ಅನಂತರ ಅತಿಶಯವಾಗಿ ಕೆರಳಿ, ಧರ್ಮರಾಯ ತನಗೆ 'ಅರ್ಘ್ಯ' ಕೊಡಲು ಬಳಸಿದ 'ತಳಿಗೆ' (ತಟ್ಟೆ)ಯನ್ನೇ ಶಿಶುಪಾಲನ ಕೊರಳಿಗೆ ಬೀಸುತ್ತಾನೆ.

ಮುಳಿದು ತನಗರ್ಘ್ಯಮೆತ್ತಿದ
ತಳಿಗೆಯೊಳಿಡೆ ತಿಱಿದ ತೆಱದೆ ತಲೆ ಪಱಿದಾಗಳ್
ಕಳಕಳಿಸಿ ನಗುತುಮಿರ್ದುದು
ತಳಿಗೆಯ ಮೇಲಸುರನದಟಿದೇನಚ್ಚರಿಯೋ (ಆಶ್ವಾಸ-೬, ಪದ್ಯ-೬೪)

(ಕೋಪದಿಂದ ತನಗೆ ಅರ್ಘ್ಯವನ್ನು ಕೊಟ್ಟ ತಟ್ಟೆಯನ್ನು ಬೀಸಲು ತಲೆ ತುಂಡಾಗಿ ಕತ್ತರಿಸಿ, ಆ ತಟ್ಟೆ ಮೇಲೆ ಆಶ್ಚರ್ಯವೋ ಎನ್ನುವಂತೆ ಕಳಕಳಿಸಿ ನಗುತ್ತಾ ಇತ್ತು.)

ಆ ದೃಶ್ಯ 'ಜವನರ್ಘ್ಯಮೆತ್ತಿದಂತೆ'(ಯಮನು ಅರ್ಘ್ಯವನ್ನು ಎತ್ತಿದಂತೆ) ತೋರುತ್ತಿತ್ತೆಂಬುದು ಪಂಪನ ವರ್ಣನೆ.

ಶಿಶುಪಾಲವಧೆಯ ಪ್ರಸಂಗ ಪಂಪಭಾರತದಲ್ಲಿ ಒಂದು ಕುತೂಹಲಕರ ಪ್ರಸಂಗ. ಈ ಸಂದರ್ಭದಲ್ಲಿ ಕೃಷ್ಣನ ಪಾತ್ರ ಗಂಭೀರವಾಗಿದ್ದು, ಮಹತ್ವ ಪಡೆದು ಕೊಳ್ಳುತ್ತದೆ. ಇಲ್ಲಿ ಕೃಷ್ಣನ ಅವತಾರಗಳು ಭೀಷ್ಮನ ಮೂಲಕ ಗಂಭೀರ ನೆಲೆಯಲ್ಲಿ ಪ್ರಸ್ತಾಪವಾಗಿದ್ದರೆ, ಶಿಶುಪಾಲನ ಬಾಯಲ್ಲಿ ವ್ಯಂಗ್ಯದ ನೆಲೆಯಲ್ಲಿ ಲೇವಡಿಗೆ ಒಳಗಾಗಿವೆ. ವ್ಯಾಸ ಭಾರತದಲ್ಲಿ ಕೃಷ್ಣ ಸುದರ್ಶನ ಚಕ್ರದಿಂದ ಶಿಶುಪಾಲನ ತಲೆಯನ್ನು ಕತ್ತರಿಸಿದರೆ, ಪಂಪಭಾರತದಲ್ಲಿ ತನಗೆ ಅರ್ಘ್ಯವೆತ್ತಿದ ತಳಿಗೆಯಿಂದಲೇ ಕೊರಳರಿಯುವುದು ಕುತೂಹಲಕರವಾಗಿ ಸಹಜವಾಗಿ ತೋರುತ್ತದೆ. ಇಲ್ಲಿ ಕೃಷ್ಣನ ಕೈಚಳಕ ವ್ಯಕ್ತವಾಗುವುದರ ಜತೆಗೆ ಅವನ ಅತಿಮಾನವತೆಯೂ ಸೂಚ್ಯವಾಗುತ್ತದೆ.

ಪಂಪ ಭಾರತದ 'ಕೃಷ್ಣ ಸಂಧಾನ ಪ್ರಸಂಗ' ಕೃಷ್ಣನ ರಾಜಕೀಯ ನೈಪುಣ್ಯಕ್ಕೆ ಹಾಗೂ ಅವನ ಅಲೌಕಿಕತೆಗೆ ಒಳ್ಳೆಯ ನಿದರ್ಶನವಾಗಿದೆ.

ಪಾಂಡವರ ವನವಾಸ ಮತ್ತು ಅಜ್ಞಾತವಾಸದ ಅವಧಿ ಮುಗಿದು, ಅವರು ವಿರಾಟ ನಗರದಲ್ಲಿ ಕೆಲಕಾಲ ಸಂತೋಷದಿಂದಿರುತ್ತಾರೆ. ಆಗ ಅವರು ಮುಂದೆ ಯುದ್ಧದ ಅನಿವಾರ್ಯತೆಯನ್ನು ಯೋಚಿಸಿ, ದುರ್ಯೋಧನನಾದರೋ 'ಶ್ವೇತ ಕೃಷ್ಣ ಕಾರಕ' ಅವನು ಕೃಷ್ಣನನ್ನು ತನಗೆ ಮಾಡಿಕೊಳ್ಳುವುದಕ್ಕೆ ಮೊದಲು, ತಮ್ಮ ಕಡೆಗೆ ಒಲಿಸಿಕೊಳ್ಳುವುದು ಸರಿಯಾದುದೆಂದು ಯೋಚಿಸಿ ಅರ್ಜುನನ್ನು ದ್ವಾರಾವತಿಗೆ ಕಳುಹಿಸುತ್ತಾರೆ. ಅರ್ಜುನನು ತಾನು ಹೋದ ಕಾರ್ಯದಲ್ಲಿ ಸಫಲನಾಗಿ, ಕೃಷ್ಣನೊಡಗೂಡಿ ವಿರಾಟನಗರಕ್ಕೆ ಬರುತ್ತಾನೆ.

ಮಾರನೆಯ ದಿನ ಮಂತ್ರಾಲೋಚನೆ ನಡೆಯುತ್ತದೆ. ಐದು ಮಂದಿ ಪಾಂಡವರು ಯುದ್ಧವನ್ನೇ ಅನುಮೋದಿಸುತ್ತಾರೆ. ಕೃಷ್ಣ 'ದಂಡ'ಕ್ಕೆ ಮುನ್ನ 'ಸಾಮ'ವನ್ನು ಪ್ರಯೋಗಿಸುವುದು ಉಚಿತವೆನ್ನುತ್ತಾನೆ. ಆಗ ಭೀಮ ಅದನ್ನು ವಿರೋಧಿಸಿ ಮಾತನ್ನಾಡುತ್ತಾನೆ. ಕೃಷ್ಣ ಮತ್ತು ಧರ್ಮರಾಯ ಅವನನ್ನು ಸಮಾಧಾನಪಡಿಸುತ್ತಾರೆ. ಧರ್ಮರಾಯ 'ದೂತ' ಕಾರ್ಯಕ್ಕೆ ಕೃಷ್ಣನನ್ನೇ ನಿಯೋಜಿಸುತ್ತಾನೆ.

ಪಾಂಡವರ ದೂತನಾಗಿ ಹೊರಟ ಕೃಷ್ಣನು ಹಸ್ತಿನಾವತಿಗೆ ಪ್ರಯಾಣಿಸಿ, ಅಲ್ಲಿ 'ಪಾಂಡವ ಪಕ್ಷಪಾತಿ'ಯಾದ ವಿದುರನ ಮನೆಗೆ ಬರುತ್ತಾನೆ. ಅಲ್ಲಿದ್ದ ಕುಂತಿಗೆ ಪಾಂಡವರ 'ಕುಶಲ ವಾರ್ತೆ'ಯನ್ನು ತಿಳಿಸಿ, ವಿದುರನ ಆತಿಥ್ಯವನ್ನು ಸ್ವೀಕರಿಸಿ ವಿಶ್ರಾಂತಿ ಪಡೆಯುತ್ತಾನೆ. ಬಳಿಕ ಕೃಷ್ಣನು ತಾನು ಬಂದಿರುವುದನ್ನು ದುರ್ಯೋಧನನಿಗೆ ತಿಳಿಸಲು ವಿದುರನನ್ನು ಕಳುಹಿಸುತ್ತಾನೆ. ಆಗ ದುರ್ಯೋಧನನು 'ಕಿಱುನಗೆ ನಕ್ಕು ನಾಳಿನೋಲಗದೊಳ್ ತಂದು ಕಾಣಿಸು'(ಸಣ್ಣದಾಗಿ ನಕ್ಕು ನಾಳಿನ ಸಭೆಯಲ್ಲಿ ಕರೆತಂದು ಕಾಣಿಸು) ಎನ್ನುತ್ತಾನೆ. ಅದರಂತೆ ಮಾರನೆಯ ದಿನ ಕೃಷ್ಣನು ದುರ್ಯೋಧನನನ್ನು ಕಾಣಲು ಹೋಗುತ್ತಾನೆ. ಅತ್ತ ದುರ್ಯೋಧನ ಪಾಂಡವರ ದೂತನಾದ ಕೃಷ್ಣನ ಮುಂದೆ ತನ್ನ ವೈಭವಾತಿಶಯವನ್ನು ಮೆರೆಯುವ ಸಲುವಾಗಿ 'ಪಿರಿದೋಲಗಂ' ಗೊಟ್ಟಿರುತ್ತಾನೆ. ಮೂರನೆಯ ಬಾಗಿಲವನು ಬಂದು 'ಅನಂತನ ಬರವಂ' ತಿಳಿಸುತ್ತಾನೆ. ಆಗ ದುರ್ಯೋಧನ ಭೀಷ್ಮನ ಮುಖವನ್ನು ನೋಡಿ.

ಲೋಕಗುರು ಶಂಖ ಚಕ್ರ ಗ
ದಾ ಕರನತಿಶಯ ಚತುರ್ಭುಜಂ ಜನಜನಿತ
ವ್ಯಾಕುಳದೆ ಬಂದನೆಂದೊಡೆ
ಲೋಕದೊಳಿನ್ನೆನ್ನ ದೊರೆಗೆ ಪಿರಿಯರುಮೊಳರೇ(ಆಶ್ವಾಸ-೯, ಪದ್ಯ-೩೦)

(ಲೋಕಕ್ಕೆ ಗುರುವಾದನು, ಶಂಖ ಚಕ್ರಗದೆಗಳನ್ನು ಕೈಯಲ್ಲಿ ಉಳ್ಳ ಅತಿಶಯವಾದ ನಾಲ್ಕು ತೋಳುಗಳನ್ನುಳ್ಳ ಶ್ರೀಕೃಷ್ಣನೇ ಹಂಬಲದಿಂದ ಬಂದನೆಂದರೆ ಲೋಕದಲ್ಲಿ ನನಗೆ ದೊಡ್ಡವರಾದವರು ಇದ್ದಾರೆಯೇ?)

ಈ ಪದ್ಯದಲ್ಲಿ ವ್ಯಂಗ್ಯವಿರುವುದಾದರೂ ಮಹಾವಿಷ್ಣುವೇ ಕೃಷ್ಣನಾಗಿರುವನೆಂಬ ಸಂಗತಿಯನ್ನು ಸೂಚ್ಯವಾಗಿಸುತ್ತದೆ. ಮೂರನೆಯ ಬಾಗಿಲವನಿಗೆ 'ಬರಮಾಡು' ಎಂದು ರಾಜಾಜ್ಞೆಯಾಗುತ್ತದೆ. ಆಗ 'ಅಂಜನಾಚಲದವೋಲ್ ಕಣ್ಗೊಪ್ಪಿ ಬರ್ಪ ಅಂಬುಜೋದರನಂ' (ಅಂಜನಾಪರ್ವತದಂತೆ ಕಣ್ಣಿಗೆ ಸೊಗಸಾಗುವ ಹಾಗೆ ಬರುವ 'ಪದ್ಮನಾಭ' ಅಂದರೆ ವಿಷ್ಣು –ಕೃಷ್ಣ) ನೋಡಿ, ದುರ್ಯೋಧನ 'ಮೆಯ್ಯಲಸಿದಂತೆ' ಹೇಗೋ ಕುಳಿತ ಪೀಠದಿಂದ ಎದ್ದು, ಕೃಷ್ಣನನ್ನು ಅಪ್ಪಿಕೊಂಡು ನಮಸ್ಕರಿಸಿ, ಉನ್ನತವಾದ

ಆಸನದಲ್ಲಿ ಕುಳ್ಳಿರಿಸಿ ಅರ್ಘ್ಯವನ್ನೂ ಕೊಟ್ಟು ಅನಂತರವೇ ತಾನು ಕುಳಿತುಕೊಂಡು ಅವನ ಆಗಮನವನ್ನು ವಿಚಾರಿಸುತ್ತಾನೆ. ಆಗ ಕೃಷ್ಣನು 'ಕರ ವಿನ್ಯಾಸಂಗಳ್ ನುಡಿಯನಡಕುವಂತಿರೆ' (ಕೈಯ ಅಭಿನಯಗಳು ಮಾತನ್ನು ಅಡಕವಾಗಿಸುವಂತೆ) ಮಾತಿಗೆ ಆರಂಭಿಸಿ ಮೊದಲು ದುರ್ಯೋಧನನ ಸಂಪತ್ತನ್ನು, ಸೌಜನ್ಯವನ್ನು ಹೊಗಳಿ, ಅನಂತರ "ಪಾಂಡವರು ನಿನಗೆ ಹೊರಗಾದಲ್ಲಿ ಭೂಪತಿಯೆಂಬ ಹಿರಿಮೆ ನಿನಗೆ ಒಪ್ಪದು. ಇದುವರೆಗೂ ಏನೋ ಮನಸ್ತಾಪದಿಂದ ಒಬ್ಬರನ್ನೊಬ್ಬರು ಅಗಲಿದ್ದೀರಿ, ಇಷ್ಟೆ. ನಿಮಗೂ ಅವರಿಗೂ ಕ್ರೋಧವುಂಟೇ? ಕಾಯಿಸಿದ ಬಿಸಿನೀರಿನಿಂದ ಮನೆ ಸುಡುವುದಿಲ್ಲ" ಎನ್ನುತ್ತಾನೆ. ಮಾತನ್ನೂ ಮುಂದುವರೆಸುತ್ತಾ ಪಾಂಡವರ ಸ್ನೇಹಮಾಡಿಕೊಂಡರೆ ನೀನು ಅಜೇಯನಾಗುತ್ತೀಯೆಂದು, ಮೊದಲು ಆಳುತ್ತಿದ್ದ ರಾಜ್ಯವನ್ನು ಅವರಿಗೆ ಕೊಡುವೆನೆಂದು ಹೇಳಿ ಕಳುಹಿಸು ಎಂದು ಹೇಳುತ್ತಾನೆ. ಕೊನೆಗೆ ಕಂಚಿ, ವಾರಣಾಸಿ, ಕಾಕಂದಿ, ಕುರುಸ್ಥಳ, ವೃಕಸ್ಥಳ ಎಂಬ ಐದು ಹಳ್ಳಿಗಳನ್ನಾದರೂ ಕೊಡು ಎನ್ನುವ ಪ್ರಸ್ತಾಪವನ್ನು ಮುಂದಿಡುತ್ತಾನೆ, ಆಗ ದುರ್ಯೋಧನನು 'ಕ್ರೋಧಾನಲೋದ್ದೀಪಿತ ಹೃದಯನಾಗಿ' ಕೃಷ್ಣನನ್ನು ನಿಂದಿಸುತ್ತಾ, ಅವನ ಮಾತುಗಳಿಗೆ ಆಕ್ಷೇಪಿಸುತ್ತಾ' ನಾವೆಲ್ಲಮೊಂದೆ ಗರುಡಿಯಳೋದಿದ ಮಾನಸರೆವೆಮ್ಮಂ ನಿಮ್ಮಡಿ ಕೆಮ್ಮನೆ ಬಟಲಿಸಲ್ವೇಡ ಬಂದ ಬಟ್ಟೆಯಿನೆ ಬಿಜಯಂಗೆಯಿಂ'(ನಾವೆಲ್ಲರೂ ಒಂದೇ ಶಾಲೆಯಲ್ಲಿ ಕಲಿತ ಮನುಷ್ಯರಾಗಿದ್ದೇವೆ. ನಮ್ಮನ್ನು ನೀವು ಸುಮ್ಮನೆ ಬಳಲಿಸಬೇಡಿರಿ. ಬಂದ ದಾರಿಯಿಂದಲೇ ಹಿಂದಿರುಗಿ ಹೋಗಿರಿ) ಎನ್ನುತ್ತಾನೆ. ಆಗ ಕೃಷ್ಣನೂ 'ಅಂತಕನಂತೆ ಮಾಮಸಕಂ ಮಸಗಿ'(ಯಮನಂತೆ ಮಹಾ ಕೋಪದಿಂದ ಕೆರಳಿ) "ಸೀತೆಯ ದೂಸಱಿಂದಟಿದ ರಾವಣನಂತಿರೆ ನೀನುಮೀಗಳೀ ಸೀತೆಯ ದೂಸಱಿಂದಟಿಯ ಲಾಟಿಸಿದೈ' (ಸೀತೆಯ ಕಾರಣದಿಂದ ನಾಶವಾದ ರಾವಣನಂತೆ ನೀನು ಈ ಭೂಮಿಯ ನಿಮಿತ್ತವಾಗಿ ನಾಶವಾಗ ಬಯಸಿರುವೆ)ಎಂದು ಎಚ್ಚರಿಸಿ '....ಪಾಂಡವರ ಕೆಯ್ಯೊಳೆ ನಿನ್ನ ನಿಸೇಕ ಮಾಗದೇ' (ಪಾಂಡವರ ಕೈಯಲ್ಲಿ ನಿನಗೆ ಶಾಸ್ತಿ ಆಗುವುದಿಲ್ಲವೇ) ಎಂದು ದುರ್ಯೋಧನನನ್ನು ಕೆಣಕುತ್ತಾನೆ. ಅಲ್ಲದೆ ಪಾಂಡವರ ಪರಾಕ್ರಮವನ್ನು ವರ್ಣಿಸಿ, ವಿಶೇಷವಾಗಿ ಭೀಮಸೇನನ ಪ್ರತಿಜ್ಞೆಗಳನ್ನು ನೆನಪಿಸಿ, ಅರ್ಜುನನ ಪರಾಕ್ರಮ ಮತ್ತು ಸಾಹಸಗಳನ್ನು ಸಭೆಯಲ್ಲಿ ಘೋಷಿಸುತ್ತಾನೆ. ಆಗ ದುರ್ಯೋಧನನು 'ಮುಳಿದು ತಳಮಳಿಸಿ ಕಣ್ಗಾಣದೆ' (ಕೋಪಗೊಂಡು ತಳಮಳದಿಂದ ಕೂಡಿ ದಿಕ್ಕು ಕಾಣದೆ)

ಎಟಿಕ್ಪೋಗು ದೂತನಪ್ಪನ
ಬೆಟ್ಪಿನ ನುಡಿಗೇಳ್ದು ಮುಳಿಯಲಾಗದು ನೀನುಂ
ಮೆಟ್ಪಿಟ್ಟು ವಿದುರನೆಂಬೀ
ತೊಟ್ಟುಟ್ಟಿಯ ಮನೆಯ ಕೂಟಿ ನುಡಿಯಿಸೆ ನುಡಿದೈ (ಆಶ್ವಾಸ-೯, ಪದ್ಯ-೫೭)

(ಏಳು, ತೊಲಗು, ದೂತನಾಗಿರುವವನ ಮಾತನ್ನು ಕೇಳಿ ಕೋಪಮಾಡಿ ಕೊಳ್ಳಲಾಗುವುದಿಲ್ಲ. ನೀನು ಕೂಡ ಮೋಸ ಹೋಗಿ ವಿದುರನೆನ್ನುವ ಈ ತೊತ್ತಿಗೆ ಹುಟ್ಟಿದವನ ಮನೆಯ ಅನ್ನವೇ ಮಾತಾಡಿಸಲು ಮಾತಾಡಿದೆ.)

- ಎಂದು ಕೃಷ್ಣನ ಜತೆಗೆ ಅಕಾರಣವಾಗಿ ವಿದುರನನ್ನು ನಿಂದಿಸುತ್ತಾನೆ. ಆಗ ವಿದುರನು 'ಅತಿ ಕುಪಿತ ಮನ'ನಾಗಿ

ಕಡು ಮುಳಿದು ನಿನ್ನ ತೊಡೆಗಳ
ನುಡಿವೆಡೆಯೊಳ್ ಭೀಮಸೇನನಾನಾ ಪದದೊಳ್
ಪಿಡಿಯಲ್ಕೆಂದಿರ್ದೆನಿದಂ
ಪಿಡಿಯೆಂ ಪೋಗೆಂದು ಸಭೆಯೊಳುಡಿದಂ ಬಿಲ್ಲಂ(ಆಶ್ವಾಸ-೯, ಪದ್ಯ-೫೯)

(ಭೀಮಸೇನನು ಕೋಪದಿಂದ ನಿನ್ನ ತೊಡೆಗಳನ್ನು ಮುರಿಯುವ ಸಮಯದ ಆ ಹೊತ್ತಿನಲ್ಲಿ ನಾನು ಈ ಬಿಲ್ಲನ್ನು ಹಿಡಿಯಬೇಕೆಂದು ಇದ್ದೆನು. ಹಿಡಿಯೆನು ಹೊಗು ಎಂದು ಸಭೆಯಲ್ಲಿ ಬಿಲ್ಲನ್ನು ಮುರಿದನು)

ವಿದುರನು ಬಿಲ್ಲನ್ನು ಮುರಿದದ್ದು ಕೃಷ್ಣ ಪಾಂಡವರ ಪರವಾಗಿ ಸಾಧಿಸಿದ ಮೊದಲ ಗೆಲುವು. ವಿದುರನ ಧನುರ್ಭಂಗದಿಂದ ದುರ್ಯೋಧನನು 'ತನ್ನ ಬಲದ ತೋಳುಡಿದಂತಾಗಿ', ಕೋಪದಿಂದ ಖಡ್ಗವನ್ನು ಹಿಡಿದು ಕೃಷ್ಣನ ಮೇಲೆ ಬೀಳಲು ಹೋಗಿ 'ನಂಜಿನ ಮೇಲೆವಾಯ್ವ ನೊಳವಿನಂತೆ' (ವಿಷದ ಮೇಲೆರಗುವ ನೊಣದ ಹಾಗೆ)ಉರುಳಿ ಬಿದ್ದನು. ಆ ಸಂದರ್ಭದಲ್ಲಿ ತಕ್ಷಣ ವಿಶ್ವರೂಪವನ್ನು ತೋರುತ್ತಾನೆ. ಆಗ ಭಯಗೊಂಡ ಧೃತರಾಷ್ಟ್ರನು ಕೃಷ್ಣನ ಬಳಿಗೆ ಬಂದು 'ಅನೇಕ ಸ್ತುತಿ ಶತ ಸಹಸ್ರಂಗಳಿಂ' ಅವನನ್ನು ಸ್ತುತಿಸುತ್ತಾನೆ. ಕೃಷ್ಣ ಅವನಿಗೆ ದಿವ್ಯ ದೃಷ್ಟಿಯನ್ನು ಅನುಗ್ರಹಿಸಿ, ಮೊದಲಿನಂತೆ ಮನುಷ್ಯ ರೂಪವನ್ನು ಧರಿಸಿ ಅಶ್ವತ್ಥಾಮನನ್ನು ಕೈಹಿಡಿದುಕೊಂಡು ಕಪಟ ಪ್ರಪಂಚದಿಂದ -ಆತನುಮಂ ತನಗೆ ಮಾಡಿ' ಬೀಡಿಗೆ ಹಿಂದಿರುಗಿ, ಕುಂತಿಯನ್ನು ಕಂಡು ಆಕೆಗೆ ಏಕಾಂತದಲ್ಲಿ 'ನೀಮುಂ ನಿಮ್ಮ ಚೊಚ್ಚಿಲ ಮಗನಪ್ಪ ಸೂರ್ಯಸೂನುವಂ ಸೂರ್ಯದಿನದಂದು ಕಂಡು ಕಾರ್ಯಸಿದ್ಧಿಯಂ ಮಾಡಿ ಬನ್ನಿ' (ನೀವೂ ನಿಮ್ಮ ಮೊದಲ ಮಗನಾದ ಕರ್ಣನನ್ನು ರವಿವಾರದಂದು ಭೇಟಿಯಾಗಿ ಕಾರ್ಯಸಿದ್ಧಿಯನ್ನು ಮಾಡಿಕೊಂಡು ಬನ್ನಿರಿ) ಎಂದು ಹೇಳಿ, ಅಲ್ಲಿಂದ ಹೊರಟು ಕರ್ಣನ ಮನೆಯನ್ನು ತಲುಪಿ ಅವನನ್ನು ಒತ್ತಾಯದಿಂದ ಕರೆದು ರಥದಲ್ಲಿ ಕುಳ್ಳರಿಸಿಕೊಂಡು ಮುಂದೆ ಒಂದೆಡೆಯಲ್ಲಿ ನಿಂತು ಅವನ ಜನ್ಮವೃತ್ತಾಂತವನ್ನು ತಿಳಿಸಿ, ಅವನ ಮನಸ್ಸನ್ನು ಭೇದಿಸಿ ದ್ವಂದ್ವಕ್ಕೆ ಸಿಕ್ಕಿಸುತ್ತಾನೆ.

ಹೀಗೆ ಪಂಪಭಾರತದ 'ಕೃಷ್ಣ ಸಂಧಾನ ಪ್ರಸಂಗ' ಒಂದು ಸುಂದರವಾದ, ಅದ್ಭುತವಾದ ಹಾಗೂ ಕುತೂಹಲಕರವಾದ ಪ್ರಸಂಗ. ಕೃಷ್ಣ ರಾಜಸಭೆಯಲ್ಲಿ ವಿಶ್ವರೂಪವನ್ನು ತೋರುವುದು. ಹುಟ್ಟುಕುರುಡನಾದ ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನು ಕರುಣಿಸುವುದು. ಅವನ ಅಲೌಕಿಕತೆಗೆ ಸಾಕ್ಷಿಯಾಗಿದೆ. ಕೃಷ್ಣನ ವಿಶ್ವರೂಪದರ್ಶನದಿಂದ ಪ್ರತಿಪಕ್ಷದ ನಾಯಕರೆಲ್ಲ 'ವೈಷ್ಣವ ಮಾಯೆ'ಗೆ (ನೆಜೆಯೆ ಮೋಹಿಸಿ ವೈಷ್ಣವದಿಂ) ಒಳಗಾಗುತ್ತಾರೆ. ಮುಂದೆ ಯುದ್ಧದಲ್ಲಿ ಅರ್ಜುನನ ಸಾರಥಿಯಾಗಿ ಎದುರಿಗೆ ಕೃಷ್ಣನನ್ನು ಕಂಡಾಗ ಅವರಾರಿಗೂ ಮನಸ್ಸಿಟ್ಟು ಯುದ್ಧಮಾಡಲಾಗಲಿಲ್ಲ. ತಮ್ಮ ಪರಾಕ್ರಮವನ್ನು ಪೂರ್ಣ ಪ್ರಮಾಣದಲ್ಲಿ ಪ್ರಕಟಿಸಲಾಗಲಿಲ್ಲ. ಇನ್ನು, ವಿದುರನ ಧನುರ್ಭಂಗ ಅಶ್ವತ್ಥಾಮನನ್ನು 'ಕಪಟ ಪ್ರಪಂಚ' ದಿಂದ ಒಳಗುಮಾಡಿಕೊಳ್ಳುವಿಕೆ. ಕುಂತಿಯನ್ನು ಪ್ರಚೋದಿಸಿ ಕಳುಹಿಸಿ ಕರ್ಣನ ಶಕ್ತಿಯ ಹರಣ (ಪಿಡಿಯೆಂ ಪುರಿಗಣೆಯಂ ನರನೆಡೆಗೊಂಡೊಡಂ- ಉಳಿದ ನಿನ್ನ ಮಕ್ಕಳನಿನ್ನೇರ್ದೊಡಮೆಟಿಯೆಂ) ಮಾಡಿಸಿದ್ದು, ಸ್ವತಃ ತಾನೇ ಮುಂದಾಗಿ ಕರ್ಣನನ್ನು ಕಂಡು ಅವನ ಜನ್ಮರಹಸ್ಯವನ್ನು ತಿಳಿಸುವುದರ ಮೂಲಕ ಅವನನ್ನು ದ್ವಂದ್ವಕ್ಕೆ ಗುರಿ ಮಾಡಿ ಅವನ ಸ್ಥೈರ್ಯವನ್ನು ಕೆಡಿಸಿದ್ದು- ಇವು ಒಂದೊಂದು ಕೃಷ್ಣನ ರಾಜಕೀಯ ನೈಪುಣ್ಯಕ್ಕೆ ಹಾಗೂ ತಂತ್ರಗಾರಿಕೆಗೆ ನಿದರ್ಶನವಾಗಿದೆ. ಮೇಲುನೋಟಕ್ಕೆ ಕೃಷ್ಣ ನಿರ್ವಹಿಸಿದ ಸಂಧಾನ ವಿಫಲವಾದಂತೆ ತೋರಿದರೂ ಅವನ ಉದ್ದೇಶ ಹಾಗೂ ಗುರಿ ಸಾಧನೆಯಲ್ಲಿ ಅದು ಸಫಲವಾಗುತ್ತದೆ. ಕೃಷ್ಣ ಸಂಧಾನದ ನೆಪದಲ್ಲಿ ಪಾಂಡವರ ಗೆಲುವಿನ ಹಾದಿಯ ಒಂದೊಂದೇ ತೊಡಕುಗಳನ್ನು ನಿವಾರಿಸಿ, ಅವರ ಜಯದ ಹಾದಿ ಸುಗಮವಾಗಲು ನೆರವಾಗಿ ತನ್ನ ಪಾರಮ್ಯವನ್ನು ಮೆರೆಯುತ್ತಾನೆ. ಹೀಗಾಗಿ ಕೃಷ್ಣ ಸಂಧಾನ ಪ್ರಸಂಗ ತುಂಬ ಮಹತ್ವ ಪಡೆದುಕೊಳ್ಳುತ್ತದೆ. ಆದ್ದರಿಂದ ಕೃಷ್ಣ ಸಂಧಾನ ಪ್ರಸಂಗವನ್ನು ಪಂಪ ಭಾರತದ ಒಂದು 'ಶೃಂಗ ಸನ್ನಿವೇಶ' (Climax)ಎನ್ನಬಹುದು.

ಪಂಪಭಾರತದಲ್ಲಿ ಶಿಶುಪಾಲವಧೆ. ಕೃಷ್ಣಸಂಧಾನ ಪ್ರಸಂಗಗಳಂತೆ ಭಗವದ್ಗೀತೆಯ ಪ್ರಸಂಗದಲ್ಲೂ ಕೃಷ್ಣನ ಅಲೌಕಿಕತೆ ವ್ಯಕ್ತವಾಗಿರುವುದನ್ನು ಗಮನಿಸಬಹುದು. ಮೂಲದಲ್ಲಿ ಏಳು ನೂರು ಶ್ಲೋಕಗಳನ್ನುಳ್ಳ ಭಗವದ್ಗೀತೆಯ ಪ್ರಸಂಗವನ್ನು ಒಂದು ಪದ್ಯ ಮತ್ತು ಎರಡು ಗದ್ಯಭಾಗಗಳಲ್ಲಿ (ಸುಮಾರು ಒಂದು ಪದ್ಯ-ಹತ್ತು ಸಾಲುಗಳಷ್ಟು ಗದ್ಯ) ಹೇಳಿ ಮುಗಿಸಿದ್ದಾನೆ.

ಅಂತಾ ಯುಯುತ್ಸುವನೊಡಗೊಂಡು ಬಂದು ಧರ್ಮಪುತ್ರನುತ್ಸಾಹದೊಳಿರ್ಪ ಪದದೊಳ್ ವಿಕ್ರಮಾರ್ಜುನನ ಮನದೊಳಾದ ವ್ಯಾಮೋಹಮಂ ಕಳೆಯಲೆಂದು ಮುಕುಂದಂ ದಿವ್ಯ ಸ್ವರೂಪಮಂ ತೋಱಿ-

(ಹಾಗೆ ಯುಯುತ್ಸು-ನೂರು ಮಂದಿ ಕೌರವರಲ್ಲಿ ಒಬ್ಬನನ್ನು ಒಡೆಗೊಂಡು ಬಂದು ಧರ್ಮರಾಯನು ಉತ್ಸಾಹದಲ್ಲಿರುವ ಸಂದರ್ಭದಲ್ಲಿ, ಅರ್ಜುನನ ಮನಸ್ಸಿನಲ್ಲಿ ಉಂಟಾದ ವ್ಯಾಮೋಹವನ್ನು ಹೋಗಲಾಡಿಸಲೆಂದು ಕೃಷ್ಣನು ದಿವ್ಯ ಸ್ವರೂಪವನ್ನು ತೋರಿ)

ಅದಿರದಿದಿರ್ಚಿ ತಳ್ತಿಱಿಯಲೀ ಮಲೆದೊಡ್ಡಿದ ಚಾತುರಂಗಮೆಂ
ಬುದು ನಿನಗೊಡ್ಡಿ ನಿಂದುದಿದನೋವದೆ ಕೊಲ್ವಡೆ ನೀನುಮೆನ್ನ ಕ
ಜ್ಜದೊಳೆಸಗೆಂದು ಸೈತಜಿತನಾದಿಯ ವೇದ ರಹಸ್ಯದೊಳ್ ನಿರಂ
ತದ ಪರಿಚರ್ಯೆಯಿಂ ನೆಱೆಯೆ ಯೋಜಿಸಿದಂ ಕದನತ್ರಿಣೇತ್ರನಂ(೧೦-೬೪)

(ಕೆರಳಿ ಎದುರಾಗಿರುವ ಚತುರಂಗ ಸೇನೆ ಎಂಬುದು ಹೆದರದೆ ತಾಗಿ ಯುದ್ಧಮಾಡಲು ನಿನಗೆ ಚಾಚಿ ಮುಂದೆ ನಿಂತುಕೊಂಡಿದೆ. ಇದನ್ನು ಕೊಲ್ಲುವ ಪಕ್ಷದಲ್ಲಿ ನೀನು ಕೂಡ ನನ್ನ ಕಾರ್ಯದಲ್ಲಿ ತೊಡಗು ಎಂದು ನೇರವಾಗಿ ಕೃಷ್ಣನು ಅರ್ಜುನನನ್ನು ಪ್ರಾಚೀನ ವೇದಗಳ ರಹಸ್ಯದ ಅರ್ಥದಲ್ಲಿ ಸತತವಾದ ಸೇವೆಯಿಂದ ಪೂರ್ಣವಾಗಿ ತೊಡಗಿಸಿದನು.)

ಆಗಳ್ ಪರಸೈನ್ಯಭೈರವಂ ಪುರಾಣಪುರುಷನಪ್ಪ ಪುರುಷೋತ್ತಮಂಗೆಱಗಿ ಪೊಡಮಟ್ಟು ರಿಪುಪಕ್ಷ ಕ್ಷಯಕರಮಪ್ಪ ವಿಶ್ವಕರ್ಮ ನಿರ್ಮಿತಮಾದ ತನ್ನ ದಿವ್ಯ ರಥಮಂ ಮನೋರಥಂಬೆರಸು ರಥಾಂಗಧರನಂ ಮುನ್ನಮೇಲ್ವೇಱ್ದು ಮೂಱು ಸೂೞ್ ಬಲವಂದು ಪೊಡಮಟ್ಟು ಬೞಿಯಂ ತಾನೇಱೆ ವಜ್ರಕವಚಮಂ ತೊಟ್ಟು ತವದೊಣೆಗಳನೆರಡುಂ ದೆಸೆಯೊಳಂ ಬಿಗಿದು ದ್ರೋಣಾಚಾರ್ಯರಿಗೆ ಮನದೊಳ್ ನಮಸ್ಕಾರಂಗೆಯ್ದು ದ್ರೋಣಂ ಬಾೞ್ಗೆಂದು ಮಹಾ ಪ್ರಚಂಡ ಗಾಂಡೀವಮಂ ಕೊಂಡೇಱಿಸಿ ನೀವಿ ಜೇವೊಡೆದು ದೇವದತ್ತ ಶಂಖಮಂ ಪೂರಿಸಿ ಸಂಸಪ್ತಕರೊಡ್ಡಣದತ್ತ ರಥಾಂಗಧರನಂ ರಥಮಂ ಚೋದಿಸಲ್ವೇೞ್ದಾಗಳ್-

(ಆಗ ಪರಸೈನ್ಯ ಭೈರವನಾದ ಅರ್ಜುನನು ಪುರಾಣ ಪುರುಷನಾದ ಶ್ರೀಕೃಷ್ಣನಿಗೆ ನಮಸ್ಕರಿಸಿ ಶತ್ರು ಪಕ್ಷನಾಶಕರವಾದ ವಿಶ್ವಕರ್ಮ ನಿರ್ಮಿತವಾದ ತನ್ನ ದಿವ್ಯ ರಥವನ್ನು ಪ್ರೀತಿಯಿಂದ ಮೊದಲು ಶ್ರೀಕೃಷ್ಣನನ್ನು ಹತ್ತಲು ಹೇಳಿ ಅನಂತರ ಮೂರು ಸುತ್ತು ಪ್ರದಕ್ಷಿಣೆ ಬಂದು ನಮಸ್ಕರಿಸಿ ಬಳಿಕ ತಾನು ಹತ್ತಿ, ವಜ್ರ ಕವಚವನ್ನು ಧರಿಸಿ ಅಕ್ಷಯ ಬತ್ತಳಿಕೆಯನ್ನು ಎರಡೂ ಕಡೆಯಲ್ಲಿ ಬಿಗಿದು ಕಟ್ಟಿ ದ್ರೋಣರಿಗೆ ಮನಸ್ಸಿನಲ್ಲಿ ನಮಸ್ಕರಿಸಿ ಮಹಾ ಪ್ರಚಂಡ ಗಾಂಡೀವವನ್ನು ನೀವಿ ಜೇವೊಡೆದು ದೇವದತ್ತ ಶಂಖವನ್ನು ಊದಿ, ಸಂಸಪ್ತಕರ ಸೈನ್ಯದ ಕಡೆಗೆ ರಥವನ್ನು ಓಡಿಸಲು ಕೃಷ್ಣನಿಗೆ ಹೇಳುತ್ತಾನೆ.)

ಈ ಪ್ರಸಂಗದಲ್ಲಿ ಕೃಷ್ಣ ಅರ್ಜುನನಿಗೆ ದಿವ್ಯ ಸ್ವರೂಪವನ್ನು ತೋರಿದ್ದು. 'ಎನ್ನ ಕಜ್ಜದೊಳೆಸಗು' ಎಂದು ಅವನಿಗೆ ನಿರ್ದೇಶನವನ್ನು ನೀಡಿದ್ದು ಗಮನಿಸಬೇಕಾದುದು, ಅಲ್ಲದೆ ಅರ್ಜುನನು ಮೊದಲು ಕೃಷ್ಣನನ್ನು ರಥವನ್ನೇರಿಸಿ ಮೂರು ಸುತ್ತು ಪ್ರದಕ್ಷಿಣೆ ಬಂದ ಬಳಿಕ ತಾನು ರಥವನ್ನೇರಿದ್ದು ಗಮನಾರ್ಹವಾಗಿದೆ. ಇಲ್ಲಿ 'ನೀನುಮೆನ್ನ ಕಜ್ಜದೊಳೆಸಗು' ಎಂಬುದು ಲೋಕ ವ್ಯಾಪಾರ ನನ್ನ ಅಧೀನ. ನೀನು ಕೇವಲ ಒಂದು ನಿಮಿತ್ತ. ಉಪಕರಣ–ಎಂಬ ಅರ್ಥವನ್ನು ಧ್ವನಿಸುತ್ತದೆ. ಈ ಭಾಗದಲ್ಲಿ ಕೃಷ್ಣನನ್ನು 'ಪುರಾಣ ಪುರುಷ', 'ಪುರುಷೋತ್ತಮ' ಎಂದು ಭಾವಿಸಿರುವುದು. ಅಲ್ಲದೆ ತೀರ್ಥಂಕರ ಸೂಚಕವಾದ 'ಅಜಿತ' ಎಂಬ ಹೆಸರಿನಿಂದ ಸಂಬೋಧಿರುವುದು ವಿಶೇಷವಾಗಿದೆ. ಈ ಎಲ್ಲ ಅಶಂಗಳಿಂದ ಭಗವದ್ಗೀತೆಯ ಪ್ರಸಂಗದಲ್ಲಿ ಕೃಷ್ಣನ ಅಲೌಕಿಕತೆ ಚೆನ್ನಾಗಿ ವ್ಯಕ್ತವಾಗಿದೆಯೆನ್ನಬಹುದು.

ಶಿಶುಪಾಲವಧೆ, ಕೃಷ್ಣ ಸಂಧಾನ ಪ್ರಸಂಗ ಮತ್ತು ಭಗವದ್ಗೀತೆಯ ಸನ್ನಿವೇಶ. ಈ ಭಾಗಗಳಲ್ಲಿ ಮಾತ್ರವಲ್ಲ. ಪಂಪಭಾರತದ ಉದ್ದಕ್ಕೂ ಕೃಷ್ಣನ ಅಲೌಕಿಕತೆಯ ಪ್ರಸ್ತಾಪ ಬರುತ್ತದೆ. ಅವನ ಅವತಾರಗಳನ್ನು, ಮಹಿಮೆಗಳನ್ನು ಕವಿ ತನ್ನ ಕಾವ್ಯದಲ್ಲಿ ಉಚಿತವರಿತು ಹೇಳಿದ್ದಾನೆ. ಪಾತ್ರಗಳ ಮೂಲಕ ಹೇಳಿಸಿದ್ದಾನೆ.

ಕೃಷ್ಣ ಪಾಂಡವರಿಗೆ ಆಪ್ತ, ಹಿತೈಷಿ ಹಾಗೂ ಮಾರ್ಗದರ್ಶಕ, ಪಾಂಡವರು ಅವನನ್ನು ಬಹಳ ಅವಂಬಿಸಿದ್ದರು. ಇಂದ್ರಿಯಗಳು ಮನಸ್ಸನ್ನು ಆಶ್ರಯಿಸಿರುವಂತೆ, ಪಾಂಡವರು ಕೃಷ್ಣನನ್ನು ಆಶ್ರಯಿಸಿದ್ದರಂತೆ.

ಪ್ರಿಯ ವಿಷಯಕಾಂಕ್ಷೆಯಿಂದಿಂ
ದ್ರಿಯಂಗಳೆಂತೆಯ್ದೆ ಮನಮನಾಶ್ರಯಿಸುಗುಮಂ
ತಯ ನಯ ಪರರಯ್ವರುಮಾ
ಶ್ರಯಿಸಿರ್ದರ್ ವಿಷಯಕಾಂಕ್ಷೆಯಿಂ ಮುರರಿಪುವಂ (ಆಶ್ವಾಸ–೯, ಪದ್ಯ–೧೩)

(ತಮ ತಮಗೆ ಪ್ರಿಯವಾದ ವಸ್ತುಗಳ ಅಪೇಕ್ಷೆಯಿಂದ ಪಂಚೇದ್ರಿಯಗಳು ಮನಸ್ಸನ್ನು ಹೇಗೆ ಅವಲಂಬಿಸುತ್ತವೋ ಹಾಗೆ ಐವರು ಪಾಂಡವರು ಕೃಷ್ಣನನ್ನು ಅವಲಂಬಿಸಿದ್ದರು)

ಇಲ್ಲಿ ರಾಜ್ಯಾಕಾಂಕ್ಷೆಯಿಂದಲೇ ಪಾಂಡವರು ಕೃಷ್ಣನನ್ನು ಆಶ್ರಯಿಸಿದ್ದರು ಎಂದು ಪಂಪ ಹೇಳಿರುವುದನ್ನು ಗಮನಿಸಬೇಕು. ಕೃಷ್ಣ ಮತ್ತು ಪಾಂಡವರ ನಡುವಿನ ಸ್ನೇಹಕ್ಕೆ ರಾಜ್ಯಾಕಾಂಕ್ಷೆಯೇ ಮುಖ್ಯಕಾರಣವಲ್ಲದಿದ್ದರೂ, ಸಂದರ್ಭಕ್ಕೆ ಅನುಗುಣವಾಗಿ ಕವಿ ಈ ಹೋಲಿಕೆಯನ್ನು ಕೊಟ್ಟಿರಬಹುದು. ಪಾಂಡವರು ದ್ಯೂತದ ಹೊರತಾಗಿ ಕೃಷ್ಣನ ಸಲಹೆಯಿಲ್ಲದೆ ಯಾವ ಕೆಲಸವನ್ನೂ ಮಾಡಿದವರಲ್ಲ. ಸುಭದ್ರಾಹರಣ, ಖಾಂಡವ

ದಹನ, ಭಾರತಯುದ್ಧ- ಈ ಪ್ರಸಂಗಗಳಲ್ಲಿ ಪಂಪನ ನಾಯಕನಾದ ವಿಕ್ರಮಾರ್ಜುನನಿಗೆ ಕೃಷ್ಣನು ನೀಡಿದ ಮಾರ್ಗದರ್ಶನ, ಮಾಡಿದ ಸಾರಥ್ಯ ಪಂಪಭಾರತದಲ್ಲಿ ಅದ್ಭುತವಾಗಿ ಚಿತ್ರಿತವಾಗಿವೆ.

ಅಜ್ಞಾತವಾಸದ ಅವಧಿಯನ್ನು ಕಳೆಯುವ ಸಲುವಾಗಿ, ವಿರಾಟನ ಅಂತಃಪುರದಲ್ಲಿ ಅರ್ಜುನನು 'ಬೃಹಂದಳೆ'ಯಾದ ಸಂದರ್ಭವನ್ನು ಹೇಳುತ್ತಾ ಪಂಪ.

ಎಳೆಯಂ ವಿಕ್ರಮದಿಂ ತರಲ್ ಮಹಿಧರಂ ಮುನ್ ಪಂದಿಯಾದಂತೆ ಪೋ
ದೆಳೆಯಂ ದಾಯಿಗರಂ ಪಡಲ್ವಡಿಸಿ ಕೊಂಡಾಳಲ್ಕಮಾದೇವದಿಂ
ಮುಳಿಸಿಂ ರಂಭೆಯ ಕೊಟ್ಟ ಶಾಪಮನದಂ ನೀಗಲ್ಕಮಾಗಳ್ ಬೃಹಂ
ದಳೆಯಾದಂ ನರನಾತ್ಮಕಾರ್ಯವಶದಿಂ ಶುದ್ಧಾಂತದೊಳ್ ಮತ್ಸ್ಯನಾ

(ಆಶ್ವಾಸ-೮, ಪದ್ಯ ೫೫)

(ಹಿಂದೆ ಭೂಮಿಯನ್ನು ಪರಾಕ್ರಮದಿಂದ ತರುವುದಕ್ಕಾಗಿ ವಿಷ್ಣುವು ವರಾಹನಾದ ಹಾಗೆ, ಜೂಜಿನಲ್ಲಿ ಹೋದ ರಾಜ್ಯವನ್ನು ದಾಯಾದಿಗಳನ್ನು ಹಗೆತನದಿಂದ ಸೋಲಿಸಿ ಆಕ್ರಮಿಸಿಕೊಂಡು ಆಳುವುದಕ್ಕೆ, ರಂಬೆ ಕೋಪದಿಂದ ಕೊಟ್ಟ ಶಾಪವನ್ನು ಕಳೆಯುವುದಕ್ಕಾಗಿ, ತನ್ನ ಕಾರ್ಯಸಾಧನೆಯ ಸಲುವಾಗಿ ವಿರಾಟರಾಜನ ಅಂತಃಪುರದಲ್ಲಿ ಅರ್ಜುನನು ಬೃಹಂದಳೆಯೆಂಬ ಹೆಸರಿನ ನಪುಂಸಕನಾದನು)

ಇಲ್ಲಿ ಪಂಪ ಕೃಷ್ಣನ ವರಾಹಾವತಾರದ ಕಥೆಯನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಅಜ್ಞಾತವಾಸದ ಬಳಿಕ ದ್ವಾರಾವತಿಯಿಂದ ಅರ್ಜುನನ ಸಂಗಡ ವಿರಾಟನಗರಕ್ಕೆ ಬಂದ ಕೃಷ್ಣನಿಗೆ ಮಂತ್ರಾಲೋಚನೆಯ ಸಂದರ್ಭದಲ್ಲಿ ಧರ್ಮರಾಯ ಹೀಗೆ ಹೇಳಿದ್ದಾನೆ.

ಎಳೆ ರಸೆಯೊಳಟಿಸ್ದದಂ ಭುಜ
ಬಳದಿಂ ಮುನ್ನೆತ್ತಿದಂತೆ ವಿಷಯಾಂಬುಧಿಯೊಳ್
ಮುಳುಗಿರ್ದೆಮ್ಮಯ್ವರುಮಂ
ಬಳಿಹರ ಪಿಡಿದೆತ್ತಲೆಂದು ಬಂದೈ ಬರವಂ (ಆಶ್ವಾಸ-೯, ಪದ್ಯ-೧೫)

(ಪಾತಾಳದಲ್ಲಿ ಮುಳುಗಿದ್ದ ಭೂಮಿಯನ್ನು ಹಿಂದೆ ತೋಳ್ಬಲದಿಂದ ಉದ್ಧರಿಸಿದಹಾಗೆ, ರಾಜ್ಯ ಯೋಜನೆಯಕಡಲಿನಲ್ಲಿ ಮುಳುಗಿದ್ದ ನಮ್ಮ ಐವರನ್ನು. ಬಲಿಯನ್ನು ನಾಶಪಡಿಸಿದ ಕೃಷ್ಣನೇ ಹಿಡಿದು ಎತ್ತ ಬೇಕೆಂದು ಬಂದಿರುವೆ)

ಇಲ್ಲಿ ವರಾಹಾವತಾರದ ಪ್ರಸ್ತಾಪವಿರುವುದರ ಜತೆಗೆ 'ಬಳಿಹರ' ಎಂಬ ಮಾತಿನಲ್ಲಿ ಕೃಷ್ಣನೇ ಬಲಿಚಕ್ರವರ್ತಿಯನ್ನು ವಾಮನಾವತಾರದಿಂದ ನಿಗ್ರಹಿಸಿದವನು ಎಂಬುದು ತಿಳಿಯುತ್ತದೆ.

ಅಜ್ಞಾತವಾಸದ ಅನಂತರದ ಮಂತ್ರಾಲೋಚನೆಯ ಸಭೆಯಲ್ಲಿ ಪಾಂಡವರು ಯುದ್ಧವನ್ನೇ ಪ್ರತಿಪಾದಿಸಿದಾಗ ಮೊದಲು 'ಸಾಮ'ವನ್ನು ಪ್ರಯೋಗಿಸುವುದು ಉಚಿತವೆಂದು ಕೃಷ್ಣ ಬಲಿಬಂಧನದ ಕಥೆಯನ್ನು ತಾನೇ ಹೇಳಿಕೊಳ್ಳುವುದು ಗಮನಾರ್ಹವಾಗಿದೆ.

ಬಲಿಯಂ ವಾಮನ ರೂಪದಿಂದಮೆ ವಲಂ ಮುಂ ಬೇಡಿದೆಂ ಭೂರಿ ಭೂ

ತಲಮಂ ಕುಂದೆನಗಾಯ್ತೆ ಕೊಂಡೆನಿಳೆಯಂ ಕಟ್ಟಿಟ್ಟೆನಿನ್ನುಂ ರಸಾ

ತಲದೊಳ್ ದೈತ್ಯನನಂತೆ ನೀನುಮಿಳೆಯಂ ಮುಂ ಬೇಡಿಯಟ್ಟಟ್ಟೆ ಮಾ

ರ್ಮಲೆದಾತಂ ಕುಡದಿರ್ದೊಡಂದಿಱೆಯ ನೀಂ ಲೋಕಂ ಗುಣಗೊಳ್ವಿನಂ

(ಆಶ್ವಾಸ-೯, ಪದ್ಯ-೨೦)

(ಹಿಂದೆ ಬಲಿಚಕ್ರವರ್ತಿಯಲ್ಲಿ ವಾಮನ ರೂಪದಿಂದಲೇ ಭೂಮಂಡಲವನ್ನು ಬೇಡಿದೆನಲ್ಲವೇ, ಅದರಿಂದ ನನಗೆ ಕುಂದಾಯಿತೇ? ಭೂಮಿಯನ್ನು ತೆಗೆದುಕೊಂಡೆನು. ಆ ರಾಕ್ಷಸನನ್ನು ಇನ್ನೂ ಪಾತಾಳದಲ್ಲಿ ಕಟ್ಟಿಹಾಕಿದ್ದೇನೆ. ಹಾಗೆಯೇ ನೀನೂ ಕೂಡ ಭೂಮಿಯನ್ನು ಮೊದಲು ಬೇಡಿ ದೂತನನ್ನು ಕಳುಹಿಸಲು ದುರ್ಯೋಧನನು ಪ್ರತಿರೋಧವನ್ನು ತೋರಿ ಕೊಡದಿದ್ದರೆ, ಆಗ ಲೋಕ ನಿನ್ನ ಗುಣಗ್ರಹಣ ಮಾಡುತ್ತಿರಲು ನೀನು ಯುದ್ಧಮಾಡು)

ಅಜ್ಞಾತವಾಸದ ಅವಧಿ ಮುಗಿದ ಮೇಲೆ ಪಾಂಡವರು ಕೃಷ್ಣನನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಅರ್ಜುನನು ದ್ವಾರಾವತಿಗೆ ಹೋದ ಸಂದರ್ಭದಲ್ಲಿ, ನಿದ್ದೆಯಲ್ಲಿದ್ದ ಅವನನ್ನು ಏಳಿಸಲು ಬಯಸದೆ ಅವನ ಕಾಲಕಡೆ ಕುಳಿತಿದ್ದನೆಂಬ ಕಥೆಯನ್ನು ಹೇಳುತ್ತಾ ಪಂಪ 'ದುಗ್ಧಾಬ್ಧಿ ಧವಳ ಶಯ್ಯಾತಳದೊಳ್ ಮಱೆದೊಱಗಿದ ಮಧುಮಥನನನೆತ್ತಲಣ್ಮದೆ ಕಾಲದೆಸೆಯೊಳುಸಿರದೆ ಕುಳ್ಳಿರೆ' (ಹಾಲ್ಗಡಲಿನ ಬೆಳ್ಳಗಿರುವ ಹಾಸಿಗೆಯಲ್ಲಿ ಮೈಮರೆತು ನಿದ್ದೆ ಮಾಡುತ್ತಿರುವ ಮಧು ಎಂಬ ರಾಕ್ಷಸನನ್ನು ಕೊಂದ ಕೃಷ್ಣನನ್ನು ಎಚ್ಚರಿಸಲು ಆಗದೆ ಕಾಲ ಬಳಿ ಸುಮ್ಮನೆ ಕುಳಿತಿರಲು) ಎಂದಿದ್ದಾನೆ. ಇಲ್ಲಿ ಕೃಷ್ಣನೇ ದೈತ್ಯನಾದ ಮಧು ಎಂಬ ರಾಕ್ಷಸನನ್ನು ಕೊಂದವನು ಎಂಬುದು ಸ್ಪಷ್ಟವಾಗುತ್ತದೆ.

ಸಂಧಾನಕ್ಕೆಂದು ಹಸ್ತಿನಾವತಿಗೆ ಬಂದ ಕೃಷ್ಣನು ವಿದುರನಮನೆಗೆ ಬಂದಾಗ 'ವಿದುರನ ಅಜನನ್ ಏಗೆಯ್ವ ತೆಱನುಮನಱಿಯದೆ (ವಿದುರನು ಅಜನನ್ನು ಹೇಗೆ ಉಪಚರಿಸಬೇಕೆಂದು ತಿಳಿಯದೆ) ಎಂದಿದ್ದಾನೆ ಪಂಪ. ಇಲ್ಲಿ ಕೃಷ್ಣ 'ಅಜ', ಎಂದರೆ 'ಜನ್ಮರಹಿತವಾದವನು'-'ಪರಮಾತ್ಮ' ಎಂದು ಕವಿ ಪರಿಭಾವಿಸಿದ್ದಾನೆ. ಕೃಷ್ಣ ರಾಜಸಭೆಗೆ

ಬಂದ ಸಂಧರ್ಭದಲ್ಲಿ 'ಅಂಜನಾಚಲದವೋಲ್ ಕಣ್ಗೊಪ್ಪಿ ಬರ್ಪ ಅಂಬುಜೋದರನಂ' ಎಂದು ವರ್ಣಿಸಿದ್ದಾನೆ ಕವಿ. ಇಲ್ಲಿ ಪಂಪ ಕೃಷ್ಣನನ್ನು ಒಂದು ಚಲಿಸುವ ಪರ್ವತಕ್ಕೆ ಹೋಲಿಸಿ, ಅವನ ಭವ್ಯವ್ಯಕ್ತಿತ್ವನ್ನು ಅರಿವು ಮಾಡಿಕೊಟ್ಟಿದ್ದಾನೆ. ಅಲ್ಲದೆ 'ಅಂಬುಜೋದರ' ಎಂಬ ಪ್ರಯೋಗದಲ್ಲಿ 'ಉದರ' ದಲ್ಲಿ ಎಂದರೆ ಹೊಕ್ಕುಳಲ್ಲಿ , ' ಅಂಬುಜ' ಎಂದರೆ ಕಮಲವುಳ್ಳವನು ಮಹಾವಿಷ್ಣು ಎಂಬುದನ್ನು ಸೂಚ್ಯವಾಗಿಸಿದ್ದಾನೆ. ಮುಂದೆ ದುರ್ಯೋಧನ ಕೃಷ್ಣನನ್ನು ನಿಂದಿಸುತ್ತಾ 'ಆ ಜಡಧಿ ಸಂಗತಿಯಿಂ ಜಡಬುದ್ಧಿ ಬುದ್ಧಿಯಂ ತೊಲಗಿಸಿತಕ್ಕುಂ' (ಜಡಧಿ=ಜಲಧಿ, ಸಮುದ್ರದ ಸಹವಾಸದಿಂದ ಆದ ಜಡಬುದ್ಧಿ ಬುದ್ಧಿಯನ್ನು ತೊಲಗಿಸಿದೆ) ಎನ್ನುತ್ತಾನೆ. ಈ ಮಾತಿನಲ್ಲಿ ಕೃಷ್ಣ 'ಕ್ಷೀರ ಸಾಗರ ಶಯನನಾದ ಮಹಾವಿಷ್ಣುವಿನ ಅವತಾರ' ಎಂಬ ಕಲ್ಪನೆ ಕಾಣುತ್ತದೆ.

ಮುಂದೆ ಭಾರತಯುದ್ಧದಲ್ಲಿ ಭಗದತ್ತ ಬೀಸಿದ ಅಂಕುಶಕ್ಕೆ ಕೃಷ್ಣ ತನ್ನ ಎದೆಯನ್ನೊಡ್ಡಿ ಅದನ್ನು ಎದೆಯಲ್ಲಿ ಧರಿಸಿದ ಸಂದರ್ಭದಲ್ಲಿ ಅದನ್ನು ಕಂಡು ಆಶ್ಚರ್ಯಗೊಂಡ ಅರ್ಜುನನಿಗೆ ಕೃಷ್ಣ ತನ್ನ ಹಿಂದಿನ ಕಥೆಯನ್ನು ಹೀಗೆ ಹೇಳಿಕೊಂಡಿದ್ದಾನೆ–

ಇದು ಪೆಱತಲ್ತು ಭೂತಲಮನಾಂ ತರಲಾದಿ ವರಾಹನಾದೆನಂ

ದದಱ ವಿಷಾಣಮಂ ಬಱಿಯಮಾ ವಸುಧಾಂಗನೆಗಿತ್ತೆನೀತನಾ

ಸುದತಿಯ ಪೌತ್ರನಾಕೆ ಕುಡೆ ಬಂದುದಿವಂಗೆನಗಲ್ಲದಾನಲಾ

ಗದುದಱಿನಾಂತೆನಿಂ ತಱಿವುದೀ ಕರಿಕಂಧರಮಂ ಗುಣಾರ್ಣವಾ (ಆಶ್ವಾಸ–೧೧, ಪದ್ಯ–೭೮)

(ಇದು ಬೇರೇನೂ ಅಲ್ಲ. ಭೂಮಂಡಲವನ್ನು ತರುವುದಕ್ಕಾಗಿ ನಾನು ವರಾಹಾವತಾರವನ್ನು ಮಾಡಿದೆನು. ಆಗ ಅದರ ಕೋರೆಹಲ್ಲನ್ನು ಬಳಿಕ ಭೂದೇವಿಗೆ ಕೊಟ್ಟೆನು. ಈತನು ಆಕೆಯ ಮೊಮ್ಮಗ. ಆಕೆ ಕೊಡಲು ಇದು ಇವನಿಗೆ ಬಂದಿತು. ನನಗಲ್ಲದೆ ಇದನ್ನು ತಾಳಿಕೊಳ್ಳಲು ಆಗದು. ಅದರಿಂದ ಧರಿಸಿದೆ. ಇನ್ನು, ಅರ್ಜುನನೇ ಈ ಆನೆಯ ಕೊರಳನ್ನು ಕತ್ತರಿಸುವುದು.)

ಪಂಪಭಾರತದಲ್ಲಿ ವರಾಹಾವತಾರದ ವೃತ್ತಾಂತ ಮೇಲಿಂದ ಮೇಲೆ ಬರುತ್ತದೆ. ಆದರೆ ಕವಿ ಇಲ್ಲಿ ಅದನ್ನು ಕೃಷ್ಣನಿಂದಲೇ ಹೇಳಿಸಿರುವುದು ಗಮನಾರ್ಹವಾಗಿದೆ.

ಹೀಗೆ ಕೃಷ್ಣನ ಅವತಾರಗಳು ಸಂದರ್ಭೋಚಿತವಾಗಿ ಪಂಪಭಾರತದಲ್ಲಿ ಉದ್ದಕ್ಕೂ ಪ್ರಸ್ತಾಪವಾಗಿವೆ. ಕೆಲವು ಪ್ರಸಂಗಗಳಲ್ಲಿ ಮುಖ್ಯವಾಗಿ ಶಿಶುಪಾಲವಧೆ, ಕೃಷ್ಣ ಸಂಧಾನ ಪ್ರಸಂಗ ಮತ್ತು ಭಗವದ್ಗೀತೆಯ ಸಂದರ್ಭದಲ್ಲಿ ಕೃಷ್ಣನ ಅಲೌಕಿಕತೆ ಹಾಗೂ ಅತಿಮಾನವತೆ

ಚೆನ್ನಾಗಿ ಪ್ರಕಟವಾಗಿದೆ. ಆದರೂ ಪಂಪ ಭಾರತದ ಲೋಕಪೂಜ್ಯರ ಪಟ್ಟಿಯಲ್ಲಿ ಕೃಷ್ಣನಿಗೆ ಸ್ಥಾನ ಸಿಕ್ಕಿಲ್ಲ.

ಕೃಷ್ಣ ಭಾರತಯುದ್ಧದ ಉದ್ದಕ್ಕೂ ಅರ್ಜುನನ ಸಾರಥಿಯಾಗಿದ್ದವನು. ಅರ್ಜುನನ ಪ್ರಬಲ ಪ್ರತಿಸ್ಪರ್ಧಿಯಾದ ಕರ್ಣನ ರಥದ ಸಾರಥ್ಯವನ್ನು ಅರ್ಧದಲ್ಲಿಯೇ ಕೈಬಿಟ್ಟು ಹೋದ, ಪ್ರತಿಪಕ್ಷದ ಅರ್ಧದಿನದ ಸೇನಾಧಿಪತ್ಯವನ್ನು ವಹಿಸಿದ್ದ ಮದ್ರ ದೇಶದ ರಾಜನಾದ ಶಲ್ಯನನ್ನು ಲೋಕ ಪೂಜ್ಯರ ಪಟ್ಟಿಯಲ್ಲಿ ಸೇರಿಸಿ 'ಬಲದೊಳ್ ಮದ್ರೇಶನ್.... ಮಿಗಿಲ್' ಎಂದು ಹೇಳಿದ ಪಂಪಮಹಾಕವಿ ಪಾಂಡವರ ಹಿತೈಷಿಯಾಗಿ ಅರ್ಜುನನ ಸಾರಥಿಯಾಗಿ ಭಾರತದ ಉದ್ದಕ್ಕೂ ಮಹತ್ವದ ಪಾತ್ರವಹಿಸಿದ ಕೃಷ್ಣನನ್ನು ಲೋಕ ಪೂಜ್ಯರ ಪಟ್ಟಿಯಿಂದ ಕೈಬಿಟ್ಟಿರುವುದು ಕುತೂಹಲಕಾರಿಯಾಗಿದೆ.

ಜೈನರ ಪ್ರಕಾರ ಕೃಷ್ಣ ' ತ್ರಿಷಷ್ಟಿ ಶಲಾಕಾಪುರುಷ'ರಲ್ಲಿ ಒಬ್ಬನಾದ ವಾಸುದೇವ. ಅವನು ತನ್ನ ಕಾಲದ ಪ್ರತಿವಾಸುದೇವನನ್ನು ಕೊಂದದ್ದರಿಂದ ನರಕಕ್ಕೆ ಗುರಿಯಾಗುತ್ತಾನೆ. ಹೀಗಾಗಿ ಕೃಷ್ಣ ಒಬ್ಬ ಸಾರಥಿ. ಜೈನನಾದ ಪಂಪ ಸಾರಥಿಯಾದ ಕೃಷ್ಣನನ್ನು ಲೋಕಪೂಜ್ಯರ ಪಟ್ಟಿಯಿಂದ ಉದ್ದೇಶಪೂರ್ವಕವಾಗಿಯೇ ಕೈಬಿಟ್ಟಿರ ಬಹುದೆಂಬ ಅಭಿಪ್ರಾಯವಿದೆ.

ಪಂಪ ತನ್ನ ಭಾರತದ ನಾಯಕನಾದ ಅರ್ಜುನ (ಅರಿಕೇಸರಿ)ನನ್ನು ವೈಭವೀಕರಿಸುವ ಉದಾತ್ತೀಕರಿಸುವ ಪ್ರಯತ್ನದಲ್ಲಿ ಅವನನ್ನು 'ಉದಾತ್ತನಾರಾಯಣ', 'ಉದಾರ ಮಹೇಶ್ವರ' 'ಅಭಿನವ ಜೀಮೂತ ವಾಹನ' ಎಂಬ ವಿಶೇಷಣಗಳಿಂದ ಕರೆದಿದ್ದಾನೆ. ಅಲ್ಲದೆ ಶ್ರೀಕೃಷ್ಣನ ಪೂರ್ವಾವತಾರವಾದ 'ಶ್ರೀರಾಮಾವತಾರ'ವನ್ನು (ಪಂಪ ತನಗೆ ಆಶ್ರಯ ಕೊಟ್ಟ ಅರಿಕೇಸರಿಯಲ್ಲಿ ರಾಮನ ಗುಣ-ವಿಶೇಷಣಗಳನ್ನು ಕಂಡಿರಬೇಕು) ಅರ್ಜುನನಿಗೆ ಆರೋಪಿಸಿದ್ದಾನೆ. ಆದರೆ ಪಂಪಭಾರತದಲ್ಲಿ ಕೃಷ್ಣನಿಗೆ ದೊರೆತಿರುವ ಗೌರವ ಪೂಜ್ಯತೆಗಳು ನಾಯಕನಾದ ವಿಕ್ರಮಾರ್ಜುನನಿಗೂ ಸಿಕ್ಕಿಲ್ಲವೆಂದು ಹೇಳಬಹುದು.

ಪಂಪ ಶ್ರೀ ಕೃಷ್ಣನನ್ನು ಸಂದರ್ಭೋಚಿತವಾಗಿ ' ಮುರರಿಪು', 'ಅಂಬುಜೋದರ', 'ಬಲಿಬಂಧನ' 'ಪನ್ನಗಶಯನ', 'ಪುರುಷೋತ್ತಮ', 'ನಾರಾಯಣ','ಅಜ', 'ಅಚ್ಯುತ', 'ಅಜಿತ', 'ಅನಂತ' ಮುಂತಾದ ಹೆಸರುಗಳಿಂದ ಕರೆದಿದ್ದಾನೆ. ಕವಿ ಮುಖ್ಯವಾಗಿ ತೀರ್ಥಂಕರ ಸೂಚಕವಾದ 'ಅಜಿತ', 'ಅನಂತ' ಈ ಹೆಸರುಗಳಿಂದ ಶ್ರೀಕೃಷ್ಣನನ್ನು ನಿರ್ದೇಶಿಸಿರುವುದು ಗಮನಿಸಬೇಕಾದ ವಿಚಾರ. ಒಟ್ಟಿನಲ್ಲಿ ಲೋಕ ಪೂಜ್ಯರ ಪಟ್ಟಿಯಲ್ಲಿ ಶ್ರೀಕೃಷ್ಣನ ಹೆಸರನ್ನು ವಾಚ್ಯವಾಗಿ ಹೇಳಿಲ್ಲವಾದರೂ, ಅವನ ಅಲೌಕಿಕತೆಯನ್ನು ಲೋಕ ಪೂಜ್ಯತೆಯನ್ನೂ ತನ್ನ ಕಾವ್ಯದಲ್ಲಿ ಸೂಚ್ಯವಾಗಿಸಿದ್ದಾನೆ ಎಂಬುದರಲ್ಲಿ ಅನುಮಾನವಿಲ್ಲ.

ಪರಾಮರ್ಶನ ಗ್ರಂಥಗಳು

೧. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೨. ಪಂಪಭಾರತ ದೀಪಿಕೆ : ಡಾ. ಡಿ.ಎಲ್. ನರಸಿಂಹಾಚಾರ್

೩. ಸಮಾಲೋಕನ : ತೀ.ನಂ. ಶ್ರೀಕಂಠಯ್ಯ

೪. ಪಂಪಭಾರತ ದರ್ಶನ : ಕೆ. ವೆಂಕಟರಾಮಪ್ಪ

೫. ಕವಿ ಕಾವ್ಯ ದೃಷ್ಟಿ : ವಿ. ಸೀತಾರಾಮಯ್ಯ

೬. ಪರಿಶೀಲನ : ಡಾ. ಜಿ.ಎಸ್. ಶಿವರುದ್ರಪ್ಪ

□□

ಲೇಖಕರ ವಿಳಾಸಗಳು

1. **ಡಾ|| ಕೆ.ಆರ್. ಗಣೇಶ,** ನಂ, 20/1, 4ನೇ ಅಡ್ಡರಸ್ತೆ, ಮಾಗಡಿರಸ್ತೆ. ಬೆಂಗಳೂರು-560023, ಮೊ: 98458 24453

2. **ಡಾ. ಎಚ್.ಎಸ್. ಅನಂತನಾರಾಯಣ,** ಭಾಷಾಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರು, ಉಸ್ಮಾನಿಯಾ ವಿ.ವಿ., 206, 'ಬ್ರಿಗೇಡ್ ಕ್ಲಾಸಿಕ್', ಆರ್ಮುಗಂ ಸರ್ಕಲ್, ಬಸವನಗುಡಿ, ಬೆಂಗಳೂರು-560004, ಮೊ: 99806 32810

3. **ಎಸ್. ಕಾರ್ತಿಕ್,** # 413, ಕರ್ನಾಟಕ 'ಡಿ' ಗ್ರೂಪ್ ಎಂಪ್ಲಾಯಿಸ್ ಲೇಔಟ್, 1ನೆಯ ಬ್ಲಾಕ್, 6ನೆಯ ಮುಖ್ಯರಸ್ತೆ, ಲಿಂಗಧೀರನಹಳ್ಳಿ (ಹೇರೋಹಳ್ಳಿ) ಅಂದ್ರಹಳ್ಳಿ ಮುಖ್ಯರಸ್ತೆ, ಬೆಂಗಳೂರು-560091, ಮೊ: 94483 24122

4. **ಪ್ರೊ. ಬಿಳಿಗಿರಿವಾಸನ್,** #78, 'ಶ್ರೀ ಶ್ವೇತಾದ್ರಿ' ನ್ಯಾನಪ್ಪನ ಹಳ್ಳಿ, ಬೇಗೂರು ಹೋಬಳಿ ಬೆಂಗಳೂರು-560068, ಮೊ: 90366 12484

5. **ಡಾ. ಜಿ.ಎನ್. ಉಪಾಧ್ಯ,** ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬೈ ವಿ.ವಿ., ಮುಂಬೈ-400 098, ಮೊ: 92202 12578

6. **ಡಾ. ಬಿ. ನಂಜುಂಡ ಸ್ವಾಮಿ,** ಪಂಡಿತ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು-572102. ಮೊ : 9880996196

7. **ಡಾ. ಪಿ.ವಿ. ನಾರಾಯಣ,** 'ತಂಗಾಳಿ', ನಂ.30, ಆರ್.ಬಿ.ಐ. ಕಾಲೋನಿ ಜಯನಗರ 3ನೇ ಬ್ಲಾಕ್, (ಪೂರ್ವ)ಬೆಂಗಳೂರು-560011, ಮೊ: 99001 96517

8. **ಡಾ. ಡಿ.ಕೆ. ಚಿತ್ತಯ್ಯಪೂಜಾರ್,** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056 ಮೊ: 9845637247

9. **ಡಾ. ಚಂದ್ರಮೋಹನ್,** ಪ್ರಾಂಶುಪಾಲರು ಪಿ.ಆರ್.ಎಂ. ವಿಜಯ ಪ್ರಥಮ ದರ್ಜೆಕಾಲೇಜು, ತಿ. ನರಸೀಪುರ, ಮೈಸೂರು ಜಿಲ್ಲೆ, ಮೊ: 98866 38996

10. **ಡಾ. ಜೆ. ಸದಾನಂದಶಾಸ್ತ್ರಿ,** 6-4-129/1, ಮಾರುತಿ ನಗರ, ಅನಂತಪುರ-515004, ಆಂಧ್ರಪ್ರದೇಶ್, ಮೊ. 9844662429

11. ಪ್ರೊ. ಎಸ್. ಬಸವರಾಜು, ಫ್ಲಾಟ್ ನಂ. 301, 'ಬಿ' ಬ್ಲಾಕ್, ಅಭಿ ಸಾಯಿ ಸಂತೃಪ್ತಿ, ಸರ್.ಎಂ. ವಿಶ್ವೇಶ್ವರಯ್ಯ ಲೇಔಟ್, 8ನೇ ಬ್ಲಾಕ್, ಬೆಂಗಳೂರು-560 091, ಮೊ: 99804 05469

ಬಿ.ಎಂ.ಶ್ರೀ. ಪ್ರತಿಷ್ಠಾನ

'ಕನ್ನಡದ ಕಣ್ವ' ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ಹೊಸಗನ್ನಡದ ಯುಗಪುರುಷರು. ಇಂತಹ ಆಚಾರ್ಯಪುರುಷರ ಹೆಸರಿನ ಈ ಸಂಸ್ಥೆ ಸೃಜನ ಮತ್ತು ಸಂಶೋಧನ ಎರಡೂ ಸಾಹಿತ್ಯ ಕ್ಷೇತ್ರಗಳಲ್ಲಿ ದುಡಿಯುತ್ತಿದೆ. ಒಂದು, ಪ್ರಾಚೀನ ಸಾಹಿತ್ಯದ ಪರಿಷ್ಕರಣ; ಇನ್ನೊಂದು, ಆಧುನಿಕ ಸಾಹಿತ್ಯದ ಪುರಸ್ಕರಣ. ಈ ಸಂಸ್ಥೆಯನ್ನು ೧೯೭೯ರಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿದ್ದು, ಇದು ಯಶಸ್ವೀ ನಲವತ್ತೆರಡು ವರ್ಷಗಳನ್ನು ಪೂರೈಸಿದೆ. ೨೦೦೪ರಲ್ಲಿ ರಜತೋತ್ಸವವನ್ನು ಆಚರಿಸಿದೆ.

ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವ ಈ ಸಂಸ್ಥೆಯು ಕರ್ನಾಟಕದಲ್ಲಿ ಸಂಶೋಧನೆ ಮತ್ತು ಪಾಂಡಿತ್ಯ ಸಂವರ್ಧನೆಗಳಿಗೆ ಮೀಸಲಾದ ಪ್ರತಿಷ್ಠಿತ ಸಂಶೋಧನಾ ಕೇಂದ್ರವಾಗಿದೆ. ಈವರೆಗೆ ೨೦೦ಕ್ಕೂ ಹೆಚ್ಚು ಗ್ರಂಥಗಳನ್ನು ಹೊರತಂದಿದೆ. ಸಂಶೋಧನ ಕಾರ್ಯಕ್ಕೆ ಅನುಕೂಲವಾಗುವಂತೆ ಹದಿನೈದು ಸಾವಿರಕ್ಕೂ ಅಧಿಕ ಅಮೂಲ್ಯ ಗ್ರಂಥಗಳ ಆಕರ ಗ್ರಂಥಾಲಯವನ್ನೂ ಸುಮಾರು ಒಂದು ಸಾವಿರಕ್ಕೂ ಅಧಿಕ ಪ್ರಾಚೀನ ಓಲೆಗರಿ ಗ್ರಂಥಗಳ ಹಸ್ತಪ್ರತಿ ಭಂಡಾರವನ್ನೂ ಹೊಂದಿರುವ ಪ್ರತಿಷ್ಠಾನವು ಸದಸ್ಯರು ಉದಾರ ದಾನಿಗಳು ಮತ್ತು ಅಭಿಮಾನಿಗಳಿಂದ ಬೆಳೆಯುತ್ತಿದೆ.

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಸಂಶೋಧನ ಕೇಂದ್ರವಾಗಿರುವ ಪ್ರತಿಷ್ಠಾನದಲ್ಲಿ ಗಣ್ಯ ವಿದ್ವಾಂಸರ ಮಾರ್ಗದರ್ಶನದಲ್ಲಿ ಅನೇಕರು ಪಿಎಚ್.ಡಿ. ಪದವಿ ಮತ್ತು ಎಂ.ಫಿಲ್. ಪದವಿ ಪಡೆದಿರುತ್ತಾರೆ. ನುರಿತ ಮಾರ್ಗದರ್ಶಕರ ಸಹಕಾರದಿಂದ ಈ ಅಧ್ಯಯನ ಕೇಂದ್ರವನ್ನು ನಡೆಸಲಾಗುತ್ತಿದೆ.

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನ ಮಾನ್ಯತೆಯ ಕೇಂದ್ರ

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನಿಂದ ಮಾನ್ಯತೆ ಪಡೆದಿರುವ ಪ್ರತಿಷ್ಠಾನವು ರಾಷ್ಟ್ರದ ಪ್ರತಿಷ್ಠಿತ ಹಸ್ತಪ್ರತಿ ಅಧ್ಯಯನ ಕೇಂದ್ರವಾಗಿದ್ದು ಅಮೂಲ್ಯ ಓಲೆಗರಿ ಗ್ರಂಥಗಳು, ಕಾಗದಪತ್ರಗಳು, ನಮ್ಮ ತಲೆಮಾರಿನ ಸಾಹಿತಿ-ಗಣ್ಯರ ಪತ್ರಗಳು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸುತ್ತ ನಾಡಿನ ಆಸ್ತಿಯನ್ನು ಉಳಿಸಲು ಶ್ರಮಿಸುತ್ತಿರುವ ಸೇವಾಸಂಸ್ಥೆಯಾಗಿದೆ.

ಬಿ.ಎಂ.ಶ್ರೀ. ಕಲಾಭವನ

ಮೂರು ಮಹಡಿಗಳ ಭವ್ಯ ಬಿ.ಎಂ.ಶ್ರೀ. ಕಲಾಭವನವನ್ನು ಸಂಸದರ ನಿಧಿ ಮತ್ತು ದಾನಿಗಳ ನೆರವಿನಿಂದ ನಿರ್ಮಿಸಲಾಗಿದೆ. ಭವನವು ಎಂ.ವಿ.ಸೀ. ಸಭಾಂಗಣ, ಗ್ರಂಥಾಲಯ, ಹಸ್ತಪ್ರತಿ ಸಂಗ್ರಹಾಲಯ ಉಪನ್ಯಾಸ ಕೊಠಡಿಗಳನ್ನು ಒಳಗೊಂಡಿದೆ.

ಚಟುವಟಿಕೆಗಳು

'ಕರ್ನಾಟಕ ಲೋಚನ' ವಿದ್ವತ್ ಪತ್ರಿಕೆ ಹಾಗೂ 'ಹೊಂಗನಸು' ವಾರ್ತಾಪತ್ರದ ಪ್ರಕಟಣೆ, ಸಹೃದಯ ಗೋಷ್ಠಿಯ ಆಯೋಜನೆ, ಹಸ್ತಪ್ರತಿ ಶಾಸ್ತ್ರ ಮತ್ತು ಹಸ್ತಪ್ರತಿ ಅಧ್ಯಯನ ತರಗತಿಗಳು, ಹಸ್ತಪ್ರತಿ ಸಮಾವೇಶ, 'ಸಿರಿಕಂಟ' ವಿದ್ಯಾರ್ಥಿಗೋಷ್ಠಿ, ಅಕ್ಕರಗೊಟ್ಟಿ, ಹಳಗನ್ನಡ ಕಾವ್ಯಾಭ್ಯಾಸ ಶಿಬಿರ ಮೊದಲಾದುವು ಪ್ರತಿಷ್ಠಾನದ ಮುಖ್ಯ ಚಟುವಟಿಕೆಗಳಾಗಿವೆ.

ಬಿ.ಎಂ.ಶ್ರೀ. ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ)
ನರಸಿಂಹರಾಜ ಕಾಲೋನಿ, ಬೆಂಗಳೂರು-೫೬೦೦೧೯